UNIVERSAL LIBRARY
OU_198400
UNIVERSAL LIBRARY

# PRABANDHA MANJARI

OR

## AN ELEMENTARY WORK ON ESSAY-WRITING IN KANNADA

With sixty Model Essays on Familiar subjects, for the use of Candidates studying for the Mysore Local and the Madras University Examinations

BY

**S. T. RAGHAVACHARYA, B. A.**

Asst. Inspector of Sanskrit Schools
in Mysore, Bangalore.

FIFTH EDITION.

# ಪ್ರಬಂಧಮಂಜರಿ

**ಹೊಸಗನ್ನಡದಲ್ಲಿ ಪ್ರಬಂಧರಚನೆಯ ಕ್ರಮವನ್ನು ಬೋಧಿಸುವುದಲ್ಲದೆ, ಮಾದರಿಗಾಗಿ ಅರುವತ್ತು ಪ್ರಬಂಧಗಳನ್ನೊಳಗೊಂಡಿರುವ**

ಈ ಗ್ರಂಥವು, ಮೈಸೂರು ದೇಶೀಯ ಪರೀಕ್ಷೆಗಳಿಗೂ ಮದ್ರಾಸು ಯೂನಿವರ್ಸಿಟಿಯ. ಪರೀಕ್ಷೆಗಳಿಗೂ ಓದುವ ವಿದ್ಯಾರ್ಥಿಗಳಿಗೆ ಅತ್ಯಂತೋಪಯುಕ್ತವಾಗುವಂತೆ, ಮೈಸೂರುದೇಶದ ಸಂಸ್ಕೃತ ಪಾಠಶಾಲೆಗಳ ಅ|| ಇನ್‌ಸ್ಪೆಕ್ಟರು

**ಎಸ್. ಟಿ. ರಾಘವಾಚಾರ್ಯ, ಬಿ. ಎ.,**

ಇವರಿಂದ ವಿರಚಿಸಲ್ಪಟ್ಟುದು.

ಐದನೆಯ ಮುದ್ರಣ.

*All Rights Reserved.*

Price 14 As.] [ಕ್ರಯ ೧೪ ಆಣೆ.

ಕೆ. ಎಸ್. ಕೃಷ್ಣಯ್ಯರ್, ಬಿ. ಎ., ಯವರ
'ಐರಿಷ್' ಮುದ್ರಾಲಯದಲ್ಲಿ ಮುದ್ರಿಸಲ್ಪಟ್ಟಿತು
ಬೆಂಗಳೂರು ಸಿಟಿ.
1919.

# ಪ್ರಥಮ ಮುದ್ರಣದ ಪೀಠಿಕೆ.

ಮೈಸೂರು ದೇಶೀಯ ಪರೀಕ್ಷೆಗಳಿಗೆ ಗೊತ್ತುಮಾಡಿರುವ ಮುಖ್ಯ ವಿಷಯಗಳಲ್ಲಿ ಪ್ರಬಂಧರಚನೆಯೊಂದಾಗಿದೆ. ಯೂನಿವರ್ಸಿಟಿ ಪರೀಕ್ಷೆಗಳಿಗೆ ಹೋಗುವ ವಿದ್ಯಾರ್ಥಿಗಳು ಇಂಗ್ಲಿಷಿನಲ್ಲಿ ಪ್ರಬಂಧಗಳನ್ನು ಹೇಗೆ ಬರೆಯಬೇಕಾಗಿರುವುದೋ, ಹಾಗೆಯೇ ಮೈಸೂರು ದೇಶೀಯ ಪರೀಕ್ಷೆಗಳಲ್ಲಿಯೂ ಕನ್ನಡದಲ್ಲಿ ಪ್ರಬಂಧವನ್ನು ಬರೆವಂತೆ ಕೇಳುತ್ತಾರೆ. ಇಂಗ್ಲಿಷಿನಲ್ಲಿ ಪ್ರಬಂಧರಚನೆಯನ್ನು ಬೋಧಿಸುವ ಪುಸ್ತಕಗಳು ಲೆಕ್ಕವಿಲ್ಲದಷ್ಟು ಇವೆ; ಆದರೆ ಹುಡುಗರಿಗೆ ಕನ್ನಡದಲ್ಲಿ ಪ್ರಬಂಧರಚನೆಯನ್ನು ಕಲಿಸುವ ಒಂದು ಪುಸ್ತಕವಾದರೂ ಇರುವಂತೆ ಕಾಣುವುದಿಲ್ಲ. ಈ ಕುಂದನ್ನು ಸ್ವಲ್ಪಮಟ್ಟಿಗೆ ಹೋಗಲಾಡಿಸಿ, ವಿಧಿ ಮತ್ತು ಉದಾಹರಣೆಗಳ ಮೂಲಕ ಬಾಲಕರಿಗೆ ಹೊಸಗನ್ನಡದಲ್ಲಿ ಪ್ರಬಂಧರಚನೆಯನ್ನು ಕಲಿಸಿಕೊಡುವುದಕ್ಕಾಗಿ ಈ ಪುಸ್ತಕವನ್ನು ಬರೆದಿದೆ.

ಈ ಗ್ರಂಥವು ಎರಡು ಭಾಗಗಳಾಗಿದೆ. ಮೊದಲನೆಯ ಭಾಗವು ಹೊಸ ವಿಷಯಗಳನ್ನೊಳಗೊಂಡಿದೆ. ಇದರಲ್ಲಿ ಭಾಷಾಶೈಲಿಯ ಸ್ವರೂಪವನ್ನೂ ಅದರ ಗುಣದೋಷಗಳನ್ನೂ ಸಂಕ್ಷೇಪವಾಗಿ ವಿವರಿಸಿದೆ. ಈಗಿನ ಕನ್ನಡದ ಬರವಣಿಗೆಯು ಸ್ವಲ್ಪವಾದರೂ ಒಂದೇ ವಿಧವಾಗಿಲ್ಲದಿರುವುದು ಬಲು ಬಾಧಕವಾಗಿದೆ. ಸಾಮಾನ್ಯಶಬ್ದಗಳನ್ನೂ ಬಗೆಬಗೆಯಾಗಿ ಮನಸ್ಸಿಗೆ ಬಂದಂತೆ ಬರೆಯುತ್ತಿರುವರು. ಕೆಲವು ವಿದ್ಯಾವಂತರೂ ಕೂಡ ಕನ್ನಡಮಾತುಗಳನ್ನು ತಪ್ಪಿಲ್ಲದೆ ಬರೆಯಲು ಯತ್ನಿಸುವುದೇ ಇಲ್ಲ; ಇಂಗ್ಲಿಷನ್ನು ಬರೆವಾಗ ಮಾತ್ರ ಅಕ್ಷರಸಂಯೋಜನದಲ್ಲಿ ತಪ್ಪುಮಾಡದಂತೆ ಎಚ್ಚರಿಕೆಯಿಂದಿರುವರು. ಇದಲ್ಲದೆ, ಅಚ್ಚಗನ್ನಡದ ಮಾತುಗಳನ್ನು ಬಿಟ್ಟು, ಅನ್ಯದೇಶ್ಯಶಬ್ದಗಳನ್ನೂ ಸಂಸ್ಕೃತಶಬ್ದಗಳನ್ನೂ ಬೇಡವಾದ ಕಡೆಯಲ್ಲಿಯೂ ಬೇಕೆಂದು ಪ್ರಯೋಗಿಸುವುದು; ಅತಿದೀರ್ಘವಾದ ವಾಕ್ಯಗಳನ್ನು ಬರೆವುದು; ಕನ್ನಡದ ಮರ್ಯಾದೆಯನ್ನು ಬಿಟ್ಟು, ಇಂಗ್ಲಿಷ್ ಪದ್ಧತಿಯನ್ನನುಸರಿಸಿ ಬರೆವುದು; ಇವು ಮೊದಲಾದ ತಪ್ಪುಗಳನ್ನು ವಾಕ್ಯರಚನೆಯಲ್ಲಿ ಮಾಡದಂತೆ ವಿದ್ಯಾರ್ಥಿಗಳಿಗೆ ತಕ್ಕಮಟ್ಟಿಗೆ ಎಚ್ಚರಕೊಟ್ಟಿದೆ. ವಾಕ್ಯ, ವಾಕ್ಯಬೃಂದ ಇವುಗಳ ರಚನೆಗೆ ಸಂಬಂಧಿಸಿದ ಸಾಮಾನ್ಯವಿಧಿಗಳನ್ನು ಸಂಕ್ಷೇಪವಾಗಿ ವಿವರಿಸಿದೆ. ಅರ್ಥವು ಸುಲಭವಾಗಿ ತಿಳಿಯಲು ಇಂಗ್ಲಿಷಿನಲ್ಲಿ ಉಪಯೋಗಿಸುವ ಚಿಹ್ನೆಗಳು ಕನ್ನಡಕ್ಕೂ ಬಂದಿವೆಯಷ್ಟೆ:—ಇವು–

ಗಳನ್ನು ಪಯೋಗಿಸುವ ಸ್ಥಾನಗಳನ್ನು ತೋರಿಸಿದೆ. ವಿಷಯಭೇದದಿಂದ ಪ್ರಬಂಧರಚನೆ ಮೂರು ಬಗೆಯೆಂದು ಇಂಗ್ಲಿಷ್ ಗ್ರಂಥಗಳು ಹೇಳುವುದನ್ನನುಸರಿಸಿ, ಇವುಗಳಿಗೆ "ವೃತ್ತಾಂತಕಥನ," "ವಸ್ತುವರ್ಣನ," "ಗುಣನಿರೂಪಣ" ಎಂಬ ಹೆಸರುಗಳನ್ನು ಕೊಟ್ಟು, ಆ ಪ್ರತಿಯೊಂದು ತರದ ಪ್ರಬಂಧರಚನೆಯ ಸ್ವರೂಪವನ್ನು ವರ್ಣಿಸಿ, ಅದರ ಕ್ರಮವನ್ನು ಉದಾಹರಣೆಗಳೊಡನೆ ಸಂಪೂರ್ಣವಾಗಿ ವಿವರಿಸಿದೆ. ಪರೀಕ್ಷೆಯಲ್ಲಿ ಪ್ರಬಂಧವನ್ನು ಬರೆವಾಗ ಅನುಸರಿಸಬೇಕಾದ ವಿಶೇಷ-ವಿಧಿಗಳನ್ನು ಹೇಳಿ, ಮೊದಲನೆಯ ಭಾಗವನ್ನು ಮುಗಿಸಿದೆ.

ಎರಡನೆಯ ಭಾಗದಲ್ಲಿ ಮಾದರಿಗಾಗಿ ನಾಲ್ವತ್ತು ವಿಷಯಗಳನ್ನು ಕುರಿತು ಪ್ರಬಂಧಗಳನ್ನು ಪೂರ್ಣವಾಗಿ ಬರೆದು ತೋರಿಸಿದೆ. ಪ್ರಬಂಧರಚನೆಗೆ ತಕ್ಕ ಇನ್ನೂ ಅರುವತ್ತು ವಿಷಯಗಳ ಹೆಸರುಗಳನ್ನು ಇವುಗಳಿಗೆ ಸೇರಿಸಿದೆ.

ಕನ್ನಡದಲ್ಲಿ ಪ್ರಬಂಧರಚನೆಯ ವಿಷಯವಾಗಿ ಹೇಳಬೇಕಾದುದನ್ನೆಲ್ಲ ಈ ಗ್ರಂಥದಲ್ಲಿ ಸಮಗ್ರವಾಗಿ ಹೇಳಿದೆಯೆಂದು ನಾನು ನಂಬಿಕೊಂಡಿಲ್ಲ; ಹಾಗೆ ಹೇಳುವುದು ಇದರ ಉದ್ದೇ-ಶವೂ ಅಲ್ಲ. ಸದ್ಯಕ್ಕೆ ಹೊಸಗನ್ನಡದಲ್ಲಿ ಸಾಧಾರಣವಾದ ಪ್ರಬಂಧರಚನೆಯನ್ನು ಬರೆಯಲು ಬಾಲಕರಿಗೆ ಸ್ವಲ್ಪಮಟ್ಟಿಗೆ ಸಹಾಯ ಮಾಡಿಕೊಡುವುದೇ ಈ ಗ್ರಂಥದ ಮುಖ್ಯೋದ್ದೇಶವು. ಎಷ್ಟುಮಟ್ಟಿಗಾದರೂ ಈ ಉದ್ದೇಶವು ನೆರವೇರುವುದಾದರೆ, ನನ್ನ ಶ್ರಮವು ಸಫಲವಾಯಿತೆಂದು ಎಣಿಸುವೆನು.

ಈ ಗ್ರಂಥವನ್ನು ಆಮೂಲಾಗ್ರವಾಗಿ ನೋಡಿ ಪರಿಶೋಧಿಸಿದುದಕ್ಕಾಗಿ, ನನ್ನ ಅಣ್ಣಂದಿರು ಶ್ರೀ|| ಪಂಡಿತ ಶ್ರೀನಿವಾಸ ರಾಘವಾಚಾರ್ಯರವರಿಗೂ; ಈ ಗ್ರಂಥದ ತಿದ್ದುಪಾಟಿನ ವಿಷಯ-ದಲ್ಲಿ ಕೆಲವು ಒಳ್ಳೆಯ ಸಂಗತಿಗಳನ್ನು ಸೂಚಿಸಿದುದಕ್ಕಾಗಿ, ಮೈಸೂರು ವಿದ್ಯಾಭ್ಯಾಸದ ಇಲಾ-ಖೆಯ ಟ್ರಾನ್ಸ್‌ಲೇಟರು ಮ|| ರಾ|| ಎಸ್. ಜಿ. ನರಸಿಂಹಾಚಾರ್ಯರವರಿಗೂ ಬಹಳ ಕೃತ-ಜ್ಞನಾಗಿದ್ದೇನೆ. ಈ ಪುಸ್ತಕವನ್ನು ಅಂದವಾಗಿ ತಪ್ಪಿಲ್ಲದೆ ಮುದ್ರಿಸಿಕೊಟ್ಟುದಕ್ಕಾಗಿ, ಮಂಗ-ಳೂರು ಕೊಡಿಯಾಲ್‌ಬೈಲ್ ಮುದ್ರಾಯಂತ್ರದ ಅಧ್ಯಕ್ಷರಿಗೂ ಕೃತಜ್ಞನಾಗಿರುತ್ತೇನೆ.

ಈ ಪುಸ್ತಕದಲ್ಲಿ ಸಾಧ್ಯವಾದ ಮಟ್ಟಿಗೆ ತಪ್ಪುಗಳಿಲ್ಲದಂತೆ ನೋಡಿಕೊಂಡಿದ್ದೇನೆ. ಈ ವರೆಗೂ ಗೋಚರವಾಗದಿರುವ ತಪ್ಪುಗಳನ್ನೂ, ಗ್ರಂಥದ ತಿದ್ದುಪಾಟುಗಳನ್ನೂ ಯಾರಾದರೂ ದಯೆಯಿಟ್ಟು ತಿಳಿಸಿದರೆ, ಕೃತಜ್ಞತೆಯೊಡನೆ ಅಂಗೀಕರಿಸಲು ಸಿದ್ಧನಾಗಿದ್ದೇನೆ.

ತುಂಕೂರು,<br>ಸೆಪ್ಟೆಂಬರ್, 1904.

**ಎಸ್. ಟಿ. ರಾಘವಾಚಾರ್ಯ.**

## ದ್ವಿತೀಯ ಮುದ್ರಣದ ಪೀಠಿಕೆ.

ದ್ವಿತೀಯ ಮುದ್ರಣದಲ್ಲಿ ಈ ಗ್ರಂಥವನ್ನು ಆಮೂಲಾಗ್ರವಾಗಿ ಶೋಧಿಸಿ, ವಾಕ್ಯರಚನೆಯ ವಿಧಿಗಳಿಗೆ ಮೊದಲು ಕೊಟ್ಟಿದ್ದ ಉದಾಹರಣೆಗಳಿಗೆ ಬದಲು ಹೊಸಗನ್ನಡದ ವಚನಗ್ರಂಥಗಳಿಂದ ಬೇರೆ ವಾಕ್ಯಗಳನ್ನು ಎತ್ತಿ ಬರೆದಿದ್ದೇನೆ. ಹೊಸದಾಗಿ ಇಪ್ಪತ್ತು ಪ್ರಬಂಧಗಳನ್ನು ಸೇರಿಸಿದ್ದೇನೆ. ಆದರೂ ಎಲ್ಲಾ ವಿದ್ಯಾರ್ಥಿಗಳಿಗೂ ಈ ಪುಸ್ತಕವು ಸುಲಭವಾಗಿರಲೆಂದು ಕ್ರಯವನ್ನು ಎಂಟಾಣೆಗೆ ಇಳಿಸಿದೆ. ಮದ್ರಾಸು ಯೂನಿವರ್ಸಿಟಿಯ ಪರೀಕ್ಷೆಗಳಲ್ಲಿಯೂ ಇನ್ನುಮೇಲೆ ಕನ್ನಡದಲ್ಲಿ ಪ್ರಬಂಧರಚನೆಯನ್ನು ಒಂದು ಮುಖ್ಯ ವಿಷಯವನ್ನಾಗಿ ಇಟ್ಟಿದ್ದಾರೆ. ಆದುದರಿಂದ ಮೈಸೂರು ದೇಶೀಯ ಪರೀಕ್ಷೆಗಳಿಗೆ ಓದುವವರಿಗೆ ಮಾತ್ರವಲ್ಲದೆ, ಮದ್ರಾಸು ಯೂನಿವರ್ಸಿಟಿಯ ಪರೀಕ್ಷೆಗಳಿಗೆ ಓದುವವರಿಗೂ ಈ ಗ್ರಂಥವು ಬಹಳ ಉಪಯುಕ್ತವಾಗಬಹುದೆಂದು ನಂಬಿದ್ದೇನೆ.

ಬೆಂಗಳೂರು,
ಮೇ, 1909.

ಎಸ್. ಟಿ. ರಾ.

---

## ತೃತೀಯ ಮುದ್ರಣದ ಪೀಠಿಕೆ.

ತೃತೀಯಮುದ್ರಣದಲ್ಲಿ ಪ್ರಬಂಧಗಳಿಗೆ ತಕ್ಕ ಮೂವತ್ತು ಹೊಸ ವಿಷಯಗಳಿಗೆ ಸಾರಾಂಶಗಳ ಪಟ್ಟಿಗಳನ್ನು ಕೊಟ್ಟಿರುವುದಲ್ಲದೆ, ಕನ್ನಡದಲ್ಲಿ ಕ್ಷೇಮಸಮಾಚಾರದ ಕಾಗದಗಳನ್ನು ಬರೆಯುವ ಕ್ರಮವನ್ನು ಸಂಕ್ಷೇಪವಾಗಿ ಉದಾಹರಣೆಗಳೊಡನೆ ವಿವರಿಸಿದೆ.

ಮೈಸೂರು ದೇಶದ ವಿದ್ಯಾಭ್ಯಾಸದ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರು ಈ ಪುಸ್ತಕವನ್ನು ಸಂಸ್ಥಾನದ ಎಲ್ಲಾ ಕನ್ನಡ ಮತ್ತು ಎ. ವಿ. ಸ್ಕೂಲುಗಳಲ್ಲಿ ಬಹುಮಾನವಾಗಿ ಕೊಡಬಹುದೆಂದು ಅಂಗೀಕರಿಸಿರುವುದಲ್ಲದೆ, ಎಲ್ಲಾ ಹೈ ಸ್ಕೂಲುಗಳಲ್ಲಿಯೂ ನಾರ್ಮಲ್ ಸ್ಕೂಲುಗಳಲ್ಲಿಯೂ ಪ್ರಬಂಧರಚನೆಯ ವಿಷಯದಲ್ಲಿ ಉಪಯೋಗಿಸತಕ್ಕ ಪುಸ್ತಕವನ್ನಾಗಿ ನಿಯಮಿಸಿರುತ್ತಾರೆ. ಈ ಪ್ರೋತ್ಸಾಹಕ್ಕಾಗಿ ನಾನು ಅವರಿಗೆ ಬಹಳ ಕೃತಜ್ಞನಾಗಿದ್ದೇನೆ.

ಹಾಸನ,
ನವೆಂಬರ್, 1912.

ಎಸ್. ಟಿ. ರಾ.

# TABLE OF CONTENTS.

# ವಿಷಯ ಸೂಚಿಕೆ.

## ಮೊದಲನೆಯ ಭಾಗ: ಪ್ರಬಂಧರಚನಾಕ್ರಮ.


ಪುಟ.

**ವಾಕ್ಯರಚನೆ:** ೧

ಒಳ್ಳೆಯ ವಾಕ್ಯರಚನೆಯ ಸ್ವರೂಪ „

ಇದನ್ನು ಕಲಿವುದಕ್ಕೆ ದಾರಿಗಳು „

**ಶೈಲಿ ಅಥವಾ ಸರಣಿ:** ೨

ಇದರ ಸ್ವರೂಪ „

ಇದರ ವಿಧಿಗಳು „

I. ಶಬ್ದಸೌಷ್ಠವ.

(1) ವ್ಯಾಕರಣವಿರುದ್ಧ ಪ್ರಯೋಗ ೩

(2) ರೂಢಿಯಲ್ಲಿಲ್ಲದ ಶಬ್ದಗಳ ಪ್ರಯೋಗ „

(3) ಗ್ರಾಮ್ಯಶಬ್ದಪ್ರಯೋಗ „

(4) ಅಕ್ಷರಸಂಯೋಜನ ಅವ್ಯವಸ್ಥಿತವಾಗಿರುವುದು ೪

(5) ಅನ್ಯಭಾಷೆಯ ಶಬ್ದಗಳು ಸಾಮಾನ್ಯವಾಗಿ ಕೂಡದು ೫

ಎಂಥ ಅನ್ಯಭಾಷೆಯ ಶಬ್ದಗಳು ಆಗಬಹುದು ? ೬

II. ಲಾಲಿತ್ಯ.

(a) ಅತಿದೀರ್ಘವಾದ ಸಂಸ್ಕೃತಶಬ್ದಗಳು ಕನ್ನಡದಲ್ಲಿ ಸಾಮಾನ್ಯವಾಗಿ ಆಗದು. ೭

ಇವು ಎಲ್ಲಿ ಆಗಬಹುದು ? „

ಕಠಿನವಾದ ಸಂಸ್ಕೃತಶಬ್ದಗಳಿಂದ ಪಾಂಡಿತ್ಯ ಪ್ರದರ್ಶನ. ಇದಕ್ಕೆ ಉದಾಹರಣೆಗಳು „

ಕರ್ಮಾರ್ಥಕ ರೂಪಗಳನ್ನು ಬಿಡಬೇಕು ೮

(b) ಸಂಕ್ಷೇಪವಾಗಿ ಬರೆವುದು „

ಸಂಕ್ಷೇಪಕಥನಕ್ಕೆ ದಾರಿಗಳು „

ಸಂಕ್ಷೇಪಕಥನಕ್ಕೆ ಭಂಗಗಳು: ೯

(1) ಪುನರುಕ್ತಿ

| | ಪುಟ. |
|---|---|
| (2) ಶಬ್ದಾಧಿಕ್ಯ | ೧೦ |
| ಇವು ಎಲ್ಲಿ ಯುಕ್ತ | ೧೧ |
| (c) ಪದಗಳನ್ನು ಗೂಢಾರ್ಥಗಳಲ್ಲಿ ಪ್ರಯೋಗಿಸುವುದು, ವಿರುದ್ಧಾರ್ಥವಾಗುವಂತೆ ಉಪಯೋಗಿಸುವುದು | ೧೧ |
| ಸರ್ವನಾಮಶಬ್ದಪ್ರಯೋಗ | ೧೨ |

**ವಾಕ್ಯ.**

**ವಾಕ್ಯದ ಸ್ವರೂಪ:**

| | |
|---|---|
| (a) **ಶಬ್ದಕ್ರಮ** | ೧೨—೧೪ |
| (b) **ಏಕೀಭಾವ:** | |
| ಇದರ ಸ್ವರೂಪ; ಇದು ಹೇಗೆ ಸಿದ್ಧಿಸುವುದು | ೧೪ |
| (c) **ಸಮತೆ:** | |
| ಇದರ ಸ್ವರೂಪ | ೧೫ |
| ಇದರಿಂದ ಪ್ರಯೋಜನ | „ |
| ಇದು ಗಾದೆಗಳಲ್ಲಿ ವಿಶೇಷ | „ |

**ವಾಕ್ಯಬೃಂದ.**

| | |
|---|---|
| ಶಬ್ದಾರ್ಥ | ೧೫ |
| ವಾಕ್ಯಬೃಂದದ ಸ್ವರೂಪ | ೧೬—೧೮ |

**ಲೇಖನಚಿಹ್ನೆಗಳು.**

| | |
|---|---|
| ಪೂರ್ಣವಿರಾಮ, ಅರ್ಧವಿರಾಮ, ಅಲ್ಪವಿರಾಮ | ೧೯ |
| ವಿವರಣ ಚಿಹ್ನೆ, ಗೀಟು, ಪ್ರಶ್ನಚಿಹ್ನೆ, ಅನುಕರಣ ಚಿಹ್ನೆ | ೨೦ |
| ಭಾವ ಚಿಹ್ನೆ | ೨೧ |
| ಲೇಖನಚಿಹ್ನೆಗಳ ಮೇಲೆ ಸೂಚನೆ | „ |

**ಪ್ರಬಂಧ.**

| | |
|---|---|
| ಇದನ್ನು ಬರೆವ ಕ್ರಮ | ೨೧ |
| ಪ್ರಬಂಧವು ಮೂರು | ೨೨ |
| **ವಸ್ತುವರ್ಣನ:** | ೨೨ |
| ವರ್ಣನೀಯವಸ್ತುಗಳ ಪಟ್ಟಿ | „ |

## ಬಗೆಬಗೆಯ ವಸ್ತುಗಳ ವರ್ಣನೆಗೆ ಉಚಿತವಾದ ಸಾರಾಂಶಗಳ ಪಟ್ಟಿಗಳು:

| | ಪುಟ. |
|---|---|
| ೧. ಪ್ರಾಣಿ | ೨೩ |
| ಉದಾ—ಆನೆ | " |
| ೨. ವನಸ್ಪತಿ | ೨೪ |
| ಉದಾ—ಹತ್ತಿಯ ಗಿಡ | " |
| ೩. ಖನಿಜ | ೨೫ |
| ಉದಾ—ಚಿನ್ನ | " |
| ೪. ಯಂತ್ರ | ೨೬ |
| ೫. (a) ಕೈಗಾರಿಕೆ | " |
| ಉದಾ—ಕಾಗದ | . |
| (b) ಕಟ್ಟಡ | ೨೮ |
| (a) ದೇಶ, ಜಿಲ್ಲೆ, ಪಟ್ಟಣ | " |
| (b) ನದಿ, ಪರ್ವತ | ೨೯ |

## II. ವೃತ್ತಾಂತಕಥನ:

| | |
|---|---|
| ಮುಖ್ಯಸಂಗತಿಗಳ ಪಟ್ಟಿ | ೩೦ |

## ಬಗೆಬಗೆಯ ಸಂಗತಿಗಳಿಗೆ ಉಚಿತವಾದ ಸಾರಾಂಶಗಳ ಪಟ್ಟಿಗಳು:

| | |
|---|---|
| ಕಾಲ್ಚೆಂಡಿನ ಪಂತ | ೩೧ |
| ಕಾಳಗ | ೩೨ |
| ಅಕ್ಬರನ ಆಳಿಕೆ | ೩೩ |
| ಪ್ರಸಿದ್ಧಪುರುಷನ ಜೀವನಚರಿತೆ | |

## III. ವಿಮರ್ಶನ:

| | |
|---|---|
| ಇದಕ್ಕೆ ಸೇರಿದ ಪ್ರಬಂಧಗಳನ್ನು ಬರೆವಾಗ ಗಮನಿಸಬೇಕಾದ ಅಂಶಗಳು | ೩೪—೩೬ |
| ಪ್ರಬಂಧದ ಮೂರು ಭಾಗಗಳು | |

ಪುಟ.

ನೀತಿವಚನ, ಲೋಕೋಕ್ತಿ, ಪದ್ಯ ಇವನ್ನು ಕೊಟ್ಟರೆ ಹೇಗೆ? ೩೬

ಅಂತ್ಯಭಾಗದಲ್ಲಿ ಪ್ರಬಂಧವು ಹೇಗಿರಬೇಕು? ೩೭


## ವಿಮರ್ಶನಕ್ಕೆ ಸೇರಿದ ಕೆಲವು ಪ್ರಬಂಧಗಳ ಸಾರಾಂಶಗಳ ಪಟ್ಟಿಗಳು:


1 ಬೇಸಗೆಯ ಪ್ರಾತಃಕಾಲ ೩೮

2. ನೈರ್ಮಲ್ಯ ,,

3. ಅತಿಥಿಸತ್ಕಾರ ,,

4. ಬೈಸಿಕಲ್ ೩೯

5. ಸಮುದ್ರಯಾನ

ಒಂದು ತರದ ಪ್ರಬಂಧವು ಮತ್ತೊಂದು ತರದೊಡನೆ ಬೆರೆತಿರುವುದು ೪೧

ಒಂದೇವಿಷಯವನ್ನು ಕುರಿತು ಬಗೆಬಗೆಯಾಗಿ ಬರೆಯಬಹುದು ,,

ಪರೀಕ್ಷೆಯಲ್ಲಿ ಪ್ರಬಂಧವನ್ನು ಬರೆವಾಗ ಅನುಸರಿಸಬೇಕಾದ ವಿಶೇಷವಿಧಿಗಳು


## ಎರಡನೆಯ ಭಾಗ: ಪ್ರಬಂಧಗಳು.


| | | ಪುಟ. | | | ಪುಟ. |
|---|---|---|---|---|---|
| ಇಲ್ಲಿ ಕೊಟ್ಟಿರುವ ಪ್ರಬಂಧಗಳನ್ನು ಉಪಯೋಗಿಸಿಕೊಳ್ಳುವ ಬಗೆ | | ೪೩ | 11. | ಆಲದ ಮರ | ೬೫ |
| 1. | ಹಸು | ,, | 12. | ಜೇಳ್ | ೬೬ |
| 2. | ಕುದುರೆ | ೪೬ | 13. | ಕಬ್ಬಿಣ | ೬೮ |
| 3. | ನಾಯಿ | ೪೯ | 14. | ತಾಮ್ರ | ೭೦ |
| 4. | ಬೆಕ್ಕು | ೫೧ | 15 | ಹಿತ್ತಾಳೆ | ೭೨ |
| 5. | ಇರುವೆ | ೫೩ | 16. | ಉಪ್ಪು | ೭೩ |
| 6. | ತೆಂಗಿನ ಮರ | ೫೫ | 17. | ಕಲ್ಲಿದ್ದಲು | ೭೫ |
| 7. | ಅಡಕೆಯ ಮರ | ೫೭ | 18. | ರೈತ | ೭೭ |
| 8. | ಮಾವಿನ ಮರ | ೫೯ | 19. | ಗಿಡಗಳು | ೭೮ |
| 9. | ಬಾಳೆಯ ಗಿಡ | ೬೧ | 20. | ಮಳೆಗಾಲದ ದಿನ | ೮೧ |
| 10. | ಹುಣಸೆಮರ | ೬೩ | 21. | ದಯೆ | ೮೨ |
| | | | 22. | ಸ್ವದೇಶಾಭಿಮಾನ | ೮೪ |

23. ಹೂಗಳು ೮೬
24. ಪುಸ್ತಕಭಂಡಾರಗಳು ೮೮
25. ದೊಡ್ಡ ಪಟ್ಟಣಗಳಲ್ಲಿ ವಾಸಮಾಡುವುದರ ಪ್ರಯೋಜನ ೯೦
26. ಪ್ರಾಣಿಹಿಂಸೆ ೯೧
27. ದಾನ ೯೪
28. ಸ್ನೇಹ ೯೬
29. ಕಾಲೋಪಯೋಗ ೯೮
30. ಕಸಬುಗಳಲ್ಲಿ ಆವುದನ್ನು ಆಶ್ರಯಿಸಬೇಕು ? ೧೦೦
31. ವೃತ್ತಾಂತಪತ್ರಿಕೆಗಳು ೧೦೨
32. ರೈಲು ೧೦೫
33. ಪೋಸ್ಟಾಫೀಸುಗಳು ೧೦೭
34. ಹಿಂದೂದೇಶದಲ್ಲಿ ಇಂಗ್ಲಿಷರ ಆಳಿಕೆ ೧೧೦
35. ಒಳ್ಳೆಯ ನಡತೆ ೧೧೨
36. ವ್ಯಾಪಾರ ೧೧೪
37. ಸ್ವಾರ್ಥಪರತ್ವ ೧೧೭
38. ತೃಪ್ತಿ ೧೧೯
39. ಯುದ್ಧ ೧೨೧
40. ಅಚ್ಚುಹಾಕುವದು ೧೨೪
41. ಪರೀಕ್ಷೆಗಳು ೧೨೬
42. ರಜಾದಿನಗಳು ೧೨೮
43. ಮಳೆಯ ಉಪಯೋಗಗಳು ೧೩೧
44. ಸಕಾಲದಲ್ಲಿ ಕೆಲಸಮಾಡುವುದು ೧೩೨
45. ಪುಸ್ತಕಗಳು ೧೩೪
46. ದೇಶಾಟನೆ ೧೩೭
47 ನದಿಗಳ ಉಪಯೋಗ ೧೩೯
48. ಹಿಂದೂದೇಶದ ಅಂಗಡಿಬೀದಿ ೧೪೧
49. ಹವಾದಿಂದ ಮನುಷ್ಯರಿಗಾಗುವ ಬದಲಾವಣೆ ೧೪೩
50. ಸೋಮಾರಿತನ ೧೪೬
51. ಐಶ್ವರ್ಯ ೧೪೮
52. ಕ್ಷಾಮಗಳು ೧೪೯
53. ಸ್ತ್ರೀವಿದ್ಯಾಭ್ಯಾಸ ೧೫೧
54. ಆರೋಗ್ಯ ೧೫೪
55. ಸ್ಥಿರಪ್ರಯತ್ನ ೧೫೬
56. ಸ್ವಾಭಿಮಾನ ೧೫೮
57. ಸುಗ್ಗಿಯ ಕಾಲ ೧೬೦
58. ಅಂಗಸಾಧನೆ ೧೬೨
59. ಪದ್ಧತಿ ೧೬೫
60. ಸತ್ಯ ೧೬೭

ಇನ್ನು ಕೆಲವು ಪ್ರಬಂಧಗಳ ಸಾರಾಂಶಗಳು ೧೭೧–೧೮೪
ಕಾಗದಗಳ ಬರವಣಿಗೆ ೧೮೫–೧೮೭
ಕಾಗದಗಳ ಮಾದರಿಗಳು ೧೮೭–೧೮೯
ಪ್ರಬಂಧಕ್ಕೆ ತಕ್ಕ ಇನ್ನು ಕೆಲವು ಮುಖ್ಯವಿಷಯಗಳು ೧೯೦
ಶಬ್ದಾನುಕ್ರಮಣಿಕೆ ೧೯೩
ಪ್ರಬಂಧಗಳಿಗೆ ಸೂಚೀಪತ್ರ ೧೯೫

ಪುಟ.

ನೀತಿವಚನ, ಲೋಕೋಕ್ತಿ, ಪದ್ಯ ಇವನ್ನು ಕೊಟ್ಟರೆ ಹೇಗೆ? ೩೬
ಅಂತ್ಯಭಾಗದಲ್ಲಿ ಪ್ರಬಂಧವು ಹೇಗಿರಬೇಕು? ೩೭

## ವಿಮರ್ಶನಕ್ಕೆ ಸೇರಿದ ಕೆಲವು ಪ್ರಬಂಧಗಳ ಸಾರಾಂಶಗಳ ಪಟ್ಟಿಗಳು:

1. ಬೇಸಗೆಯ ಪ್ರಾತಃಕಾಲ ೩೮
2. ನೈರ್ಮಲ್ಯ "
3. ಅತಿಥಿಸತ್ಕಾರ "
4. ಬೈಸಿಕಲ್ ೩೯
5. ಸಮುದ್ರಯಾನ
ಒಂದು ತರದ ಪ್ರಬಂಧವು ಮತ್ತೊಂದು ತರದೊಡನೆ ಬೆರೆತಿರುವುದು ೪೨
ಒಂದೇವಿಷಯವನ್ನು ಕುರಿತು ಬಗೆಬಗೆಯಾಗಿ ಬರೆಯಬಹುದು "
ಪರೀಕ್ಷೆಯಲ್ಲಿ ಪ್ರಬಂಧವನ್ನು ಬರೆವಾಗ ಅನುಸರಿಸಬೇಕಾದ ವಿಶೇಷವಿಧಿಗಳು "

## ಎರಡನೆಯ ಭಾಗ: ಪ್ರಬಂಧಗಳು.

ಪುಟ.

ಇಲ್ಲಿ ಕೊಟ್ಟಿರುವ ಪ್ರಬಂಧಗಳನ್ನು ಉಪಯೋಗಿಸಿಕೊಳ್ಳುವ ಬಗೆ ೪೩
1. ಹಸು "
2. ಕುದುರೆ ೪೬
3. ನಾಯಿ ೪೯
4. ಬೆಕ್ಕು ೫೧
5. ಇರುವೆ ೫೩
6. ತೆಂಗಿನ ಮರ ೫೫
7. ಅಡಕೆಯ ಮರ ೫೭
8. ಮಾವಿನ ಮರ ೫೯
9. ಬಾಳೆಯ ಗಿಡ ೬೧
10. ಹುಣಸೆಮರ ೬೩
11. ಆಲದ ಮರ ೬೫
12. ಬೆಳ್ಳಿ ೬೬
13. ಕಬ್ಬಿಣ ೬೮
14. ತಾಮ್ರ ೭೦
15 ಹಿತ್ತಾಳೆ ೭೨
16. ಉಪ್ಪು ೭೩
17. ಕಲ್ಲಿದ್ದಲು ೭೫
18. ರೈತ ೭೭
19. ಗಿಡಗಳು ೭೮
20. ಮಳೆಗಾಲದ ದಿನ ೮೧
21. ದಯೆ ೮೨
22. ಸ್ವದೇಶಾಭಿಮಾನ ೮೪

ಶ್ರೀರಸ್ತು.

# ಪ್ರಬಂಧಮಂಜರಿ.

## ಮೊದಲನೆಯ ಭಾಗ:

### ಪ್ರಬಂಧರಚನಾಕ್ರಮ.

**ವಾಕ್ಯರಚನೆ (Composition)** — ಇತರರಿಗೆ ನಮ್ಮ ಅಭಿಪ್ರಾಯವನ್ನು ಪೂರ್ಣವಾಗಿ ತಿಳಿಸತಕ್ಕ ಮಾತುಗಳ ಸಮೂಹಕ್ಕೆ ವಾಕ್ಯವೆಂದು ಹೆಸರು. ಅಂತಹ ವಾಕ್ಯಗಳನ್ನು ಪ್ರಯೋಗಿಸುವುದು ವಾಕ್ಯರಚನೆಯೆನಿಸುವುದು. ವಾಕ್ಯರಚನೆ ಸರಿಯಾಗಿದ್ದರೆ ಅದರಲ್ಲಿ ಶಬ್ದದ ಮತ್ತು ಅರ್ಥದ ದೋಷ ಯಾವುದೂ ಇರುವುದಿಲ್ಲ. ಬರೆದವರ ಅಭಿಪ್ರಾಯಗಳು ವಿಶದವಾಗಿಯೂ ಸುಲಭವಾಗಿಯೂ ತಿಳಿಯುಬರುವುವು. ಅಲ್ಲದೆ ನೆನಪಿನಲ್ಲಿಟ್ಟುಕೊಳ್ಳುವಷ್ಟು ಲಲಿತವಾಗಿರುವುದು ವಾಸಕ್ಕೆ ಯೋಗ್ಯವಾಗುವಂತೆ ಒಂದು ಮನೆಯನ್ನು ಕಟ್ಟಬೇಕಾದರೆ ಕಲ್ಲುಗಳನ್ನೂ ಇಟ್ಟಿಗೆಗಳನ್ನೂ ತಕ್ಕ ಸ್ಥಳಗಳಲ್ಲಿ ಸರಿಯಾಗಿ ಇಡಬೇಕು. ಹಾಗೆಯೇ, ನಮ್ಮ ಅಭಿಪ್ರಾಯಗಳು ಹೆರರಿಗೆ ವಿಶದವಾಗಿ ತಿಳಿಯಬರಬೇಕಾದರೆ, ತಕ್ಕ ಪದಗಳನ್ನು ಎಲ್ಲೆಲ್ಲಿ ಬೇಕೋ ಅಲ್ಲಲ್ಲಿ ಸೇರಿಸಿ ಬರೆಯಬೇಕು.

ವಾಕ್ಯಗಳನ್ನು ಚೆನ್ನಾಗಿ ರಚಿಸುವ ಯೋಗ್ಯತೆಯನ್ನು ಹೇಗೆ ಸಂಪಾದಿಸಬೇಕು? ಕೆಲವರು ವ್ಯಾಕರಣ ಜ್ಞಾನದಿಂದ ಅದನ್ನು ಸಂಪಾದಿಸಬಹುದೆನ್ನುವರು. ಇದು ತಪ್ಪು. ವ್ಯಾಕರಣವು ಶಬ್ದಗಳನ್ನು ತಿದ್ದುವುದಕ್ಕೆ ಸಹಕಾರಿಯಾಗುವುದೇ ಹೊರತು ಯಾವುದಾದರೂ ಒಂದು ವಿಷಯವನ್ನು ಕುರಿತು ಬರೆವ ಶಕ್ತಿಯನ್ನುಂಟುಮಾಡಲಾರದು. ಯಾವ ಭಾಷೆಯಲ್ಲಿ-

ಯಾದರೂ ವಾಕ್ಯರಚನೆಯನ್ನು ಚೆನ್ನಾಗಿ ಕಲಿಯಬೇಕಾದರೆ ಈ ವಿಧಿಗಳನ್ನು ಅನುಸರಿಸಬೇಕು:—

(1) ಆ ಭಾಷೆಯಲ್ಲಿರುವ ಉತ್ತಮವಾದ ವಚನಗ್ರಂಥಗಳನ್ನು ಸಾವಧಾನವಾಗಿ ಓದಬೇಕು

(2) ಆ ಗ್ರಂಥಗಳ ವಿಷಯಗಳನ್ನು ಚೆನ್ನಾಗಿ ಮಂದಟ್ಟು ಮಾಡಿಕೊಳ್ಳಬೇಕು.

(3) ನಮ್ಮ ಕಣ್ಣು ಮೊದಲಾದಿಂದ್ರಿಯಗಳಿಂದ ಪ್ರಪಂಚದಲ್ಲಿರುವ ವಸ್ತುಗಳ ಸಂಗತಿಗಳನ್ನು ಚೆನ್ನಾಗಿ ಪರೀಕ್ಷಿಸಿ ಗ್ರಹಿಸಿಕೊಳ್ಳುವುದು.

(4) ನಮ್ಮ ಅಭಿಪ್ರಾಯಗಳನ್ನು ಅಡಿಗಡಿಗೆ ಬರೆಯುತ್ತಿರುವುದು.

(5) ನಾವು ಬರೆದುದನ್ನು ತಿದ್ದಿ ಸರಿಮಾಡುವುದು.

**ಶೈಲಿ (Style).**—ಪದಗಳನ್ನು ಆರಿಸಿಕೊಂಡು ವಾಕ್ಯಗಳಾಗಿ ತಕ್ಕಂತೆ ಜೋಡಿಸುವ ರೀತಿಗೆ "ಶೈಲಿ" ಅಥವಾ "ಸರಣಿ" ಎಂದು ಹೆಸರು. ನಡೆನುಡಿಗಳು ಒಬ್ಬೊಬ್ಬರಲ್ಲಿ ಒಂದೊಂದು ತೆರನಾಗಿರುವಂತೆ, ಒಬ್ಬೊಬ್ಬರ ಭಾಷಾಶೈಲಿ ಒಂದೊಂದು ವಿಧವಾಗಿರುವುದು. ಒಂದು ಭಾಷೆಯ ಸರಣಿ ಮತ್ತೊಂದು ಭಾಷೆಯ ಸರಣಿಯಂತೆ ಇರುವುದಿಲ್ಲ. ಇಂಗ್ಲಿಷಿನಲ್ಲಿ ಬರೆವ ರೀತಿಯೇ ಬೇರೆ, ಕನ್ನಡದಲ್ಲಿ ಬರೆವ ಬಗೆಯೇ ಬೇರೆ. ಕಾಲ ಬದಲಾಯಿಸಿದ ಹಾಗೆಲ್ಲಾ ಭಾಷಾಶೈಲಿಯೂ ಬದಲಾಯಿಸುವುದು. ನೂರು ವರ್ಷಗಳ ಹಿಂದೆ ಕನ್ನಡದಲ್ಲಿ ಬರೆಯುತ್ತಿದ್ದ ಸರಣಿ ಈಗ ಇಲ್ಲ. ಪ್ರಚಾರದಲ್ಲಿರುವ ಎಲ್ಲಾ ಭಾಷೆಗಳಿಗೂ ಇದು ಸಲ್ಲುವುದು. ಒಂದೊಂದು ಕಾಲದಲ್ಲಿ ಒಂದೊಂದು ರೀತಿಯಿಂದ ನಡೆದುಕೊಳ್ಳುವಂತೆಯೂ, ಆಯಾ ಕಾಲಕ್ಕೆ ತಕ್ಕ ಬೇರೆ ಬೇರೆ ಉಡುಪನ್ನು ತೊಟ್ಟುಕೊಳ್ಳುವಂತೆಯೂ ಸಂದರ್ಭಕ್ಕನುಸಾರವಾಗಿ ಸರಣಿಯನ್ನು ಬದಲಾಯಿಸಬೇಕು. ಯೋಗಕ್ಷೇಮಕ್ಕೆ ಕಾಗದ ಬರೆವುದು, ಉಪನ್ಯಾಸ ಮಾಡುವುದು, ಪ್ರಬಂಧವನ್ನು ಬರೆವುದು ಇವುಗಳಿಗೆ ಬೇರೆ ಬೇರೆ ಭಾಷಾಸರಣಿ ಬೇಕು. ವಚನಕಾವ್ಯವನ್ನು ಬರೆವ ಸರಣಿಯೇ ಬೇರೆ, ಪದ್ಯಕಾವ್ಯವನ್ನು ಬರೆವ ಶೈಲಿಯೇ ಬೇರೆ. ಆದರೂ ಎಲ್ಲಾ ಭಾಷೆಗಳಿಗೂ, ಎಲ್ಲಾ ಕಾಲಗಳಿಗೂ ಮತ್ತು ಎಲ್ಲಾ ಸಂದರ್ಭಗ-

ಳಿಗೂ ಒಂದೇ ರೀತಿಯಲ್ಲಿ ಸಲ್ಲುವ ಭಾಷಾಸರಣಿಯ ವಿಧಿಗಳು ಕೆಲವು ಉಂಟು. ಅವು ಯಾವುವೆಂದರೆ:—

I **ಶಬ್ದಸೌಷ್ಠವ:**—ವಾಕ್ಯರಚನೆ ಶುದ್ಧವಾಗಿರುವುದು.

II **ಲಾಲಿತ್ಯ:**—ಓದಿದೊಡನೆಯೇ ಅರ್ಥವು ತಿಳಿಯಬರುವಂತೆ ವಿಶದವಾದ ರೀತಿಯಲ್ಲಿ ಬರೆವುದು.

ಈ ವಿಷಯಗಳನ್ನು ಕುರಿತು ಹೊಸಗನ್ನಡಕ್ಕೆ ಸಂಬಂಧಿಸಿರುವಷ್ಟು ಇಲ್ಲಿ ವಿವರಿಸಿದೆ.

## I ಶಬ್ದಸೌಷ್ಠವ:—(Purity in the use of words.)

(1) ವ್ಯಾಕರಣಕ್ಕೆ ವಿರುದ್ಧವಾದ ಶಬ್ದಪ್ರಯೋಗಗಳನ್ನು ಮಾಡಕೂಡದು. ಉದಾ.—

| ಅಶುದ್ಧ. | ಶುದ್ಧ. |
|---|---|
| ಪ್ರೀತಿ ಇಂದ. | ಪ್ರೀತಿಯಿಂದ. |
| ನಗುಮುಖಿಳಾಗಿ | ನಗೆಮೊಗದವಳಾಗಿ. |
| ಭಯಶೂನ್ಯವಾದ ಹೃದಯಳಾಗಿ. | ಭಯಶೂನ್ಯಹೃದಯೆಯಾಗಿ. |
| ಗುರುವಿಗೋಸ್ಕರ ಭಕ್ತಿ. | ಗುರುವಿನಲ್ಲಿ ಭಕ್ತಿ |
| ಅವನು ನನ್ನನ್ನು ಕೋಪಮಾಡುತ್ತಾನೆ. | ಅವನು ನನ್ನಮೇಲೆ ಕೋಪಮಾಡುತ್ತಾನೆ. |
| ಧೀರರು ಕಷ್ಟದಿಂದ ಅಂಜುವುದಿಲ್ಲ. | ಧೀರರು ಕಷ್ಟಕ್ಕೆ ಅಂಜುವುದಿಲ್ಲ. |
| ಜನರು ವಿವೇಕವೆಂದು ಹೇಳುವುದ್ಯಾವುದು? | ಜನರು ವಿವೇಕವೆಂದು ಹೇಳುವುದುಯಾವುದು? |

(2) ರೂಢಿಯಲ್ಲಿಲ್ಲದ ಶಬ್ದಗಳನ್ನು ಪ್ರಯೋಗಿಸಕೂಡದು. ಉದಾ.—

"ಅಜ್ಜನನ್ನು ವಂದಿಸು." "ತಾತನು ಬಂದನು." "ಅಲ್ಲಿ ಒಕ್ಕಲಿಗನಾಗಿದ್ದನು." ಇಲ್ಲಿ "ಅಜ್ಜ" ಎಂಬುದು "ಆರ್ಯ" ಎಂಬರ್ಥದಲ್ಲಿಯೂ, "ತಾತ" ಎಂಬುದು "ತಂದೆ" ಎಂಬರ್ಥದಲ್ಲಿಯೂ, "ಒಕ್ಕಲಿಗನಾಗಿದ್ದನು" ಎಂಬುದು "ಒಕ್ಕಲಿದ್ದನು" ಎಂಬರ್ಥದಲ್ಲಿಯೂ ರೂಢಿಯಲ್ಲಿಲ್ಲ.

(3) ಗ್ರಾಮ್ಯಶಬ್ದಗಳನ್ನು ಪ್ರಯೋಗಿಸಬಾರದು. ಉದಾ.—

| ಗ್ರಾಮ್ಯ. | ಶುದ್ಧ. | ಗ್ರಾಮ್ಯ. | ಶುದ್ಧ. |
|---|---|---|---|
| ವ್ಯಾಗೆ. | ಮೇಲೆ. | ಏಸು. | ಎಷ್ಟು. |
| ಹೆಂಗೆ. | ಹ್ಯಾಗೆ, ಹೇಗೆ. | ಈಸು. | ಇಷ್ಟು. |
| ಹಂಗೂ. | ಹಾಗೂ. | ಕುಂತವ್ರು. | ಕುಳಿತಿರುವರು. |
| ಹಿಂಗೆ. | ಹೀಗೆ. [ಹುಟ್ಟಿ. | ಹೈದ. | ಹುಡುಗ. |
| ಹೊತ್ತನುಂಟೆ. | ಹೊತ್ತಿನಂತೆ, ಹೊತ್ತು | ಹೊತ್ತಾರೆ. | ಬೆಳಗ್ಗೆ. |

(4) ಒಂದೇ ಶಬ್ದವನ್ನು ವ್ಯವಸ್ಥೆಯಿಲ್ಲದೆ ಬೇರೆಬೇರೆ ರೂಪಗಳಿಂದ ಬರೆ ಯುತ್ತಿರುವರು. ಇದು ಸರಿಯಲ್ಲ. ಉದಾ.—

**ಅರಿಸಿನ, ಅರಿಶಿನ, ಅರ್ಶಿನ, ಅರ್ಸಿನ, ಅರಶಿನ, ಅರಸಿನ. ಅಡಕೆ, ಅಡಿಕೆ. ವೀಳಯ,ವೀಳೆಯ, ವೀಳ್ಯ. ಆದುದರಿಂದ, ಆದದ್ದರಿಂದ, ಆದ್ದರಿಂದ. ಬಿಸಿಲು, ಬಿಸಲು,ಬಿಸುಲು. ಕಳಿಹಿಸು,ಕಳುಹಿಸು,ಕಳಿಸು,ಕಳುಹು. ಬಿನ್ನವಿಸು,ಬಿನ್ನಯಿಸು,ಬಿನ್ನೈಸು. ಬಕ್ಕಬಯಲು,ಬಟ್ಟಬಯಲು. ತಿಳಿಸು, ತಿಳಸು, ತಿಳುಹು, ತಿಳಿಹಿಸು. ಬರೆಸು, ಬರೆಯಿಸು, ಬರಿಸು, ಬರಸು.**

ಅನೇಕ ಶಬ್ದಗಳನ್ನು ಶುದ್ಧವಾದ ಅಕ್ಷರಸಂಯೋಜನದಿಂದ ಬರೆಯುತ್ತಿಲ್ಲ. ಸ್ವರಾದಿ ಶಬ್ದಗಳನ್ನು ವ್ಯಂಜನಾದಿಯಾಗಿಯೂ ವ್ಯಂಜನಾದಿಯನ್ನು ಸ್ವರಾದಿಯಾಗಿಯೂ ಮಾಡುವರು. ಉದಾ.—

| ಅಶುದ್ಧ. | ಶುದ್ಧ. | ಅಶುದ್ಧ. | ಶುದ್ಧ. |
|---|---|---|---|
| ವೊಂದು, ವಂದು. | ಒಂದು. | ವೊಡಲು, ವಡ್ಲು. | ಒಡಲು. |
| ಯೆಲೆ, ಯಲೆ. | ಎಲೆ. | ವಾರೆ. | ಓರೆ. |
| ಯೆಷ್ಟು, ಯಷ್ಟು. | ಎಷ್ಟು. | ಯಿದು. | ಇದು. |
| ವೋಲೆ, ವಾಲೆ. | ಓಲೆ. | ಯೀಗ. | ಈಗ. |
| ವೂಟ. | ಊಟ. | ವಳ್ಳೇದು. | ಒಳ್ಳೆಯದು. |
| ವೂರು. | ಊರು. | ವೊಟ್ಟು, ವಟ್ಟು. | ಒಟ್ಟು |

ಸಂಸ್ಕೃತ ಶಬ್ದಗಳನ್ನು ಬರೆವುದರಲ್ಲಿ ಅಕ್ಷರಸಂಯೋಜನದ ತಪ್ಪು ವಿಶೇಷವಾಗಿದೆ. ಹೇಗೆಂದರೆ.—

| ಅಶುದ್ಧ. | ಶುದ್ಧ. | ಅಶುದ್ಧ. | ಶುದ್ಧ. |
|---|---|---|---|
| ನಂತರ. | ಅನಂತರ. | ಪ್ರಗ್ನೆ. | ಪ್ರಜ್ಞೆ. |
| ವುದ್ದಿಶ್ಯದಿಂದ. | ಉದ್ದೇಶದಿಂದ. | ಇತರೇರು. | ಇತರರು. |
| ಇತರೇಜನ. | ಇತರಜನ. | ಪುನಹ. | ಪುನಃ. |
| ವಿಶಯ. | ವಿಷಯ. | ಸೀಕ್ಷೆ. | ಶಿಕ್ಷೆ. |
| ಎಜಮಾನ. | ಯಜಮಾನ. | ಬ್ರಾಂಹಣ. / ಬ್ರಾಮ್ಹಣ. | ಬ್ರಾಹ್ಮಣ. |
| ಎಶಸ್ಸು. | ಯಶಸ್ಸು. | | |
| ಎತ್ನ. | ಯತ್ನ. | ಲೌಕೀಕ. | ಲೌಕಿಕ. |
| ದಿವ್ಸ. | ದಿವಸ. | ಧಾರಡ್ಯ. | ದಾರ್ಢ್ಯ. |
| ಕಸ್ಠ, ಕಸ್ಟ. | ಕಷ್ಟ. | ಸಮ್ಮಂಧ. | ಸಂಬಂಧ. |
| ಅಘಾದ. | ಅಗಾಧ. | ಅಭೀಪ್ರಾಯ. | ಅಭಿಪ್ರಾಯ. |
| ಗ್ನಾನ. | ಜ್ಞಾನ. | ಶುಲುಬ. | ಸುಲಭ. |
| ವಿಗ್ನಾಪನೆ. | ವಿಜ್ಞಾಪನೆ. | ವುಪಕಾರ. | ಉಪಕಾರ. |

(5) ಅಚ್ಚ ಗನ್ನಡದ ಮಾತುಗಳು ಅಥವಾ ಕನ್ನಡದಲ್ಲಿ ನೆಲೆಗೊಂಡಿರುವ ಸಂಸ್ಕೃತಶಬ್ದಗಳು ಇದ್ದರೂ ಅವುಗಳನ್ನು ಬಿಟ್ಟು ಅನ್ಯಭಾಷೆಯ ಮಾತು-ಗಳನ್ನು ಪ್ರಯೋಗಿಸುವುದು ಸರಿಯಲ್ಲ—ಬುಕ್, ರೋಡ್, ಟಾನ್, ಲೀವ್, ಪೇಪರ್, ಇಂಕ್, ಬಾಟಲ್, ಗ್ಲಾಸ್, ಕೋಟ್, ಬಿಲ್ಡಿಂಗ್, ಕಂಡಿಷನ್, ಜಡ್ಜ್‌ಮೆಂಟ್ ಮುಂತಾದ ಇಂಗ್ಲಿಷು ಮಾತುಗಳಿಗೂ; ದುಸ್ರಾ, ಫಕತ್, ಐನ್, ಮೋಖೂಪ್, ಹುಕ್ಕುಂ, ಫಾಯಿಷ್, ಜಾಸ್ತಿ, ವಾಪಸ್, ಬಿನ್ ಪು-ಕಾರ್, ಮೊಕರೂರ್, ಜವಾಬ್, ಮಾಲ್, ಮಾಫ್, ಬಾಜು, ತಯಾರ್, ರು-ಷುವತ್ತು, ತಕ್ಸೀರ್, ಖುಲಾಸ್, ತಪ್ಸೀಲ್, ಸುಫರ್ದ್, ತನಿಖೆ, ಪರವಾ, ಉಡಾಫೆ, ಇವೇ ಮೊದಲಾದ ಹಿಂದುಸ್ಥಾನಿ ಮಾತುಗಳಿಗೂ ಕನ್ನಡದಲ್ಲಿ ಬೇರೆಮಾತುಗಳುಂಟು. ಮುಸಲ್ಮಾನರ ಆಳಿಕೆಯಲ್ಲಿ ಅವರಭಾಷೆಯ ಕೆಲವು ಮಾತುಗಳು ಕನ್ನಡಕ್ಕೆ ಬಂದುವು. ಈಗ ಇಂಗ್ಲಿಷರ ರಾಜ್ಯಭಾರದಲ್ಲಿ ಹಲವು ಆಂಗ್ಲೇಯ ಶಬ್ದಗಳು ಬಂದು ಸೇರಿವೆ; ಸೇರುತ್ತಲೂ ಇವೆ. ಇಂಗ್ಲಿಷನ್ನು ಕಲಿತಿರುವ ಕನ್ನಡಿಗರು ತಮ್ಮ ಭಾಷೆಯನ್ನಾಡುತ್ತಿರುವಾಗ ಈ ಭಾಷೆಯ ಮಾತುಗಳಿಗೆ ಬದಲಾಗಿ ಇಂಗ್ಲಿಷ್ ಮಾತುಗಳನ್ನೇ ಉಪಯೋಗಿಸಿ, ಅದ-ಕ್ಕೆ ಕನ್ನಡದ ವಿಭಕ್ತಿ, ವಚನ, ಮೊದಲಾದುದನ್ನು ಸೇರಿಸುವುದು ಬಹಳ ಸಾ-ಮಾನ್ಯವಾಗಿದೆ. ಅಲ್ಲದೆ ಕನ್ನಡದ ಭಾಷಾರೀತಿಯನ್ನು ಉಲ್ಲಂಘಿಸಿ ಆಂ-ಗ್ಲೇಯ ಭಾಷಾಪದ್ಧತಿಯನ್ನನುಸರಿಸಿ ಬರೆವುದೂ ವಾಡಿಕೆಯಾಗಿದೆ. ಕ್ರಿ-ಸ್ತರು ಬೇರೆ ಸ್ವೇಚ್ಛೆಯಾಗಿ ಕನ್ನಡವನ್ನು ಉಪಯೋಗಿಸುತ್ತಿರುವರು. ಈ ಕಾರಣಗಳಿಂದ ಕನ್ನಡವು ಬಹಳ ಕ್ಷೀಣದಶೆಗೆ ಬಂದಿದೆ. ಉದಾ —

"ಅಲ್ಲಿ ನೆರೆದಿದ್ದವರಲ್ಲಾರೂ ಧೈರ್ಯದಿಂದೆದ್ದು ಬಂದು **ಆಕ್ಷೇಪಿಸುವುದಕ್ಕೆ ಸಾಹಸವುಳ್ಳವರಾಗಲಿಲ್ಲ.**"

"ಉಳಿದವರು ಅರಣ್ಯಗಳಲ್ಲಿಯೂ ಪರ್ವತಗಳಲ್ಲಿಯೂ **ಆಶ್ರಯುವನ್ನು ತೆಗೆದು-ಕೊಂಡು** ತಮ್ಮ **ಸ್ವಾಧೀನತೆಯುನ್ನು** ಕಾಪಾಡಿಕೊಳ್ಳಲಾರಂಭಿಸಿದರು."

"ಋಗ್ವೇದದಲ್ಲಿ ಆರ್ಯ, ಅನಾರ್ಯ ಎಂಬ ಈ ಎರಡು ಜಾತಿಯ **ಪರಿಚಯ**ವುಂ-ಟಾಗುತ್ತದೆ."

"ಸಮಸ್ತ ಪ್ರದೇಶಗಳಲ್ಲಿಯೂ ಹಿಂದೂಗಳ **ಪ್ರಾಧಾನ್ಯವು ವಿಸ್ತಾರವಾಯಿತು.**"

"ಭರತಖಂಡದಲ್ಲಿ ಪುನಃ ಪುನಃ ಉಂಟಾದ ರಾಜ್ಯವಿಪ್ಲವಗಳಿಂದ **ಜೀವನಸಂಗ್ರಾಮವು** ಹೆಚ್ಚಾಗುತ ಬಂತು."

ಆದರೆ ಅನ್ಯದೇಶದಿಂದ ಹೊಸದಾಗಿಬಂದ ಅನೇಕಪದಾರ್ಥಗಳಿಗೆ ನಮ್ಮ ಭಾಷೆಯಲ್ಲಿ ಹೆಸರು ಇಲ್ಲದಿರುವುದರಿಂದ, ಆ ವಸ್ತುಗಳನ್ನು ಕರೆಯಬೇಕಾದರೆ, ಅನ್ಯದೇಶೀಯ ಶಬ್ದಗಳನ್ನೇ ಉಪಯೋಗಿಸಬಹುದು. ಉದಾ.—

ಅಲುಮಿನಿಯಂ, ಕೋಕೊ, ಕಾಫಿ, ಟೀ, ಸೋಡಾ, ಲಿಮನೇಡ್, ರಬ್ಬರ್, ಫ್ಲಾನಲ್, ರೈಲು, ಇಂಜಿನ್, ಪ್ಲೇಗು ಮೊದಲಾದ ಇಂಗ್ಲಿಷು ಶಬ್ದಗಳು; ಅತ್ತರ್, ಜವಾಜಿ ಮೊದಲಾದ ಹಿಂದುಸ್ತಾನಿ ಮಾತುಗಳು.

ಇನ್ನು ಕೆಲವು ಅನ್ಯದೇಶ್ಯ ಶಬ್ದಗಳಿಗೆ ಕನ್ನಡದಲ್ಲಿ ಪ್ರತಿಪದಗಳಿಲ್ಲದಿರುವುದರಿಂದ ಅವು ರೂಢಿಯಲ್ಲಿವೆ. ಉದಾ.—

1 ಸಮನ್, ವಾರಂಟು, ಪೋಲೀಸು, ಹೀರಂಗು, ಭಾಜರ್, ಲಾಯರು, ರಿಕಾರ್ಡು, ರಿಪೋರ್ಟು, ಸರ್ಕೀಟು, ಕಂಟ್ರಾಕ್ಟು, ಮೆಂಬರು, ಓವರ್ಸೀರ್, ಇಂಜಿನೀರು, ಮುನಿಸಿಪಾಲಿಟಿ, ಕಾಲೇಜು.

2 ಶಿಫಾರಸು, ಖಾಯಂ, ಅಂದಾಜು, ಖಾಲಿ, ದಾಮಾಷಾ, ಮುಲ್ಕಿ, ಇಲಾಖೆ, ಮೊಕದ್ದಮೆ, ವಾಯಿದೆ, ಖಾನೇಷುಮಾರಿ, ಆಮದು, ರಫ್ತು, ತಕರಾರು, ಸರ್ಕಾರ, ಕಚ್ಚೇರಿ.

---

## II ಲಾಲಿತ್ಯ (Simplicity).

ಶಬ್ದಸೌಷ್ಠವದ ಜತೆಗೆ ಲಾಲಿತ್ಯವು ಭಾಷಾಶೈಲಿಯ ಮುಖ್ಯ ಗುಣವು. ನಮ್ಮ ಗ್ರಂಥವು ಒಳ್ಳೆಯದೆನಿಸಿಕೊಳ್ಳಬೇಕಾದರೆ, ಓದಿದವರಿಗೆ ಏನೋ ಒಂದರ್ಥವನ್ನು ಕೊಡುವ ಹಾಗಿದ್ದರೆ ಸಾಲದು; ನಮ್ಮ ಮನಸ್ಸಿನಲ್ಲಿರುವ ಅಭಿಪ್ರಾಯವನ್ನು ಸ್ವಲ್ಪವೂ ಹೆಚ್ಚುಕಡಮೆಯಿಲ್ಲದಂತೆ ವಿಶದವಾಗಿ ತಿಳಿಯಪಡಿಸುತ್ತಿರಬೇಕು. ವಾಚಕರು ನಿಜವಾದ ಅರ್ಥವನ್ನು ತಿಳಿಯಲಾರದ ಹಾಗೆ ಕೇವಲ ಶಬ್ದಾಡಂಬರವಿರಬಾರದು; ಅಥವಾ ಎರಡರ್ಥಗಳು ತೋರಿ ಅವರಿಗೆ ಇದೋ ಅದೋ ಎಂಬ ಸಂಶಯವುಂಟಾಗಬಾರದು. ಓದುವವರು ಅರ್ಥವನ್ನು ಬಹಳ ವಿಚಾರಮಾಡಿ ತಿಳಿದುಕೊಳ್ಳುವಂತೆಯೂ ಬರೆಯಬಾರದು. ಓದಿದೊಡನೆಯೇ ಅರ್ಥವು ಚೆನ್ನಾಗಿ ಹೊಳೆವಂತೆ ಬರೆಯಬೇಕು.

(a) ಲಾಲಿತ್ಯವು ಶೈಲಿಗೆ ಉಂಟಾಗಬೇಕಾದರೆ ಕೂಡಿದ ಮಟ್ಟಿಗೂ ಅತಿದೀರ್ಘವಾದ ಸಂಸ್ಕೃತಪದಗಳನ್ನು ಪ್ರಯೋಗಿಸಬಾರದು.

ಬಹುಕಾಲದಿಂದಲೂ ಅನೇಕ ಸಂಸ್ಕೃತಶಬ್ದಗಳು ಕನ್ನಡದಲ್ಲಿ ನೆಲೆಗೊಂಡಿವೆ. ಇವುಗಳನ್ನು ಯಾರೂ ತಳ್ಳಿಬಿಡಲಾರರು. ಒಂದು ಸಂಸ್ಕೃತಶಬ್ದವೂ ಇಲ್ಲದಂತೆ ವಾಕ್ಯಗಳನ್ನು ಬರೆವುದು ಅಸಾಧ್ಯ. ಕನ್ನಡದ ಸ್ಥಿತಿಯೇ ಸಂಸ್ಕೃತಕ್ಕೆ ಅಧೀನವಾಗಿದೆ. ಆದರೂ ಪೂರ್ವಕಾಲದಿಂದ ಕನ್ನಡದಲ್ಲಿಸೇರಿಕೊಂಡು, ಸಂಸ್ಕೃತವೆಂದು ಭಾವಿಸಲಾಗದಷ್ಟು ಧಾರಾಳವಾಗಿ ಬಳಕೆಯಲ್ಲಿರುವ ಶಬ್ದಗಳು ಹೊರತು, ದೀರ್ಘವಾಗಿಯೂ ಕಠಿನವಾಗಿಯೂ ಇರುವ ಸಂಸ್ಕೃತಶಬ್ದಗಳನ್ನು ಹೊಸದಾಗಿ ಸೇರಿಸಿಕೊಳ್ಳಲಾಗದು. ಅದರಿಂದ ಅರ್ಥವು ಬೇಗನೆ ಹೊಳೆಯಲಾರದು.

ಆದರೆ ಹೊಸದಾಗಿ ಸಂಸ್ಕೃತಶಬ್ದವೊಂದನ್ನೂ ಯಾವಾಗಲೂ ಸೇರಿಸಿಕೊಳ್ಳಕೂಡದೆಂದಲ್ಲ. ಕೆಲವು ಸಂದರ್ಭಗಳಲ್ಲಿ ಹೊಸದಾಗಿ ಪದಗಳು ಬೇಕಾಗುವುವು. ಪ್ರಾಣಿಶಾಸ್ತ್ರ, ವಸ್ತುಶಾಸ್ತ್ರ, ವೇದಾಂತ ಮೊದಲಾದ ಶಾಸ್ತ್ರಗಳನ್ನು ಕನ್ನಡದಲ್ಲಿ ಬರೆಯಬೇಕಾದರೆ ಸಂಸ್ಕೃತಶಬ್ದಗಳಿಲ್ಲದೆ ಕೆಲಸ ನಡೆದೀತೆ? ಶಾಸ್ತ್ರಗಳ ಪಾರಿಭಾಷಿಕ ಶಬ್ದಗಳು (Technical Terms) ಸಂಸ್ಕೃತದಿಂದ ಬರಬೇಕಲ್ಲದೆ ಕನ್ನಡದಲ್ಲಿಯೇ ಸಿಕ್ಕುವುದಿಲ್ಲ. ಇಂಥ ಸಂದರ್ಭಗಳನ್ನು ಬಿಟ್ಟು, ಕಾಗದಗಳನ್ನು ಬರೆವಾಗಲೂ, ಸಾಮಾನ್ಯವಿಷಯಗಳನ್ನು ಕುರಿತು ಪ್ರಬಂಧವನ್ನು ಬರೆವಾಗಲೂ, ಉಪನ್ಯಾಸ ಮಾಡುವಾಗಲೂ ದೊಡ್ಡ ದೊಡ್ಡ ಸಂಸ್ಕೃತಶಬ್ದಗಳನ್ನು ಪ್ರಯೋಗಿಸಕೂಡದು.

ಕೆಲವರು ಬಳಕೆಯಲ್ಲಿರುವ ಸುಲಭವಾದ ಮಾತುಗಳನ್ನು ಬಿಟ್ಟು, ಕಠಿನವಾದ ದೊಡ್ಡ ಸಂಸ್ಕೃತಶಬ್ದಗಳನ್ನು ಹುಡುಕಿ ಪ್ರಯೋಗಿಸುವುದರಿಂದ ತಮ್ಮ ಪಾಂಡಿತ್ಯವನ್ನು ತೋರಿಸಿಕೊಳ್ಳುವರು. ಹೀಗೆ ಇನ್ನು ಕೆಲವರು ಹೊಸಗನ್ನಡವನ್ನು ಬರೆಯುತ್ತಿರುವಾಗ ಸುಲಭವಾದ ಹೊಸಗನ್ನಡದ ಮಾತುಗಳನ್ನು ಬಿಟ್ಟು, ಹಳಗನ್ನಡದ ಮಾತುಗಳನ್ನೂ ಪ್ರತ್ಯಯಗಳನ್ನೂ ಡಂಭಕ್ಕಾಗಿಯೇ ಪ್ರಯೋಗಿಸುವುದುಂಟು. ಉದಾ.—

"ನೈರಾಶ್ಯದ ನಿದಾರುಣವಾದ ಯಾತನೆಯಿಂದ ಅವನು ಬಹಳ ವ್ಯಾಕುಲಿತನಾದನು."

"ಈ ಅಭಾವನೀಯವಾದ ಅಚಿಂತನೀಯವಾದ ಸಮಾಚಾರವು ಹಠಾತ್ತಾಗಿ ಅವಳ ಹೃದಯವನ್ನು ಉದ್ವೇಲಿತವಾಡಿತು."

"ಬೌದ್ಧ ಭ್ರಮಣಕಾರಿಯು ಈ ಸ್ಥಳವನ್ನು ನೋಡಿ ಪರಮಪ್ರೀತನಾದನು."

"ಅವನು ಭೂಮಿಷ್ಠನಾಗುತ್ತಲೇ ವಂಗದೇಶದ ರಾಜನಾದನು."

"ನರನಾರಿಯರಿಗೆ ಪ್ರಕೃತಿಗತವಾದ ಪಾರ್ಥಕ್ಯವಿದ್ದರೂ ಉಚ್ಚ ಉತ್ತಮಾಂಗವಾದ ತಲೆಯಲ್ಲಿ ನೆಲೆಗೊಳಿಸಿರುವ ಜ್ಞಾನದಲ್ಲಿಯೂ ಬುದ್ಧಿಯಲ್ಲಿಯೂ ಅವರವರಿಗೆ ಪ್ರಭೇದಕಾಣುವುದಿಲ್ಲ."

"ಬಾಲಚಂದ್ರನಂತೆ ಅಭಿವೃದ್ಧಿಯಂ ಹೊಂದುತ ನೋಡುವವರಿಗೆ ಆಶ್ಚರ್ಯಮಂ ಬಾಲಕರಿಗೆ ಉತ್ಸಾಹಮಂ ಗೈಯುತಲಿರುವ ರಾಜರಂ ನೋಡಿ ಏಳನೆಯ ವರುಷದೊಳ್ ಅಕ್ಷರಾಭ್ಯಾಸ ಮಾಡಿಸುವುದು ಉಚಿತವೆಂದು ರಾಣಿಯವರು ಆಲೋಚಿಸಿದರು."

"ಅಂತಿಲ್ಲದೆ ನಮ್ಮ ಭಾಷಾವಿಷಯದಲ್ಲಿ ಈಗಳಾಸ್ಥಿತಿ ವಿಪರೀತಮಾಗಿರುವುದರಿಂ ವಿಷಾದಿಸಬೇಕಾಗಿರುವುದು."

"ಸ್ವಾತಂತ್ರ್ಯಾದಿ ಸರ್ವಸೌಖ್ಯಸಂದಾಯಕವಾದ ಮಹೋನ್ನತಮಹಾರಾಜ್ಞಿಯವರ ಮಹಾಧಿಕಾರಪ್ರಾಭವದಲ್ಲಿ ಸರ್ವಾನುಕೂಲ್ಯವು ದೊರೆತಿದ್ದರೂ, ಈಷತ್ಕರವಾದೀಭಾಷಾದೋಷಮಂ ಈಗಳಾದರೂ ತೊಲಗಿಸಿಕೊಳ್ಳದೆ ಹೋದಪಕ್ಷದಲ್ಲಿ ಅಪಹಸನೀಯರಾಗುವೆವು."

ಕೂಡಿದ ಮಟ್ಟಿಗೂ ಕರ್ಮಾರ್ಥಕರೂಪಗಳನ್ನು ವರ್ಜಿಸಬೇಕು; ಇವು ಕನ್ನಡದ ರೀತಿಗೆ ವಿರುದ್ಧಗಳು. ಉದಾ.—

"ಅರ್ಜುನನು...ರಾಹುವಿನಿಂದ ನುಂಗಲ್ಪಟ್ಟ ಚಂದ್ರನೋಪಾದಿಯಲ್ಲಿ ನಪುಂಸಕರೂಪದಿಂದ ಕಾಣಲ್ಪಟ್ಟು....ಬರುವ ಸಮಯದಲ್ಲಿ."

"ಸೃಷ್ಟಿಸಲ್ಪಟ್ಟ ಲೋಕವುಳ್ಳ ದೇವರನ್ನು ನಿಗ್ರಹಿಸಲ್ಪಟ್ಟ ಮನಸ್ಸಿನಿಂದ ಧ್ಯಾನಿಸುವವನು ಹೊಂದಲ್ಪಟ್ಟ ಪುರುಷಾರ್ಥವುಳ್ಳವನೆಂದು ಹೇಳಲ್ಪಡುವನು."

(*b*) ಸಂಕ್ಷೇಪವಾಗಿ ಬರೆವುದು (Brevity). ಹೇಳಬೇಕಾದುದನ್ನು ಸಂಕ್ಷೇಪವಾಗಿ ಹೇಳಿದಷ್ಟೂ ವಿಷಯವು ಸ್ಪಷ್ಟವಾಗಿಮನಸ್ಸಿಗೆ ಹತ್ತುವುದು. ಅನುಪಯುಕ್ತವಾದ ಪ್ರತಿಶಬ್ದವೂ ಕೆಡಕು ಮಾಡುವುದು. ಎರಡು ರೂಪಾಯಿಗಳಲ್ಲಿಯೇ ಆಗಬಹುದಾದ ಕೆಲಸಕ್ಕೆ ಎಂಟು ಹತ್ತು ರೂಪಾಯಿಗಳನ್ನು ಹಾಕುವರೆ? ಹಾಗೆಯೇ ಕೆಲವು ಶಬ್ದಗಳ ಪ್ರಯೋಗದಿಂದ ಒಂದರ್ಥವನ್ನು ತಿಳಿಯಪಡಿಸುವುದು ಸಾಧ್ಯವಾಗಿದ್ದರೆ ಹಲವು ಶಬ್ದಗಳನ್ನು ಬರೆಯಕೂಡದು. ಸಂಕ್ಷೇಪಕಥನಕ್ಕೆ ಕೆಲವು ದಾರಿಗಳಿವೆ:

(1) ರೂಢವಾದ ಸಂಸ್ಕೃತ ಶಬ್ದಗಳನ್ನು ಪ್ರಯೋಗಿಸುವುದು. ಉದಾ.-

| ಕನ್ನಡ. | ಸಂಸ್ಕೃತ. |
| --- | --- |
| ಆಡಿದಮಾತಿಗೆ ತಪ್ಪದಿರುವುದು. | =ಸತ್ಯಸಂಧತೆ. |
| ಇದು ಒಳ್ಳೆಯದು, ಇದು ಕೆಟ್ಟದು ಎಂಬ ಅರಿವುಳ್ಳವನು. | =ವಿವೇಕಿ. |
| ಮಾಡಿದ ಉಪಕಾರವನ್ನು ಸ್ಮರಿಸುವ. | =ಕೃತಜ್ಞ. |
| ಸನ್ಮಾರ್ಗದಲ್ಲಿ ನಡೆದುಕೊಳ್ಳುವವರಿಗೆ ಈ ಕಾಲದಲ್ಲಿ ಒಳ್ಳೆಯ ಹೆಸರು ಬರುವುದಿಲ್ಲ. | =ಧರ್ಮಕ್ಕೆ ಇದುಕಾಲವಲ್ಲ. |

(2) ಸಮಾಸಗಳನ್ನು ಮಾಡುವುದು. ಉದಾ:—

| | |
| --- | --- |
| ಬಡವನಾದ ಹುಡುಗನು. | =ಬಡಹುಡುಗ. |
| ಮನೆಯಲ್ಲಿ ಮಾಡಬೇಕಾದ ಕೆಲಸ. | =ಮನೆಗೆಲಸ. |
| ದೇವಪೂಜಕನಾದ ಬ್ರಾಹ್ಮಣ | =ದೇವಬ್ರಾಹ್ಮಣ. |
| ಓರೆಯಾದ ಕಣ್ಣು ಯಾರಿಗುಂಟೋ ಅವನು. | =ಓರೆಗಣ್ಣ. |
| ಕುಟುಂಬದೊಡನೆ ಕೂಡಿದವನು. | =ಸಕುಟುಂಬ. |

"ಆ ಕಲ್ಲೆದೆಯ ಚಪ್ಪಟೆಮೂಗಿನ ಕೊಳಕಟಾರ್ಟರನ್ನೂ ಅವರ ಗಂಟುಮೂತಿಯ ಕೊರಗಣ್ಣಿನ ಸಿಳ್ಳುದನಿಯ ಕೋಳಿಕಾಲಿನ ಕುಂಟದೊರೆಯನ್ನೂ ಹಿಂದೂ ಜನರು ಬಹುಕಾಲದವರೆಗೂ ಮರೆಯಲಿಲ್ಲ."

(3) ಮಿಶ್ರವಾಕ್ಯ, ಸಂಯೋಜಿತವಾಕ್ಯಗಳಿಗೆ ಬದಲಾಗಿ ಸಾಮಾನ್ಯವಾಕ್ಯವನ್ನು ಉಪಯೋಗಿಸುವುದು. ಉದಾ.—

ಅವನು ಹೇಗೆ ಯುದ್ಧಮಾಡಬೇಕೆಂದು ಹೇಳುತ್ತಿದ್ದನೋ ಹಾಗೆ ಯುದ್ಧಮಾಡುತ್ತಿದ್ದರು= ಅವನ ಹೇಳಿಕೆಯ ಮೇರೆ ಯುದ್ಧ ಮಾಡುತ್ತಿದ್ದರು.

ಸೋತವರು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವರಲ್ಲದೆ, ಉತ್ಸಾಹವನ್ನೂ ಜಾತಿಮರ್ಯಾದೆಯನ್ನೂ ಹಾಳುಮಾಡಿಕೊಳ್ಳುವರು. ="ಸೋತವರ ಸ್ವಾತಂತ್ರ್ಯದ ಸಂಗಡ ಅವರ ಉತ್ಸಾಹವೂ ಜಾತಿಮರ್ಯಾದೆಯೂ ಹೋಗುವುವು."

ಪುನರುಕ್ತಿಯಿಂದಲೂ ಶಬ್ದಾಧಿಕ್ಯದಿಂದಲೂ ಸಂಕ್ಷೇಪವೆಂಬ ಗುಣಕ್ಕೆ ಭಂಗವು ಬಂದು, ವಾಕ್ಯಗಳಿಗೆ ಬಿಗಿ ತಪ್ಪಿ ಅರ್ಥವು ವಿಶದವಾಗುವುದಿಲ್ಲ.

(1) **ಪುನರುಕ್ತಿ (Pleonasm)**:—ಒಂದು ಶಬ್ದವನ್ನು ಹಲವು ಬಾರಿ ಪ್ರಯೋಗಿಸುವುದು. ಒಂದೇ ಅರ್ಥವುಳ್ಳ ಬೇರೆ ಬೇರೆ ಶಬ್ದಗಳನ್ನು ಪ್ರಯೋಗಿಸುವುದು. ಹೇಳಿದ ತಾತ್ಪರ್ಯವನ್ನೇ ಬೇರೆ ಮಾತುಗಳಲ್ಲಿ ಮತ್ತೆ ತಿಳಿಯಪಡಿಸುವುದು. ಉದಾ.—

"ನಾಗೇಂದ್ರನಾಥನು ಹಾಗೆಯೇ ಮಾಡುವೆನೆಂದೊಪ್ಪಿಕೊಂಡು ಹೊರಟಿದ್ದನು. ನಾಗೇಂದ್ರನು ಹಾಗೆಯೇ ಒಪ್ಪದಿದ್ದರೆ ಸೂರ್ಯಮುಖಿಯು ಈ ಪ್ರಯಾಣಕ್ಕೆ ಸಮ್ಮತಿಸುತ್ತಿರಲಿಲ್ಲ. ನಾಗೇಂದ್ರನು ಕಲಿಕತಾಕ್ಕೆ ಹೋಗದಿರಲು ಸಾಧ್ಯವಾಗಿರಲಿಲ್ಲ. ನಾಗೇಂದ್ರನಾಥದತ್ತನು ಒಬ್ಬ ಅತುಳೈಶ್ವರ್ಯವುಳ್ಳ ಜಮೀನ್‌ದಾರನಾಗಿದ್ದನು. ನಾಗೇಂದ್ರನು ಯೌವನ ಪುರುಷನಾಗಿದ್ದನು."

"ಬೆಳ್ಳಿಬಂಗಾರಗಳಿಂದ ಅನೇಕ **ಆಭರಣಾಲಂಕಾರಗಳನ್ನು** ಮಾಡುವರು."

"ಈ ದಾರುಣವಾದ ಶೋಕವನ್ನು ಸಹಿಸಲಾರದೆ ರಾಜಾದಶರಥನು **ಪ್ರಾಣಬಿಟ್ಟವನಾಗಿ ಪರಲೋಕ ಯಾತ್ರೆ ಮಾಡಿದನು.**"

"ಅಲಗ್ಝಾಂಡರನು ಭರತವರ್ಷವನ್ನು **ಪರಿತ್ಯಾಗಮಾಡಿ ಬಿಟ್ಟುಹೋದ ಮೇಲೆ** ಚಂದ್ರಗುಪ್ತನು ಸಿಂಹಾಸನಕ್ಕೆ ಬಂದನು."

"**ಸತ್ಯಸಂಧನಾದ** ದಶರಥನು ತನ್ನ ಮಗನನ್ನೂ **ಮಾತುಕೊಟ್ಟದ್ದಂತೆ** ಕಾಡಿಗೆ ಕಳುಹಿಸಿದನು."

"ತಾವು ಪಟ್ಟ ಕಷ್ಟವನ್ನು **ಹಲವು ಬಾರಿ ಹೇಳಿಕೊಂಡು ಹೇಳಿಕೊಂಡು** ಮರುಗುತ್ತಿದ್ದರು."

"ಬೌದ್ಧಮತಾವಲಂಬಿಗಳೆಲ್ಲರೂ ಮೊದಲು ಮೊದಲು **ದಿಗಂತವ್ಯಾಪಿಗಳಾಗಿ ದಿಕ್ಕುದಿಕ್ಕಿಗೆ ಹೊರಟು ಹೋಗುತ್ತಿದ್ದರು.**"

ಈಗಿನ ವಿದ್ಯಾರ್ಥಿಗಳು "ಮತ್ತು" "ಆದರೆ" ಮೊದಲಾದ ಕೆಲವು ಶಬ್ದಗಳನ್ನು ಬಾರಿಬಾರಿಗೂ ನಿರರ್ಥಕವಾಗಿ ಬರೆವುದೂ, "ಅಂಥ" ಎಂಬುದನ್ನು ವಿಶೇಷಣಗಳ ಕೊನೆಯಲ್ಲಿ ಒಂದೇ ಕಡೆ ಹಲವು ಬಾರಿ ಸೇರಿಸುವುದೂ ಬಹಳ ವಾಡಿಕೆಯಾಗಿದೆ. ಇದು ತಪ್ಪು.

**(2) ಶಬ್ದಾಧಿಕ್ಯ (Verbosity)**ವೆಂದರೆ ಒಂದೆರಡು ಶಬ್ದಗಳಿಂದಲೇ ಬೇಕಾದ ಅರ್ಥವಾಗುವ ಕಡೆ ಹಲವು ಶಬ್ದಗಳನ್ನೂ ವಾಕ್ಯಗಳನ್ನೂ ವ್ಯರ್ಥವಾಗಿ ಪ್ರಯೋಗಿಸುವುದು. ಈ ದೋಷವನ್ನು ತಿದ್ದಬೇಕಾದರೆ ಹೆಚ್ಚಾದ ಶಬ್ದಗಳನ್ನು ಹೊಡೆದುಹಾಕುವುದು ಸಾಲದು; ವಾಕ್ಯಗಳನ್ನೇ ಮೊದಲಿನಿಂದ ಕೊನೆವರೆಗೂ ಬದಲಾಯಿಸಿ ಬರೆಯಬೇಕು. ಉದಾ.—

"ಪಾಪಿಯಾದ ಹೊಳೆಯೇ, ಇನ್ನು ನೀನು ನೀರು ಬತ್ತಿ, ಚಿಲುಮೆಗಳಡಗಿ, ಹಳ್ಳಗಳು ಹೂತುಹೋಗಿ, ಪ್ರವಾಹವಿಲ್ಲದೆ, ಮನನೊಂದು, ರೂಪು ತೋರದೆ, ನಿರ್ನಾಮವಾಗಿ ಹಾಳಾಗಿ ಹೋಗುವೆ."

"ಹೊತ್ತು ಹುಟ್ಟುವುದಕ್ಕೆ ಮುಂದೆ ಎದ್ದು ಹೊಳೆಗೆ ಹೋಗಿ ಹಲ್ಲುಜ್ಜಿಕೊಂಡು ಬಾಯಿ ಮುಕ್ಕುಳಿಸಿ ಮೊಕತೊಳೆದು ಶುಚಿಯಾಗಿ ಮಡಿಯುಟ್ಟು ಕ್ರಮವಾಗಿ ಸಂಧ್ಯಾನುಷ್ಠಾನವನ್ನು ತೀರಿಸಿಕೊಂಡ ಮೇಲೆ."

ಪುನರುಕ್ತಿಯನ್ನೂ ಶಬ್ದಾಧಿಕ್ಯವನ್ನೂ ತಾತ್ಪರ್ಯಪುಷ್ಟಿಗಾಗಿ ಕೆಲವೆಡೆ ಪ್ರಯೋಗಿಸುವುದುಂಟು. ಹೇಗೆಂದರೆ:—

"ಅರವಲ್ಲಿ ಪರ್ವತಮಾಲೆಯು ಸಮಸ್ತದಿಗಳೂ ಪ್ರತಾಪನ **ಯಾವುದಾದರೊಂದು** ಸಾಹಸಕಾರ್ಯದಿಂದ, **ಯಾವುದಾದರೊಂದು** ದಿಗ್ವಿಜಯದಿಂದ, **ಯಾವುದಾದರೊಂದು** ಅಪಜಯದಿಂದ ಪವಿತ್ರವಾಗಿರುವುವು."

"ಅದನ್ನು **ಬಾಯಿಂದ** ಹೇಳಲಾರೆನು."

"ಅದನ್ನು ನಮ್ಮ **ಕಣ್ಣಿನಿಂದಲೇ** ನೋಡಿದ್ದೇವೆ, ನಮ್ಮ **ಕಿವಿಗಳಿಂದಲೇ** ಕೇಳಿದ್ದೇವೆ."

"**ಅಂತರಿಕ್ಷದಲ್ಲಿ ಹೊಳೆವ** ಸೂರ್ಯಚಂದ್ರಾದಿಗ್ರಹಗಳೂ, **ಭೂಮಿಯ ಮೇಲೆ ಹರಿವ** ನದಿಗಳೂ, ನಾನು ಯಾವ ತಪ್ಪನ್ನೂ ಮಾಡಿಲ್ಲವೆಂಬುದಕ್ಕೆ ಸಾಕ್ಷಿಗಳು."

"ಇಂಡಿಯಾ ದೇಶದಲ್ಲಿ ಸಮಾಧಾನವೂ, ಜನರಿಗೆ ಸೌಖ್ಯವೂ ಉಂಟಾದ ಕಾಲವನ್ನು ಗೊತ್ತುಮಾಡುವುದಕ್ಕೆ ಯಾರಾದರೂ ಹೊರಟರೆ, ಅವರು ಇಂಗ್ಲಿಷರಿಗೆ ರಾಜ್ಯಭಾರವು ಕೈಸೇರಿದಂದಿನಿಂದ ಅಂಥ ಕಾಲವು ಮೊದಲಾಯಿತೆಂದು ನಿಸ್ಸಂಶಯವಾಗಿ ಹೇಳಬಲ್ಲರು." ಹೀಗೆ ಲಂಬಿಸಿ ಹೇಳುವುದರಿಂದ, "ಇಂಗ್ಲಿಷರ ರಾಜ್ಯಭಾರದಿಂದ ಇಂಡಿಯಾದಲ್ಲಿ ಸಮಾಧಾನವೂ ಸೌಖ್ಯವೂ ಉಂಟಾದುವು" ಎಂದು ಹೇಳಬಹುದಾದ ವಾಕ್ಯದ ಅಭಿಪ್ರಾಯವು ಬಹಳ ದೃಢಪಡುವುದು.

ಶಬ್ದಾಧಿಕ್ಯವು ಶೋಕರಸ ಮೊದಲಾದುವುಗಳನ್ನು ಪ್ರಕಟಿಸುವಾಗಲೂ ಬರುವುದುಂಟು.

(c) ಪದಗಳನ್ನು ಗೂಢಾರ್ಥಗಳಲ್ಲಿ ಪ್ರಯೋಗಿಸುವುದೂ ವಿರುದ್ಧಾರ್ಥವಾಗುವಂತೆ ಉಪಯೋಗಿಸುವುದೂ ಲಾಲಿತ್ಯಗುಣಕ್ಕೆ ಕುಂದನ್ನು ತರುವುವು. ಉದಾ.—ಗೂಢಾರ್ಥಕ್ಕೆ:—

"ಪ್ರಾಚೀನ ದ್ರಾವಿಡರು ಕ್ರಮಶಃ ಹಿಂದೂ **ಧರ್ಮ**ವನ್ನೂ ಹಿಂದೂ **ಸಭ್ಯತೆ**ಯನ್ನೂ ಕಲಿತುಕೊಂಡರು."

"ವಿದೇಹ ಮತ್ತು ಕೋಸಲ ಪ್ರದೇಶಗಳು ರಾಮಾಯಣದಲ್ಲಿ ಅವಲಂಬಿಸಿರುವ **ಅಭಿನಯಗಳ ಕ್ಷೇತ್ರ**ಗಳಾಗಿವೆ."

"ಮನುಷ್ಯನ **ಅಂತರವನ್ನು** ಕಂಡುಹಿಡಿಯುವ ವೃತ್ತಿಯನ್ನು ಉತ್ತೇಜನ ಮಾಡಿದವರಾರು?"

ವಿರುದ್ಧಾರ್ಥಕ್ಕೆ.—"ಇದನ್ನು ಕೇಳಿ ನನ್ನ **ಗಂಡಂದಿರ** ಮನಸ್ಸಿನಲ್ಲಿ ಅಸಹ್ಯವೂ ರೋಷವೂ ಹುಟ್ಟಿದುವು."

ಒಂದೇ ಶಬ್ದವನ್ನು ಒಂದೇ ವಾಕ್ಯದಲ್ಲಿ ಬೇರೆ ಬೇರೆ ಅರ್ಥಗಳಲ್ಲಿ ಪ್ರಯೋಗಿಸಕೂಡದು. ಉದಾ.—

"ಅಂಗಸಾಧನವು ಆರೋಗ್ಯಕ್ಕೆ ಸಾಧನವು."

"ನಿಜಸ್ಥಿತಿಯೇನಂದರೆ, ನಿಜವೂ ಸುಳ್ಳೂ ಅವರ ಮಾತುಗಳಲ್ಲಿ ಸೇರಿಕೊಂಡಿವೆ."

ಸರ್ವನಾಮಗಳು ಯಾವ ಯಾವ ನಾಮವಾಚಕಗಳಿಗೆ ಬದಲಾಗಿ ಬಂದಿವೆಯೋ ಅದನ್ನು ಸ್ಪಷ್ಟವಾಗಿ ಸೂಚಿಸುವಂತಿರಬೇಕು. "ಅದು," "ಅವನು," "ಅವರು" ಮೊದಲಾದುವಕ್ಕೆ ಅರ್ಥವು ಸಂದಿಗ್ಧವಾದರೆ ವಾಕ್ಯವನ್ನು ಬದಲಾಯಿಸಿ ತಿದ್ದಿ ಒರೆಯಬೇಕು. ಆದರೂ ಸಂದೇಹವು ತಪ್ಪದಿದ್ದರೆ ನಾಮವಾಚಕವನ್ನೇ ಮತ್ತೊಂದುಸಾರಿ ಹೇಳಬಹುದು.

## ವಾಕ್ಯ.

ಒಂದು ಪೂರ್ಣಾರ್ಥವನ್ನು ತೋರಿಸುವ ನಾಮಪದ ಕ್ರಿಯಾಪದಾವ್ಯಯಗಳ ಸೇರುವೆಯು ವಾಕ್ಯವೆನಿಸುವುದು. ವಾಕ್ಯದಲ್ಲಿ ಸಾಮಾನ್ಯ, ಮಿಶ್ರ, ಸಂಯೋಜಿತ ಎಂದು ಮೂರು ಬಗೆಗಳು. ಇವುಗಳ ಲಕ್ಷಣಗಳನ್ನು "**ಶಬ್ದಾದರ್ಶ**" ದಲ್ಲಿ ಓದಿ ತಿಳಿಯಬೇಕು.

## ವಾಕ್ಯದ ಸ್ವರೂಪ.

### (*a*) ಶಬ್ದಕ್ರಮ. (The Order of Words).

1. ವಾಕ್ಯದಲ್ಲಿ ಕರ್ತೃಪದವು ಮೊದಲಲ್ಲಿಯೂ, ಕರ್ಮಪದವು ಮಧ್ಯದಲ್ಲಿಯೂ, ಕ್ರಿಯಾಪದವು ಕೊನೆಯಲ್ಲಿಯೂ, ಬರುವುವು. ಉದಾ.-

ಸತ್ಪುರುಷರು ಸುಳ್ಳನ್ನು ಆಡುವುದಿಲ್ಲ.

2. ವಿಶೇಷಣಪದಗಳು ಆಯಾ ವಿಶೇಷ್ಯ ಪದಗಳ ಹಿಂದೆಯೂ, ಕರಣ ಮೊದಲಾದ ಇತರ ಕಾರಕಗಳು ಕ್ರಿಯೆಗೆ ಪೂರ್ವದಲ್ಲಿಯೂ ಷಷ್ಠ್ಯಂತ-ಪದವು ನಾಮಪದದ ಹಿಂದೆಯೂ ಬರುವುವು. ಉದಾ.—

"ಆರ್ಯಾವರ್ತದಲ್ಲಿ ಮೇವಾರದ ಅಧಿಪತಿಯಾದ ರಾಣಾರಾಜಸಿಂಹನು ಲೋಕಾತೀತವಾದ ಶೌರ್ಯದಿಂದ ಯಥಾರ್ಥವಾದ ರಾಜಧರ್ಮವನ್ನು ತೋರಿಸಿದನು."

ಮೇಲಣ ವಿಧಿಗಳು ಸಾಮಾನ್ಯವಾದವುಗಳು. ಕನ್ನಡದಲ್ಲಿ ವಿಭಕ್ತಿ-ವಚನ ಮೊದಲಾದುವುಗಳ ಬಲದಿಂದ ಪದಗಳನ್ನು ಯಾವ ಕ್ರಮದಲ್ಲಿ ಬರೆ-ದರೂ ಅರ್ಥವಾಗುವುದರಿಂದ ಈ ವಿಧಿಗಳಿಗೆ ಪ್ರತಿಷೇಧಗಳು ಬಹಳವುಂಟು:-

(*i*) ಕಾಲ, ಸ್ಥಾನ, ಕಾರಣ, ಪಕ್ಷಾಂತರ ಈಯರ್ಥದ ಕ್ರಿಯಾ-ವಿಶೇಷಣಗಳು ವಾಕ್ಯದ ಆದಿಯಲ್ಲಿ ಬಂದು ಕರ್ತೃಪದವು ಇವುಗಳ ಮುಂದೆ ಬರುವುದು. ಉದಾ.—

ಕಾಲಕ್ಕೆ-ಶ್ರಾವಣ ಬಹುಳದ ಅಷ್ಟಮಿಯಲ್ಲಿ ಶ್ರೀಕೃಷ್ಣನು ಅವತರಿಸಿದನು.

"ಸಾಮ್ರಾಜ್ಯದಲ್ಲೆಲ್ಲಾ ಶಾಂತಿ ನೆಲೆಗೊಂಡ ತರುವಾಯ, ಅಕ್ಬರನ ದೃಷ್ಟಿ ದಿಗ್ವಿಜಯದ ಮೇಲೆ ಬಿತ್ತು."

ಸ್ಥಾನಕ್ಕೆ—ಕಾಶಿಯಲ್ಲಿ ಒಬ್ಬ ವಿದ್ವಾಂಸನಿದ್ದನು.

ಕಾರಣಕ್ಕೆ—"ಕ್ಲೈವ್ ಸೇನಾಪತಿಯ ಮಂತ್ರಾಲೋಚನೆಯು ಯುಕ್ತವಾಗಿ ಕಾಣಬಂದುದ-ರಿಂದ ಗವರ್ನರು ಅದರಂತೆ ನಡೆಸಿಕೊಟ್ಟನು"

ಪಕ್ಷಾಂತರಕ್ಕೆ-"ರಾಜನು ಕೋಪಿಷ್ಠನಾಗಿದ್ದಲ್ಲಿ ಪ್ರಜೆಗಳು, ರಾಜಾಜ್ಞೆಯಂ ಮೀರಿದರೆ ಪ್ರ-ಭುವಿನ ಕೋಪಕ್ಕೆ ಪಾತ್ರರಾಗಿ ದಂಡನೆಗೆ ಯೋಗ್ಯರಾದೇವೆಂಬ ಭೀತಿಯಿಂದ ತಗ್ಗಿನಡೆದಾರು."

(*ii*) ಕರ್ಮ ಮುಂತಾದ ಕಾರಕಗಳೂ ವಾಕ್ಯದ ಆದಿಯಲ್ಲಿ ಬರುವು-ದುಂಟು. ಉದಾ.—

ಹಣವನ್ನು ತಾವೇನೂ ಕೊಡಬೇಕಾಗಿಲ್ಲ.

ಬಾಲ್ಯದಿಂದಲೂ ಹುಡುಗರನ್ನು ಸರಿಯಾಗಿ ನೋಡಿಕೊಳ್ಳಬೇಕು.

(*iii*) ಕೆಲವುಕಡೆ ಕ್ರಿಯಾಪದವು ಇರುವುದಿಲ್ಲ. ಉದಾ.—

"ಮೊಟ್ಟಮೊದಲು ರಾಜಪುತ್ರರ ಸ್ವಾತಂತ್ರ್ಯದ ಗೌರವವನ್ನು ಹಾಳುಮಾಡಿದವನು ಅಕ್ಬರು"

ಎಲ್ಲರೂ ತ್ಯಜಿಸಬೇಕಾದ ದುರ್ಗುಣವು ಸ್ವಪ್ರತಿಷ್ಠೆಯು.

(*iv*) ವಿಶೇಷಣವು ವಿಶೇಷ್ಯಕ್ಕೆ ಪರದಲ್ಲಿಯೂ ಬರುವುದುಂಟು ಆಗ ಅದಕ್ಕೆ ಉತ್ತರವಿಶೇಷಣ ಅಥವಾ ವಿಧೇಯವಿಶೇಷಣವೆಂದು ಹೆಸರು. ಉದಾ.—

"ಅಲ್ಲಾವುದೀನನು ಬುದ್ಧಿಯಿಲ್ಲದವನು."
ದುಸ್ಸಂಗವು ಒಳ್ಳೆಯವರನ್ನೂ ದುಷ್ಟರನ್ನು ಮಾಡುತ್ತದೆ.

3. ಪ್ರಕ್ರಮ.—ಆರಂಭಿಸಿದ ಕ್ರಮವನ್ನು ವಾಕ್ಯದ ಕೊನೆವರೆಗೂ ಅನುಸರಿಸುವುದು. ಉದಾ.—

"ಈತನು ಬುದ್ಧಿಯಲ್ಲಿ ಬೃಹಸ್ಪತಿಯು, ಭೀಷ್ಮನಂತೆ ಬಿಲ್ಗಾರನು, ಕೀರ್ತಿಯಲ್ಲಿ ಅರ್ಜುನನು" ಎಂಬಲ್ಲಿ ಪ್ರಕ್ರಮಕ್ಕೆ ಭಂಗ ಬಂದಿದೆ; "ಬಿಲ್ಲಿನಲ್ಲಿ ಭೀಷ್ಮನು"ಎಂದರೆ ಸರಿಯಾಗುವುದು.

## (b) ಏಕೀಭಾವ (Unity)

ವಾಕ್ಯದ ಪ್ರತಿಯೊಂದು ಭಾಗವೂ ಒಂದೇ ಪ್ರಧಾನ ವಿಷಯಕ್ಕೆ ಅಧೀನವಾಗಿರಬೇಕು. ಅನೇಕ ಪ್ರಧಾನ ವಿಷಯಗಳನ್ನು ಒಂದೇ ವಾಕ್ಯದಲ್ಲಿ ಅಡಗಿಸಬಾರದು, ಬೇರೆ ಬೇರೆ ವಾಕ್ಯಗಳಲ್ಲಿ ಬರೆಯಬೇಕು. ಉದಾ.—

"ಯುದ್ಧವು ಉಪಕ್ರಮವಾಗುವುದಕ್ಕೆ ಸ್ವಲ್ಪ ಮುಂದೆ, ಈಸ್ಟ್ ಇಂಡಿಯಾ ಕಂಪೆನಿಯುವರು, ಆ ವೇಳೆಗೆ ರೋಗ ವಾಸಿಯಾಗಿ ದೃಢವಾಗಿದ್ದ ಕ್ಲೈವನ್ನು ತಮ್ಮ ಹಿಂದಿನ ದೇಶದಲ್ಲಿ ಸೈನ್ಯಾಧಿಪತ್ಯಕ್ಕೆ ಪುನಃ ನಿಯಮಿಸಿ ಕಳುಹಿಸಿಕೊಟ್ಟರು."

ಒಂದಕ್ಕೊಂದಕ್ಕೆ ಬಹಳ ಸಂಬಂಧವಿರುವ ಹಲವು ವಿಷಯಗಳನ್ನು ಒಂದೇ ವಾಕ್ಯದಲ್ಲಿ ಸೇರಿಸಬಹುದು. ಉದಾ.—

"ಕೂಡಲೆ ಸುರಾಜುದ್ದೌಲನು ತನ್ನ ಸೆರೆಯಲ್ಲಿದ್ದ ಇಂಗ್ಲಿಷರನ್ನು ಬಿಟ್ಟುಕೊಟ್ಟು, ಸಮಾಧಾನದ ಒಪ್ಪಂದವನ್ನು ಮಾಡಿಕೊಳ್ಳುವಂತೆ ಹೇಳಿ ಕಳುಹಿಸಿ, ಇಂಗ್ಲಿಷರಿಗೆ ಉಂಟಾದ ನಷ್ಟವನ್ನು ತಾನೇ ವಹಿಸಿಕೊಂಡು ಸರಿಮಾಡುವುದಾಗಿ ಮಾತುಕೊಟ್ಟನು."

"ಆ ರಾಜಕುಮಾರನು ಎಂಟುವರ್ಷದ ಹುಡುಗನಾಗಿದ್ದಂದಿನಿಂದ ತಂದೆ ಸಾಯುವವರೆಗೂ ಎಡೆಬಿಡದೆ ಅವನ ಜತೆಯಲ್ಲಿಯೇ ಇದ್ದು ಅವನು ಅನುಭವಿಸಿದ ಸಂಕಟಗಳನ್ನೆಲ್ಲಾ ತಾನೂ ಅನುಭವಿಸಿದನು."

ವಾಕ್ಯವು ಚಿಕ್ಕದಾಗಿದ್ದಷ್ಟೂ ಏಕೀಭಾವಕ್ಕೆ ಅವಕಾಶವುಂಟು; ಆದುದರಿಂದ ಅತಿದೀರ್ಘವಾದ ವಾಕ್ಯಗಳನ್ನು ಬರೆವುದು ಯುಕ್ತವಲ್ಲ. ಉದ್ದವಾದ ವಾಕ್ಯಗಳನ್ನು ಬರೆವುದು ಕನ್ನಡದಲ್ಲಿ ಕೆಲವರ ದುರಭ್ಯಾಸವಾಗಿದೆ. ವಚನರೂಪದಲ್ಲಿ ಬರೆದಿರುವ "ಕರ್ಣಾಟಕ ಮಹಾಭಾರತ" "ಮುದ್ರಾಮಂಜೂಷ" ಮುಂತಾದವುಗಳಲ್ಲಿ ಒಂದೊಂದು ಪುಟದಷ್ಟು ಬಹಳ ಉದ್ದವಾದ ವಾಕ್ಯಗಳು ತುಂಬಿವೆ.

## (c) ಸಮತೆ. (The Balanced Structure.)

ವಾಕ್ಯದ ಬೇರೆ ಬೇರೆ ಭಾಗಗಳು ಪರಸ್ಪರ ತೂಕಮಾಡಿದಂತೆ ಅನುರೂಪವಾದ ಪದಗಳಿಂದ ಕೂಡಿರುವುದು ಸಮತೆಯೆನಿಸುವುದು. ಇದು ಏಕೀಭಾವ, ಶಬ್ದಕ್ರಮಗಳಂತೆ ಎಲ್ಲಾ ವಾಕ್ಯಗಳಲ್ಲಿಯೂ ಇರುವುದಿಲ್ಲ. ಎಲ್ಲಿ ಎರಡು ವಸ್ತುಗಳಿಗಿರುವ ತಾರತಮ್ಯವನ್ನು ಚೆನ್ನಾಗಿ ತೋರಿಸಬೇಕೋ ಅಲ್ಲಿ ಇದು ಉಚಿತವು. ಸಮತೆಯಿಂದ ವಾಕ್ಯಗಳಿಗೆ ಒಂದು ವಿಧವಾದಗಾಂಭೀರ್ಯ ಬರುವುದು. ಸಮತೆಯುಳ್ಳ ವಾಕ್ಯಗಳನ್ನು ಸುಲಭವಾಗಿ ನೆನಪಿಟ್ಟುಕೊಳ್ಳಬಹುದು. ಅವು ಲಾಲಿತ್ಯದಿಂದ ಕೂಡಿ ಕಿವಿಗಿಂಪಾಗಿಯೂ ಇರುವುವು. ಉದಾ.—

"ಎಲ್ಲಿ ಮಕರಂದವಿರುವುದೋ, ಅಲ್ಲಿ ಜೇನುಹುಳುಗಳಿರುವುವು."

"ಅರಸನು ಶೂರನಾಗಿಯೂ ಸಾಹಸಿಯಾಗಿಯೂ ಇದ್ದಲ್ಲಿ, ಹಗೆಗಳ ಕಾಟವಿಲ್ಲದೆ ದೇಶವು ಸುರಕ್ಷಿತವಾಗಿರುವುದು; ಅವನು ಹೇಡಿಯಾಗಿಯೂ ಇದ್ದಲ್ಲಿ, ಶತ್ರುಗಳ ಬಾಧೆಯಿಂದ ದೇಶವು ಹಾಳಾಗುವುದು."

ಸಮತೆಯು ಗಾದೆಗಳಲ್ಲಿ ವಿಶೇಷವಾಗಿದೆ. ಉದಾ:—

"ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ."

"ಕಾಡು ಹೋಗೆನ್ನುವುದು, ಊರು ಬಾ ಎನ್ನುವುದು."

"ಮರದ ಕಾಲು ಬೆಂಕಿಗಾಗದು, ಮಣ್ಣಿ ಕಾಲು ನೀರಿಗಾಗದು."

"ಆಡಿ ತೋರಿದರೆ ಅರವತ್ತು ಗುಣ, ಮಾಡಿ ತೋರಿದರೆ ಮುನ್ನೂರು ಗುಣ."

"ಸಾಸವೆ ತೋರದ ಸಂಕಟಕ್ಕೆ, ಗುಟ್ಟದ ತೋರದ ಗೋಳಾಟವೇ?"

---

## ವಾಕ್ಯಬೃಂದ. (Paragraph.)

ಒಂದೇ ಉದ್ದೇಶವುಳ್ಳ ವಾಕ್ಯಗಳ ಗುಂಪಿಗೆ ವಾಕ್ಯಬೃಂದವೆಂದು ಹೆಸರು. ಒಂದೇ ವಿಷಯವನ್ನು ಕುರಿತ ಅನೇಕ ವಾಕ್ಯಬೃಂದಗಳೇ ಪ್ರಬಂಧವೆನಿಸುವುದು. ಪ್ರತಿಯೊಂದು ವಾಕ್ಯಬೃಂದವೂ ಪ್ರಬಂಧವಿಷಯದ ಒಂದೊಂದು ಮುಖ್ಯಾಭಿಪ್ರಾಯವನ್ನೂ ಅದಕ್ಕೆ ಸಂಬಂಧಪಟ್ಟ ಅಭಿಪ್ರಾಯಗಳನ್ನೂ ಒಳಗೊಂಡಿರುವುದು.

---

## ವಾಕ್ಯಬೃಂದದ ಸ್ವರೂಪ.

I. ಪ್ರತಿವಾಕ್ಯಕ್ಕೂ ಅದರ ಹಿಂದಿನ ವಾಕ್ಯದ ಸಂಬಂಧವು ಚೆನ್ನಾಗಿ ತೋರುತ್ತಿರಬೇಕು.

ಒಂದಕ್ಕೊಂದಕ್ಕೆ ಅರ್ಥದಲ್ಲಿ ಸಂಬಂಧವಿಲ್ಲದೆ ಎಷ್ಟು ಶಬ್ದಗಳನ್ನು ಸೇರಿಸಿದರೂ ವಾಕ್ಯವು ಹೇಗೆ ಆಗಲಾರದೋ, ಹಾಗೆಯೇ ಪರಸ್ಪರ ಸಂಬಂಧವಿಲ್ಲದಂತೆ ಎಷ್ಟು ವಾಕ್ಯಗಳನ್ನು ಒಟ್ಟುಗೂಡಿಸಿದರೂ ವಾಕ್ಯಬೃಂದವಾಗಲಾರದು.

(I) ವಾಕ್ಯಗಳಿಗೆ ಪರಸ್ಪರ ಸಂಬಂಧವನ್ನು ತೋರಿಸಲು ತಕ್ಕ ಶಬ್ದಗಳನ್ನು ಪ್ರಯೋಗಿಸಬೇಕು.

**ಸಮುಚ್ಚಯಸೂಚಕ:**—ಮತ್ತು, ಮತ್ತೆ, ಕೂಡ, ಹಾಗೆಯೇ, ಹೀಗೆಯೇ, ಇದಲ್ಲದೆ, ಅಲ್ಲದೆ.

**ವಿರೋಧಸೂಚಕ:**—ಆದರೆ, ಆದರೂ, ಆದಾಗ್ಯೂ.

**ಕಾರಣಸೂಚಕ:**—ಆದುದರಿಂದ, ಆದಕಾರಣ, ಇದರಿಂದ, ಈ ಕಾರಣದಿಂದ, ಈ ರೀತಿಯಲ್ಲಿ, ಏಕೆಂದರೆ.

**ಪಕ್ಷಾಂತರಸೂಚಕ:**—ಅಥವಾ, ಇಲ್ಲವೆ, ಆಗಲಿ, ಇಲ್ಲದಿದ್ದರೆ, ಅಲ್ಲದಿದ್ದರೆ, ಇಲ್ಲದೆಹೋದರೆ, ಅಲ್ಲದೆಹೋದರೆ.

**ನಿತ್ಯಸಂಬಂಧಸೂಚಕ:**—ಎಲ್ಲಿ—ಅಲ್ಲಿ, ಹೇಗೆ—ಹಾಗೆ, ಎಂಥ—ಅಂಥ, ಯಾವುದು—ಅದು, ಎಷ್ಟು—ಅಷ್ಟು, ಯಾವಾಗ—ಆಗ.

**ಮಿಶ್ರವಾಕ್ಯಗಳಲ್ಲಿ ಬರುವುವು:**—ಎಂಬುದು, ಎಂಬ, ಎನ್ನುವ, ಎಂಬದಾಗಿ, ಎಂದು, ಎನ್ನುತ್ತಾ, ಎನ್ನಲಾಗಿ, ಎನ್ನುವಾಗ, ಎನ್ನುವಲ್ಲಿ.

ಕೆಲವೆಡೆ ಸಂಬಂಧಕ ಶಬ್ದಗಳಿಗೆ ಲೋಪ ಬಂದಿರುವುದುಂಟು. ಅಲ್ಲಿ ಅವುಗಳನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಉದಾ:—

"ರಾಜಪುತ್ರನು ವೀರಧರ್ಮವನ್ನು ಬಲ್ಲವನು, ಆಪತ್ಕಾಲದಲ್ಲಿ ಪ್ರಭುವನ್ನೆಂದಿಗೂ ಕೈಬಿಡನು." ಇಲ್ಲಿ "ಆದುದರಿಂದ" ಎಂಬುದನ್ನೂ,

"ಇಂಗ್ಲಿಷರು ರಾಜ್ಯದಾಡಳಿತದಲ್ಲಿ ಪ್ರವೇಶಿಸುತ್ತಿರಲಿಲ್ಲ; ಅದರ ರಕ್ಷಣಾರ್ಥವಾಗಿ ಸೈನ್ಯವನ್ನು ಮಾತ್ರ ಇಟ್ಟುಕೊಂಡಿದ್ದರು" ಎಂಬಲ್ಲಿ "ಆದರೆ" ಎಂಬುದನ್ನೂ ಅಧ್ಯಾಹರಿಸಿಕೊಳ್ಳಬೇಕು.

(2) ಹಿಂದಿನ ವಾಕ್ಯದ ಒಂದೆರಡು ಶಬ್ದಗಳನ್ನಾಗಲಿ ಅವುಗಳ ತಾತ್ಪರ್ಯವನ್ನಾಗಲಿ ಮತ್ತೆ ಹೇಳುವುದರಿಂದಲೂ ವಾಕ್ಯಸಂಬಂಧವನ್ನು ತೋರಿಸಬಹುದು. ಉದಾ.—

"ಆ ಕೋಣೆಯಲ್ಲಿ ನೋಟಕರ ಕಣ್ಣುಗಳಿಗೆ ಸೊಗಸನ್ನು ಬೀರಿ ಮನವನ್ನು ಎಳೆದುಕೊಳ್ಳುವ ಅನೇಕ ಪದಾರ್ಥಗಳಿದ್ದುವು. **ಅಂಥ ಪದಾರ್ಥಗಳನ್ನು** ಅವರು ಹುಟ್ಟಿದಂದಿನಿಂದ ಎಂದೂ ನೋಡಿರಲಿಲ್ಲ."

"ಮಾನಸಿಂಹನು ಬರುವ ವರ್ತಮಾನವನ್ನು ಕೇಳಿ ಅವನ ಅಭ್ಯರ್ಥನ ನಿಮಿತ್ತವಾಗಿ ಆ ದುರ್ಗದ ಸಮೀಪದಲ್ಲಿದ್ದ ಉದಯಸಾಗರಕ್ಕೆ ಹೋದನು. **ಈ ಸರೋವರದ ತೀರದಲ್ಲಿ** ಪ್ರತಾಪನ ಮಗನು ಮಾನಸಿಂಹನಿಗೆ ಔತನ ಮಾಡುವುದಕ್ಕೆ ಬೇಕಾದುದನ್ನೆಲ್ಲಾ ಅಣಿಮಾಡಿದನು."

(3) ಶಬ್ದಕ್ರಮದಲ್ಲಿ ವ್ಯತ್ಯಾಸಮಾಡುವುದರಿಂದಲೂ ಸಂಬಂಧವನ್ನು ತೋರಿಸಬಹುದು. ಉದಾ.—

"ಮುಹಮ್ಮದೀಯರು ದಕ್ಷಿಣದೇಶಕ್ಕೆ ದಂಡೆತ್ತಿ ಬಂದು ಮುತ್ತಿದ ಮೊದಲನೆಯ ಮುತ್ತಿಗೆಇದೇ" ಎನ್ನುವುದಕ್ಕಿಂತ "ಇದೇ ಮುಹಮ್ಮದೀಯರು ದಕ್ಷಿಣದೇಶಕ್ಕೆ ದಂಡೆತ್ತಿ ಬಂದು ಮುತ್ತಿದ ಮೊದಲನೆಯ ಮುತ್ತಿಗೆ" ಎನ್ನುವುದು, ಹಿಂದಿನ ವಾಕ್ಯದೊಡನೆ ಸಂಬಂಧವನ್ನು ಸ್ಪಷ್ಟಪಡಿಸುತ್ತದೆ.

"ದಕ್ಷಿಣದೇಶದಲ್ಲಿ ನರ್ಮದಾ ಕೃಷ್ಣಾ ನದಿಗಳಿಗೆ ಮಧ್ಯದಲ್ಲಿದ್ದ ಸೀಮೆಯೆಲ್ಲಾ ಬಾಮನೀಸಂಸ್ಥಾನಕ್ಕೆ ಸೇರಿತವಾಗಿದ್ದಿತು. ಈ ಸಂಸ್ಥಾನವು ಮುಹಮ್ಮದ್ ತೊಗ್ಲಕಿನ ಸೇನಾನಾಯಕನಾಗಿದ್ದ ಒಬ್ಬ ಅಫ್ಘಾನರವನಿಂದ ಸ್ಥಾಪಿತವಾಯಿತು."

ಇಲ್ಲಿ "ಈ ಸಂಸ್ಥಾನವು" ಎಂಬುದು "ಸ್ಥಾಪಿತವಾಯಿತು" ಎಂಬುದರ ಹಿಂದೆ ಇದ್ದರೆ ಪೂರ್ವ ವಾಕ್ಯದ ಸಂಬಂಧವು ಅಷ್ಟು ವ್ಯಕ್ತವಾಗುವುದಿಲ್ಲ.

II. ಸಾಮಾನ್ಯವಾಗಿ ವಾಕ್ಯಬೃಂದದ ಮೊದಲನೆಯ ವಾಕ್ಯವು ಅದರಲ್ಲಿ ವರ್ಣಿಸುವ ಮುಖ್ಯಾಭಿಪ್ರಾಯವನ್ನು ಸೂಚಿಸುವಂತಿರಬೇಕು. ಅದು ಪೀಠಿಕೆಯಾಗಿಯೂ ಇರುವುದುಂಟು.

ಇದಕ್ಕುದಾಹರಣೆಗಳು ಮುಂದೆ ಬರೆದಿರುವ ಪ್ರಬಂಧಗಳಲ್ಲಿ ದೊರೆಯುವುವು. ಹೇಗೆಂದರೆ:—

"ಇಂಥ ಎಷ್ಟು ನಿಬಂಧನೆಗಳನ್ನು ಮಾಡಿಕೊಂಡರೂ ಯುದ್ಧವಿರುವವರೆಗೂ ಅದರ ಅಸಂಖ್ಯಾತವಾದ ಕೆಡಕುಗಳು ತಪ್ಪುವುದಿಲ್ಲ." (ಪ್ರಬಂಧ 39, ವಾಕ್ಯಬೃಂದ 3.) ಈ ವಾಕ್ಯವು ಆ ವಾಕ್ಯಬೃಂದದಲ್ಲಿ ಯುದ್ಧದ ಕೆಡಕುಗಳು ವರ್ಣಿಸಲ್ಪಟ್ಟಿವೆಯೆಂದು ಸೂಚಿಸುವುದು.

"ಹಸುವಿನಷ್ಟು ಉಪಯುಕ್ತವಾದ ಪ್ರಾಣಿ ಪ್ರಪಂಚದಲ್ಲಿ ಮತ್ತಾವುದೂ ಇಲ್ಲ"(ಪ್ರಬಂಧ 1) ಈ ವಾಕ್ಯವು ಹಸುವಿನಿಂದಾಗುವ ಪ್ರಯೋಜನಗಳನ್ನು ವರ್ಣಿಸಿರುವ ವಾಕ್ಯಬೃಂದದ ಆದಿಯಲ್ಲಿದೆ.

III. ವಾಕ್ಯಬೃಂದದ ಎಲ್ಲಾ ವಾಕ್ಯಗಳೂ ಅದರ ಮುಖ್ಯಾಭಿಪ್ರಾಯವನ್ನು ಪೋಷಿಸತಕ್ಕವುಗಳಾಗಿರಬೇಕು. ಇದನ್ನು ಏಕೀಭಾವ (Unity in a Paragraph) ವೆಂದು ಕರೆಯಬಹುದು.

ಅಪ್ರಕೃತವಾದ ಸಂಗತಿಗಳನ್ನು ವಾಕ್ಯಬೃಂದದ ನಡುವೆ ತರಬಾರದು. ವಾಕ್ಯಬೃಂದಗಳು ಬಹಳ ಉದ್ದವಾಗಿಯೂ ಬಹಳ ಚಿಕ್ಕವಾಗಿಯೂ ಇರಬಾರದು. ಬಹುದೀರ್ಘವಾದ ವಾಕ್ಯಬೃಂದದಲ್ಲಿ ಏಕೀಭಾವವಿರುವುದು ಅಪೂರ್ವ. ಮುಖ್ಯೋದ್ದೇಶವು ಮರೆತುಹೋಗಿ ಅಪ್ರಕೃತವಾದ ವಿಷಯಗಳಿಗೆ ಅವಕಾಶವಾಗುವುದು. ವಾಕ್ಯಬೃಂದವನ್ನು ಒಂದೆರಡು ವಾಕ್ಯಗಳಲ್ಲಿಯೇ ಮುಗಿಸಬಾರದು. ಇದರಿಂದ ಬಿಗಿ ತಪ್ಪಿ ವಾಕ್ಯಬೃಂದವು ಒಂದು ವಾಕ್ಯಕ್ಕೆ ಸಮಾನವಾಗುವುದು.

IV. ವಾಕ್ಯದಲ್ಲಿ ಪದಗಳನ್ನು ಹೇಗೋ ಹಾಗೆಯೇ ವಾಕ್ಯಬೃಂದದಲ್ಲಿ ವಾಕ್ಯಗಳನ್ನು ತಕ್ಕ ಸ್ಥಳಗಳಲ್ಲಿ ಬರೆಯಬೇಕು. ಮುಖ್ಯವಾದುದು ಅಮುಖ್ಯವಾಗಿಯೂ ಅಮುಖ್ಯವಾದುದು ಮುಖ್ಯವಾಗಿಯೂ ಕಾಣುವಂತೆ ಇರಬಾರದು.

V. ಒಂದೇ ವಿಧವಾದ ವೇಷವನ್ನು ನೋಡುವುದಕ್ಕೂ, ತಿಂಡಿಯನ್ನು ತಿನ್ನುವುದಕ್ಕೂ ಬೇಸರವಾಗುವಂತೆ, ವಾಕ್ಯಬೃಂದವು ಮೊದಲಿಂದ ಕೊನೆವರೆಗೂ ಒಂದೇ ವಿಧವಾದ ವಾಕ್ಯಗಳಿಂದ ಕೂಡಿದ್ದರೆ ಕಿವಿಗಿಂಪಾಗಲಾರದು. ಕೆಲವುದೂರ ಸಾಮಾನ್ಯವಾಕ್ಯ, ಕೆಲವುದೂರ ಮಿಶ್ರವಾಕ್ಯ, ಕೆಲವುಕಡೆ ಸಂಯೋಜಿತವಾಕ್ಯ, ಕೆಲವುಕಡೆ ಸಮತೆ, ಹೀಗೆ ವಾಕ್ಯಬೃಂದದ ಸ್ವರೂಪವು ಬೇರೆ ಬೇರೆ ವಿಧವಾದ ಭಾಗಗಳಿಂದ ಯಥೋಚಿತವಾಗಿ ಕೂಡಿರಬೇಕು.

---

## ಲೇಖನಚಿಹ್ನೆಗಳು (Punctuation).

ಅರ್ಥವು ಸುಲಭವಾಗಿ ತೋರುವಂತೆ ಕೆಲವು ಗುರುತುಗಳನ್ನು ಬರೆವುದರಲ್ಲಿಯೂ ಅಚ್ಚುಹಾಕುವುದರಲ್ಲಿಯೂ ಇಂಗ್ಲಿಷಿನಲ್ಲಿ ಉಪಯೋಗಿಸು-

ವರು. ನಮ್ಮ ದೇಶಕ್ಕೆ ಅಚ್ಚು ಹಾಕುವುದು ಬಂದಮೇಲೆ ಆ ಗುರುತುಗಳು ಕನ್ನಡದಲ್ಲಿಯೂ ಪ್ರಚಾರಕ್ಕೆ ಬಂದಿವೆ. ಅವುಗಳಲ್ಲಿ ಮುಖ್ಯವಾದುವನ್ನು ಇಲ್ಲಿ ವಿವರಿಸಿದೆ.

## (1) . ಪೂರ್ಣವಿರಾಮ (The Full Stop).

ವಾಕ್ಯವು ಮುಗಿದೊಡನೆ ಈ ಚಿಹ್ನೆಯನ್ನು ಹಾಕಬೇಕು

ಶಬ್ದಗಳ ಸಂಕ್ಷಿಪ್ತರೂಪಗಳಲ್ಲಿಯೂ ಇದು ಬರುವುದು. ಹೇಗೆಂದರೆ—ಶಬ್ದಾ. ಶಾ. (ಶಬ್ದಾನುಶಾಸನ), ಅ. ಸೆ. ಪ. (ಅಪ್ಪರ್ ಸೆಕೆಂಡರೀ ಪರೀಕ್ಷೆ).

## (2) ; ಅರ್ಧವಿರಾಮ (The Semi-Colon).

ಇದು ಕಾರ್ಯವನ್ನೂ ಕಾರಣವನ್ನೂ ತಿಳಿಸುವ ವಾಕ್ಯಗಳ ನಡುವೆ ಬರುವುದು. ಉದಾ.—

ಮಿತವ್ಯಯವು ಅಪಮಾನಕರವಲ್ಲ ; ಏಕೆಂದರೆ, ಸಾಲಗಾರರಾಗಿ ಸಾಯುವುದಕ್ಕಿಂತ ಇದ್ದುದರಲ್ಲಿಯೇ ತೃಪ್ತಿಪಡೆದು ಬಡವರಾಗಿ ಬದುಕುವುದು ಲೇಸು.

ವಿರೋಧಾರ್ಥಕ ವಾಕ್ಯದ ಹಿಂದೆಯೂ ಬರುವುದು. ಉದಾ.—

ದುರ್ಜನರು ಒಳ್ಳೆಯ ಮಾತನಾಡುವರು ; ಆದರೆ ಮನದಲ್ಲಿ ವಿಷಕಾರುವರು.

## (3) , ಅಲ್ಪವಿರಾಮ (The Comma).

ಇದು ಮುಂದಣ ಸಂದರ್ಭಗಳಲ್ಲಿ ಬರುವುದು:—

1. ಒಂದೇ ಪದದಲ್ಲಿ ಅನ್ವಯಿಸುವ ಎರಡು ಅಥವಾ ಹಲವು ಪದಗಳ ನಡುವೆ. ಉದಾ.—

ದಯಾಶಾಲಿಯೂ, ಹಿತಚಿಂತಕನೂ, ಉದಾರನೂ, ಸತ್ಯವಾದಿಯೂ ಆದವನನ್ನು ಎಲ್ಲರೂ ಪ್ರೀತಿಸುವರು.

ಅವನು ಇಲ್ಲಿಗೆಬಂದು,ತನ್ನಕೆಲಸವನ್ನೆಲ್ಲಾ ಮಾಡಿಕೊಂಡು,ಒಡನೆಯೇ ಹೊರಟುಹೋದನು.

2. ಅನೇಕ ಪದಯುಗ್ಮಗಳ ಮೇಲೆ. ಉದಾ.—

ಮುದುಕರೂ ಹುಡುಗರೂ, ಗಂಡಸರೂ ಹೆಂಗಸರೂ, ಹಣಗಾರರೂ ಬಡವರೂ, ಜಾಣರೂ ಹೆಡ್ಡರೂ ಎಲ್ಲರೂ ದೇವರಿಗೆ ಒಂದೇ.

3. ಕಾಲ, ಪಕ್ಷಾಂತರ, ಕಾರಣ ಮೊದಲಾದುವನ್ನು ಸೂಚಿಸುವ ವಾಕ್ಯಭಾಗಗಳ ಮೇಲೆ. ಇದಕ್ಕೆ ಉದಾಹರಣೆಗಳನ್ನು "ಶಬ್ದಕ್ರಮ"ದ ಪ್ರಕರಣದಲ್ಲಿ ನೋಡಬಹುದು.

4. ಸಂಬೋಧನ ಪದದ ಮೇಲೆ, ಉದಾ.—

ಬಾಲಕರೆ, ಈ ಪುಸ್ತಕದಲ್ಲಿ ಹೇಳಿರುವ ವಿಧಿಗಳನ್ನೆಲ್ಲಾ ಚೆನ್ನಾಗಿ ನೆನಪಿಡಿ.

## (4) : ವಿವರಣ ಚಿಹ್ನೆ (The Colon).

ಒಂದು ವಾಕ್ಯದ ಅರ್ಥವನ್ನು ವಿವರಿಸುವುದಕ್ಕೆ ಮುಂಚೆ ಇದನ್ನು ಬರೆವರು. ಉದಾ.—

ಶ್ರೀರಾಮನಕೀರ್ತಿ ಪ್ರಪಂಚದಲ್ಲೆಲ್ಲಾ ಹರಡಿಕೊಂಡಿದೆ: ಆತನು ಅಷ್ಟು ಸುಗುಣಿಯಾಗಿದ್ದನು.

## (5) — ಗೀಟು (The Dash).

ಇದು ಹಠಾತ್ತಾಗಿ ನಿಲ್ಲಿಸುವುದನ್ನೂ, ಅನ್ವಯದ ಒದಲಾವಣೆಯನ್ನೂ ತೋರಿಸುವುದು. ಉದಾ.—

ನಾನಿಲ್ಲಿಗೆ ಬಂದುದು—ಒಳ್ಳೆಯದು, ನಾನು ಈಗ ಅದನ್ನು ಹೇಳುವುದಕ್ಕಿಲ್ಲ.

"ಸಲೀಮನು ಹೆಂಡತಿಯ ಹೆಸರನ್ನು ವ್ಯಕ್ತ್ಯಾಸಪಡಿಸಿ ನೂರ್‌ಜಹಾನ್—ಎಂದರೆ ಜಗತ್ತಿನ ಬೆಳಕು—ಎಂದು ಹೆಸರಿಟ್ಟನು."

## (6) :— ವಿವರಣ ಚಿಹ್ನೆ ಮತ್ತು ಗೀಟು.

ಇದು ಎಣಿಕೆ,ವಿವರಣ,ಉದಾಹರಣ ಇವುಗಳಲ್ಲಿಬರುವುದು. ಉದಾ.-

ಜಯಕ್ಕೆ ಆವಶ್ಯಕವಾದುವು ಮೂರು:—ಸ್ಥಿರಪ್ರಯತ್ನ, ಚಾತುರ್ಯ, ತಾಳ್ಮೆ.

ನಾನು ಶ್ರೇಷ್ಠರೆಂದು ಭಾವಿಸುವ ಕವಿಗಳು ಯಾರೆಂದರೆ:—ವಾಲ್ಮೀಕಿ,ಕಾಳಿದಾಸ,ಭವಭೂತಿ.

## (7) ? ಪ್ರಶ್ನಚಿಹ್ನೆ (The Point of Interrogation).

ಇದನ್ನು ಪ್ರಶ್ನವಾಕ್ಯದ ಕೊನೆಯಲ್ಲಿ ಹಾಕುವರು. ಉದಾ.—

"ಗದ್ದುಗೆಯೇರಿದ ಮಾತ್ರಕ್ಕೆ ಬುದ್ಧಿವಂತನಾದಾನೆ ?"

## (8) ' ' " " ಅನುಕರಣ ಚಿಹ್ನೆ (The Quotation Marks).

ಒಂದು ಶಬ್ದವನ್ನಾಗಲಿ ವಾಕ್ಯವನ್ನಾಗಲಿ ಬೇರೊಂದು ಕಡೆಯಿಂದ ಎತ್ತಿ ಬರೆವಾಗಲೂ, ಒಬ್ಬರು ಹೇಳಿದ ಮಾತನ್ನು ಹೇಳಿದ ಹಾಗೆಯೇ ಬರೆವಾಗಲೂ ಇದನ್ನು ಪ್ರಯೋಗಿಸುವರು. ಉದಾ.—

**ಮಕ್ಕಳಿಗೆ ಆಟದಮೇಲೆ ಬಹಳ ಆಸೆ. ಇಲ್ಲಿ 'ಆಟ' ಎಂಬುದು 'ಆಡು' ಎಂಬ ಧಾತುವಿನಿಂದ ಆಗಿದೆ.**

"ಗುಣಹೀನನ ಸಿರಿಯಿಂದಂ ಗುಣಿಗಳ ಬಡತನವೆ ಲೇಸು"—ಪಂಪರಾಮಾಯಣ.

**"ಎಲೈ ಮಕ್ಕಳಿರ, ನಿಮ್ಮ ತಾಯ್ತಂದೆಗಳೂ ಗುರುಗಳೂ ಹೇಳಿದಂತೆ ನೀವು ನಡೆದುಕೊಳ್ಳಬೇಕು" ಎಂದು ಒಬ್ಬ ಉಪಾಧ್ಯಾಯರು ಬೋಧಿಸುತ್ತಿದ್ದರು.**

## (9) ! ಭಾವಚಿಹ್ನೆ (The Point of Exclamation).

ಇದು ಆಶ್ಚರ್ಯ, ದುಃಖ, ಜುಗುಪ್ಸೆ, ನಿಂದೆ ಮೊದಲಾದ ಮನೋಭಾವಗಳನ್ನು ತೋರಿಸುವ ಶಬ್ದಗಳಿಗೂ ವಾಕ್ಯಗಳಿಗೂ ಪರದಲ್ಲಿ ಬರುವುದು. ಉದಾ.—

**ಭಲಾ ! ಈ ಕವಿ ಪಟ್ಟಣವನ್ನು ಎಷ್ಟು ಚೆನ್ನಾಗಿ ವರ್ಣಿಸಿದ್ದಾನೆ !**

**ಅಹಹ ! ಸಜ್ಜನರಿಗೂ ಇಂಥ ಕಷ್ಟಬಂದಿತಲ್ಲಾ !**

**ಅಬ್ಬ ! ಅವನು ಕೊಡುವ ತೊಂದರೆಗಳನ್ನೂ ಆಡುವ ಕಠಿನೋಕ್ತಿಗಳನ್ನು ಸಹಿಸಲಾಗದು !**

**ಛೀ ! ಪಾಪಿ ! ನಿನ್ನ ಕೆಟ್ಟತನಕ್ಕೆ ತಕ್ಕುದಾಗುವುದು !**

**ಸೂಚನೆ:**—ಮೇಲಣ ಕುರುಹುಗಳನ್ನು ಹಾಕಿದಮಾತ್ರದಿಂದ ಬೇಕಾದ ಅರ್ಥವು ತೋರುವುದೆಂದು ತಿಳಿಯಕೂಡದು. ವಾಕ್ಯಗಳನ್ನೂ ಸರಿಯಾಗಿ ರಚಿಸಬೇಕು. ಉದಾ.—

**"ಅವರು ನಾಳೆ ಬರುವರೋ ?" ಎಂಬುದರ ಅರ್ಥವು "ಅವರು ನಾಳೆ ಬರುವರು ?"ಎಂದು ಬರೆದರೆ ಆಗಲಾರದು.**

# ಪ್ರಬಂಧ.

ಯಾವುದಾದರೂ ಒಂದು ವಿಷಯವನ್ನು ಕುರಿತು ತೋರುವ ಅಭಿಪ್ರಾಯಗಳನ್ನು ವಾಕ್ಯಬೃಂದಗಳ ರೂಪದಲ್ಲಿ ವಿವರಿಸಿ ಬರೆವುದಕ್ಕೆ "ಪ್ರಬಂಧ" ಎಂದು ಹೆಸರು. ಪ್ರಬಂಧವು ಸರಿಯಾಗಿರಬೇಕಾದರೆ, ಹಿಂದೆ ವಿವರಿಸಿದ ವಿಧಿಗಳನ್ನೆಲ್ಲಾ ಅನುಸರಿಸಬೇಕು.

ಪ್ರಬಂಧವನ್ನು ಬರೆವುದಕ್ಕೆ ಮುಂಚೆ ವಿಷಯವನ್ನು ಚನ್ನಾಗಿ ಪರ್ಯಾಲೋಚಿಸಬೇಕು. ತೋರಿದ ಅಭಿಪ್ರಾಯಗಳನ್ನು ಸಂಕ್ಷೇಪದಿಂದ ಪ್ರಕರಣಗಳಾಗಿ ವಿಂಗಡಿಸಿ ಬೇರೊಂದು ಕಡೆ ವಿರಳವಾಗಿ ಬರೆದಿಟ್ಟುಕೊಳ್ಳಬೇಕು. ಪ್ರಕರಣಗಳಲ್ಲಿ ಒಂದಾದ ಮೇಲೊಂದು ಸಹಜವಾಗಿ ತೋರುವಂತೆ ಕ್ರಮವಿರಬೇಕು. ಹೀಗೆ ಪ್ರಬಂಧದಲ್ಲಿ ವಿವರಿಸಬೇಕಾದ ಮುಖ್ಯಾಂಶಗಳನ್ನು ಸೂಚಿಸಿದ ಮೇಲೆ ಪ್ರತಿಪ್ರಕರಣದ ಕೆಳಗೆ ಬಿಟ್ಟಿರುವ ಜಾಗದಲ್ಲಿ ಇನ್ನೂ ಹೆಚ್ಚಾಗಿ ತೋರಿಬರುವ ದೃಷ್ಟಾಂತನೇ ಮೊದಲಾದ ಸಣ್ಣಸಣ್ಣ ಭಾಗಗಳನ್ನು ಕಾಣಿಸಬೇಕು. ಹೀಗೆ ಮೊದಲೇ ಒಂದು ಪಟ್ಟಿ(Outline)ಯನ್ನೂ ಬರೆದಿಟ್ಟುಕೊಂಡು ಅದನ್ನನುಸರಿಸಿ ಪ್ರಬಂಧವನ್ನು ಬರೆವುದರಿಂದ ಪುನರುಕ್ತಿ, ಸಂದೇಹವಾಗುವಂತೆ ಭಿನ್ನಾಭಿಪ್ರಾಯಗಳ ಸೇರುವಿಕೆ, ಇವೇ ಮೊದಲಾದ ದೋಷಗಳು ತಪ್ಪಿ, ಪ್ರಬಂಧವಿಷಯದ ಬೇರೆ ಬೇರೆ ಭಾಗಗಳಿಗೆ ಪರಸ್ಪರ ಸಂಬಂಧವಿರುವಂತೆ ವರ್ಣಿಸಲವಕಾಶವಾಗುವುದು.

ವಿಷಯಭೇದದಿಂದ ಪ್ರಬಂಧವು ಸಾಮಾನ್ಯವಾಗಿ ಮೂರು ವಿಧ:— ವಸ್ತುವರ್ಣನ, ವೃತ್ತಾಂತಕಥನ, ವಿಮರ್ಶನ.

## I. ವಸ್ತುವರ್ಣನ (Descriptive Composition).

**ಯಾವುದಾದರೂ ಒಂದು ವಸ್ತುವನ್ನು ಕುರಿತು ಬರೆವುದು.**

ವರ್ಣನೀಯವಾದ ವಸ್ತುಗಳ ಪಟ್ಟಿ.

೧. ಪ್ರಾಣಿ: ಹಸು, ಆನೆ, ಒಂಟೆ, ನಾಯಿ ಇತ್ಯಾದಿ.
೨. ವನಸ್ಪತಿ: ತೆಂಗು, ಅಡಕೆ, ಬಾಳೆ, ಮಾವು.
೩. ಖನಿಜ: ಚಿನ್ನ, ಬೆಳ್ಳಿ, ಕಬ್ಬಿಣ, ಕಲ್ಲಿದ್ದಲು.
೪. ಯಂತ್ರ: ಬಾರಾಮಿಟರ್, ರೈಲಿಂಜಿನ್, ಗಡಿಯಾರ.
೫. ಕೈಗಾರಿಕೆ:

(*a*) ಗಾಜು, ಕಾಗದ, ರೇಷ್ಮೆ, ಜಂಖಾನ, ಮೋಂಬತ್ತಿ, ಇಟ್ಟಿಗೆ, ಶಾಯಿ, ಸಕ್ಕರೆ ಇಂಥವು.

(*b*) ಕಟ್ಟಡ, ಹಡಗು.

೬. ಪ್ರಾಕೃತಿಕವಾದ ವಸ್ತು ಅಥವಾ ನೋಟ: (*a*) ದೇಶ, ಜಿಲ್ಲೆ, ಪಟ್ಟಣ. (*b*) ನದಿ, ಬೆಟ್ಟ, ಮರಳಕಾಡು, ಜಲಪಾತ ಮುಂತಾದವು

ಈ ವಸ್ತುಗಳನ್ನು ಎಲ್ಲರೂ ನೋಡುತ್ತಲೇ ಇರುವುದರಿಂದ ಎಲ್ಲರಿಗೂ ತಕ್ಕಮಟ್ಟಿಗೆ ಇವುಗಳ ವಿಷಯದಲ್ಲಿ ಬರೆಯಬೇಕಾದುದು ತಿಳಿದೇ ಇರುವುದು. ಮೇಲಣ ಪ್ರತಿ ತರಗತಿಯ ವಸ್ತುಗಳನ್ನು ಕುರಿತು ಬರೆಯಬೇಕಾದ ವಿಷಯಗಳ ಸಾರಾಂಶಗಳನ್ನು ಮಾದರಿಗಾಗಿ ಈ ಕೆಳಗೆ ಕೊಟ್ಟಿದೆ.

## ಸಾರಾಂಶಗಳು (Outlines).

### ೧. ಪ್ರಾಣಿ.

1. ವಾಸಸ್ಥಾನ; 2. ವರ್ಣನೆ; 3. ಸ್ವಭಾವ, ಗುಣ, ಆಹಾರ; 4. ಉಪಯೋಗ.

ಉದಾಹರಣೆ:— ಆನೆ.

(1) ಆಫ್ರಿಕಾಖಂಡ, ಇಂಡಿಯಾ, ಬರ್ಮ, ಸಯಾಂ, ಸಿಂಹಳದ್ವೀಪ.

(2) ಬಣ್ಣ ಕಪ್ಪು-ಅತ್ಯುನ್ನತವಾದ ಜಂತು, ಸುಮಾರು ಹತ್ತಡಿ ಎತ್ತರ-ತಲೆ ಬಹಳ ದಪ್ಪ-ಕಿವಿಗಳು ಬೀಸಣಿಗೆಯಂತೆ ಅಗಲ, ಬಹಳ ಸೂಕ್ಷ್ಮ, ಮನುಷ್ಯನಿಗೆ ಕೇಳಿಸದ ಸದ್ದು ಇದಕ್ಕೆ ಕೇಳಿಸುತ್ತದೆ.-ಕಣ್ಣುಗಳು ಚಿಕ್ಕವು, ಸೂಕ್ಷ್ಮವಲ್ಲ-ಸೊಂಡಿಲು ಬಹಳ ಉಪಯುಕ್ತವಾದ ಅವಯವ; ಮುಂಡಾಗಿವೆ, ಮೇಲೆ ದಪ್ಪ, ಬರುತ್ತ ಬರುತ್ತ ಸಣ್ಣ. ಇದೇ ಆನೆಯ ಮೂಗು ಮತ್ತು ಕೈ, ಮುಖ್ಯ ಸ್ಪರ್ಶೇಂದ್ರಿಯ—ಬಾಯಿ ಬಹಳ ದೊಡ್ಡದು—ದಂತಗಳು ಮೇಲಿನಸಾಲಿನಿಂದ ಮುಂದಕ್ಕೆ ಬಂದಿರುವ ಎರಡು ಹಲ್ಲುಗಳು, ಆರಡಿ ಉದ್ದ, ಯಾವಕಡೆ ಬೇಕಾದರೂ ತಿರುಗಿಸಬಹುದು-ಬಗ್ಗಿಸಲಾಗದ ದಪ್ಪವಾದ ಮೋಟು ಕುತ್ತಿಗೆ-ಮೈ ಬಹಳ ದಪ್ಪ,ಭಾರ. ಚರ್ಮ ಒರಟು-ಬಾಲವು ಸಣ್ಣದು, ತುದಿಯಲ್ಲಿ ಕೂದಲಿನ ಗೊಂಚಲು-ಕಾಲುಗಳು ಕಂಭದಹಾಗೆದಪ್ಪ, ದುಂಡು, ಬಲವುಳ್ಳವು-ಪಾದಗಳು ಗುಂಡು, ನಡೆವಾಗ ಸದ್ದಾಗುವುದಿಲ್ಲ. ಒಂದೊಂದು ಪಾದದಲ್ಲಿ ಐದೈದು ಬೆರಳುಗಳು.

(3) ಕಾಡಿನಲ್ಲಿ ಆನೆಗಳು ಹಿಂಡು ಹಿಂಡಾಗಿ ತಿರುಗುತ್ತವೆ. ಹಿಂಡಿನ ಅಧಿಪತಿ ಸಲಗ, ನೀರಿನಲ್ಲಿ ಮುಳುಗುವುದು ಬಹಳ ಇಷ್ಟ. ಕಾಡಿನಲ್ಲಿ ನೀರಿನ ಹತ್ತಿರವೇ ವಾಸಿಸುವುದು. ಹೊಟ್ಟೆಯಲ್ಲಿ ನೀರನ್ನು ತುಂಬಿಕೊಂಡು ಬೇಕಾದಾಗ ಸೊಂಡಿಲಿನಿಂದ ಈಚೆಗೆ ತೆಗೆದು ಬೆನ್ನಿನಮೇಲೆ ಎರಚಿಕೊಳ್ಳುವುದು. ಸ್ವಭಾವವಾಗಿ ದುಷ್ಟ ಜಂತುವಾದರೂ ಪಳಗಿಸಿದ ಮೇಲೆ ಸಾಧುಗುಣವುಳ್ಳದ್ದು. ಯಜಮಾನನು ಹೇಳಿದಂತೆ ಕೇಳುತ್ತದೆ. ಬಹಳ ಸೂಕ್ಷ್ಮಬುದ್ಧಿ, ಅನೇಕ ಕಾರ್ಯಗಳನ್ನು ಕಲಿಸಬಹುದು. ಮಾವಟಿಗನ ಮಾತನ್ನೂ ಸನ್ನೆಗಳನ್ನೂ ತಿಳಿದು ಅದರಂತೆ ನಡೆಯುತ್ತದೆ. ಮೋಸಮಾಡಿದವರನ್ನೂ ಹಿಂಸಿಸಿದವರನ್ನೂ ಮರೆಯದೆ ಹೊಟ್ಟೆಕಿಚ್ಚು ತೀರಿಸಿಕೊಳ್ಳುತ್ತದೆ. ಸೊಂಡಿಲನ್ನು ಸೂಜಿಯಿಂದ ಚುಚ್ಚಿದ ದರ್ಜಿಯ ಕಥೆ. ನಿಶ್ಚಲವಾಗಿ ನಿಲ್ಲದೆ ಮೈಯನ್ನು ಒಂದು ವಿಧವಾಗಿ ಅಲ್ಲಾಡಿಸುತ್ತಲೇ ಇರುವುದು, 100-150 ವರ್ಷ ಬದುಕುತ್ತದೆ. ಆಹಾರ-ಹುಲ್ಲು, ಜೊಂಡು, ಎಲೆ, ಮರದ ರೆಂಬೆ, ಧಾನ್ಯ, ಹಣ್ಣು, ಗಡ್ಡೆ ; ಕಬ್ಬಿನಮೇಲೆ ಬಹಳ ಆಸೆ.

(4) ಪೂರ್ವಕಾಲದಲ್ಲಿ ಆನೆಯು ಸೈನ್ಯದ ಒಂದು ಮುಖ್ಯಾಂಗ. ಭಾರವನ್ನು ಹೊರುವುದು, ಯುದ್ಧದಲ್ಲಿ ಪಿರಂಗಿ ಮುಂತಾದ ಭಾರವಾದ ವಸ್ತುಗಳನ್ನು ಎಳೆಯುವುದು, ಅಡವಿಯಿಂದ ಮರದ ದಿಮ್ಮಿಗಳನ್ನು ಎಳೆಯುವುದು, ಮರಗಳನ್ನು ಬುಡಮುಟ್ಟ ಉರುಳಿಸುವುದು, ನೆಲವನ್ನು ಮಟ್ಟಮಾಡುವುದು, ಇದಕ್ಕೆಲ್ಲಾ ಆನೆಯನ್ನು ಈಗ ಉಪಯೋಗಿಸುವರು. ರಾಜರು ಉತ್ಸವಕಾಲದಲ್ಲಿ ಆನೆಯ ಮೇಲೆ ಅಂಬಾರಿಯಲ್ಲಿ ಕುಳಿತು ಸವಾರಿಮಾಡುವರು. ದೇವಸ್ಥಾನ, ಮಠ, ಅರಮನೆಗಳಲ್ಲಿ ಮರ್ಯಾದೆಗೋಸ್ಕರ ಇಟ್ಟಿರುವರು. ಸತ್ತಮೇಲೆ ಆನೆಯ ಮಾಂಸವು ಕೆಲವರಿಗೆ ಆಹಾರ. ದಂತದಿಂದ ಬಾಚಣಿಗೆ, ಭರಣಿ, ಚದುರಂಗದ ಕಾಯಿ, ಚೂರಿ ಮುಂತಾದುದರ ಹಿಡಿ ; ಚರ್ಮದಿಂದ ಗುರಾಣಿ, ಎಕ್ಕಡ ಆಗುವುದು.

---

## ೨. ವನಸ್ಪತಿ.

1. ಬೆಳೆವ ಸ್ಥಳ; 2. ವರ್ಣನೆ; 3. ಬೆಳೆವ ಕ್ರಮ; 4. ಉಪಯೋಗ. ಉದಾ.—ಹತ್ತಿಯಗಿಡ.

(1) ಅಮೆರಿಕಾ ಖಂಡದ ಸಂಯುಕ್ತ ಸಂಸ್ಥಾನಗಳು, ಇಂಡಿಯಾ,ಚೀನಾ, ಪಶ್ಚಿಮದ್ವೀಪಗಳು. ಉಷ್ಣ ಅಥವಾ ಸಮಶೀತೋಷ್ಣ ದೇಶಗಳಲ್ಲಿಯೇ ಹೊರತು ಶೀತದೇಶಗಳಲ್ಲಿ ಬೆಳೆವುದಿಲ್ಲ.

(2) ಹೊಲದ ಹತ್ತಿಯಗಿಡ ಎರಡು ಮೂರಡಿ ಎತ್ತರ, ಕೆಲವು ಜಾತಿಯ ಹತ್ತಿಗಿಡಗಳು ಇಪ್ಪತ್ತಡಿ ಎತ್ತರ, ಕಾಡುಹತ್ತಿಯಗಿಡದ ಎತ್ತರ ನೂರಡಿಯ ವರೆಗೆ—ಎಲೆಗಳು ಅಗಲ, ಕರೀಛಾಯೆಯ ಹಸುರುಬಣ್ಣವುಳ್ಳವು, ತುದಿಯಲ್ಲಿ ಎಲೆಗಳಿಗೆ ಐದು ವಿಭಾಗಗಳು-ಸಾಮಾನ್ಯವಾಗಿ ಹೂಗಳು ದೊಡ್ಡವು, ಹಳದಿಯಬಣ್ಣ, ಕೆಲವು ಊದಾಬಣ್ಣ, ಎಸಳುಗಳು ಬೇಗ ಬಿದ್ದುಹೋ

ಗುವುವು-ಕಾಯಿಗಳು ಸ್ವಲ್ಪ ತ್ರಿಕೋಣಾಕಾರ; ಕಾಯಿಯಲ್ಲಿ ಮೂರರಿಂದ ಐದು ತೊಳೆ, ಮೂರುಭಾಗಗಳಾಗಿದೆ; ಪ್ರತಿ ಭಾಗದಲ್ಲಿಯೂ ಹತ್ತಿ ಮುಚ್ಚಿಕೊಂಡಿರುವ ಬೀಜ; ಕಾಯಿ ಬಲಿಯುತ್ತ ಹತ್ತಿ ಅರಳಿಕೊಂಡು ಕಾಯಿಯ ಮುಸುಕನ್ನು ಸೀಳುವುದು; ಹತ್ತಿ ಸಾಧಾರಣ-ವಾಗಿ ಬಿಳುಪು, ಕೆಲವು ಜಾತಿ ಹಳದಿ-ಜಾರ್ಜಿಯ ಬೋರ್ಬನ್, ಸೀ ಐಲೆಂಡುಗಳಲ್ಲಿ ಬೆಳೆವ ಹತ್ತಿ ಬಹಳ ಪ್ರಸಿದ್ಧ-ಮೈಸೂರು ಸಂಸ್ಥಾನದಲ್ಲಿ ಕರೀಹತ್ತಿ, ಬೀಜದಹತ್ತಿ, ಜಡೆಹತ್ತಿ ಎಂದು ಮೂರುಭೇದ; ಇವುಗಳ ಸ್ವರೂಪ-ಸುಗ್ಗಿಯ ಕಾಲದಲ್ಲಿ ಹತ್ತಿಯ ಹೊಲ ಹೇಗೆ ಕಾಣುವುದು?

(3) ಮಳೆಗಾಲದ ಆದಿಯಲ್ಲಿ ನೆಲವನ್ನು ಉತ್ತು ಗೊಬ್ಬರ ಹಾಕಿ ಗುಂಟೆ ಹೊಡೆದು ಕಳೆ ಕೀಳುತ್ತಿದ್ದು ನಾಲ್ಕು ನಾಲ್ಕಡಿ ದೂರದಲ್ಲಿ ದಿಬ್ಬಗಳನ್ನು ಕಟ್ಟಬೇಕು. ಮೂರುತಿಂಗ-ಳಾಚೆಗೆ ದಿಬ್ಬಗಳ ಮೇಲೆ ಹತ್ತಿಯನ್ನೂ, ಹತ್ತಿಯ ಸಾಲುಗಳ ನಡುವೆ ನವಣೆ ಜೋಳ ಇಂಥ ಯಾವುದಾದರೂ ಒಂದು ಧಾನ್ಯವನ್ನೂ ಬಿತ್ತುವುದು ವಾಡಿಕೆ. ಇದರಿಂದ ಹತ್ತಿಗೆ ಹಾನಿ-ಯಿಲ್ಲ, ನಮಗೆ ಆದಾಯ-ಬಿತ್ತಿದ ಒಂದು ತಿಂಗಳಿಗೆ ಗುಂಟೆ ಹೊಡೆವುದು-ನಾಲ್ಕೈದು ತಿಂಗ-ಳಲ್ಲಿ ಹತ್ತಿಯ ಮಧ್ಯದ ಧಾನ್ಯವನ್ನು ಕೊಯ್ಯಬಹುದು-ಹತ್ತಿಯಗಿಡ ಆರನೆಯ ತಿಂಗಳಲ್ಲಿ ಹೂಬಿಡಲಾರಂಭಿಸಿ ಒಂದು ವರ್ಷದವರೆಗೆ ಕಾಯಿ ಕೊಡುತ್ತಿರುವುದು.

(4) ಹತ್ತಿಯಿಂದ ದಾರ, ಹಗ್ಗ, ಬಟ್ಟೆ ಆಗುವುವು. ಬೀಜವು ದನಗಳಿಗೆ ಒಳ್ಳೆಯ ತಿಂಡಿ; ಇದರ ಎಣ್ಣೆಯಿಂದ ಸಾಬೂನುಮಾಡುವರು; ಎಣ್ಣೆಯನ್ನು ಅಡಿಗೆಗೂ ಉತ್ತರ ಹಿಂದೂದೇಶದಲ್ಲಿ ದೀಪವನ್ನು ಉರಿಸುವುದಕ್ಕೂ ಬಳಸುವರು-ಹತ್ತಿಯ ಹಿಂಡಿ ದನಗಳಿಗೆ ಆಹಾರ,ನೆಲಕ್ಕೆ ಗೊಬ್ಬರ. ಚಳಿ ಜ್ವರಕ್ಕೆ ಹತ್ತಿ ಬೀಜದ ಕಷಾಯ ಔಷಧ-ಸುಟ್ಟ ಗಾಯಕ್ಕೆ ಹತ್ತಿಯ ಪೋಲ್ಟೀಸು ಕಟ್ಟು-ವರು-ಎಲೆಯ ರಸವು ಆಮಶಂಕೆಯನ್ನು ನಿಲ್ಲಿಸುವುದು-ಕರೀ ಹತ್ತಿಯಿಂದ ಬ್ರಾಹ್ಮಣರು ಯ-ಜ್ಞೋಪವೀತಗಳನ್ನೂ ದೇವರ ದೀಪಕ್ಕೆ ಬತ್ತಿಗಳನ್ನೂ ಮಾಡುವರು.

---

## ೩. ಖನಿಜ.

1. ದೊರೆವ ರೂಪಗಳು; 2. ದೊರೆವ ಸ್ಥಳ; 3. ಪಡೆವ ಕ್ರಮ; 4. ಗುಣ; 5. ಉಪಯೋಗ.

ಉದಾ.—ಚಿನ್ನ.

(1) ಕೆಲವು ನದಿಗಳಲ್ಲೂ ನದೀ ಪ್ರವಾಹದಿಂದುಂಟಾದ ಒಂದು ಭೂಮಿಯಲ್ಲೂ, ಚಿನ್ನದ ದೂಳೂ ಸಣ್ಣ ಸಣ್ಣ ಕಣಗಳೂ ಸ್ವಲ್ಪವಾಗಿ ಸಿಕ್ಕುತ್ತವೆ. ಕೆಲವು ಒಂದು ಭೂಮಿಗಳಲ್ಲಿ ಚಿನ್ನದ ಗಟ್ಟಿಗಳೂ ಸಿಕ್ಕುವುದುಂಟು. ಮುಖ್ಯವಾಗಿ ಕೆಲವು ಬೆಣಚುಕಲ್ಲಿನ ಬಂಡೆಗಳಲ್ಲಿ ಚಿನ್ನವು ಪದರ ಪದರವಾಗಿ ದೊರೆಯುತ್ತದೆ. ಭೂಮಿಯಲ್ಲಿಸಿಕ್ಕುವ ಚಿನ್ನದೊಡನೆ ಬೆಳ್ಳಿತಾಮ್ರಗಳು ಬೆರೆತಿರುವುವು.

(2) ಆಸ್ಟ್ರೇಲಿಯ, ಕ್ಯಾಲಿಫೋರ್ನಿಯ, ದಕ್ಷಿಣ ಆಫ್ರಿಕಾ, ದಕ್ಷಿಣ ಅಮೆರಿಕಾ, ಮೆಕ್ಸಿಕೊ, ಇಂಡಿಯಾ, ಈ ದೇಶಗಳಲ್ಲಿ ನದಿಗಳ ಪಾತ್ರಗಳಲ್ಲೂ ಪರ್ವತಗಳಲ್ಲೂ. ಆಸ್ಟ್ರೇಲಿಯಾದೇಶದ ಚಿನ್ನ ಬಹು ಸ್ವಚ್ಛವಾದುದು.

(3) ಚಿನ್ನ ಬೆರೆತಿರುವ ಮಣ್ಣನ್ನೂ ಮರಳನ್ನೂ ನೀರಿನಲ್ಲಿ ಚೆನ್ನಾಗಿ ಜಾಲಿಸಿದರೆ, ಹಗುರವಾದ ಮಣ್ಣೂ ಮರಳೂ ಹೋಗಿ ಭಾರವಾದ ಚಿನ್ನದ ದೂಳೂ ಕಣಗಳೂ ನಿಲ್ಲುತ್ತವೆ.

ಬೆಣಚುಕಲ್ಲಿನ ಬಂಡೆಗಳಲ್ಲಿರುವ ಚಿನ್ನವನ್ನು ಪ್ರತ್ಯೇಕಿಸಲು, ಆ ಬಂಡೆಗಳನ್ನು ಒಡೆದು ಯಂತ್ರಗಳಿಂದ ಪುಡಿಮಾಡಿ, ಆ ಪುಡಿಯನ್ನು ನೀರಿನಲ್ಲಿ ಜಾಲಿಸಬೇಕು. ಆಗ ಕಲ್ಲೂ ಮಣ್ಣೂ ಕೊಚ್ಚಿಹೋಗಿ ಚಿನ್ನ ಮಾತ್ರ ನಿಲ್ಲುವುದು.

ಚಿನ್ನದ ದೂಳೂ ಕಣಗಳೂ ಬಹಳ ಸಣ್ಣವಾಗಿದ್ದರೆ, ಪಾದರಸವನ್ನು ಸೇರಿಸಿ ನೀರಿನಲ್ಲಿ ಜಾಲಿಸುತ್ತಾರೆ. ಪಾದರಸವು ಚಿನ್ನದ ದೂಳೂ ಕಣಗಳೊಂದಿಗೆ ಸೇರಿಕೊಂಡು, ಇತರ ಕಲ್ಮಷಗಳು ನೀರಿನಲ್ಲಿ ಕೊಚ್ಚಿಹೋಗುತ್ತವೆ. ಪಾದರಸ ಮಿಶ್ರವಾದ ಚಿನ್ನವನ್ನು ಕಾಯಿಸಿದರೆ, ಪಾದರಸವು ಆವಿಯಾಗಿ ಹೋಗಿ ಚಿನ್ನ ಮಾತ್ರ ಉಳಿವುದು.

ಬೆಳ್ಳಿಯೊಡನೆ ಮಿಶ್ರವಾದ ಬಂಗಾರವನ್ನು ಕರಗಿಸಿ ಕರಗಿದ ಲೋಹವನ್ನು ಒಂದು ನೀರು ತುಂಬಿದ ಪಾತ್ರೆಗೆ ಎತ್ತರದಿಂದ ಸುರಿದು ನುಚ್ಚಾಗುವಂತೆ ಮಾಡುವರು. ನುಚ್ಚಾದುದನ್ನು ಕಬ್ಬಿಣದ ಪಾತ್ರೆಯಲ್ಲಿಟ್ಟು ಗಂಧಕ ದ್ರಾವಕವನ್ನು ಬೆರೆಸಿ ಕುದಿಸುವರು. ಬೆಳ್ಳಿಯು ದ್ರಾವಕವಾಗಿ ಕರಗಿ ಚಿನ್ನವು ಪುಡಿಯಾಗಿ ಕೆಳಗೆ ಬೀಳುವುದು.

(4) ಹೊಳೆವ ಅರಸಿನ ಬಣ್ಣವುಳ್ಳದು—ಲೋಹಗಳಲ್ಲೆಲ್ಲಾ ಬಹು ಭಾರ, ಬೆಲೆಯುಳ್ಳದು—ಅಪ್ಪಟವಾದ ಚಿನ್ನ ಬಹಳ ಮೃದು. ಬಹಳ ತೆಳುವಾದ ತಗಡಾಗಿ ಬಡಿಯಬಹುದು ; ಸುಮಾರು ಮೂರುಲಕ್ಷ ರೇಕುಗಳನ್ನು ಒಂದರಮೇಲೊಂದು ಅಡಕಿದರೆ, ಒಂದಂಗುಲಗಾತ್ರವೇ ಆಗುವುದು. ಬಹಳ ಸಣ್ಣ ತಂತಿಯಾಗಿ ಎಳೆಯಬಹುದು—ಬಹಳ ಜಿಗಟಾದ ಲೋಹ—ತುಕ್ಕು ಹಿಡಿವುದಿಲ್ಲ, ಮಾಸುವುದಿಲ್ಲ ; ಬಹಳ ಹೊಳೆಯುತ್ತಿರುತ್ತದೆ—ಶುದ್ಧವಾದ ಚಿನ್ನವು ಇತರ ಲೋಹಮಿಶ್ರವಾದ ಚಿನ್ನಕ್ಕಿಂತ ಕರಗುವುದು ತಡ.

(5) ನಾನಾ ವಿಧವಾದ ಒಡವೆಗಳು, ಬಟ್ಟಲು, ತಟ್ಟೆ ಮುಂತಾದ ಪಾತ್ರೆಗಳು, ನಾಣ್ಯಗಳು, ಬೆಳ್ಳಿಯ ಪದಾರ್ಥಗಳಿಗೆ ಮುಲಾಮು, ಜರತಾರಿಬಟ್ಟೆ ಇವುಗಳನ್ನು ಚಿನ್ನದಿಂದ ಮಾಡುವರು. ಹಿಂದೂದೇಶದಲ್ಲಿ ವೈದ್ಯರು ಚಿನ್ನದ ಭಸ್ಮವನ್ನು ಮಾಡಿ ಔಷಧವಾಗಿ ಉಪಯೋಗಿಸುವರು.

**ಸೂಚನೆ:**—ಮೇಲೆ ಆನೆ, ಚಿನ್ನ ಇವುಗಳ ವಿಷಯವಾಗಿ ಬರೆದಿರುವುದರಲ್ಲಿ ಮುಕ್ಕಾಲುಪಾಲು ಪ್ರತಿಯೊಬ್ಬ ವಿದ್ಯಾರ್ಥಿಗೂ ತಿಳಿದಿರಬಹುದು. ತಿಳಿದಿರುವುದನ್ನು ವಿಶದವಾಗಿ ತಪ್ಪಿ-

ಲ್ಲದಂತೆ ಪರೀಕ್ಷೆಯಲ್ಲಿ ಬರೆದರೆ ಸಾಕು. ಆದರೆ ಯಾವುದಾದರೂ ಒಂದು ವಿಷಯವನ್ನು ಕುರಿತು ಒಳ್ಳೆಯ ಪ್ರಬಂಧವನ್ನು ಬರೆಯಲು, ಅದರ ವಿಷಯದಲ್ಲಿ ಏನೇನು ಹೇಳಿದೆಯೋ ಅದನ್ನು ಪುಸ್ತಕಗಳಲ್ಲಿ ಓದಿ ಚೆನ್ನಾಗಿ ಮಂದಟ್ಟು ಮಾಡಿಕೊಂಡು, ಕೆಲವು ದಿನಗಳಾದಮೇಲೆ ಅದರ ಸಾರಾಂಶವನ್ನು ಸ್ವಂತವಾಗಿ ಬರೆಯಬೇಕು. ಹೀಗೆ ಹಲವು ಬಗೆಯ ವಿಷಯಗಳನ್ನು ಕುರಿತು ಬರೆದರೆ ಚೆನ್ನಾಗಿ ಬರೆಯಲು ಅಭ್ಯಾಸವಾಗುವುದು.

---

## ೪. ಯಂತ್ರ.

ಯಂತ್ರಗಳನ್ನು ವರ್ಣಿಸಲು ಶಾಸ್ತ್ರಜ್ಞಾನವು ಆವಶ್ಯಕವು.

(1) ಸಂಕ್ಷಿಪ್ತವಾದ ಸಾಮಾನ್ಯವರ್ಣನೆ.
(2) ಯಂತ್ರವು ಅಭಿವೃದ್ಧಿಗೆ ಬಂದುದರ ಚರಿತ್ರೆ.
(3) ನಾನಾ ರೂಪಗಳು.
(4) ಬೇರೆಬೇರೆ ಭಾಗಗಳ ವರ್ಣನೆ (ಚಿತ್ರದೊಡನೆ)
(5) ಉಪಯೋಗಿಸುವ ರೀತಿ—ಮೂಲತತ್ವ.
(6) ಪ್ರಯೋಜನ.

## ೫. ಕೈಗಾರಿಕೆ. (*a*) ಗಾಜು ಮುಂತಾದುವು.

(1) ಮೂಲದ್ರವ್ಯ. ಅದು ಎಲ್ಲಿ ದೊರೆವುದು?
(2) ಬೇಕಾದ ಯಂತ್ರಸಹಾಯ.
(3) ಮಾಡುವಕ್ರಮ.
(4) ನಾನಾಭೇದಗಳು: ಆಕಾರ, ಗುಣ.
(5) ಎಲ್ಲೆಲ್ಲಿ ನಡೆವುದು?
(6) ಉಪಯೋಗ

ಉದಾ.— **ಕಾಗದ.**

(1) ಇದನ್ನು ಹರಕುಬಟ್ಟೆ, ಒಣಹುಲ್ಲು, ಸೆಣಬಿನನಾರು, ಅಕ್ಕಿ ಮೊದಲಾದುವುಗಳಿಂದ ಮಾಡುವರು. ಹಳೆಯ ಕಾಗದದಿಂದಲೂ ಆಗುವುದುಂಟು.

(2), (3) ಯಂತ್ರದಿಂದ ಮಾಡುವುದು:—ಹರಕು ಬಟ್ಟೆಯನ್ನು ಚೂರು ಚೂರುಮಾಡಿ, ದೂಳುಕೊಡವಿ, ಸೋಡಾ, ಒಂದು ತರದ ಸುಣ್ಣ ಇವುಗಳೊಡನೆ ಕುದಿಸಿ, ಗಂಜಿಯಂತೆ ಮಾಡುವುದು. ಶಾಯಿ ಇಳಿಯದಂತೆ ಗಟ್ಟಿಯಾಗಿರಲು ಒಂದು ತರದ ಅಂಟನ್ನು ಆ ಗಂಜಿಗೆ ಸೇರಿಸುವುದು. ಯಂತ್ರದಿಂದ ಮೂರು ಘಂಟೆಯಲ್ಲಿ ಮಾಡುವಷ್ಟು ಕಾಗದವು ಒಂದು ಮೈಲುದ್ದ.

ಕೈಯಿಂದ ಮಾಡುವುದು.—ಆ ಗಂಜಿಯನ್ನು ನೀರಿನೊಡನೆ ಕುದಿಸಿ ತಂತಿಯಿಂದ ಮಾಡಿದ ಒಂದು ಅಚ್ಚಿನೊಳಗೆ ಸುರಿವುದು. ಇದರಿಂದ ನೀರು ಹೋಗಿ ರೇಕು ಆಗುವುದು. ರೇಕನ್ನು ಕಂಬಳಿ ಮೇಲಿರಿಸಿ, ಬಟ್ಟೆಯನ್ನು ಮುಚ್ಚುವುದು. ಹೀಗೆ ರೇಕುಗಳನ್ನೆಲ್ಲ ಒಂದರಮೇಲೊಂದಿರಿಸಿ, ಒಂದು ಭಾರವಾದ ಅಚ್ಚಿಗೆ ಕೊಟ್ಟು ಒತ್ತಿ ಬಿಸಿಲಲ್ಲಿ ಒಣಗಿಸುವುದು.

(4) ಕರಡುಕಾಗದ, ಬರೆವ ಕಾಗದ, ಅಚ್ಚುಹಾಕುವ ಕಾಗದ, ಒತ್ತುವ ಕಾಗದ.

(5) ಚೀಣ, ಜಪಾನ್‌ನವರು ಅಕ್ಕಿಯಿಂದ ಹೇರಳವಾಗಿ ಕಾಗದಮಾಡುವರು. ಯೂರೋಪಿನಲ್ಲಿ ಕಾಗದಮಾಡಲು ಸಾವಿರಾರು ಯಂತ್ರಗಳಿವೆ. ಅಲ್ಲಿ ಕೂಲಿಮಾಡಿ ಲಕ್ಷಾಂತರ ಜನರು ಜೀವಿಸುವರು. ಕಾಗದಕ್ಕೆ ಬೇಕಾದ ಒಣಹುಲ್ಲು, ಚಿಂದಿಬಟ್ಟೆ ಮುಂತಾದುವನ್ನು ಒದಗಿಸುವವರು ಎಷ್ಟೋಮಂದಿ.

(6) ಅಚ್ಚುಹಾಕುವುದು, ಬರೆವಣಿಗೆ. ಚೀಣ, ಜಪಾನ್‌ಗಳಲ್ಲಿ ಕಾಗದದಿಂದ ಕೊಡೆ, ಕುಲಾಯಿ, ಉಡಿಗೆ, ಪಾತ್ರೆ, ಹಾಸಿಗೆ ಇವುಗಳನ್ನು ಮಾಡುವರು. ರಬ್ಬರು ಹಾಸಿಗೆಗಿಂತ ಈ ಹಾಸಿಗೆಯನ್ನು ಚಿಕ್ಕದಾಗಿ ಮಡಿಸಬಹುದು; ನೀರಿನಲ್ಲಿ ನೆನೆದರೂ ಅಂಟಿಕೊಳ್ಳುವುದಿಲ್ಲ. ಅಮೆರಿಕದಲ್ಲಿ ಹೊಗೆಬಂಡಿಯ ಚಕ್ರ, ನಾಟಕಶಾಲೆ ಇವುಗಳನ್ನು ಕಾಗದದಿಂದ ಮಾಡುವರು.

### ೫. (*b*) ಕಟ್ಟಡ.

(1) ಸಾಮಾನ್ಯವರ್ಣನೆ.
(2) ಇರುವಸ್ಥಳ.
(3) ಕಟ್ಟಿದುದು ಹೇಗೆ? ಅದರ ಚರಿತ್ರೆ—ಕಟ್ಟಿದ ಶಿಲ್ಪಿ—ಅದಕ್ಕೆ ಆಧಾರವಾದ ಉಪಕಾರಿ.
(4) ಆಕಾರ: ಹೊರಗೆ; ಒಳಗೆ.
(5) ಬೇರೆ ಬೇರೆ ಭಾಗಗಳು, ಕಟ್ಟಡದರೀತಿ, ಅಳತೆ.
(6) ವಿಶೇಷ ಸಂಗತಿಗಳು.
(7) ಉಪಯೋಗ.

---

### ೬. (*a*) ದೇಶ, ಜಿಲ್ಲೆ, ಪಟ್ಟಣ.

(1) ಹೆಸರು: ಅದರ ಅರ್ಥ; ಹೇಗೆ ಬಂದಿತು?
(2) ಮೇರೆ: ಸ್ವಾಭಾವಿಕವಾದ ಅನುಕೂಲ್ಯಗಳು, ವಾಯುಗುಣ, ನದಿ, ಬೆಟ್ಟ, ಸಮುದ್ರತೀರ, ಪ್ರಾಣಿ ಮುಂತಾದುದು.

(3) ಅಭಿವೃದ್ಧಿ: ಅದಕ್ಕೆ ಕಾರಣ.
(4) ಜನರು: ಅವರ ಸಂಖ್ಯೆ,ವಿದ್ಯಾಭ್ಯಾಸ, ಸ್ವಭಾವ,ಮತ ಇತ್ಯಾದಿ.
(5) ಉತ್ಪತ್ತಿ, ಕೈಗಾರಿಕೆ, ವ್ಯಾಪಾರ, ಆಮದು, ರಫ್ತು.
(6) ರೈಲು ಮತ್ತು ಸಾಮಾನ್ಯರಸ್ತೆ.
(7) ಇತರ ಪಟ್ಟಣಗಳು, ದೇಶಗಳು, ಅಥವಾ ಜಿಲ್ಲೆಗಳು ಇವುಗಳೊಡನೆ ಸಂಬಂಧ.
(8) ಪ್ರಸಿದ್ಧ ಪುರುಷರು.
(9) ಮುಂದೆ ಯಾವ ಸ್ಥಿತಿಗೆ ಬರಬಹುದು ?

**ಸೂಚನೆ:**—ಪ್ರಬಂಧದ ಜತೆಯಲ್ಲಿ ನಕ್ಷೆ ಬರೆವುದು. ಪಟ್ಟಣವನ್ನು ವರ್ಣಿಸುವಾಗ ನಕ್ಷೆಯಲ್ಲಿ ಹತ್ತಿರ ಇರುವ ರೇವು, ರೈಲುರಸ್ತೆ, ಬೇರೆ ರಸ್ತೆ, ಇವನ್ನೂ ತೋರಿಸಬೇಕು.

## ೬. (*b*) ನದಿ, ಪರ್ವತ.

(1) ಮೇರೆ.
(2) ಸ್ವರೂಪವರ್ಣನೆ:—

ನದಿ: ಹುಟ್ಟುವಸ್ಥಳ, ಮುಖ, ಪಾತ್ರ, ಉದ್ದ, ಎಷ್ಟು ದೂರ ದೋಣಿಯಿಂದ ಪ್ರಯಾಣಕ್ಕೆ ಯೋಗ್ಯ ? ಶಾಖೆಗಳು, ಉಪನದಿಗಳು.

ಪರ್ವತ: ಎತ್ತರ, ಪ್ರತ್ಯೇಕವಾಗಿದೆಯೇ, ಒಂದು ಪಙ್ಕ್ತಿಯ ಭಾಗವೇ; ಪಙ್ಕ್ತಿಯಲ್ಲಿ ಇತರ ಶಿಖರಗಳು; ಮೇಲ್ಭಾಗದ ಸ್ವರೂಪ; ಸಂತತವಾಗಿ ಮಂಜು ಇರುವ ಎತ್ತರ.

(3) ಸಮೀಪದ ಮುಖ್ಯಪಟ್ಟಣಗಳು; ಅವುಗಳ ಪ್ರಾಮುಖ್ಯ ಮತ್ತು ಕೈಗಾರಿಕೆ.
(4) ಹವ, ಮಳೆ, ವ್ಯವಸಾಯ, ಕೈಗಾರಿಕೆ, ದೋಣಿಯ ಮೇಲೆ ಸಂಚಾರ, ಇವುಗಳಿಗೆ ಆಗುವ ಪ್ರಯೋಜನ.
(5) ನೋಟ: ಇಂಥ ಇತರ ಪ್ರದೇಶಗಳೊಡನೆ ಹೋಲಿಕೆ.

**ಸೂಚನೆ:**—ಇಲ್ಲಿಯೂ ಒಂದು ನಕ್ಷೆ ಬೇಕು. ಏನಾದರೂ ವಿಶೇಷ ಸಂಗತಿಗಳು ತೋರಿದರೆ ಬರೆಯಬಹುದು. ಗಂಗೆ, ಕಾವೇರಿ ಮೊದಲಾದುವನ್ನು ವರ್ಣಿಸುವಾಗ ಅವುಗಳ ವಿಷಯದಲ್ಲಿ ಹಿಂದೂಜನರ ಭಕ್ತಿಯನ್ನೂ, ನೈಲನ್ನು ವರ್ಣಿಸುವಾಗ ಈಜಿಪ್ಟ್ ದೇಶಕ್ಕೆ ಆ ನದಿಯೇ ಗತಿಯಾಗಿರುವುದನ್ನೂ ಹೇಳಬೇಕು.

## II. ವೃತ್ತಾಂತಕಥನ (Narrative Composition).

ಯಾವುದಾದರೂ ಒಂದು ನಡೆದ ಅಥವಾ ಕಲ್ಪಿತವಾದ ಸಂಗತಿಯನ್ನು ಕುರಿತು ಬರೆವುದು. ಅಂಥ ಸಂಗತಿಗಳಲ್ಲಿ ಮುಖ್ಯವಾದ ಕೆಲವನ್ನು ಇಲ್ಲಿ ಬರೆದಿದೆ.

**(a) ಕಥೆ:—**

1. ಕಟ್ಟುಕಥೆ (Fable).
2. ಪುರಾಣದ ಕಥೆ. ಉದಾ.—
   ಹರಿಶ್ಚಂದ್ರನ ಕಥೆ ; ಶಿಬಿ ಚಕ್ರವರ್ತಿಯ ಕಥೆ ; ಸಾವಿತ್ರಿಯ ಚರಿತೆ.
3. ಚರಿತ್ರೆಗೆ ಸಂಬಂಧಿಸಿದ ಕಥೆ. ಉದಾ.—
   ಸುರಾಜದೌಲನು ಇಂಗ್ಲಿಷರನ್ನು ಕತ್ತಲೆಮನೆಯಲ್ಲಿ ಸೆರೆಹಾಕಿದ್ದು ; ಶಿವಾಜಿ ಅಬ್ಸಲ್‌ಖಾನನ್ನು ಕೊಂದದ್ದು.

**(b) ಆಟ:**—ಚಿಣ್ಣಿಕೋಲು, ಕಾಲ್ಚೆಂಡು, ಕ್ರಿಕೆಟ್ಟು.

**ಜಾತ್ರೆ:**—ತೇರು, ಮೇಲ್ಕೋಟೆ ವೈರಮುಡಿ; ಮೈಸೂರು ನವರಾತ್ರಿಯುತ್ಸವ.

**ಕರ್ಮ:**—ಮದುವೆ, ಮುಂಜಿ, ಶ್ರಾದ್ಧ.

**ಹಬ್ಬ:**—ನವರಾತ್ರಿ, ದೀಪಾವಳಿ, ವಿನಾಯಕನ ಚೌತಿ.

**ಸಭೆ:**—ಪ್ರಜಾಪ್ರತಿನಿಧಿ ಸಭೆ, ಮ್ಯುನಿಸಿಪಲ್ ಮೀಟಿಂಗು ಮೊದಲಾದುವು ಸೇರಿ ನಡೆಸಿದಕಾರ್ಯಗಳ ವಿಷಯದಲ್ಲಿ ರಿಪೋರ್ಟು.

**(c) ಚರಿತ್ರೆ:—**

1. **ಕಾಳಗ:**— ತಾಳಿಕೋಟೆಯುದ್ಧ, ಪಾಟ್ನಾ ಯುದ್ಧ.
2. **ದಂಗೆ:**— ವೇಲೂರುದಂಗೆ, 1857ರಲ್ಲಿ ನಡೆದ ಸಿಪಾಯಿದಂಗೆ.
3. **ದೊರೆಯ ಆಳಿಕೆ:**—ಶಿವಾಜಿ, ಅಕ್ಬರ್.
4. **ಒಂದು ಕಾಲ:**—ಹೈದರಲ್ಲಿಯ ಕಾಲದಲ್ಲಿ ಮೈಸೂರಿನ ಸ್ಥಿತಿ.

**(d) ಪ್ರಸಿದ್ಧ ಪುರುಷರ ಜೀವನಚರಿತೆ:—**

ಬುದ್ಧ, ಕಾಳಿದಾಸ, ಹೈದರಲ್ಲಿ, ಕ್ಲೈವು.

(*a*) 1. ಈಸೋಪನ ಕಥೆಗಳಂಥ ಕಟ್ಟುಕಥೆಗಳ ತಾತ್ಪರ್ಯವನ್ನು ಸೂಕ್ಷ್ಮವಾಗಿ ತಿಳಿಸಿದರೆ ಕಥೆಯನ್ನು ಲಂಬಿಸಿ ಬರೆವುದು. ಇಂಥ ಕಥೆಗಳು ನೀತಿಬೋಧಕವಾಗಿರುವುದರಿಂದ, ನೀತಿ ತೋರತಕ್ಕ ಭಾಗಗಳನ್ನು ಚೆನ್ನಾಗಿ ವಿವರಿಸಿ ಬರೆಯಬೇಕು. ಕೊನೆಯಲ್ಲಿ ಆ ನೀತಿಯನ್ನೂ ಸೂಚಿಸಬೇಕು.

## ಸಿಂಹವೂ ಇಲಿಯೂ.

ಒಂದು ಸಿಂಹವು ಬಳಲಿ ಗುಹೆಯಲ್ಲಿ ನಿದ್ರೆಮಾಡುತ್ತಿತ್ತು—ಒಂದು ಇಲಿ ಅದರ ಮೇಲೆ ಹರಿಯಿತು—ಸಿಂಹವು ಥಟ್ಟನೆ ಎದ್ದು ಇಲಿಯನ್ನು ಕೊಲ್ಲಹೋಯಿತು. ಇಲಿ ಬೇಡಿಕೊಂಡಿತು—ಸಿಂಹವು ಅಷ್ಟು ದೊಡ್ಡ ಪ್ರಾಣಿ, ಇಲಿ ಅಲ್ಪ ಜಂತು—ಸಿಂಹದ ಒಪ್ಪಿಗೆ—ಸ್ವಲ್ಪಕಾಲದ ಮೇಲೆ ಸಿಂಹವು ಬಲೆಯಲ್ಲಿ ಸಿಕ್ಕಿಬಿದ್ದಿತು-ಇಲಿ ಅದನ್ನು ಬಿಡಿಸಿತು.

ತೋರುವ ನೀತಿ:—ಉಪಕಾರಕ್ಕೆ ಪ್ರತ್ಯುಪಕಾರ ಮಾಡಬೇಕು.

2. ಪುರಾಣದ ಕಥೆಯನ್ನೂ ಚರಿತ್ರೆಗೆ ಸಂಬಂಧಿಸಿದ ಕಥೆಯನ್ನೂ ಬರೆವಾಗ ಕೆಲಸಕ್ಕೆಬಾರದ ಅಲ್ಪವಿಷಯಗಳಿಗೆ ವಿಶೇಷ ಅವಕಾಶಕೊಡದೆ ಕಥೆಯ ಮುಖ್ಯಭಾಗವನ್ನು ಸ್ಪಷ್ಟಪಡಿಸುವುದು. ಪುರಾಣದ ಕಥೆಯು ಬೋಧಿಸುವ ನೀತಿಯನ್ನೂ ವಿವರಿಸಬೇಕು.

---

## (b) ಕಾಲ್ಚೆಂಡಿನ ಪಂತ (A Football Match).

ಇದರ ವಿಷಯದಲ್ಲಿ ಮೊದಲು ಗುರುತು ಹಚ್ಚಿಕೊಳ್ಳಬೇಕಾದ ಮುಖ್ಯಾಂಶಗಳು:—

1. ಪೀಠಿಕೆ. 2. ಪಂತದ ವರ್ಣನೆ. 3. ಸಮಾಪ್ತಿ.

ಹೀಗೆ ಹೆಗ್ಗುರುತುಗಳನ್ನು ದೂರ ದೂರ ಬರೆದ ಬಳಿಕ ಸಣ್ಣಸಣ್ಣ ಅಂಶಗಳನ್ನು ಆಲೋಚಿಸಿ ನಡುನಡುವೆ ಸೇರಿಸಬೇಕು. ಹೇಗೆಂದರೆ:—

1. ಪೀಠಿಕೆ:—ಕಾಲ್ಚೆಂಡಾಟದ ಪ್ರಾಬಲ್ಯ-ಬಹುಮಾನಕ್ಕಾಗಿ ನಡೆವ ಪಂತಗಳು-ಯಾರು ಯಾರಿಗೆ ?-ಮೈಸೂರು ಕಾಲೇಜಿನವರಿಗೂ ಬೆಂಗಳೂರು ಕಾಲೇಜಿನವರಿಗೂ-ಇವರಿಬ್ಬರಿಗೂ ಬಹಳ ಪೋಟಾಪೋಟಿ-ಈಸಲ ಎಲ್ಲರಿಗೂ ಅತ್ಯಾದರ-ಅದಕ್ಕೆ ಕಾರಣ: ನಾಲ್ಕು ವರ್ಷಗಳಿಂದ ಆಡಿದುದರಲ್ಲಿ ಎರಡು ವರ್ಷ ಒಬ್ಬರು ಗೆದ್ದಿರುವುದು, ಇನ್ನೆರಡು ವರ್ಷ ಇನ್ನೊಬ್ಬರು-ಕಾಲಸ್ಥಿತಿ: ಮಳೆಯಿಲ್ಲ, ಬಿಸಿಲೂ ಇಲ್ಲ; ನೋಡ-ಅನುಕೂಲ.

2. ಪಂತದವರ್ಣನೆ:—ತಾರೀಕು-ಸ್ಥಳ-ನೋಡಲು ಬಂದಿದ್ದವರು--ಬೆಂಗಳೂರವರೇ ಮೊದಲು ಆಡುವಂತೆ ಆದುದು-ಆಟದ ಮುಖ್ಯ ಸಂಗತಿಗಳು : ಬಹಳ ಹೊತ್ತಾಡಿದರೂ ಮು-ಗಿಯದಿರುವುದು-ಬಂಗಳೂರವರು ಶಕ್ತರಾದುದರಿಂದ ಗೆದ್ದುದು.

3. ಸಮಾಪ್ತಿ (Conclusion):—ಇಂಥ ಆಟಗಳು ಚಟವಟಿಕೆ, ಸ್ಪರ್ಧೆ, ಐಕಮತ್ಯ ಇವುಗಳನ್ನು ಹೆಚ್ಚಿಸುವುವು-ಮೈಸೂರಿನವರಲ್ಲಿ ಸ್ವಲ್ಪ ಒಗ್ಗಟ್ಟು ಕಡಮೆ-ಅದರಿಂದ ಅವರ ಸೋಲು-ಅವರು ಸ್ವಾರ್ಥಪರತೆಯನ್ನು ಬಿಟ್ಟು ಎಲ್ಲರೂ ಒಟ್ಟಾಗಿ ನಡೆದುಕೊಳ್ಳಬೇಕು.

**ಸೂಚನೆ:**—ಒಂದು ಕಟ್ಟಡವನ್ನು ಕಟ್ಟುವಾಗ ಕಾಲಾವಧಿ ಬೇಕು. ಕಟ್ಟಡವು ಮುಗಿ-ದಮೇಲೆ ಅದು ಬೇಡ. ಹಾಗೆಯೇ ಮೇಲೆ ಹೇಳಿದ ಹೆಗ್ಗುರುತುಗಳು ಪ್ರಬಂಧವನ್ನು ಸರಿಯಾಗಿ ಬರೆವುದಕ್ಕೆ ಮೊದಲು ಬೇಕೇ ಹೊರತು, ಅದನ್ನು ಬರೆದಮೇಲೆ ಇವುಗಳಿಂದ ಪ್ರಯೋಜನವಿಲ್ಲ. ಈ ಹೆಗ್ಗುರುತುಗಳನ್ನೂ ಪ್ರಬಂಧದಲ್ಲಿ ಬರೆಯಕೂಡದು. ಈ ಪಟ್ಟಿಯನ್ನು ಸ್ವಲ್ಪವೂ ತಪ್ಪದೆ ಅನುಸರಿಸಬೇಕಾದುದೂ ಇಲ್ಲ. ಪ್ರಬಂಧವನ್ನು ಬರೆವಾಗ ಈ ಪಟ್ಟಿಯಲ್ಲಿಲ್ಲದ ಹೊಸವಿಷ-ಯಗಳನ್ನೂ ತಕ್ಕಕಡೆ ಸೇರಿಸಬಹುದು. ಮಾದರಿಗಾಗಿ ಕಾಲ್ಚೆಂಡಿನ ಪಂತದ ವಿಷಯಕ್ಕೆ ಪಟ್ಟಿ-ಯನ್ನು ಕೊಟ್ಟಿದೆ. ಉಳಿದ ವಿಷಯಗಳಿಗೂ ಹೀಗೆಯೇ ಪಟ್ಟಿಯನ್ನು ನಿರ್ಮಿಸಿಕೊಳ್ಳಬೇಕು.

(c) ಯಾವುದಾದರೂ ಕಾಳಗವನ್ನು ಕುರಿತ ಪ್ರಬಂಧವು ಈ ಮುಂದಣ ಸಂಗತಿಗಳನ್ನು ಒಳಗೊಂಡಿರಬೇಕು:—

1. ಕಾಳಗ ನಡೆದ ಕಾಲ.

2. ಪೀಠಿಕೆ:—ಕಾರಣ-ಸಾಮಾನ್ಯಕಾರಣ-ತಾತ್ಕಾಲಿಕ ಕಾರಣ-ಯಾವ ವಿಷಯಗಳಲ್ಲಿ ಜಗಳ ಹುಟ್ಟಿದುದು ?

3. ಕಾಳಗ ನಡೆವುದಕ್ಕೆ ಮುಂಚೆಯಿದ್ದ ಸಂದರ್ಭಗಳು

(1) ಯುದ್ಧರಂಗ: ಇದು ಮೈದಾನವೇ, ಕಾಡೇ?_ಬೆಟ್ಟದ ಜರಿಯೇ, ತಟ್ಟೆಯಾದ ನೆಲವೇ?

(2) ಹೋರಾಡುವ ಕಕ್ಷಿಗಳು :
ಅವರ ಜಾತಿ, ಸ್ಥಿತಿ, ಸಂಖ್ಯೆ-ಕಾಲಾಳು, ರಾವುತರು, ಆಯುಧಪಾಣಿಗಳು-ಸೇನಾನಾಯಕರು.

(3) ಸೈನ್ಯಗಳು ಆಕ್ರಮಿಸಿಕೊಂಡ ಭೂಮಿ-ಇದರ ಗುಣಾವಗುಣಗಳು.

4. ಕಾಳಗ:—(a) ದಿನದಲ್ಲಿ ಯಾವಾಗ-ಕಾಲಸ್ಥಿತಿ-ಎಷ್ಟು ಹೊತ್ತಿನವರೆಗೆ ? (b) ಯುದ್ಧದ ವಿವರ- ಅದರ ಫಲಿತಾಂಶಕ್ಕೆ ಮೂಲ ಕಾರಣವಾದ ಸಂಗತಿ. (c) ಎರಡು ಕಡೆಯೂ ಆದ ನಷ್ಟ.

5. ಫಲಿತಾಂಶ:—ತಾತ್ಕಾಲಿಕ ಫಲ-ಎರಡು ಕಕ್ಷ್ಯಗಳಿಗೂ ಆದ ಫಲ-ಶಾಶ್ವತ ಫಲ.

**ಸೂಚನೆ:**—ಯುದ್ಧರಂಗಕ್ಕೂ ರಾಜಧಾನಿಗೂ ಇರುವ ದೂರವನ್ನೂ ಹತ್ತಿರ ಇರುವ ಸಮುದ್ರತೀರವನ್ನೂ ತೋರಿಸುವಂತೆ ಒಂದು ಸುವಾರಾದ ನಕ್ಷೆಯನ್ನು ಬರೆವುದು. ಒಬ್ಬ ದೊರೆಯ ಆಳಿಕೆ ಮೊದಲಾದುವನ್ನು ಕುರಿತು ಬರೆಯಲು ಚರಿತ್ರೆಯ ಸಹಾಯ ತುಂಬಾ ಬೇಕು. ಇಲ್ಲಿ ಜ್ಞಾಪಕದಲ್ಲಿಡಬೇಕಾದಂಶಗಳು ಯಾವುವೆಂದರೆ:—ಮುಖ್ಯಾಮುಖ್ಯವಾದ ಅಂಶಗಳ ವಿವೇಚನೆ ಮಾಡಬೇಕು, ಇಸವಿಗಳನ್ನು ಸೂಚಿಸಿ ಕಾಲಕ್ರಮಾನುಸಾರವಾಗಿ ಬರೆವುದು. ಮುಖ್ಯವಾದೊಂದಂಶವನ್ನೂ ಬಿಡಬಾರದು. ಲೇಖಕನ ಸ್ವಾಭಿಪ್ರಾಯವು ಕೊನೆಯ ವಾಕ್ಯಬೃಂದದಲ್ಲಿ ಬರೆಯತಕ್ಕುದು, ಮತ್ತು ನಿಷ್ಪಕ್ಷಪಾತವಾಗಿರಬೇಕು.

---

## ಅಕ್ಬರಿನ ಆಳಿಕೆ.

### ಇದರ ಸಾರಾಂಶಗಳ ಪಟ್ಟಿ.

1. ಅಕ್ಬರು ಸಿಂಹಾಸನಕ್ಕೆ ಬಂದಾಗ ಮೊಗಲಾಯಿ ರಾಜ್ಯದ ಸ್ಥಿತಿ-ಆವಿಭಾಗದಲ್ಲಿ ಮುಖ್ಯವಾಗಿ ದಂಡಯಾತ್ರೆಗಳನ್ನು ಮಾಡಿದುದು-ಹೊಸದಾಗಿ ಜಯಿಸಿ ಸೇರಿಸಿಕೊಂಡ ದೇಶಗಳು.
2. ರಾಜ್ಯವನ್ನು ಸ್ಥಿರಪಡಿಸಿ ಸಮಾಧಾನಕ್ಕೆ ತಂದುದು.
3. ಆತನ ರಾಜ್ಯತಂತ್ರ; ಹಿಂದುಗಳನ್ನೂ ಮುಸಲ್ಮಾನರನ್ನೂ ಅವನು ಕಾಣುತ್ತಿದ್ದ ರೀತಿ.
4. ಆತನ ಮತವಿಷಯಕವಾದ ಅಭಿಪ್ರಾಯ; ಮತವಿಷಯಕವಾದ ಚರ್ಚೆಗಳಲ್ಲಿ ಅತಿ ಕುತೂಹಲ.
5. ಪ್ರಜೆಗಳ ಶ್ರೇಯೋಭಿವೃದ್ಧಿಗೂ ತಿದ್ದುಪಾಟಿಗೂ ಆತನು ಮಾಡಿದ ಪ್ರಯತ್ನ.
6. ಆತನ ಆಳಿಕೆಯಿಂದ ಮೊಗಲ್ ಚಕ್ರಾಧಿಪತ್ಯಕ್ಕೆ ಪ್ರಯೋಜನ.
7. ಸಮಾಪ್ತಿ.

(d) ಒಬ್ಬ ಪ್ರಸಿದ್ಧಪುರುಷನ ಜೀವನಚರಿತ್ರೆಯನ್ನು ಬರೆವುದರಲ್ಲಿ ಈ ಕೆಳಗಣ ಅಂಶಗಳು ಬಂದರೆ ಸಾಕು. ಪ್ರತಿಯೊಂದು ಹೆಗ್ಗುರುತೂ ಒಂದೊಂದು ವಾಕ್ಯಬೃಂದವಾಗುವುದು.

(1) ಹುಟ್ಟಿದ ದಿನ, ಸ್ಥಳ-ವಂಶ-ಸುತ್ತಮುತ್ತಲಸಂದರ್ಭ.-ಬಡವನೇ ಭಾಗ್ಯವಂತನೇ?. ಆತನ ಪೂರ್ವದವರಲ್ಲಿ ಪ್ರಸಿದ್ಧರಾಗಿದ್ದವರು.

(2) ಚಿಕ್ಕಂದಿನಲ್ಲಿದ್ದ ಸ್ಥಿತಿ-ವಿದ್ಯಾಭ್ಯಾಸ-ಮುಖಭಾವ-ಚಿಕ್ಕಂದಿನಲ್ಲಿಯೇ ತೋರಿಬಂದ ದೊಡ್ಡತನದ ಚಿಹ್ನೆಗಳು.

(3) ಆತನು ಮೊದಲು ಮನಸ್ಸಿನಲ್ಲಿ ಮಾಡಿಕೊಂಡಿದ್ದ ವೃತ್ತಿ-ಅದಕ್ಕೆ ಯೋಗ್ಯತೆ-ಕೊನೆಗೆ ಯಾವ ಕಾರಣಗಳಿಂದ ಹೇಗೆ ಪರಿಣಾಮ ?

(4) ಜೀವಮಾನ-ಯಾವ ದೊಡ್ಡ ಕೆಲಸಗಳಿಂದ ಹೆಸರುಗೊಂಡದ್ದು ?

(5) ಕೊನೆಗಾಲ-ಸತ್ತ ಸ್ಥಳ ಮತ್ತು ಕಾಲ.

(6) ಸಾಮಾನ್ಯವಿಚಾರ : ಸ್ವಭಾವ, ಸಾಮರ್ಥ್ಯಗಳ ವಿಷಯಗಳಲ್ಲಿ ಲೇಖಕನಿಗೆ ತೋರುವುದು-ಹೋಲಿಕೆಗಳು-ಆತನ ಕಾಲದಲ್ಲಿದ್ದವರು, ಆ ಮೇಲೆ ಬಂದವರು, ಇವರಿಗೆ ಆತನ ಜೀವಮಾನದಿಂದ ಫಲ.

(7) ಉಚಿತವಾದ ಗ್ರಂಥಸ್ಥವಚನ.

**ಸೂಚನೆ:**—ಒಬ್ಬನ ಜೀವನಚರಿತೆಯನ್ನು ಬರೆವಾಗ "ಅವನು" ಅಥವಾ "ಆತನು" ಎಂಬ ಪದವನ್ನು ಪ್ರತಿವಾಕ್ಯದ ಆದಿಯಲ್ಲಿಯೂ ಒಂದೇ ವಿಧವಾಗಿ ಬರೆಯಬಾರದು.

## III. ವಿಮರ್ಶನ (Reflective Composition).

ಇದುವರೆಗೂ ಚರ್ಚಿಸಿದ ವಿಷಯಗಳು ಇಂದ್ರಿಯಗೋಚರವಾದ ವಸ್ತುಗಳನ್ನೂ ವೃತ್ತಾಂತಗಳನ್ನೂ ಕುರಿತವುಗಳು; ಇದು ಮನೋಭಾವಗಳನ್ನೂ ವಸ್ತುಧರ್ಮಗಳನ್ನೂ ಕುರಿತದ್ದು. ಸ್ನೇಹ, ದಯೆ, ಧೈರ್ಯ, ತಾಳ್ಮೆ, ಕೋಪ, ದ್ವೇಷ, ಅಹಂಕಾರ, ಭಯ, ನೀತಿ ಮುಂತಾದುವು ಕಣ್ಣಿಗೆ ಕಾಣುವುದಿಲ್ಲವಷ್ಟೆ. ಇವುಗಳ ವಿಷಯವಾಗಿ ಬರೆಯಲು ಬಹಳ ಅನುಭವ ಬೇಕು. ಏಕೆಂದರೆ, ಇದು ನಡೆದ ಸಂಗತಿಯನ್ನು ನಡೆದಹಾಗೂ, ಇದ್ದಸ್ಥಿತಿಯನ್ನು ಇದ್ದಹಾಗೂ ಬರೆವಂತೆಯಲ್ಲ. ಸ್ವಬುದ್ಧಿಬಲದಿಂದಲೇ ಬಹಳ ವಿಚಾರಮಾಡಿ, ತೋರಿದ ಅಭಿಪ್ರಾಯಗಳನ್ನು ಬರೆಯಬೇಕು. ಆದುದರಿಂದ ಈ ತರದ ಪ್ರಬಂಧವನ್ನು ಬರೆವುದು ಕಠಿನವು. ಪರೀಕ್ಷೆಗಳಲ್ಲಿ ಕೊಡತಕ್ಕ ವಿಷಯಗಳು ವಿಶೇಷವಾಗಿ ಇಂಥವುಗಳೇ. ಇಂಥ ವಿಷಯಗಳಲ್ಲಿ ಯಾವುದನ್ನು ಕೊಟ್ಟರೂ ಅನುಕೂಲಿಸುವಂತೆ ಒಂದೇ ವಿಧವಾದ ಪಟ್ಟಿಯನ್ನು ಹಿಂದಿನಂತೆ ಇಲ್ಲಿಯೂ ಹೇಳಿಕೊಡಲಾಗುವುದಿಲ್ಲ; ಏಕೆಂದರೆ, ಒಂದೊಂದು ವಿಷಯವನ್ನು ಕುರಿತು ಒಂದೊಂದು ಕ್ರಮವನ್ನನುಸರಿಸಿ ಬರೆಯಬೇಕಾಗುವುದು. ಆದರೂ ಈ ಕೆಳಗೆ ಬರೆದಿರುವ ಅಂಶಗಳನ್ನು ಇಂತಹ ಪ್ರಬಂಧಗಳೆಲ್ಲ ಪ್ರಾಯಶಃ ಒಳಗೊಂಡಿರಬೇಕು:—

(1) **ಅರ್ಥವಿವರಣೆ:**—ಕೊಟ್ಟ ವಿಷಯದ ಅರ್ಥವನ್ನು ಸುಲಭವಾದ ಶಬ್ದಗಳಿಂದ ವಿವರಿಸುವುದು. ಒಂದು ಪರ್ಯಾಯಪದವನ್ನು ಕೊಟ್ಟರೆ ಸಾಲದು. ಕೊಟ್ಟ ಶಬ್ದದಿಂದ ಹುಟ್ಟಿದ ಶಬ್ದಗಳು ಯಾವುವೂ ಅರ್ಥವಿವರಣೆಯಲ್ಲಿ ಬರಬಾರದು. "ಧೈರ್ಯವೆಂದರೆ ಧೀರತೆ ಅಥವಾ ಧೀರತ್ವ," "ಧೈರ್ಯವೆಂದರೆ ಧೀರನಾಗಿ ಕೆಲಸಮಾಡುವ ಗುಣ" ಎಂಬ ವಿವರಣೆಗಳಿಂದ ಏನೂ ಫಲವಿಲ್ಲ. 'ಬಂದ ಅಪಾಯಗಳಿಗೆ ಹೆದರದೆ ಇದಿರುಬಿದ್ದು ಅವುಗಳನ್ನು ನಿವಾರಿಸಿಕೊಳ್ಳಲು ತಕ್ಕ ಪ್ರಯತ್ನಮಾಡುವ ಗುಣವು ಧೈರ್ಯವೆನಿಸುವುದು" ಎಂದು ಹೇಳಿದರೆ, ಧೈರ್ಯವೆಂಬುದು ಇಂಥದು ಎಂದು ತಿಳಿಯಬರುವುದು.

(2) **ಲೇಖಕನ ಅಭಿಪ್ರಾಯ:**— ಇದು ಬಲು ಮುಖ್ಯವು. ಮೊದಲು ವಿಚಾರಮಾಡದೆ ಬರೆದು ಆಮೇಲೆ ಯೋಚಿಸಿ ಅದಕ್ಕೆ ವಿರುದ್ಧವಾಗಿ ಬರೆಯಬಾರದು. "ಆಸೆ"ಯ ವಿಷಯದಲ್ಲಿ ಬರೆವಾಗ, "ಆಸೆಯಂಥ ದುರ್ಗುಣವು ಲೋಕದಲ್ಲಿ ಯಾವುದೂ ಇಲ್ಲ. ಇದನ್ನೆಲ್ಲರೂ ಬಿಡಬೇಕು." ಎಂಬಾಶಯವನ್ನು ಮೊದಲು ಕೊಟ್ಟು, ಕೊನೆಗೆ ಪರ್ಯಾಲೋಚಿಸಿ, "ಆಸೆಯಿರುವುದು ಕೆಲವೇಳೆ ಒಳ್ಳೆಯದು; ಇದರಿಂದ ಮನುಷ್ಯರ ಏಳಿಗೆಗೆ ಮಾರ್ಗವಾಗುವುದು" ಎಂದು ಬರೆಯಬಾರದು.

(3) **ಆ ಅಭಿಪ್ರಾಯಕ್ಕೆ ಕಾರಣಗಳು:**—ಲೇಖಕನ ಅಭಿಪ್ರಾಯಗಳಿಗೆ ತಕ್ಕ ಕಾರಣಗಳನ್ನು ಕೊಡಬೇಕು. ಒಂದು ವಿಷಯವು ಒಳ್ಳೆಯದು, ಅಥವಾ ಕೆಟ್ಟುದು, ಯಾವಾಗಲೂ ಎಲ್ಲೆಡೆಯಲ್ಲಿಯೂ ಉಪಯುಕ್ತವು ಅಥವಾ ಕೆಲವುವೇಳೆ ಕೆಲವುಕಡೆ ಮಾತ್ರ ಪ್ರಯೋಜನಕರವೆಂದು ಅಭಿಪ್ರಾಯಪಟ್ಟರೆ, ಅದಕ್ಕೆ ತಕ್ಕ ಪ್ರಮಾಣಗಳನ್ನು ಕೊಡಬೇಕು.

(4) **ದೃಷ್ಟಾಂತ:**—ಚರಿತ್ರೆಯ ಒಂದು ಸಂಗತಿಯನ್ನಾಗಲಿ, ಚಿಕ್ಕ ಕಥೆಯನ್ನಾಗಲಿ, ಗ್ರಂಥದಿಂದೆತ್ತಿದ ವಚನವನ್ನಾಗಲಿ, ಲೋಕೋಕ್ತಿಯನ್ನಾಗಲಿ ಸಂದರ್ಭಕ್ಕೆ ತಕ್ಕಂತೆ ಉದಾಹರಣೆಯಾಗಿ ತೆಗೆದುಕೊಳ್ಳಬೇಕು.

(5) **ಸಮಾಪ್ತಿ:**—ಕೊಟ್ಟವಿಷಯದಿಂದ ತೋರುವ ಬುದ್ಧಿವಾದವನ್ನು ವಿವರಿಸುವುದು. ದೀರ್ಘವಾದ ಪ್ರಬಂಧಗಳಲ್ಲಿ ಕೆಲವರು ಹಿಂದೆ ಹೇಳಿದ್ದ ಅಂಶಗಳನ್ನೆಲ್ಲ ಇಲ್ಲಿ ಸಂಕ್ಷೇಪಿಸಿ ಮತ್ತೆ ಹೇಳುವುದುಂಟು.

ಪ್ರಬಂಧದಲ್ಲಿ ತಕ್ಕಕಡೆ ಉಪಮೆ, ರೂಪಕ, ದೃಷ್ಟಾಂತ, ಸ್ವಭಾವೋಕ್ತಿ ಮೊದಲಾದ ಕೆಲವು ಅಲಂಕಾರಗಳನ್ನು ಪ್ರಯೋಗಿಸಿದರೆ ಬೇಸರ ತಪ್ಪಿ ಅದು ಆಹ್ಲಾದಕರವಾಗುವುದು: ಆದರೆ ಅತಿಶಯೋಕ್ತಿ, ಉತ್ಪ್ರೇಕ್ಷೆ, ಶ್ಲೇಷೆ ಮುಂತಾದುವು ಕೂಡದು.

ಪ್ರತಿಯೊಂದು ಪ್ರಬಂಧದ ಆದಿಯೂ ಅಂತವೂ ಒಂದೊಂದು ವಾಕ್ಯಬೃಂದದಿಂದಾಗಿರಬೇಕು. ಮಧ್ಯಭಾಗದಲ್ಲಿ ಕೊಟ್ಟ ವಿಷಯವನ್ನೂ ಕಾಲವನ್ನೂ ಅನುಸರಿಸಿ ಒಂದು ಅಥವಾ ಹೆಚ್ಚು ವಾಕ್ಯಬೃಂದಗಳಿರಬಹುದು. ಆದ್ಯಂತಗಳು ಪ್ರಬಂಧದ ಅತಿಕಠಿನವಾದ ಭಾಗಗಳು. ಇವುಗಳನ್ನು ಚೆನ್ನಾಗಿ ಬರೆಯಲು ಬಲುಜಾಗ್ರತೆ ಬೇಕು. ಆದಿಯ ವಾಕ್ಯಬೃಂದವು ಬಲು ಉದ್ದವಾಗಿರಬಾರದು. ಮಧ್ಯಭಾಗದಲ್ಲಿ ಪ್ರಾರಂಭಿಸಬೇಕಾದ ಪ್ರಬಂಧಕ್ಕೆ ತಕ್ಕ ಸಂಕ್ಷಿಪ್ತವಾದ ಪೀಠಿಕೆಯ ರೂಪದಲ್ಲಿರಬೇಕು.

ಈ ವಿಧದ ಪ್ರಬಂಧಕ್ಕೆ ಕೆಲವು ವೇಳೆ ಒಂದು ನೀತಿವಚನವನ್ನು, ನೀತಿಪದ್ಯವನ್ನು ಇಲ್ಲವೆ ಲೋಕೋಕ್ತಿಯನ್ನು ಕೊಟ್ಟಾಗ ಅವುಗಳ ಅರ್ಥವನ್ನು ಒಂದೆರಡು ಮಾತುಗಳಲ್ಲಿಯೇ ಸಂಗ್ರಹಿಸಿಕೊಂಡು ಮುಖ್ಯ ತಾತ್ಪರ್ಯವನ್ನು ವಿವರಿಸುವುದು. ಉದಾ:—

(1) **ಅತಿಸ್ನೇಹ ಗತಿ ಕೆಡಿಸಿತು.**

(2) **ಸ್ಥಾನದ ಬಲದಿಂ ಬೀಗದೊ |**
**ಡೇನಕ್ಕುಂ ಗುಣಮೆ ಮಾನ್ಯಮೆಲ್ಲಿದ್ದೊಡಮೇಂ ||**
**ಮಾನಾರ್ಹಮೆ ಮಾರ್ಜಾಲಂ |**
**ಮಾನವವಸತಿಯಂತಪುರದೊಳಿರ್ದುಂ ಕರಿವೋಲ್ ||**

(3) **ಮಾಡುವುದನಾಚಾರ, ಮನೆಯ ಮುಂದೆ ಬೃಂದಾವನ.**

ಇವುಗಳಿಂದ ಗ್ರಹಿಸಬೇಕಾದ ತಾತ್ಪರ್ಯಗಳಾವುವೆಂದರೆ:—

(1) ಅತಿಸ್ನೇಹದ ಕೆಡಕು, (2) ಗುಣವೇ ಪೂಜ್ಯವಾದುದು, (3) ಉಪದೇಶವೂ ನಡೆವಳಿಯೂ ಒಂದಾಗಿರಬೇಕು.

'ಸ್ತ್ರೀಯರಿಗೆ ಸ್ವಾತಂತ್ರ್ಯವನ್ನು ಕೊಡಬಹುದೆ?' 'ವಿಧವಾವಿವಾಹ,' 'ಸ್ತ್ರೀ ವಿದ್ಯಾಭ್ಯಾಸ,' 'ಯಾವ ಸಂದರ್ಭದಲ್ಲಿಯಾದರೂ ಸುಳ್ಳಾಡಬಹುದೆ?' 'ಸಮುದ್ರಯಾನ' ಇಂಥ ಚರ್ಚನೀಯಾಂಶಗಳೂ ಈ ತರದ ಪ್ರಬಂಧಕ್ಕೇ ಸೇರಿದುವು. ಇಂಥ ವಿಷಯಗಳನ್ನು ಕೊಟ್ಟರೆ, ಪ್ರಬಂಧದ ಮಧ್ಯಭಾಗದಲ್ಲಿ ಸಾಧಕವನ್ನೂ ಬಾಧಕವನ್ನೂ ಸಕಾರಣವಾಗಿ ತಿಳಿಸಬೇಕು. ಮೊದಲು ಸಾಧಕವನ್ನು ಒಂದು ವಾಕ್ಯಬೃಂದದಲ್ಲಿಯೂ, ಬಾಧಕವನ್ನು ಇನ್ನೊಂದರಲ್ಲಿಯೂ ಹೇಳಿ, ಇವಕ್ಕೆ ಕಾರಣಗಳನ್ನು ಕ್ರಮವಾಗಿ ಮತ್ತೆರಡು ವಾಕ್ಯಬೃಂದಗಳಲ್ಲಿ ಕೊಡಬಹುದು. ಅಥವಾ ಸಾಧಕ, ಅದಕ್ಕೆ ಕಾರಣ; ಆಮೇಲೆ ಬಾಧಕ, ಅದಕ್ಕೆ ಕಾರಣ, ಈ ಕ್ರಮವನ್ನಾದರೂ ಅನುಸರಿಸಬಹುದು. ಇವುಗಳಲ್ಲಿ ಮೊದಲನೆಯದೇ ಸಾಮಾನ್ಯವಾಗಿ ಒಳ್ಳೆಯದು: ಇದರಿಂದ ಪರಸ್ಪರ ತಾರತಮ್ಯವನ್ನು ಸ್ಪಷ್ಟಪಡಿಸಬಹುದು.

ಅಂತ್ಯಭಾಗದಲ್ಲಿ ಪ್ರಬಂಧವು ತನ್ನಷ್ಟಕ್ಕೆ ತಾನೇ ಕೊನೆಗಾಣುವಂತಿರಬೇಕು. ಮೇಲೆ ಕಂಡ ಚರ್ಚನೀಯಾಂಶಗಳನ್ನು ಕೊಟ್ಟಾಗ ಹಿಂದೆ ಹೇಳಿದ್ದ ವಿಚಾರಗಳನ್ನೆಲ್ಲಾ ಮತ್ತೆ ಹೇಳಿ ಅದರಿಂದ ಸಿದ್ಧವಾದ ನಿಷ್ಕರ್ಷೆಯನ್ನು ತಿಳಿಸಬೇಕು. ಇನ್ನು ಕೆಲವು ಪ್ರಬಂಧಗಳಲ್ಲಿ ಸಾರಾಲಂಕಾರದಂತೆ ಅತಿ ಮುಖ್ಯವಾದ ವಿಷಯವನ್ನು ಕೊನೆಯ ವಾಕ್ಯಬೃಂದದಲ್ಲಿ ಹೇಳಿದರೆ ಚೆನ್ನಾಗಿರುವುದು. ಶ್ರೇಷ್ಠವಾದ ಗ್ರಂಥದಿಂದೆತ್ತಿದ ಒಂದು ತಕ್ಕ ವಚನವನ್ನೂ ಪ್ರಬಂಧದ ಕೊನೆಯಲ್ಲಿ ಬರೆವುದುಂಟು.

ಈ ವಿಮರ್ಶನರೂಪ ಪ್ರಬಂಧಕ್ಕೆ ಸೇರಿದ ಕೆಲವು ವಿಷಯಗಳ ಸಾರಾಂಶಗಳನ್ನು ಮಾದರಿಗಾಗಿ ಮುಂದೆ ಕೊಟ್ಟಿದೆ. ಮಿಕ್ಕ ವಿಷಯಗಳಿಗೂ ಹೀಗೆಯೇ ಪಟ್ಟಿಗಳನ್ನು ಮೊದಲು ನಿರ್ಮಿಸಿಕೊಳ್ಳುವುದು.

## 1. ಬೇಸಗೆಯ ಪ್ರಾತಃಕಾಲ.

1. ಪ್ರಪಂಚದ ವಸ್ತುಗಳ ಮಧ್ಯೆ ಒಂಟಿಯಾಗಿರುವುದರ ಆನಂದ-ಮಧ್ಯಾಹ್ನದಲ್ಲಿರುವಂತೆ ಮುಂಜಾನೆ ಗದ್ದಲವಿಲ್ಲ. ಚಿತ್ತೈಕಾಗ್ರತೆಗೆ ಅವಕಾಶ.

2. ಬೇಸಗೆಯಲ್ಲಿ ಬೆಳಗ್ಗೆ ನೋಟದ ಸೊಗಸು-ನಿರ್ಮಲವಾದ ವಾಯುಮಂಡಲ-ನಿತ್ಯವೂ ನೋಡುವ ವಸ್ತುಗಳೇ ಹೊಸ ಹೊಳಪಿನೊಡನೆ ಕಾಣುವುವು-ಮಂದಮಾರುತ-ಪುಷ್ಪಗಳ ಸುಗಂಧ-ಕೋಗಿಲೆ, ನವಿಲು ಮೊದಲಾದುವುಗಳ ಕೂಗು.

3 ಮುಂಜಾನೆ ಏಳುವುದು ಒಳ್ಳೆಯದೆಂಬಮಾತಿಗೆ ಬೇಕಾದಷ್ಟು ಕಾರಣಗಳು-ಬೆಳಗಿನಗಾಳಿ ತಂಪು, ಉಲ್ಲಾಸಕರ-ರಾತ್ರಿಯ ನಿದ್ದೆಯಿಂದ ಮನಸ್ಸು ಶಾಂತವೂ ನಿಶ್ಚಲವೂ ಆಗಿರುವುದು-ಸಂತೋಷದೊಡನೆ ಆಲೋಚಿಸಲು ಮನಸ್ಸು ಓಡುತ್ತದೆ-ದಿನದಲ್ಲಿ ಮಾಡುವ ಕೆಲಸಕ್ಕೆ ಮೂಲಾಧಾರ.

4. ಇಂಥ ಆನಂದವು ಬಲು ಶ್ಲಾಘ್ಯವು-ಇದರ ಅನುಭವದಿಂದ ಯಾವ ನಷ್ಟವೂ ವ್ಯಸನವೂ ಇಲ್ಲ-ಹಿತವಾಗಿಯೂ ಸಮರ್ಪಕವಾಗಿಯೂ ಇರುವ ಸಂಸ್ಕಾರಗಳನ್ನು ಮನದಲ್ಲಿ ಉಂಟು ಮಾಡುವುದು.

---

## 2. ನೈರ್ಮಲ್ಯ.

1. ಅರ್ಥವಿವರಣೆ-ಆರೋಗ್ಯವನ್ನು ಹೆಚ್ಚಿಸುವುದು-ಅಂತಶ್ಶುದ್ಧಿಯನ್ನೂ ಬಹಿಶ್ಶುದ್ಧಿಯನ್ನೂ ಕೊಡುವುದು-ನೈರ್ಮಲ್ಯವು ದೈವಭಕ್ತಿಗೆ ಎರಡನೆಯದು.

2. ಹಿಂದೂಗಳು ನೈರ್ಮಲ್ಯದ ವಿಷಯದಲ್ಲಿ ಬಲು ಜಾಗರೂಕರು-ಮುಸಲ್ಮಾನರೂ ತಕ್ಕ ಮಟ್ಟಿಗೆ ಹಾಗೆಯೇ, ಆದರೆ ಉಡುಪಿನ ನೈರ್ಮಲ್ಯಕ್ಕೆ ವಿಶೇಷ ಯತ್ನಿಸುವರು.

3. ನೈರ್ಮಲ್ಯವು ಗೌರವವನ್ನು ಕೊಡುತ್ತದೆ ; ಮನಸ್ಸನ್ನು ಆಕರ್ಷಿಸುವುದು.

4. ಕೆಲವು ಕೆಲಸಗಳಿಂದ ಕೊಳಕಾಗುವುದು ಸಿದ್ಧ ; ಅದನ್ನು ಒಡನೆಯೇ ತೊಳೆದು-ಕೊಳ್ಳಬೇಕು.

5. ಹೊರಗೆ ಬಲುಬೆಳ್ಳಗೆ ನಿರ್ಮಲವಾದ ಬಟ್ಟೆಗಳನ್ನುಟ್ಟು ಮನಸ್ಸಿನಲ್ಲಿ ಕಲ್ಮಷವಿದ್ದರೆ ಪ್ರಯೋಜನವಿಲ್ಲ-ಹೀಗಿರುವುದು ಮೋಸಗಾರಿಕೆ.

6. ಪ್ರತಿಗ್ರಾಮದಲ್ಲಿ ಈಗ ನೈರ್ಮಲ್ಯಕ್ಕೆ ಯತ್ನ ; ಅದಕ್ಕೆ ಕಾರಣ : ಸಮಾಪ್ತಿ.

---

## 3. ಅತಿಥಿಸತ್ಕಾರ.

1. ಐಹಿಕಸುಖಕ್ಕೆ ಪರಸ್ಪರ ಸಹಾಯ ಬೇಕು.

2. ಇದು ಎಲ್ಲಾ ವರ್ಣದವರಲ್ಲಿಯೂ ನಡೆವುದು-ಅಲ್ಪನಾಗರಿಕರೂ ಅನಾಗರಿಕರೂ ಕೂಡ ಇದೊಂದು ಸುಗುಣವೆಂದು ಭಾವಿಸುವರು-ಹಿಂದೂಗಳು ಇದನ್ನು ಪಂಚ ಮಹಾಯಜ್ಞ(ಪೂಜೆ)

ಗಳಲ್ಲಿ ಒಂದೆಂದು ಗಣಿಸುವರು-ಬಂದ ಅತಿಥಿಯನ್ನು ಸತ್ಕರಿಸದಿರುವುದು ಇವರಲ್ಲಿ ದೊಡ್ಡ ಪಾಪ-ಅತಿಕೀಳುಜಾತಿಯವರೂ ಆಚರಿಸುವರು.

3. ಉದಾಹರಣೆಗಳು.

4. ನಾಗರಿಕತೆ ಹೆಚ್ಚಿದಷ್ಟೂ ಅತಿಥಿಸತ್ಕಾರದಲ್ಲಿ ಪಾರಮಾರ್ಥಿಕತೆ ಕಡಮೆಯಾಗಿ ಕೇವಲ ಪ್ರತಿಫಲೇಚ್ಛೆಯೇ ಉಂಟಾಗುವುದು.

5. ಸಮಾಪ್ತಿ.

---

## 4. ಬೈಸಿಕಲ್.

1. ಸಾಧಾರಣ ಹಣಗಾರರಿಗೂ ಬಲು ಉಪಯುಕ್ತ.

2. ಹೆಚ್ಚು ಖರ್ಚಿಲ್ಲದೆ ಕುದುರೆ ಸವಾರಿಯ ಪ್ರಯೋಜನಗಳನ್ನುಂಟುಮಾಡುವುದಲ್ಲದೆ ಅದರಷ್ಟೇ ಅಂಗಸಾಧನೆ ಕೊಡುವುದು. ಕಾಲವನ್ನು ಬಹಳ ಮಿಗಿಸುವುದು.

3. ಸ್ವದೇಶದ ನೋಟಗಳನ್ನೆಲ್ಲ ನೋಡಲು ಎಲ್ಲರಿಗೂ ಅವಕಾಶ ಕೊಡುವುದು.

4. ಅದರ ಮೇಲೆ ನೆಟ್ಟಗೆ ಕುಳಿತುಕೊಳ್ಳುವುದರಿಂದ ಮೈಗೆ ಬಲಕೊಡುವುದು. ಎದೆಯನ್ನು ಅಗಲಿಸುವುದು.

5. ತಿಳಿದವರಿಗೆ ಬಲು ಅನುಕೂಲ-ತಿಳಿಯದವರಿಗೆ ಹಾನಿಕರ.

6. ಈಗ ಇಂಡಿಯಾದಲ್ಲಿನ ದೊಡ್ಡ ಪಟ್ಟಣಗಳಲ್ಲಿ ಬೈಸಿಕಲಮೇಲೆ ಆಸೆ ಅತಿ ಬಲ; ಸಮಾಪ್ತಿ.

---

## 5. ಸಮುದ್ರಯಾನ.

(a) ಶಬ್ದಾರ್ಥ-ಅನೇಕ ಶತಮಾನಗಳಿಂದಲೂ ಪಶ್ಚಿಮದೇಶಗಳಲ್ಲಿ ಉಂಟು.

(b) ಪ್ರಯೋಜನಗಳು.

೧. ಅಮೆರಿಕ, ಇಂಡಿಯ ಮೊದಲಾದುವು ಪಾಶ್ಚಾತ್ಯರಿಗೆ ತಿಳಿಯಬಂದುವು.

೨. ವ್ಯಾಪಾರವೂ ನಾಗರಿಕತೆಯೂ ಹೆಚ್ಚಿದುವು.

(c) ಹಿಂದೂಗಳಲ್ಲಿ ಇದು ನಿಷಿದ್ಧ. ಕಾರಣಗಳು:-

1. ಮೈಗೆ ಒಂಟುವುದಿಲ್ಲ, ತಲೆ ತಿರುಗುವುದು, ವಾಂತಿ.

2. ಮತಕ್ಕೆ ವಿರುದ್ಧವಾಗಿ ತಿಂಡಿತೀರ್ಥಗಳ ಸೇವನೆ; ಇದರಿಂದ ಜಾತಿ ಸಾಂಕರ್ಯ.

3. ವೃದ್ಧಾಚಾರವಿಲ್ಲ.

(d) ಆಕ್ಷೇಪಣೆಗಳಿಗೆ ಸಮಾಧಾನ :-

1. ಪ್ರಾರಂಭದಲ್ಲಿ ಸ್ವಲ್ಪ ಅಶಕ್ತಿಯಾಗಬಹುದು; ಅಭ್ಯಾಸವಾದರೆ ಎಲ್ಲರಿಗೂ ಸರಿಹೋಗುವುದು.

2. ಮಾಂಸಭಕ್ಷಣ, ಮದ್ಯಪಾನ ಇವುಗಳಿಗೆ ಹೋಗದೆ ನಿತ್ಯಕಟ್ಟಿಯ ಆಹಾರವನ್ನೇ ತೆಗೆದುಕೊಳ್ಳುವ ಏರ್ಪಾಡು ಮಾಡಿಕೊಳ್ಳಬಹುದು. ಆಚಾರಭಾಗದಲ್ಲಿ ಶಾಸ್ತ್ರಾರ್ಥವನ್ನು ಕಾಲಾನುಗುಣವಾಗಿ ಸಂಕೋಚಮಾಡಬೇಕು. ಈಗಿನ ರೈಲ್ ಪ್ರಯಾಣದಲ್ಲಿಯೂ, ಕರ್ಮಾಚರಣೆಯಲ್ಲಿಯೂ ಹೀಗೆ ನಡೆಯುತ್ತಿಲ್ಲವೆ ? ಅದಕ್ಕೆಲ್ಲ ದೊಡ್ಡವೈದಿಕರೇ ಸುಮ್ಮನಿಲ್ಲವೆ ?

3. ಕೆಲವು ನಿದರ್ಶನಗಳಿಂದ ಹಿಂದೂಗಳಲ್ಲಿ ಇದು ಪೂರ್ವದಲ್ಲಿತ್ತೆಂದು ತೋರುವುದು.

(*e*) ಈಗ ಹಿಂದೂಗಳಲ್ಲಿ ಸಮುದ್ರಯಾನ ಮಾಡಿಬಂದವರ ಪಾಡು.

(*f*) ಮುಂದೆ ಹೇಗೆ ಪರಿಣಮಿಸಬಹುದು ?

**ಸೂಚನೆ:**—ಕೆಲವು ಪ್ರಬಂಧಗಳಲ್ಲಿ ವಸ್ತುವರ್ಣನವೂ ವೃತ್ತಾಂತ ಕಥನವೂ, ವೃತ್ತಾಂತ ಕಥನವೂ ವಿಮರ್ಶನವೂ, ವಸ್ತುವರ್ಣನವೂ ವಿಮರ್ಶನವೂ ಈ ರೀತಿ ಯಥಾಸಂಭವವಾಗಿ ಕಲೆತಿರುವುವು.

ಉದಾ.— (1) ಒಂದು ಪ್ರಯಾಣ, (2) ಒಬ್ಬ ಪ್ರಸಿದ್ಧಪುರುಷನ ಜೀವನಚರಿತೆ, (3) ವಸಂತಕಾಲ, ವರ್ಷಾಕಾಲ.

ಮತ್ತು ಒಂದೇ ವಿಷಯವನ್ನು ಕುರಿತು ಬಗೆಬಗೆಯಾಗಿಯೂ ಬರೆಯಬಹುದು;— ರೈಲುಗಾಡಿ, ಕಟ್ಟಡ ಇವುಗಳನ್ನು ಕುರಿತು ಬರೆವಾಗ ಅವುಗಳ ಸ್ವರೂಪವನ್ನು ವಿವರಿಸುವುದು "ವಸ್ತುವರ್ಣನ"ಕ್ಕೆ ಸೇರುವುದು, ಅಲ್ಲದೆ ಅವುಗಳ ಉಪಯೋಗಗಳನ್ನು ವರ್ಣಿಸಿ, ಲೇಖಕನ ಸ್ವಾಭಿಪ್ರಾಯಗಳನ್ನು ಬರೆವುದು "ವಿಮರ್ಶನ"ವಾಗುವುದು. ಯಾವ ರೀತಿಯಲ್ಲಿ ಪ್ರಬಂಧ ಬರೆಯಬೇಕೆಂಬುದನ್ನು ಸಂದರ್ಭದಿಂದ ಗೊತ್ತುಮಾಡಿಕೊಳ್ಳಬೇಕು.

## ಪರೀಕ್ಷೆಯಲ್ಲಿ ಪ್ರಬಂಧವನ್ನು ಬರೆವಾಗ ಅನುಸರಿಸಬೇಕಾದ ವಿಶೇಷವಿಧಿಗಳು.

(1) ಎರಡು ಮೂರು ವಿಷಯಗಳನ್ನು ಕೊಟ್ಟು, ಯಾವುದಾದರೂ ಒಂದನ್ನು ಕುರಿತು ಬರೆಯಬೇಕಾಗಿದ್ದರೆ, ಅವುಗಳಲ್ಲಿ ಯಾವುದು ವಿದ್ಯಾರ್ಥಿಗೆ ಅತಿಸುಲಭವಾಗಿ ತೋರುವುದೋ ಅದನ್ನು ಆರಿಸಿಕೊಳ್ಳಬಹುದು. ಅವುಗಳಲ್ಲಿ ಅತಿಕಠಿನವಾದುದನ್ನು ಕುರಿತು ಬರೆಯಲು ತಕ್ಕ ಶಕ್ತಿಯಿದ್ದರೆ ಅದನ್ನೇ ಆರಿಸಿಕೊಳ್ಳುವುದುತ್ತಮ.

(2) ಆರಿಸಿಕೊಂಡ ವಿಷಯವನ್ನು ಕುರಿತು ಯೋಚಿಸಬೇಕೇ ಹೊರತು ಮಿಕ್ಕ ವಿಷಯಗಳನ್ನು ಆಲೋಚಿಸಬಾರದು. ಕ್ಲೃಪ್ತಕಾಲದ ಆರರ-

ಲ್ಲೊಂದು ಪಾಲಿನಲ್ಲಿ ಯೋಚಿಸಿ, ಹಿಂದೆ ಕೊಟ್ಟಿರುವ ಮಾದರಿಗಳಂತೆ, ತೋರಿದ ಅಭಿಪ್ರಾಯಗಳನ್ನು ಸೂಕ್ಷ್ಮವಾಗಿ ಪಟ್ಟಿಯ ರೂಪದಲ್ಲಿ ಬರೆದುಕೊಳ್ಳಬೇಕು. ಕೊಟ್ಟಕಾಲದ ಕೊನೆಯ ಆರರಲ್ಲೊಂದು ಭಾಗದಲ್ಲಿ, ಬರೆದ ಪ್ರಬಂಧವನ್ನು ತಿದ್ದುವುದು.

(3) ಕೊಟ್ಟ ವಿಷಯವನ್ನು ಪುಟದ ಮೇಲ್ಗಡೆ ನಡುವೆ ದಪ್ಪಕ್ಷರಗಳಲ್ಲಿ ಬರೆವುದು. ಪ್ರತಿ ಪುಟದಲ್ಲಿಯೂ ಎಡಗಡೆ ಒಂದೂವರೆಯಂಗುಲದಷ್ಟು ಮಡಿಸಿ ಅಲ್ಲಿ ಏನನ್ನೂ ಬರೆಯದೆ ಬರಿದಾಗಿ ಬಿಡಬೇಕು. ಪ್ರತಿಯೊಂದು ವಾಕ್ಯಬೃಂದದ ಮೊದಲನೆಯ ಪಙ್ಕ್ತಿಯನ್ನು ಮಿಕ್ಕ ಪಙ್ಕ್ತಿಗಳಿಗಿಂತ ಒಂದೆರಡಂಗುಲದಷ್ಟು ಬಲಕ್ಕೆ ಪ್ರಾರಂಭಿಸಬೇಕು. ಪ್ರತಿಪಙ್ಕ್ತಿಗೂ ಸುಮಾರು ಅರ್ಧ ಅಂಗುಲದ ಅಂತರವನ್ನು ಬಿಡಬೇಕು.

(4) ಹುಟ್ಟಕ್ಷರದಲ್ಲಿ ಬರೆವುದು. ಎಂದಿಗೂ ಮೋಡಿಯಲ್ಲಿ ಬರೆಯಬಾರದು. ಚಿತ್ತು ಮಾಡಬಾರದು. ಅಕ್ಷರಸಂಯೋಜನವು ತಪ್ಪಿಲ್ಲದಿರಬೇಕು. ವಿದ್ಯಾರ್ಥಿಗಳು ತಾವು ಬರೆದುದನ್ನು ತಾವು ಮಾತ್ರ ಓದುವುದಕ್ಕಾಗುವಂತೆ ಬರೆದರೆ ಸಾಲದು: ಅವರ ಬರಹವು ಇತರರು ಸಾಧಾರಣವಾಗಿ ಓದುವಂತಿರಬೇಕು.

(5) ಕ್ಲೃಪ್ತವಾದ ಪುಟಸಂಖ್ಯೆಯನ್ನು ಮೀರಬಾರದು. ಅಷ್ಟರಲ್ಲಿಯೇ ಬರೆಯಬೇಕಾದುದನ್ನೆಲ್ಲಾ ಸಂಗ್ರಹಿಸಿ ಬರೆಯಬೇಕು. ತಪ್ಪು ತಪ್ಪಾಗಿ ಹನ್ನೆರಡು ಪುಟಗಳವರೆಗೆ ಮನಸ್ಸುಬಂದಂತೆ ಗೀಚುವುದಕ್ಕಿಂತ ಎರಡು ಮೂರು ಪುಟಗಳಲ್ಲಿಯೇ ಹೇಳಬೇಕಾದುದನ್ನೆಲ್ಲ ಗರ್ಭೀಕರಿಸಿ ತಪ್ಪಿಲ್ಲದೆಯೂ ವಿಶದವಾಗಿಯೂ ಬರೆವುದು ಲೇಸು.

(6) ಶಬ್ದಸೌಷ್ಠವ, ಲಾಲಿತ್ಯ, ವಾಕ್ಯ, ವಾಕ್ಯಬೃಂದ ಇವುಗಳ ವಿಧಿಗಳನ್ನೆಲ್ಲ ನೆನಪಿನಲ್ಲಿಟ್ಟು ಅನುಸರಿಸಬೇಕು.

(7) ಲೇಖನ ಚಿಹ್ನೆಗಳನ್ನು ಪಯೋಗಿಸಬೇಕು.

(8) ಇಸವಿ, ದೊಡ್ಡಸಂಖ್ಯೆ, ಇವುಗಳನ್ನು ಬಿಟ್ಟು, ಬೇರೆ ಯಾವ ಸಂಖ್ಯೆಯನ್ನಾಗಲಿ ಅಕ್ಷಗದಲ್ಲಿ ಬರೆಯಬೇಕು.

(9) ವಿದ್ಯಾರ್ಥಿಯು ಬರೆವ ಪ್ರಬಂಧಗಳಲ್ಲಿ ತನ್ನನ್ನು ಕುರಿತು "ನಾನು" "ನನ್ನ" ಮೊದಲಾದ ಸರ್ವನಾಮಪದಗಳನ್ನು ಬರೆಯಕೂಡದು. ಅಲ್ಲದೆ "ನೀವು" "ನಿಮ್ಮ" "ತಾವು" "ತಮ್ಮ" ಮೊದಲಾಗಿ ಪರೀಕ್ಷಕರನ್ನು ಕುರಿತು ಪ್ರಯೋಗಿಸಲಾಗದು. "ನಾನು ಹೀಗೆ ಯೋಚಿಸುತ್ತೇನೆ" "ನಾನು ಈ ಮಾತನ್ನು ಒಪ್ಪಲಾರೆ" "ಈ ವಿಷಯವನ್ನು ಕೇಳಿದರೆ ತಮಗೆ ಆಶ್ಚರ್ಯವಾದೀತು" ಎಂದು ಬರೆಯಬಾರದು. ಈ ವಾಕ್ಯಗಳಿಗೆ ಬದಲು "ಕೆಲವರು ಹೀಗೆ ಯೋಚಿಸುವರು" "ಈ ಮಾತನ್ನು ಒಪ್ಪಲಾಗುವುದಿಲ್ಲ" "ಈ ವಿಷಯವನ್ನು ಕೇಳಿದರೆ ಯಾರಿಗಾದರೂ ಆಶ್ಚರ್ಯವಾದೀತು" ಎಂದು ಬರೆಯಬೇಕು.

"ಕಾಲ ಸಾಲದುದರಿಂದ ಇಲ್ಲಿಗೆ ನಿಲ್ಲಿಸಿದ್ದೇನೆ," "ಇನ್ನೂ ವಿಶೇಷವಾಗಿ ಬರೆಯುತ್ತಿದ್ದೆನು ; ದಯೆಯಿಟ್ಟು ಕ್ಷಮಿಸಬೇಕು." ಎಂದು ಕೊಟ್ಟ ಕಾಲವನ್ನು ದೂರುವುದೂ ಪರೀಕ್ಷಕರ ಕ್ಷಮೆಯನ್ನು ಬೇಡುವುದೂ ಎಂದಿಗೂ ಕೂಡದು.

# ಎರಡನೆಯ ಭಾಗ:

## ಪ್ರಬಂಧಗಳು.

**ಸೂಚನೆ:**—ಮುಂದೆ ಅರುವತ್ತು ಬೇರೆ ಬೇರೆ ವಿಷಯಗಳನ್ನು ಕುರಿತು ಪ್ರಬಂಧಗಳನ್ನು ಪೂರ್ತಿಯಾಗಿ ಬರೆದು ತೋರಿಸಿದೆ. ಇವುಗಳನ್ನುಪಯೋಗಿಸುವ ಕ್ರಮವೇನಂದರೆ: ಪ್ರಬಂಧವನ್ನು ಓದದೆ, ಪ್ರತಿವಿಷಯವನ್ನೂ ವಿದ್ಯಾರ್ಥಿಯು ತಾನೇ ಸಾವಧಾನವಾಗಿ ಯೋಚಿಸಿ, ತನಗೆ ತೋರಿದ ವಿಷಯಗಳನ್ನು ಹಿಂದೆ ಹೇಳಿರುವಂತೆ ಸೂಕ್ಷ್ಮವಾಗಿ ಪಟ್ಟಿಯ ರೂಪದಲ್ಲಿ ಗುರುತುಹಾಕಿಕೊಂಡು, ತರುವಾಯ ಆ ಪಟ್ಟಿಯನ್ನನುಸರಿಸಿ ಪ್ರಬಂಧವನ್ನು ಬರೆವುದು. ತನ್ನ ಪ್ರಬಂಧದಲ್ಲಿ ಬಿದ್ದಿರುವ ತಪ್ಪುಗಳನ್ನೆಲ್ಲ ತಿದ್ದಿ, ತನಗೆ ತಿಳಿದವುಟ್ಟಿಗೆ ಅದನ್ನು ನಾನಾವಿಧಗಳಲ್ಲಿಯೂ ಸರಿಮಾಡಿದ ಮೇಲೆ, ಆ ವಿಷಯವನ್ನು ಕುರಿತು ಇಲ್ಲಿ ಕೊಟ್ಟಿರುವ ಪ್ರಬಂಧವನ್ನು ಓದಬೇಕು. ಆ ಮೇಲೆ ಇದರ ಸಹಾಯದಿಂದ ತನ್ನ ಪ್ರಬಂಧವನ್ನು ಇನ್ನೂ ನೆಟ್ಟಗೆ ಮಾಡಿಕೊಳ್ಳಬಹುದಾಗಿ ತೋರಿದರೆ, ಹಾಗೆ ಮಾಡಬೇಕು. ಪ್ರಬಂಧರಚನೆಯ ಶಕ್ತಿಯನ್ನು ಹೀಗೆ ಕಷ್ಟಪಟ್ಟು ಸಂಪಾದಿಸಬೇಕಲ್ಲದೆ, ಇಲ್ಲಿ ಬರೆದಿರುವ ಪ್ರಬಂಧಗಳನ್ನು ಮೊದಲಿಂದ ಕೊನೆವರೆಗೂ ಕಂಠಪಾಠಮಾಡುವುದರಿಂದ ಏನೂ ಪ್ರಯೋಜನವಾಗಲಾರದು.

### 1. ಹಸು.

ಇದು ಸಕಲ ವಲಯಗಳಲ್ಲಿಯೂ ಹರಡಿಕೊಂಡಿರುವುದು. ಅತಿ ಶೀತವಾದ ಉತ್ತರಭಾಗದಲ್ಲಿ ಹೊರತು ಏಷ್ಯಾಖಂಡದ ಉಳಿದ ಎಲ್ಲಾ ಪ್ರದೇಶಗಳಲ್ಲಿಯೂ, ಆಫ್ರಿಕ, ಯೂರೋಪ್ ಖಂಡಗಳ ಮಧ್ಯ ದಕ್ಷಿಣ ಪ್ರದೇಶಗಳಲ್ಲಿಯೂ, ಅಮೆರಿಕಾ ಖಂಡದಲ್ಲಿಯೂ ವಿಶೇಷವಾಗಿರುವುದು.

ಹಸು ಬಲು ಮಟ್ಟಸವಾದ ಚತುಷ್ಪಾದವು. ಇದು ಮೂರರಿಂದ ಐದಡಿ ಎತ್ತರವಿರುತ್ತದೆ. ಇದಕ್ಕೆ ಕುತ್ತಿಗೆಯ ಕೆಳಗೆ ನೆಲದೊಗಲೆಂಬ ಚರ್ಮವು ಜೋಲಾಡುತ್ತಿರುವುದು. ಇದರ ಕಾಲುಗಳು ಸಣ್ಣವು ಮತ್ತು ಬಲವುಳ್ಳವು. ಕಾಲಿನ ಗೊರಸು ಎರಡುಪಾಲಾಗಿ ಸೀಳಿರುವುದು. ಬಾಲ ಉದ್ದವಾಗಿಯೂ ಬರುತಬರುತ ಮೊನೆಯಾಗಿಯೂ ಇರುವುದಲ್ಲದೆ ಅದರ ಕೊನೆಯಲ್ಲಿ ಕೂದಲಿನ ಗೊಂಚಲಿದೆ. ಹಿಂದೂ ದೇಶದಲ್ಲಿ ಅಮೃತಮಹಲ್, ನೆಲ್ಲೂರು, ಕಾಠೆವಾಡಿ ಎಂಬ ಮುಖ್ಯವಾದ ಮೂರುರಾಸಿನ

ಹಸುವುಂಟು. ಅಮೃತಮಹಲ್‌ರಾಸಿನ ಹಸುವು ಬಿಳಿದು. ಇದರ ಕೊಂಬುಗಳ ಉದ್ದ ಹೆಚ್ಚು; ಮೊದಲು ಊರ್ಧ್ವಮುಖವಾಗಿ ಹಿಂದಕ್ಕೆ ಬೆಳೆದು, ಅನಂತರ ಮುಂದಕ್ಕೆ ಮೊನೆಯಾಗಿ ಬಾಗುವುವು. ಇದಕ್ಕೆ ಅಗಲವಾದ ಎದೆಯೂ, ಉದ್ದವಾಗಿಯೂ ಅಗಲವಾಗಿಯೂ ಇರುವ ಬೆನ್ನೂ, ತೆಳುವಾದ ಹೊಟ್ಟೆಯೂ, ಬಲವುಳ್ಳ ಗುಂಡಾದ ಕಾಲುಗಳೂ ಇವೆ. ನೆಲ್ಲೂರಿನ ಹಸುಗಳಿಗೆ ಗಾತ್ರವಾದ ದೇಹವೂ, ಚಿಕ್ಕದಾಗಿಯೂ ದಪ್ಪವಾಗಿಯೂ ಇರುವ ಕೊರಳೂ, ಮೇಲುಮುಖವಾಗಿ ಬೆಳೆವ ಮೋಟಾದ ಕೊಂಬುಗಳೂ, ಉದ್ದವಾದ ಕಾಲುಗಳೂ ಇರುವುವು. ತಲೆ ಬಲುದಪ್ಪ. ಕಾಂಗವಾಡಿಯ ರಾಸಿಗೆ ಗಾತ್ರವಾದ ಆಕಾರವೂ, ಗುಂಡಾಗಿರುವ ಚಿಕ್ಕ ಕೊಂಬುಗಳೂ ವಿಶೇಷವು.

ಹಸು ಪರಮ ಸಾಧು. ಮಾಂಸಾಹಾರಿಯಲ್ಲ; ಹುಲ್ಲು, ಸೊಪ್ಪು, ಧಾನ್ಯಗಳನ್ನು ತಿಂದು ಜೀವಿಸುತ್ತದೆ. ಇದಕ್ಕೆ ಸಿಟ್ಟು ಬೇಗನೆ ಬರುವುದಿಲ್ಲ; ಬಂದಲ್ಲಿ ಕೊಂಬುಗಳಿಂದ ತಿವಿಯುವುದು. ಚಟವಟಿಕೆ ವಿಶೇಷವಾಗಿಲ್ಲ. ತಾಳ್ಮೆ ಬಹಳ. ಅಮೃತಮಹಲ್ ಜಾತಿಯ ಹಸುಗೆ ಕೋಪವೂ ಎಚ್ಚರಿಕೆಯೂ ಹೆಚ್ಚು. ಒಂದು ಸೇರಿಗಿಂತ ಹೆಚ್ಚು ಹಾಲು ಕರೆವುದು ಅಪೂರ್ವ. ನೆಲ್ಲೂರಿನ ರಾಸು ಬಹಳ ಸಾಧು. ಮೇಲುತರದ ಹಸುಗಳು ದಿನಕ್ಕೆ ಒಂಬತ್ತು ಸೇರು ಹಾಲನ್ನು ಕರೆಯುವುವು. ಕಾಂಗವಾಡಿಯ ಹಸುವೂ ಹೆಚ್ಚಾಗಿ ಹಾಲನ್ನು ಕೊಡುತ್ತದೆ. ಹಸು ಮೆಲುಕು ಹಾಕುವ ಪ್ರಾಣಿಯಾದುದರಿಂದ ಇದರ ಜಠರವೂ ಗಂಟಲೂ ವಿಜಾತೀಯವಾದುವು. ಜಠರವು ನಾಲ್ಕು ಭಾಗಗಳಾಗಿರುವುದು. ಹುಲ್ಲನ್ನು ಕೆಳಗಣ ಹಲ್ಲುಗಳಿಂದಲೂ ಮೇಲಣ ವಸಡಿನಿಂದಲೂ ಕಿತ್ತು ಹಲ್ಲುಗಳಿಂದ ಸ್ವಲ್ಪಮಟ್ಟಿಗೆ ಅಗಿದು ನುಂಗಿಬಿಡುವುದು. ಹೀಗೆ ತನಗೆ ಬೇಕಾದಷ್ಟು ತಿಂದಮೇಲೆ ಜಠರದಿಂದ ಆಹಾರವನ್ನು ಕೊಂಚಕೊಂಚವಾಗಿ ಬಾಯಿಗೆ ತಂದುಕೊಂಡು ಜೀರ್ಣವಾಗುವಂತೆ ಮೆಲ್ಲಮೆಲ್ಲಗೆ ಅಗಿದು ಮತ್ತೆ ನುಂಗುವುದು. ಇದಕ್ಕೆ ಮೆಲುಕು ಅಥವಾ ನೆಮರು ಹಾಕುವುದೆನ್ನುವರು.

ಹಸುವಿನಷ್ಟು ಉಪಯುಕ್ತವಾದ ಪ್ರಾಣಿ ಪ್ರಪಂಚದಲ್ಲಿ ಮತ್ತಾವುದೂ ಇಲ್ಲ. ಇದರ ಹಾಲಿನಿಂದ ಮೊಸರು, ಬೆಣ್ಣೆ, ತುಪ್ಪ ಆಗುತ್ತವೆ. ಹಾಲು

ಮಕ್ಕಳು ಮೊದಲುಗೊಂಡು ಎಲ್ಲರಿಗೂ ಪುಷ್ಟಿಯನ್ನು ಕೊಡುವ ಆಹಾರ. ಮನುಷ್ಯನ ದೇಹಪೋಷಣೆಗೆ ಬೇಕಾದ ವಸ್ತುಗಳೆಲ್ಲ ಹಾಲಿನಲ್ಲಿರುವುದರಿಂದ ವೈದ್ಯರು ಇದನ್ನು ಶ್ರೇಷ್ಠವಾದ ಆಹಾರವೆಂದು ಗಣಿಸುವರು. ಕಾಫಿ, ಟೀ ಮುಂತಾದ ಕಷಾಯಗಳೊಡನೆ ಹಾಲನ್ನು ಬೆರಸಿ ಅನೇಕರು ಸೇವಿಸುವರು. ಮೊಸರು ತುಪ್ಪಗಳನ್ನು ಊಟಮಾಡುವಾಗ ಪ್ರತಿದಿನವೂ ಉಪಯೋಗಿಸು-ವರು. ಮೊಸರಿಂದ ಮೈಗೆ ಬಲುತಂಪು. ತುಪ್ಪದಿಂದ ಮೇದೋವೃದ್ಧಿ-ಯಾಗಿ ತೇಜಸ್ಸು ಹೆಚ್ಚುವುದು. ಬೆಣ್ಣೆಯನ್ನು ರೊಟ್ಟಿಯೊಡನೆ ತಿನ್ನುವರು. ತುಪ್ಪದಿಂದ ಬಗೆಬಗೆಯ ಭಕ್ಷ್ಯಗಳನ್ನೂ ಮಿಠಾಯಿಗಳನ್ನೂ ಮಾಡುವರು. ಕೊಂಬುಮೂಳೆಗಳಿಂದ ಬಾಚಣಿಗೆ, ಭರಣಿ, ಗುಂಡಿ, ಕತ್ತಿಹಿಡಿ ಮೊದಲಾ-ದುವನ್ನು ಮಾಡುತ್ತಾರೆ. ಗೊರಸಿನಿಂದಲೂ, ಕಿವಿಗಳಿಂದಲೂ ಮರಗೆಲಸಕ್ಕೆ ಉಪಯುಕ್ತವಾಗುವ ವಜ್ರವಾಗುವುದು. ಹಸುವಿನ ಮಲಕ್ಕೆ ಸೆಗಣಿಯೆ-ನ್ನುವರು. ನಮ್ಮ ದೇಶದಲ್ಲಿ ಸೆಗಣಿ ಬಹಳ ಕೆಲಸಕ್ಕೆ ಬರುತ್ತದೆ. ಸೆಗಣಿ-ಯನ್ನು ಗುಂಡುಗುಂಡಾಗಿ ತಟ್ಟಿ ಒಣಗಿಸಿ ಬೆರಣಿಗಳಾಗಿ ಮಾಡಿ ಸೌದೆಗೆ ಬದಲು ವಿಶೇಷವಾಗಿ ಉರಿಸುವರು. ತುಂಬಾ ದನಕರುಗಳಿರುವವರು ಸೌದೆ-ಯಿಲ್ಲದೆ ಬೆರಣಿಗಳಿಂದಲೇ ಕಾಲಕ್ಷೇಪಮಾಡುವರು. ಸೆಗಣಿ ವಿಷಾಪಹರ-ವಸ್ತುವೆಂದು ಎಣಿಸಲ್ಪಟ್ಟಿರುವಂತೆ ಕಾಣುತ್ತದೆ. ಆದುದರಿಂದಲೇ ಬೆಳಗಾದ ಕೂಡಲೇ ಮನೆಯ ಮುಂದೆ ಸೆಗಣಿನೀರು ಹಾಕುವುದು, ಸೆಗಣಿಯಿಂದ ಮನೆಯನ್ನೆಲ್ಲಾ ಸಾರಿಸುವುದು ನಮ್ಮಲ್ಲಿ ವಾಡಿಕೆಯಾಗಿವೆ. ಇದಲ್ಲದೆ ಸೆಗಣಿಯನ್ನು ವಿಶೇಷವಾಗಿ ಹೊಲಗಳಿಗೂ ಗದ್ದೆಗಳಿಗೂ ಗೊಬ್ಬರಕ್ಕಾಗಿ ಹಾಕುವರು. ಹಸುವಿನ ಚರ್ಮವು ಕುದುರೆಯ ಮೇಲೆ ಹಾಕುವ ಸಾಮಾ-ನುಗಳಿಗೂ ಪಾದರಕ್ಷೆಗಳಿಗೂ ಬರುವುದು. ಇಂಗ್ಲೆಂಡಿನಲ್ಲಿ ಮನೆಯನ್ನು ಕಟ್ಟುವವರು ಗಾರೆಯೊಂದಿಗೆ ಹಸುವಿನ ಕೂದಲನ್ನು ಸೇರಿಸುತ್ತಾರೆಂದು ತಿಳಿಯಬರುತ್ತದೆ.

ಹಿಂದೂಗಳು ಹಸುವನ್ನು ದೇವತೆಯಂತೆ ಪೂಜಿಸುವರು. ಅದು ಬಲು ಉಪಯುಕ್ತವಾಗಿರುವುದೇ ಅದಕ್ಕೆ ಕಾರಣವೆಂತಲೂ, ಅದನ್ನು ಪೂಜಿಸು-ವುದು ಮೌಢ್ಯವೆಂತಲೂ ಅನ್ಯದೇಶೀಯರು ಹೇಳುವರು. ಇದು ಸರಿಯಲ್ಲ.

ಹಸುವೇನೋ ಬಲು ಉಪಯುಕ್ತವಾದುದೆಂಬಂಶವು ಎಲ್ಲರಿಗೂ ಗೊತ್ತು. ವಾಯವ್ಯಪ್ರಾಂತಗಳಲ್ಲಿ ಎಮ್ಮೆಯೂ ಹಸುವಿನಷ್ಟೇ ಉಪಯುಕ್ತವಾಗಿದ್ದರೂ ಎಮ್ಮೆಯನ್ನು ಏಕೆ ಪೂಜಿಸುವುದಿಲ್ಲ? ಸಂಸ್ಕೃತದಲ್ಲಿ ಹಸುವಿಗೆ "ಗೌಃ" ಎಂದು ಹೆಸರು. ಈ ಶಬ್ದಕ್ಕೆ ಭೂಮಂಡಲವೆಂದರ್ಥವು. ಹಿಂದೂಶಾಸ್ತ್ರಪ್ರಕಾರ ಹಸುವಿನ ದೇಹದ ಪ್ರತಿಯೊಂದು ಭಾಗದಲ್ಲಿಯೂ ಒಂದೊಂದು ಲೋಕವು ಒಂದೊಂದು ಅಧಿದೇವತೆಯೊಡನೆ ಇರುವುದು. ಆದುದರಿಂದ ದಾನಗಳಲ್ಲಿ ಗೋದಾನವೇ ಶ್ರೇಷ್ಠವಾದುದೆಂದು ಹಿಂದೂಗಳು ನಂಬಿರುವುದಲ್ಲದೆ, ಪಂಚಗವ್ಯವೆಂಬ ಅದರ ಗಂಜಲ ಮೊದಲಾದುವುಗಳನ್ನು ತಮ್ಮ ದೇಹಶುದ್ಧಿಗಾಗಿ ಬಳಸುವುದುಂಟು.

ಹಸು ಮುಸಲ್ಮಾನರಿಗೂ ಹಿಂದೂಗಳಿಗೂ ವಿರೋಧಕ್ಕೆ ಕಾರಣವಾಗಿದೆ. ಮುಸಲ್ಮಾನರು ಆಹಾರಕ್ಕಾಗಿ ಹಸುವನ್ನು ಕೊಲ್ಲುವರು. ಗೋವಧೆಯನ್ನು ಮಹಾಪಾತಕವೆಂದು ತಿಳಿದಿರುವ ಹಿಂದೂಗಳಿಗೆ ಇದು ಕೋಪವನ್ನುಂಟುಮಾಡಿ, ಇಬ್ಬರಿಗೂ ಕಲಹಗಳುಂಟಾಗಿ, ಅನೇಕರು ಹತರಾಗಿದ್ದಾರೆ. ಎಲ್ಲರಲ್ಲಿಯೂ ವಿದ್ಯೆ ಹೆಚ್ಚಿ, ಅಂತಃಕಲಹಗಳು ದೇಶಕ್ಷೋಭೆಗೆ ಕಾರಣಗಳೆಂತಲೂ, ಎಲ್ಲರೂ ಕ್ಷಮೆಯಿಂದ ಅವರವರ ಕಟ್ಟಳೆಗಳಿಗನುಸಾರವಾಗಿ ನಡೆದುಕೊಳ್ಳಬೇಕೆಂತಲೂ ತಿಳಿದುಕೊಂಡರೆ ಇಂತಹ ಕಲಹಗಳು ತೊಲಗುವುವು.

---

## 2. ಕುದುರೆ.

ಮನುಷ್ಯನು ವಾಸಿಸುವ ಎಡೆಗಳಲ್ಲೆಲ್ಲಾ ಪಳಗಿದ ಕುದುರೆ ಸಿಕ್ಕುತ್ತದೆ. ಕಾಡು ಕುದುರೆ ಟಾರ್ಟರಿ, ಉತ್ತರ ಅಮೆರಿಕಾ, ಷಾನ್, ಸೆಲಿಬಿಸ್ ದ್ವೀಪ, ಈ ಸೀಮೆಗಳಲ್ಲಿ ವ್ಯಾಪಿಸಿರುವುದು. ಕಾಡು ಕುದುರೆಯನ್ನು ಯಾವಜನರು ಯಾವಕಾಲದಲ್ಲಿ ಪಳಗಿಸಿದರೆಂದು ನಿರ್ಧರಿಸಲಾಗುವುದಿಲ್ಲ.

ಕುದುರೆಗಳಲ್ಲಿ ಅರಬ್ಬಿ, ಪೈಗೊ, ಜೂಜಿನ ಕುದುರೆ, ಗಾಡಿಯ ಕುದುರೆ ಮೊದಲಾದ ನಾನಾಜಾತಿಗಳುಂಟು. ಕುದುರೆಗಳ ಬಣ್ಣವು ಬಿಳುಪು, ಕಪ್ಪು, ಕೆಂಪು ಅಥವಾ ಮಿಶ್ರವಾಗಿಯೂ ಇರುವುದುಂಟು. ತಲೆಯು ಜಾತಿಗೆ

ತಕ್ಕಂತೆ ದೊಡ್ಡದಾಗಿಯೂ ಉದ್ದವಾಗಿಯೂ ಇದೆ. ಕಿವಿಗಳು ತಲೆಯ ಮೇಲೆ ನೆಟ್ಟಗೆ ನಿಂತಿವೆ. ಕುದುರೆಯ ಕಣ್ಣಿಗೆ ಹುಬ್ಬಿಲ್ಲ. ಮೇಲುರೆಪ್ಪೆಗೆ ಮಾತ್ರ ಕೂದಲು ಇದೆ. ತುಟಿಗಳು ಮಂದವಾಗಿಯೂ ಬೇಕಾದಕಡೆಗೆ ತಿರುಗಿಸುವಂತೆಯೂ ಇವೆ. ಮೂಗಿನ ಸೊಳ್ಳೆಗಳು ಅಗಲ. ಕುತ್ತಿಗೆ ಉದ್ದವಾಗಿ ಬಾಗಿದೆ. ಅದರ ಮೇಲೆ ಕೇಸರವೆಂಬ ಉದ್ದವಾದ ಕೂದಲುಗಳಿವೆ. ಬೆನ್ನು ಬಾಗಿದೆ. ಮೈ ಉದ್ದವಾಗಿಯೂ, ಅದರ ಮೇಲಿನ ಚರ್ಮವು ದಪ್ಪವಾಗಿಯೂ ಇದೆ. ಚರ್ಮದ ಮೇಲೆ ನುಣುವೂ ಹೊಳಪೂ ಇರುವ ಸಣ್ಣ ಕೂದಲುಗಳಿವೆ. ಬಾಲವು ದಪ್ಪ, ತುದಿಯಲ್ಲಿ ಕೂಚು, ಮತ್ತು ಜವಿಯೆಂಬ ಉದ್ದವಾದ ಕೂದಲುಳ್ಳದ್ದು. ಮುಂಗಾಲುಗಳು ನೆಟ್ಟಗೂ ಹಿಂಗಾಲುಗಳು ಸ್ವಲ್ಪ ಬಾಗಿಯೂ ಇವೆ. ಪಾದಗಳು ಎರಡು ಪಾಲಾಗಿ ಬಿರಿಯದೆ ಗುಂಡಾಗಿ ಉಂಡೆಯಾಗಿವೆ.

ಒಂದೊಂದು ಜಾತಿಯ ಕುದುರೆ ಒಂದೊಂದು ವಿಷಯದಲ್ಲಿ ಪ್ರಸಿದ್ಧಿ ಹೊಂದಿದೆ. ಅರಬ್ಬೀ ಕುದುರೆ ಹೆಚ್ಚು ಸೌಂದರ್ಯವುಳ್ಳದ್ದು. ಇದಕ್ಕೆ ಬಹಳ ಹಗುರವಾದ ಮೈಯೂ, ಉದ್ದವಾಗಿ ಕಮಾನಿನಂತಿರುವ ಕುತ್ತಿಗೆಯೂ,ದೀರ್ಘವಾಗಿ ತೆಳುವಾದ ಕಾಲುಗಳೂ ಇವೆ. ಈ ತರದ ಕುದುರೆಗೆ ಇರುವ ವೇಗವೂ ದಾರ್ಢ್ಯವೂ ಮತ್ತಾವಜಾತಿಯ ಕುದುರೆಗೂ ಇಲ್ಲ. ಜೂಜಿನಕುದುರೆಗೆ ಕಾಲು ಉದ್ದವು ಮತ್ತು ಕೃಶವು. ಮೈ ರೇಷ್ಮೆಯಂತೆ ಹೊಳೆವುದು. ಪೈಗೊ ಕುದುರೆ ಗಿಡ್ಡಾಗಿಯೂ ಬಲವಾಗಿಯೂ ಅಂದವಾಗಿಯೂ ಇದೆ. ಇದರ ಮೈ ಗುಂಡಾಗಿ ವಿಶೇಷ ಕೂದಲುಳ್ಳದ್ದು. ಗಾಡಿಕುದುರೆಯ ಕಾಲುಗಳು ದಪ್ಪ ಮತ್ತು ಮೋಟು. ಗೊರಸುಗಳು ದೊಡ್ಡವು. ನಾಲ್ಕೆತ್ತುಗಳು ಎಳೆವ ಭಾರವನ್ನು ಇದೊಂದೇ ಎಳೆವುದು;ಆದರೆ ಬೇಗನೆ ಓಡಲಾರದು.

ಕುದುರೆ ಬಹಳ ಬುದ್ಧಿಯುಳ್ಳ ಪ್ರಾಣಿ. ಇದಕ್ಕೆ ಜ್ಞಾಪಕಶಕ್ತಿ ಹೆಚ್ಚು. ಚೆನ್ನಾಗಿ ಸಾಕಿದರೆ ಒಡೆಯನಲ್ಲಿ ಬಹಳ ಪ್ರೀತಿತೋರಿಸುತ್ತದೆ; ಅವನನ್ನು ಎಂದಿಗೂ ಮರೆವುದಿಲ್ಲ; ಅವನಿಗೆ ಬಹಳ ವಿಧೇಯವಾಗಿರುತ್ತದೆ. ಒಡೆಯನ ಧ್ವನಿಯನ್ನು ತಿಳಿದುಕೊಳ್ಳಬಲ್ಲುದು. ಸಾಮಾನ್ಯವಾಗಿ ಕುದುರೆಯು ನಿಂತುಕೊಂಡೇ ನಿದ್ರಿಸುವುದು; ಕೆಲವೇಳೆ ಕಾಲುಚಾಚಿಕೊಂಡು ಮಲಗುವುದೂ

ಉಂಟು. ಹಸುವಿನಂತೆ ಮೆಲುಕು ಹಾಕುವುದಿಲ್ಲ. ಆಗಾಗ್ಗೆ ಸ್ವಲ್ಪ ಹುಲ್ಲನ್ನು ಅಗಿದೇ ನುಂಗುತ್ತದೆ. ಮೇಯುವಾಗ ಹುಲ್ಲನ್ನು ಕತ್ತರಿಸುತ್ತದೆ. ಹಸುವಿನಂತೆ ಕೀಳುವುದಿಲ್ಲ. ಕುದುರೆಯು ಒಂದು ವಿಜಾತೀಯವಾಗಿ ಗಂಭೀರವಾದ ದೀರ್ಘಧ್ವನಿಯನ್ನು ಮಾಡುತ್ತದೆ. ಇದನ್ನು ಕೆನೆಯುವುದೆನ್ನುವರು. ಕುದುರೆಯ ಕಿವಿ, ಕಣ್ಣು, ಮೂಗುಗಳು ಬಹು ಸೂಕ್ಷ್ಮಗಳು. ಇದಕ್ಕೆ ಸ್ವಲ್ಪ ಸದ್ದಾದರೂ ಕೇಳಿಸುತ್ತದೆ. ಕತ್ತಲೆಯಲ್ಲಿ ಮನುಷ್ಯನಿಗೆ ಕಾಣದ ವಸ್ತು ಕುದುರೆಗೆ ಕಾಣುತ್ತದೆ. ಕುದುರೆಯು ಮೂಗಿನಿಂದಲೇ ಉಚ್ಛ್ವಾಸನಿಶ್ವಾಸಗಳನ್ನು ಮಾಡುತ್ತದೆ. ಇದು ಬಹಳ ಆಯಾಸಗೊಂಡಾಗ ಮೂಗಿನ ಸೊಳ್ಳೆಗಳು ಅಗಲವಾಗುವುವೇ ಹೊರತು ಬಾಯಿ ತೆರೆವುದಿಲ್ಲ. ಮತ್ತು ಆಗ ನೆಲದ ಮೇಲೆ ಸ್ವಲ್ಪ ಹೊತ್ತು ಉರುಳಾಡಿದೊಡನೆ ಇದರ ಆಯಾಸವೆಲ್ಲಾ ಪರಿಹಾರವಾಗುವುದು. ಕುದುರೆ ಹೊಸ ಪದಾರ್ಥವನ್ನು ಕಂಡರೂ, ಅಪೂರ್ವವಾದ ಧ್ವನಿಯನ್ನು ಕೇಳಿದರೂ ಬೆದರುತ್ತದೆ. ಕಾಡುಕುದುರೆಗಳು ಸಾಮಾನ್ಯವಾಗಿ ಹಿಂಡು ಹಿಂಡಾಗಿರುವುವು. ಒಂದೊಂದು ಹಿಂಡಿಗೂ ಅನುಭವಶಾಲಿಯಾದ ಒಂದು ಗಂಡುಕುದುರೆ ನಾಯಕನಾಗಿರುವುದು. ಉಳಿದುವೆಲ್ಲಾ ಅದರ ಅಪ್ಪಣೆ ಮೀರಿ ನಡೆವುದಿಲ್ಲ. ಹುಲ್ಲು ನೀರು ಯಥೇಷ್ಟವಾಗಿರುವ ಸ್ಥಳಗಳಲ್ಲಿ ವಾಸಿಸುವುವು. ಕಾಡು ಕುದುರೆಯ ಆಹಾರವು ಹುಲ್ಲು ಮಾತ್ರ. ಸಾಕಿದ ಕುದುರೆಯು ಮುಲ್ಲಂಗಿ,ಮಸಾಲೆಸೊಪ್ಪು, ರೊಟ್ಟಿ, ಕಡಲೆ, ಹುರಳಿ, ಗೋಧಿ, ಹಿಂಡಿ ಮುಂತಾದುವನ್ನು ತಿನ್ನುತ್ತದೆ.

ಕುದುರೆಯನ್ನು ಬಹಳವಾಗಿ ಸವಾರಿಗೂ ಗಾಡಿಗಳನ್ನೆಳೆವುದಕ್ಕೂ ಉಪಯೋಗಿಸುವರು. ಇಂಗ್ಲೆಂಡ್ ಮೊದಲಾದ ಸೀಮೆಗಳಲ್ಲಿ ಇದರಿಂದ ಭೂಮಿಯನ್ನು ಉಳಿಸುತ್ತಾರೆ. ಸೈನ್ಯಕ್ಕೆ ಕುದುರೆಯು ಒಂದು ಮುಖ್ಯಾಂಗವಾಗಿದೆ. ಟಾರ್ಟರೀ ಜನರು ಇದರ ಮಾಂಸವನ್ನು ತಿನ್ನುವರಲ್ಲದೆ, ಇದರ ಹಾಲನ್ನೂ ಹಳಸಿದ ಹಾಲಿನಿಂದ ಮಾಡಿದ ರಸವಿಶೇಷವನ್ನೂ ಕುಡಿವರು. ಕುದುರೆಯ ಚರ್ಮದಿಂದ ಜೋಡು, ಜೀನು ಮೊದಲಾದ ಪದಾರ್ಥಗಳಾಗುತ್ತವೆ. ಕೇಸರ, ಬಾಲದ ಕೂದಲು ಇವುಗಳನ್ನು ಮೆತ್ತೆಗಳಿಗೂ ಪಿಟೀಲಿನ ಕಮಾನಿಗೂ ಉಪಯೋಗಿಸುವರು. ಮೂಳೆಯಿಂದ ಕತ್ತಿಯಹಿಡಿಗಳನ್ನೂ,

ಗೊರಸಿನಿಂದ ಗುಂಡಿ, ಭರಣಿ ಮುಂತಾದುವನ್ನು ಮಾಡುತ್ತಾರೆ. ಕುದು-ರೆಯ ಕೊಬ್ಬಿನಿಂದ ಸಾಬೂನು ಮೇಣದ ಬತ್ತಿಗಳಾಗುತ್ತವೆ.

## 3. ನಾಯಿ.

ನಾಯಿ ಸಕಲ ಭೂಭಾಗಗಳಲ್ಲಿಯೂ ಜೀವಿಸಬಲ್ಲುದು. ಇದು ಮನು-ಷ್ಯನಿಗೆ ಗೆಳೆಯನಂತೆಯೂ ಆಳಿನಂತೆಯೂ ನಡೆದುಕೊಳ್ಳುತ್ತ ಅವನಿರುವ ಕಡೆಗಳಲ್ಲೆಲ್ಲಾ ಇರುವುದು. ಊರು ನಾಯಿಗಳಲ್ಲದೆ ಕಾಡುನಾಯಿಗಳೂ ಉಂಟು ಊರುನಾಯಿ ಕಾಡುನಾಯಿಯ ಅಥವಾ ತೋಳದ ಸಂತತಿ-ಯೆಂದು ಕೆಲವರು ಹೇಳುವರು.

ನಾಯಿಗಳಲ್ಲಿ ಮನೆ ಕಾಯುವ ನಾಯಿ, ಮಂದೆನಾಯಿ, ಜೂಲು-ನಾಯಿ ಬೇಟೆನಾಯಿ ಮೊದಲಾದ ನಾನಾಭೇದಗಳುಂಟು. ನಾಯಿಗಳು ಬಣ್ಣದಲ್ಲಿ ಬೇರೆಬೇರೆಯಾಗಿವೆ. ಕೆಲವು ಕರಿಯವು, ಕೆಲವು ಕೆಂಪು, ಮತ್ತೆ ಕೆಲವು ಬಿಳಿಯವು. ನಾಯಿಯ ಹಲ್ಲುಗಳು ಮೂಳೆಯನ್ನು ಕೂಡ ನಗ್ಗು-ವಷ್ಟು ಗಟ್ಟಿ. ನಾಲಗೆ ಉದ್ದವಾಗಿ ನುಣುಪಾಗಿದೆ. ಮೂಗು ಕಿರಿದು. ಮುಟ್ಟಿದರೆ ತಣ್ಣಗಿರುವುದು. ಇದರ ಕತ್ತು ಉದ್ದವಾಗಿಲ್ಲ; ಆದರೂ ಇದು ತಲೆಯನ್ನು ಎತ್ತ ಬೇಕಾದರೂ ಅತ್ತ ತಿರುಗಿಸಬಲ್ಲುದು. ಇದರ ಚರ್ಮ ಮೈಗೆ ಬಿಗಿಯಾಗಿ ಅಂಟಿಕೊಂಡಿಲ್ಲದೆ ಸಡಿಲವಾಗಿದೆ. ಬಾಲವು ಡೊಂಕು. ಕಾಲುಗಳು ಬಲವಾಗಿಯೂ ಪಾದಗಳು ಗುಂಡಾಗಿಯೂ ಇವೆ. ಮುಂದಿನ ಪಾದಗಳಲ್ಲಿ ಬೆರಳುಗಳು ಐದೈದೂ ಹಿಂದಿನವುಗಳಲ್ಲಿ ನಾಲ್ಕು ನಾಲ್ಕೂ ಇವೆ. ಮುಂಗಾಲಿನ ಹೆಬ್ಬೆಟ್ಟುಗಳು ನಡೆವಾಗ ನೆಲಕ್ಕೆ ತಾಗುವುದಿಲ್ಲ. ಹಿಂಗಾಲುಗಳಲ್ಲಿ ಹೆಬ್ಬೆಟ್ಟುಗಳಿಲ್ಲ. ಬೆರಳನ್ನು ಊರಿಕೊಂಡು ನಡೆಯುತ್ತವೆ. ಅಂಗಾಲಿನಲ್ಲಿ ಮೆತ್ತಗಿರುವ ಮಾಂಸದ ಉಂಡೆಗಳಿವೆ ಇದರಿಂದ ನಡೆವಾಗ ಸದ್ದಾಗುವುದಿಲ್ಲ ಒಂದೊಂದು ಬೆರಳಿನಲ್ಲಿಯೂ ಬಾಗಿಕೊಂಡು ಬಲ-ವಾಗಿರುವ ಒಂದೊಂದು ಉಗುರಿದೆ.

ಮನುಷ್ಯೇತರ ಪ್ರಾಣಿಗಳಲ್ಲೆಲ್ಲಾ ನಾಯಿ ಅತ್ಯಂತ ಬುದ್ಧಿಶಾಲಿ. ಇದಕ್ಕೆ ಅನೇಕ ಕಾರ್ಯಗಳನ್ನು ಕಲಿಸಬಹುದು. ಜ್ಞಾಪಕಶಕ್ತಿ ಹೆಚ್ಚು. ಸಾಕುವವನ ಮಾತುಗಳನ್ನೂ ಕೈಸನ್ನೆಗಳನ್ನೂ ತಿಳಿದು ಅದರಂತೆ ನಡೆಯು-

ತ್ತದೆ. ಆತನಲ್ಲಿಯೂ ಆತನ ಜನರಲ್ಲಿಯೂ ಬಹಳ ಪ್ರೀತಿಯನ್ನು ತೋರಿಸುತ್ತದೆ. ಮಾಡಿದ ಉಪಕಾರವನ್ನು ಎಂದಿಗೂ ಮರೆಯದು. ಅನ್ನಹಾಕಿದವರ ಮನೆಯ ಮುಂದೆಯೇ ಬಿದ್ದಿರುತ್ತದೆ. ಹೊಸಬರು ಯಾರನ್ನೂ ತನ್ನೊಡೆಯನ ಮನೆಗೆ ಬರಲೀಯದು. ಕಳ್ಳರು ಮನೆಯಹತ್ತರ ಸುಳಿದರೆ ಗಟ್ಟಿಯಾಗಿ ಬಗುಳಿ ಆತನನ್ನು ಎಚ್ಚರಿಸುವುದು. ಆತನಿಗಾಗಿ ಧೈರ್ಯದಿಂದ ಜಗಳವಾಡುವುದು. ಕೆಲವು ವೇಳೆ ಸಾಕಿದವನಿಗೋಸ್ಕರ ಪ್ರಾಣವನ್ನಾದರೂ ಬಿಡುವುದು. ನಾಯಿಯ ಕಣ್ಣೂ ಕಿವಿಯೂ ಬಹಳ ಸೂಕ್ಷ್ಮ; ಮೂಗು ಇವಕ್ಕಿಂತಲೂ ಸೂಕ್ಷ್ಮ. ನರಿ ಮೊಲ ನೊದಲಾದುವನ್ನು ವಾಸನೆಯಿಂದಲೇ ಕಂಡುಹಿಡಿವುದು. ಇದಕ್ಕೆ ಬೆವರು ನಾಲಗೆಯಲ್ಲಿ ಸುರಿವುದು. ಇದು ನೀರನ್ನು ನಾಲಗೆಯಿಂದ ನಕ್ಕಿ ಕುಡಿಯುತ್ತದೆ. ತಿಂಡಿ ತಿನ್ನುವಾಗ ಕೆಳಗಣ ದವಡೆಯನ್ನು ಮೇಲಕ್ಕೂ ಕೆಳಕ್ಕೂ ಅಲ್ಲಾಡಿಸುತ್ತದೆ; ಪಕ್ಕಗಳಿಗೆ ಅಲ್ಲಾಡಿಸುವುದಿಲ್ಲ. ಮಾಂಸಾಹಾರಿಯಾದರೂ ಅಪ್ಪಣೆಯಿಲ್ಲದೆ ಒಡೆಯನ ಕುರಿ ಕೋಳಿ ಮುಂತಾದುವುಗಳ ಗೋಜಿಗೆ ಹೋಗುವುದಿಲ್ಲ. ಹೊಗಳಿದಾಗ ಅಥವಾ ಸಂತೋಷವಾದಾಗ ಬಾಲವನ್ನು ಅಲ್ಲಾಡಿಸುತ್ತದೆ. ಯಾರಾದರೂ ತನ್ನನ್ನು ಗದರಿಸಿದರೆ, ಇಲ್ಲವೆ ತನಗೆ ಅವಮಾನವಾದರೆ ಬಾಲವನ್ನು ಹಿಂಗಾಲುಗಳ ನಡುವೆ ಮುದರಿಕೊಂಡು ಓಡುವುದು. ಕೋಪಬಂದಾಗ ಗುರುಗುಟ್ಟುತ್ತ ಹಲ್ಲುಗಳನ್ನು ತೋರಿಸುತ್ತದೆ. ಕೆಲವುವೇಳೆ ನಾಯಿಗಳಿಗೆ ಹುಚ್ಚು ಹಿಡಿವುದುಂಟು; ಆಗ ಅವು ಕಚ್ಚಿದರೆ ಜನರ ಪ್ರಾಣಕ್ಕೆ ಅಪಾಯವಾಗುತ್ತದೆ.

ನಾಯಿ ತನ್ನನ್ನು ಸಾಕುವವರ ಮನೆಯನ್ನು ನಂಬಿಕೆಯ ಆಳಿನಂತೆ ಯಾವಾಗಲೂ ಕಾದುಕೊಂಡಿರುತ್ತದೆ ಆ ಮನೆಯಲ್ಲಿ ಹಾವಳಿಮಾಡುವ ಇಲಿಗಳನ್ನು ಹಿಡಿದು ಕೊಲ್ಲುವುದು. ಕುರಿಗಳು ಚದರಿಹೋಗದಂತೆಯೂ ದುಷ್ಟ ಮೃಗಗಳು ಅವುಗಳ ಮೇಲೆ ಬೀಳದಂತೆಯೂ ಕುರಿಮಂದೆಯನ್ನು ಕಾಪಾಡುವುದು. ಬೇಟೆಗಾರನಿಗೆ ನಾಯಿಂದ ಬಹಳ ಪ್ರಯೋಜನವುಂಟು. ಕೆಲವುನಾಯಿಗಳು ನೀರಿನಲ್ಲಿ ಬಿದ್ದವರನ್ನು ಎತ್ತುತ್ತವೆ. ಇನ್ನು ಕೆಲವು ಹಿಮದಲ್ಲಿಬಿದ್ದು ಹೂತುಹೋಗಿ ಜ್ಞಾನತಪ್ಪಿರುವವರನ್ನು ವಾಸನೆಯಿಂದ ಕಂಡುಹಿಡಿದು, ಮುಚ್ಚಿಕೊಂಡಿರುವ ಹಿಮವನ್ನು ತೆಗೆದುಹಾಕಿ, ಅವರು

ಜೀವಿಸುವಂತೆ ಮಾಡುತ್ತವೆ. ಗ್ರೀನ್‌ಲೆಂಡ್ ದೇಶದಲ್ಲಿ ನಾಯಿಗಳನ್ನು ಗಾಡಿಗೆ ಕಟ್ಟುತ್ತಾರೆ ನಾಯಿ ಸತ್ತಮೇಲೆ ಅದರ ಮಾಂಸವನ್ನು ಕೆಲವರು ತಿನ್ನುವರು. ಚರ್ಮವನ್ನು ನಯಮಾಡಿ ಕೈಚೀಲ ಮುಂತಾದುವನ್ನು ಮಾಡುವುದುಂಟು ಮುಖ್ಯವಾಗಿ ನಾಯಿ ಮನುಷ್ಯನಿಗೆ ಅತ್ಯಂತೋಪಕಾರಿಯಾಗಿಯೂ ಕೃತಜ್ಞತೆಯುಳ್ಳದ್ದಾಗಿಯೂ ಇದೆ. ಇಷ್ಟು ಒಳ್ಳೆಯ ಪ್ರಾಣಿಯನ್ನು ನಮ್ಮ ದೇಶದಲ್ಲಿ ನಿಕೃಷ್ಟವಾಗಿ ಎಣಿಸಿ ಹಿಂಸಿಸುವುದು ಅನ್ಯಾಯ.

## 4. ಬೆಕ್ಕು.

ಕಾಡು ಬೆಕ್ಕು ಯೂರೋಪಿನಲ್ಲಿಯೂ ಏಷ್ಯಾಖಂಡದ ಕೆಲವು ಭಾಗಗಳಲ್ಲಿಯೂ ಸಿಕ್ಕುವುದು. ಊರ ಬೆಕ್ಕು ಸಾಮಾನ್ಯವಾಗಿ ಮನುಷ್ಯರು ವಾಸಿಸುವ ಕಡೆಗಳಲ್ಲೆಲ್ಲಾ ಇರುವುದು.

ಕಾಡು ಬೆಕ್ಕಿಗೂ ಊರ ಬೆಕ್ಕಿಗೂ ಅನೇಕ ಭೇದಗಳುಂಟು.. ಊರ ಬೆಕ್ಕಿನ ಬಾಲವು ಉದ್ದವಾಗಿಯೂ ಕೃಶವಾಗಿಯೂ ಇದೆ; ಬರುತ ಬರುತ ಮೊನೆ. ಕಾಡು ಬೆಕ್ಕಿನ ಬಾಲವು ಇದಕ್ಕಿಂತ ಮೋಟು, ದಪ್ಪ. ಕಾಡು ಬೆಕ್ಕು ಮೂಗಿನ ತುದಿಯಿಂದ ಬಾಲದ ಕೊನೆವರೆಗೆ ಸುಮಾರು ಮೂರಡಿ ಉದ್ದವಿರುತ್ತದೆ. ಊರ ಬೆಕ್ಕು ಇದಕ್ಕಿಂತ ಚಿಕ್ಕದು.

ಬೆಕ್ಕು, ಸಿಂಹ, ಹುಲಿ, ಚಿರತೆ ಇವುಗಳೆಲ್ಲಾ ಒಂದೇ ಜಾತಿಗೆ ಸೇರಿದ ಪ್ರಾಣಿಗಳು. ಇವೆಲ್ಲಕ್ಕೂ ದೇಹರಚನೆ ಪ್ರಾಯಶಃ ಒಂದೇ. ಇವುಗಳ ಕಾಲುದವಡೆಗಳ ಸ್ನಾಯುಗಳಲ್ಲಿ ಬಲವಿದೆ. ಇವು ನೋಡುವುದಕ್ಕೆ ಸುಂದರವಾಗಿಯೂ ಭಯಂಕರವಾಗಿಯೂ ಇವೆ. ನಮ್ಮ ದೇಶದ ಬೆಕ್ಕುಗಳು ಸಾಮಾನ್ಯವಾಗಿ ಬೂದುಬಣ್ಣವುಳ್ಳವು. ಇದಕ್ಕೆ ಮೈಮೇಲೆ ಕರಿಯ ಬರೆಗಳಿವೆ. ಪಾರ್ಸಿ ಮುಂತಾದ ಸೀಮೆಗಳ ಬೆಕ್ಕುಗಳು ಬಿಳಿಯವು. ಅಚ್ಚ ಕರಿಯ ಬೆಕ್ಕುಗಳೂ ಉಂಟು. ಬೆಕ್ಕಿನ ಕಣ್ಣುಗಳು ಸಾಧಾರಣ ಹಸುರಾಗಿ ಉರುಟಾಗಿವೆ. ರಾತ್ರಿಯಲ್ಲಿ ಇವು ಕೆಂಡದಂತೆ ಹೊಳೆವುವು. ಕರಿಯಗುಡ್ಡು ಹಗಲು ಹೊತ್ತು ಮೇಲಿಂದ ಕೆಳಕ್ಕೆ ಉದ್ದುದ್ದವಾಗಿ ಎಳೆದ ಒಂದು ಕರೀಗೆರೆಯಂತೆ ಇದ್ದು ರಾತ್ರಿವೇಳೆ ಹರಡಿಕೊಂಡು ಅಗಲವಾಗುವುದು. ಬಾಯ ಮೇಲ್ಗಡೆ ಎರಡು ಕಡೆಯಲ್ಲಿಯೂ ಉದ್ದವಾದ ಮೀಸೆಗಳಿವೆ. ಇದೇ ಬೆಕ್ಕಿಗೆ

ಮುಖ್ಯವಾದ ಸ್ಪರ್ಶೇಂದ್ರಿಯ. ಬೆಕ್ಕಿನ ಕುತ್ತಿಗೆ ಉದ್ದವಲ್ಲ. ಚರ್ಮದ ಮೇಲೆ ಮೃದುವಾಗಿ ನುಣುಪಿನಿಂದಲೂ ಹೊಳಪಿನಿಂದಲೂ ಕೂಡಿದ ಕೂದಲಿದೆ ಬಾಲವು ಉದ್ದ,ಬೆಕ್ಕಿಗೆ ಕೋಪೋದ್ರೇಕವಾದಾಗ ಇದು ದಪ್ಪ-ವಾಗುತ್ತದೆ. ಉದ್ದವಾದ ನಾಲಗೆಯ ಮೇಲೆ ಸಣ್ಣಸಣ್ಣ ಮುಳ್ಳುಗಳಿವೆ. ಇದರ ಕೋರೆಹಲ್ಲುಗಳು ಬಲುಹರಿತವಾಗಿ ಮೊನೆಯಾಗಿವೆ. ನಾಯಿಗಿರು-ವಂತೆ ಬೆಕ್ಕಿಗೂ ಮುಂಗಾಲುಗಳಲ್ಲಿ ಐದೈದು ಬೆರಳುಗಳೂ ಹಿಂಗಾಲುಗಳಲ್ಲಿ ನಾಲ್ಕುನಾಲ್ಕೂ ಇವೆ. ಅಂಗಾಲಿನಲ್ಲಿ ಮೆತ್ತಗಿರುವ ಮಾಂಸದ ದಿಂಬು-ಗಳೂ ಬೆರಳುಗಳಲ್ಲಿ ಉಗುರುಗಳೂ ಇವೆ. ಉಗುರುಗಳನ್ನು ಬೇಕಾದಾಗ ನೀಡಬಲ್ಲುದು.ಬೇಡವಾದಾಗ ಒಳಕ್ಕೆಳೆದುಕೊಳ್ಳಬಲ್ಲುದು ನಡೆವಾಗಲುಗು ರುಗಳನ್ನು ಒಳಕ್ಕೆಳೆದುಕೊಳ್ಳುವುದರಿಂದ ಸದ್ದಾಗುವುದಿಲ್ಲ. ಉಗುರುಗಳ ಸಹಾಯದಿಂದ ಬೆಕ್ಕು ಮರಹತ್ತುತ್ತದೆ.ಪ್ರಾಣಿಗಳನ್ನು ಚುಚ್ಚಿಕೊಲ್ಲುತ್ತದೆ.

ಬೆಕ್ಕು ನಾಲಗೆಯಿಂದ ಮೈಯನ್ನು ನಕ್ಕಿ ನಕ್ಕಿ ಚೊಕ್ಕಟ ಮಾಡಿಕೊ-ಳ್ಳುವುದು. ಬೆಕ್ಕಿಗೆ ತನ್ನ ಮರಿಗಳಲ್ಲಿ ಬಹಳ ಪ್ರೀತಿ. ಆದಕ್ಕೆ ನಾಯಿಯ ಹಾಗೆ ಮನುಷ್ಯರಲ್ಲಿ ಪ್ರೀತಿಯಿಲ್ಲ ಸ್ಥಳಗಳ ಮೇಲೆಯೇ ಪ್ರೀತಿ. ಒಂದು ಮನೆಯಿಂದ ದೂರಕ್ಕೆ ತೆಗೆದುಕೊಂಡು ಹೋದರೆ ತಾನು ಮೊದಲಿದ್ದ ಮನೆ ಎಷ್ಟು ದೂರವಾಗಿದ್ದರೂ ಅಲ್ಲಿ ಬೇರೆ ಜನರು ವಾಸಿಸುತ್ತಿದ್ದರೂ ಹೋಗಿ ಸೇರುವುದು. ಕಾಲು ಮೈಗಳು ಒದ್ದೆಯಾಗದಂತೆ ಎಚ್ಚರಿಕೆಯಿಂದಿರುತ್ತದೆ. ಬೆಚ್ಚಗಿರುವಸ್ಥಳದಲ್ಲಿ ಬಿದ್ದುಕೊಳ್ಳುತ್ತದೆ ಬೆಕ್ಕು ಮಾಂಸಾಹಾರಿಯಾದುದ-ರಿಂದ ಪ್ರಾಣಿಗಳನ್ನು ಹಿಡಿದು ಕೊಲ್ಲುವುದರಲ್ಲಿ ಬಹಳ ಚಮತ್ಕಾರವನ್ನು ತೋರಿಸುವುದು. ಹೊಂಚು ಹಾಕುತ್ತಿದ್ದು ಸ್ವಲ್ಪವೂ ಸದ್ದು ಮಾಡದೆ ಹೋಗಿ ಇಲಿ ಮುಂತಾದುದನ್ನು ಹಿಡಿವುದು. ಕತ್ತಲೆಯಲ್ಲಿ ಕಣ್ಣು ಚೆನ್ನಾಗಿ ಕಾಣುವುದರಿಂದ ರಾತ್ರಿಯಲ್ಲಿ ಇದು ಸಂಚಾರ ಮಾಡುವುದು ಹೆಚ್ಚು. ಬೆಕ್ಕುಗಳು ಹಿಂಡುಹಿಂಡಾಗಿರುವುದಿಲ್ಲ. ಬೆಕ್ಕಿನ ಪ್ರಕೃತಿಯನ್ನು ನಚ್ಚ-ಲಾಗದು. ರೇಗಿದಾಗ ಸಾಕುವವರ ಮೇಲೆಯೂ ಬಿದ್ದು ಪರಚುವುದುಂಟು. ಹೆಣ್ಣುಬೆಕ್ಕು ವರ್ಷಕ್ಕೆ ಎರಡು ಮೂರಾವೃತ್ತಿ ಒಂದೊಂದುಸಲಕ್ಕೆ ನಾಲ್ಕ-ರಿಂದ ಆರುಮರಿಗಳವರೆಗೆ ಹಾಕುತ್ತದೆ. ಬೆಕ್ಕು ಸುಮಾರು ಹತ್ತುಹನ್ನೆರಡು-

ವರ್ಷ ಬದುಕುವುದು. ಊರಬೆಕ್ಕು ವಿಶೇಷವಾಗಿ ಇಲಿ,ಹೆಗ್ಗಣ ಮುಂತಾದ ಚಿಕ್ಕ ಚಿಕ್ಕ ಪ್ರಾಣಿಗಳನ್ನು ತಿನ್ನುತ್ತದೆ. ಸಾಕಿದ ಬೆಕ್ಕು ಅನ್ನ,ಹಾಲು, ಮೊಸರು ಮೊದಲಾದುವನ್ನು ತಿನ್ನುವುದು. ಬೆಕ್ಕಿಗೆ ಹಾಲಿನ ಮೇಲೆ ಬಹಳ ಆಸೆ. ಹಾಲನ್ನು ಎಲ್ಲಿಟ್ಟಿದ್ದರೂ ಮೋಸಮಾಡಿ ಕುಡಿದುಬಿಡುತ್ತದೆ.

ಬೆಕ್ಕು ಇಲಿಯ ದೊಡ್ಡ ಶತ್ರು. ಇಲಿಗಳ ಹಾವಳಿಯನ್ನು ತಪ್ಪಿಸಲು ಬೆಕ್ಕನ್ನು ಸಾಕುವರು. ಪ್ಲೇಗು ಜಾಡ್ಯವು ಇಲಿಯ ಮೂಲಕ ಬಲುಬೇಗ ಹರಡಿಕೊಳ್ಳುವುದರಿಂದ ಇಲಿಗಳನ್ನು ಧ್ವಂಸಮಾಡಬೇಕೆಂತಲೂ, ಈ ಕೆಲಸವು ಬೆಕ್ಕುಗಳಿಂದ ಸುಲಭವಾಗಿ ನಡೆವ ಕಾರಣ, ಇವುಗಳನ್ನು ಸಾಕಿದರೆ ಪ್ಲೇಗು ಬಲುಮಟ್ಟಿಗೆ ನಿವಾರಣೆಯಾಗಬಹುದೆಂತಲೂ ದೊಡ್ಡ ವೈದ್ಯರು ಅಭಿಪ್ರಾಯಪಡುತ್ತಾರೆ. ಬೆಕ್ಕು ಸತ್ತಮೇಲೆ ಅದರ ಮಾಂಸವನ್ನು ಕೆಲವರು ತಿನ್ನುತ್ತಾರೆ. ಅದರ ಚರ್ಮವನ್ನು ನಯಮಾಡಿ ಅಂಗಿ ಮುಂತಾದುದಕ್ಕೆ ಉಪಯೋಗಿಸುವುದುಂಟು.

## 5. ಇರುವೆ.

ಇರುವೆಗಳು ಸಮಸ್ತ ದೇಶಗಳಲ್ಲಿಯೂ ಇರುತ್ತವೆ. ಉಷ್ಣವಲಯದ ಸೀಮೆಗಳಲ್ಲಿ ವಿಶೇಷ. ಶೀತವಲಯದ ಕಡೆಗೆ ಬರುಬರುತ ಕಡಮೆ.

ಇರುವೆಯ ದೇಹವನ್ನು ತಲೆ, ಎದೆ, ಕಿಬ್ಬೊಟ್ಟೆ ಎಂದು ಮೂರುಭಾಗಗಳಾಗಿ ವಿಂಗಡಿಸಬಹುದು. ತಲೆಯಲ್ಲಿ ಜ್ಞಾನೇಂದ್ರಿಯವೂ ಎದೆಯಲ್ಲಿ ಚಲನಶಕ್ತಿಯೂ, ಕಿಬ್ಬೊಟ್ಟೆಯಲ್ಲಿ ಜನನೇಂದ್ರಿಯವೂ ಇವೆ. ಇರುವೆಗೆ ಆಯುಧಗಳಾದ ಮುಳ್ಳುಗಳು ಕಿಬ್ಬೊಟ್ಟೆಯಲ್ಲಿರುತ್ತವೆ. ಪ್ರತಿ ಭಾಗವೂ ಅನೇಕ ಖಂಡಗಳ ಸಂಧಿಯಿಂದ ಕೂಡಿದೆ ಎದೆಯಲ್ಲಿ ಮೂರು ಖಂಡಗಳಿವೆ. ಪ್ರತಿಖಂಡಕ್ಕೂ ಒಂದು ಜತೆ ಕಾಲಿರುವುದು ಒಂದೊಂದು ಕಾಲಿನಲ್ಲಿಯೂ ಐದೈದು ಕೀಲುಗಳಿವೆ ಗಂಟಲಿನ ಕೆಳಗೆ ಒಂದು ಚೀಲವೂ, ಇದರ ಕೆಳಗೆ ಜಠರವೂ ಕರುಳುಗಳೂ ಇವೆ. ಇರುವೆಗೆ ಶ್ವಾಸಕೋಶಗಳಿಲ್ಲ; ಇವಕ್ಕೆ ಬದಲು ವಾಯುಸಂಚಾರವುಳ್ಳ ಸೂಕ್ಷ್ಮವಾದನಾಳಗಳಿವೆ. ಇವುಗಳ ಹೊರಗಡೆ ರಂಧ್ರಗಳಿರುವುವು. ದೇಹಕ್ಕೆ ಒರಟಾದ ಕವಚವಿದೆ. ಇದರ ಮೇಲೆ ಮೃದುವಾದ ಚರ್ಮವುಂಟು. ಇದರಲ್ಲಿ ಪೊರೆಗಳೂ ಕೂದಲೂ ಅತಿಸೂ-

ಕ್ಷ್ಮವಾದ ಗ್ರಂಥಿಗಳೂ ಇವೆ. ಇರುವೆಗಳಲ್ಲಿ ಗಂಡು, ಹೆಣ್ಣು, ನಪುಂಸಕ ಎಂದು ಮೂರು ಜಾತಿಗಳು. ಗಂಡಿಗಿಂತ ಹೆಣ್ಣು ದೊಡ್ಡದು ಇವೆರಡಕ್ಕೂ ರೆಕ್ಕೆಗಳುಂಟು. ನಪುಂಸಕಗಳಿಗೆ ರೆಕ್ಕೆಗಳಿಲ್ಲ. ಇರುವೆಗಳಿಗೆಲ್ಲಾ ಸ್ಪಷ್ಟ-ವಾದ ಕಣ್ಣುಗಳಿವೆ. ಮೊಟ್ಟೆಯನ್ನಿಡುವ ನಾಳದಲ್ಲಿ ತೀಕ್ಷ್ಣವಾದ ಒಂದು ಬಗೆಯ ದ್ರವವಿರುವುದು. ಇರುವೆಯು ಆ ನಾಳದಿಂದ ಕುಕ್ಕಿ ಈ ದ್ರವ-ವನ್ನು ಸುರಿಸುವುದು. ಇದನ್ನೇ ಇರುವೆಯ ಕಡಿತವೆನ್ನುವರು. ಗಂಡು ಹೆಣ್ಣುಗಳಿಗೆ ಮೊಟ್ಟೆಯಿಡುವುದೊಂದೇ ಕೆಲಸ. ನಪುಂಸಕಗಳೇ ಸಕಲ ಕಾರ್ಯಗಳನ್ನೂ ಮಾಡುತ್ತವೆ. ಇರುವೆಗಳಿಗೆ ಧಾನ್ಯ, ಹುಳು, ಹಣ್ಣು, ಸತ್ತಪ್ರಾಣಿ, ಬೆಲ್ಲ ಮುಂತಾದ ಸಿಹಿ ಪದಾರ್ಥ ಇವು ಆಹಾರ.

ಇರುವೆಗಳಲ್ಲಿ ಕೆಲವು ಕರಿಯವು, ಕೆಲವು ಬಿಳಿಯವು, ಇನ್ನು ಕೆಲವು ಕೆಂಪಿನವು. ಕಪ್ಪು ಮತ್ತು ಕೆಂಪಿನ ಇರುವೆಗಳಲ್ಲಿ ಸಣ್ಣಿರುವೆ, ಕಟ್ಟಿರುವೆ ಎಂಬ ಎರಡು ಬಗೆಗಳುಂಟು. ಬಿಳಿಯಿರುವೆಯನ್ನು ಗೆದ್ದಲೆನ್ನುವರು. ಇರು-ವೆಗಳು ನೆಲದೊಳಗೆ ಕೊರೆದು ಗುಂಡಿಗಳನ್ನು ಮಾಡಿಕೊಂಡು ಕೊರೆದ ಮಣ್ಣನ್ನೆಲ್ಲಾ ಹೊರಗೆ ರಾಶಿಹಾಕುತ್ತವೆ. ಹೀಗೆ ಗೆದ್ದಲು ಮಾಡಿದಮಣ್ಣಿನ ರಾಶಿಗೆ ಹುತ್ತವೆನ್ನುವರು. ಹುತ್ತವು ಒಂದಾಳಷ್ಟು ಎತ್ತರ ಇರುವುದುಂಟು. ಇರುವೆಗೆ ಸಿಹಿಯಾದ ಪದಾರ್ಥಗಳ ಮೇಲೆ ಬಹಳ ಆಸೆ. ಇಂಥ ವಸ್ತು-ವನ್ನು ಎಲ್ಲಿಟ್ಟಿದ್ದರೂ ಕಂಡುಕೊಂಡು, ಕೂಡಲೇ ತನ್ನ ಜತೆಯ ಇರುವೆಗ-ಳನ್ನು ಕರೆದು ಎಲ್ಲವೂ ಸೇರಿ ಅದನ್ನು ತಿಂದು ಬಿಡುತ್ತವೆ. ಇರುವೆಗಳು ಯಾ-ವಾಗಲೂ ಸಾವಿರಾರು ಕೂಡಿ ಗುಂಪು ಗುಂಪಾಗಿರುವುವು. ಒಂದರ ಹಿಂದೆ ಒಂದು ಸಾಲಾಗಿ ಸಂಚಾರ ಮಾಡುವುವು ಬಿಸಿಲಲ್ಲಿ ಕೆಲಸ ಮಾಡುವುದು ಇರುವೆಗಳಿಗೆ ಬಹಳ ಇಷ್ಟ. ಬೇಸಿಗೆಯಲ್ಲಿ ಕ್ಷಣವೂ ಬಿಡುವಿಲ್ಲದೆ ದುಡಿದು ತಿಂಡಿಯನ್ನು ಸಂಪಾದಿಸಿ, ಬೇಕಾದಷ್ಟು ತಿಂದು, ಉಳಿದುದನ್ನು ಗೂಡಿನಲ್ಲಿ ಕೂಡಿಡುತ್ತವೆ. ಮಳೆಗಾಲದಲ್ಲಿ ಗೂಡು ಬಿಟ್ಟು ಹೊರಗೆ ಬರಲಾರವಾದುದ-ರಿಂದ, ಕೂಡಿಟ್ಟ ತಿಂಡಿಯನ್ನು ಆಗ ತಿನ್ನುತ್ತಾ ಜೀವಿಸುವುವು. ಇದರಿಂದ ಇರುವೆಗಳ ಜಾಣತನವೂ, ಮಿತವ್ಯಯವೂ, ಕಷ್ಟಪಟ್ಟು ಕೆಲಸ ಮಾಡುವ ಸ್ವಭಾವವೂ, ಮುಂದಾಲೋಚನೆಯೂ ವ್ಯಕ್ತವಾಗುವುವು. ಶೀತದೇಶದ

ಇರುವೆಗಳು ಹಿಮಂತಋತುವಿನಲ್ಲಿ ಆಹಾರವು ಸಿಕ್ಕದಿರುವುದರಿಂದ ಆ ಕಾಲವನ್ನು ಜಡಾವಸ್ಥೆಯಲ್ಲಿ ಕಳೆವುವು. ಇರುವೆಗಳನ್ನು ಚೆನ್ನಾಗಿ ಪರಿಶೀ-ಲಿಸಿ ನೋಡಿದಲ್ಲಿ ಒಂದರ ಅಭಿಪ್ರಾಯವನ್ನು ಮತ್ತೊಂದು ಅರಿವಂತೆ ಇವು-ಗಳಿಗೆ ಒಂದು ತರದ ಭಾಷೆಯಿರುವುದಾಗಿ ತೋರುವುದು.

ಇರುವೆಗಳ ಹಾವಳಿಯನ್ನು ಯಾವ ಪ್ರಾಣಿಯೂ ತಾಳಲಾರದು. ಆಫ್ರಿಕಾಖಂಡದ ಕೆಲವು ಸೀಮೆಗಳಲ್ಲಿ ಇವುಗಳ ಅವಾಂತರವನ್ನು ತಡೆಯ-ಲಾರದೆ ಜನರು ತಮ್ಮ ಮನೆಗಳನ್ನು ಬಿಟ್ಟು ಹೋಗಿರುವರಂತೆ. ಗೆದ್ದಲಿನ ಹಾವಳಿಯನ್ನು ಎಲ್ಲರೂ ಬಲ್ಲರಷ್ಟೆ. ನೆಲಕ್ಕೆ ಸೋಕುವಂತೆ ಯಾವ ವಸ್ತು-ವನ್ನಿಟ್ಟರೂ ಗೆದ್ದಲು ಅದನ್ನು ಹೊಡೆದು ಮಣ್ಣು ಮಾಡಿಬಿಡುತ್ತದೆ. ಹೀಗೆ ಇರುವೆಗಳಿಂದ ಮನುಷ್ಯನಿಗೆ ಬಾಧೆಯೇ ಹೊರತು ಪ್ರಯೋಜನವಿರುವಂತೆ ತೋರುವುದಿಲ್ಲ. ಇರುವೆಯ ಮೊಟ್ಟೆಗಳೂ ಕೀಟಾವಸ್ಥೆಯಲ್ಲಿರುವ ಇರು-ವೆಗಳೂ ಹಕ್ಕಿಗಳಿಗೆ ಬಲು ಸವಿಯಾದ ಆಹಾರವು.

## 6. ತೆಂಗಿನ ಮರ.

ಈ ಮರವು ಹಿಂದೂದೇಶ, ಸಿಲೋನ್, ಪೂರ್ವಪಶ್ಚಿಮ ದ್ವೀಪಸ್ತೋ-ಮಗಳು, ಬ್ರೆಜಿಲ್ ಇವುಗಳಲ್ಲಿ ಬೆಳೆಯುತ್ತದೆ. ನಮ್ಮ ದೇಶದಲ್ಲಿ ಮನೆಗಳ ಮುಂದೆಯೂ ತೋಟಗಳಲ್ಲಿಯೂ ತೆಂಗಿನ ಮರಗಳನ್ನು ಹಾಕುವರು. ಬಲು ತೇವವಿದ್ದ ಕಡೆ ತೆಂಗು ಪ್ರಬಲಿಸುವುದಿಲ್ಲ. ಮರಳು ಮಿಶ್ರವಾದ ಉಪ್ಪಿನ ನೆಲದಲ್ಲಿ ಇದು ಚೆನ್ನಾಗಿ ಬೆಳೆವುದು. ಇದರ ಬೆಳೆವಳಿಗೆಗೆ ಸಮುದ್ರದ ಅಥವಾ ನದಿಯ ತೀರವು ಉತ್ತಮವು. ಆದುದರಿಂದಲೇ ಇದು ಹಿಂದು-ಸ್ಥಾನದ ಪೂರ್ವಪಶ್ಚಿಮ ಸಮುದ್ರತೀರಗಳಲ್ಲಿ ಹೇರಳವಾಗಿದೆ. ಇದು ಚೆನ್ನಾಗಿ ಬೆಳೆವ ಸ್ಥಳಗಳಲ್ಲಿ ಸುಮಾರು ಎಂಬತ್ತು ಡಿಗ್ರಿಗೆ ಕಡಮೆಯಿಲ್ಲದೆ ಶಾಖವಿರಬೇಕು. ಪ್ರತಿವರ್ಷ ಮಳೆಯೂ ಚೆನ್ನಾಗಿ ಆಗಬೇಕು.

ತೆಂಗು ದುಂಡಾಗಿರುವ ಕಂಬದಂತೆ ಮೂವತ್ತರಿಂದ ಅರುವತ್ತು ಅಡಿಗಳ ಎತ್ತರದವರೆಗೂ ಬೆಳೆಯುತ್ತದೆ. ಬುಡದಲ್ಲಿ ಇದರ ಸುತ್ತಳತೆ ಸುಮಾರು ನಾಲ್ಕಡಿ; ಕೊನೆಯಲ್ಲಿ ಸುಮಾರು ಐದಡಿ. ಮರದ ಮೋಟಿನ ಮೇಲೆ ಬುಡದಿಂದ ತಲೆವರೆಗೂ ಉಂಗುರಗಳಂತೆ ಗುಂಡಾದ ಚಕ್ರಗಳಿವೆ. ತೆಂಗಿ-

ನೆಲೆಗಳನ್ನು ಗರಿಗಳೆನ್ನುವರು. ಗರಿಗಳು ಉದ್ದವಾಗಿಯೂ ಹಸುರಾಗಿಯೂ ನುಣುಪಾಗಿಯೂ ಇರುತ್ತವೆ. ಗಿಡದ ಕೊನೆಯಲ್ಲಿರುವ ಈ ಗರಿಗಳುದ್ದವು ಸುಮಾರು ಹದಿನೈದು ಅಡಿಗಳು. ಗರಿಗಳ ನಡುವೆ ಕಾಯಿಗಳ ಗೊಂಚಲುಗಳಿರುವುವು. ಒಳ್ಳೆಯ ಭೂಮಿಯಲ್ಲಿ ಬೆಳೆದಿರುವ ಗಿಡದಲ್ಲಿ ಗೊಂಚಲುಗಳು ಎಂಟರಿಂದ ಹನ್ನೆರಡರವರೆಗೂ ಇರುವುವು. ಇದರಿಂದ ಗಿಡವೊಂದಕ್ಕೆ ಎಂಬತ್ತರಿಂದ ನೂರಿಪ್ಪತ್ತರತನಕ ಕಾಯಿಗಳಾಗುವುವು. ಕಾಯಿಗಳ ಮೇಲಿನ ಸಿಪ್ಪೆ ಹಸುರಾಗಿಯೂ ನುಣುಪಾಗಿಯೂ ಇದೆ. ಇದಕ್ಕೂ ಚಿಪ್ಪಿಗೂ ನಡುವೆ ನಾರು ಇರುವುದು. ಕಾಯಿಯ ಬುಡದಲ್ಲಿ ಕಪ್ಪಾದ ಮೂರುಕಣ್ಣುಗಳಿರುವುವು. ಇವುಗಳಲ್ಲಿ ಒಂದು ಕಣ್ಣಿನಿಂದ ಮಾತ್ರ ಮೊಳಕೆ ಹೊರಡುತ್ತದೆ. ಮಲಯಾಳದೇಶದಲ್ಲಿ ಹಾಕಿದ ಆರನೆಯ ವರ್ಷದಲ್ಲಿಯೇ ಹೂಬಿಡುವುದು. ಹೂಬಿಟ್ಟ ಆರು ತಿಂಗಳನಂತರ ಕಾಯಿ ಬಲಿವುದಕ್ಕೆ ಪ್ರಾರಂಭಿಸಿ ಒಂದು ವರ್ಷಕ್ಕೆ ಪೂರ್ಣಪಕ್ವವಾಗುವುದು. ಚೆನ್ನಾಗಿ ಬಲಿತ ತೆಂಗಿನಕಾಯಿಗಳನ್ನು ಮರದಿಂದಿಳಿಸಿ ತಂದು ಅವುಗಳನ್ನು ಒಂದು ತಿಂಗಳು ಒಣಗಿಸಿ ಹದಿನೈದು ದಿನಗಳ ವರೆಗೆ ಉಪ್ಪುನೀರಿನಲ್ಲಿ ನನೆಹಾಕಬೇಕು. ಬಳಿಕ ಆಳವಾಗಿ ಅಗೆದು ಗೊಬ್ಬರ ಹಾಕಿ ಹದಮಾಡಿರುವ ಭೂಮಿಯಲ್ಲಿ ಆ ಕಾಯಿಗಳನ್ನು ಸ್ವಲ್ಪ ಭಾಗ ಮೇಲೆ ಕಾಣುವಂತೆ ಹೂಳಬೇಕು. ಕ್ರಮವಾಗಿ ನೀರು ಹುಯ್ಯುತ್ತಾ ಬಂದರೆ ನಾಲ್ಕೈದು ತಿಂಗಳೊಳಗೆ ಮೊಳಕೆ ಹೊರಟು ಸಸಿಗಳಾಗುತ್ತವೆ. ಸಸಿಗಳಿಗೆ ಆರು ತಿಂಗಳಾದ ಮೇಲೆ, ಎರಡಡಿ ಆಳ ಅಗೆದು ಗೊಬ್ಬರ ಹಾಕಿರುವ ಗುಂಡಿಗಳಲ್ಲಿ ಅವುಗಳನ್ನು ನಡಬೇಕು. ಎರಡು ವರ್ಷಗಳವರೆಗೆ ಕ್ರಮವಾಗಿ ನೀರು ಹಾಕಿದರೆ ಹತ್ತು ಹನ್ನೆರಡು ವರ್ಷಗಳಲ್ಲಿ ಫಲಬಿಡುತ್ತದೆ.

ತೆಂಗು ಬೇರಿಂದ ತುದಿವರೆಗೂ ಕೆಲಸಕ್ಕೆ ಬರುವುದು. ಇದರ ಬೇರು ಮದವನ್ನುಂಟುಮಾಡುವುದು. ಕೆಲವೆಡೆ ಅಡಕೆಗೆ ಬದಲು ಇದರ ಬೇರನ್ನು ಹಾಕಿಕೊಳ್ಳುವರು. ತುದಿಯಲ್ಲಿನ ಗೆಡ್ಡೆ ಬಲು ರುಚಿಯಾಗಿರುವುದು. ಈ ಮರದಿಂದಲೂ ಹೆಂಡವನ್ನು ತೆಗೆವರು. ಇದನ್ನು ಬಟ್ಟಿಯಿಳಿಸಿ ಸಾರಾಯಿಮಾಡುವರು. ರಸವನ್ನು ಕಾಯಿಸಿ ಬೆಲ್ಲಮಾಡುವುದುಂಟು. ಮರಗಳನ್ನು ಕಡಿದು ಮನೆಗಳಿಗೆ ಜಂತೆಗಳನ್ನು ಮಾಡುವರು. ಮರವನ್ನು ತೊಲೆಯಾಗಿ-

ಯೂ ಹಾಕುವುದುಂಟು. ಮರದೊಳಗಿನ ತಿರುಳು ತೆಗೆದು ನೀರು ಹರಿವ ದೋಣಿಗಳನ್ನೂ ಕೊಳವೆಗಳನ್ನೂ ಮಾಡುವುದುಂಟು. ಒಣಗಿದ ಗರಿಗಳನ್ನು ಚಾವಣಿಗೆ ಹೊದಿಸುವರು ; ಚಾಪೆಗಳಾಗಿ ಹೆಣೆವರು; ಅವುಗಳಿಂದ ತಡಿಕೆಗಳನ್ನೂ ಕೊಡೆಗಳನ್ನೂ, ಮಕ್ಕರಿ ಬುಟ್ಟಿ ಮೊದಲಾದುವನ್ನೂ ಮಾಡುವರು. ಗರಿಗಳ ಕಡ್ಡಿಗಳನ್ನು ಗುಡಿಸುವುದಕ್ಕು ಪಯೋಗಿಸುವರು. ತೆಂಗಿನ ನಾರನ್ನು ಹಾಸಿಗೆಗೂ ದಿಂಬುಗಳಿಗೂ ಹಾಕುವರು; ಹಗ್ಗ ಹೊಸೆವರು. ಹಗ್ಗವಾಗದ ನಾರನ್ನು ಒಲೆಗೆ ಹಾಕುತ್ತಾರೆ; ಪಾತ್ರೆಗಳನ್ನು ಜ್ಜುವುದಕ್ಕೆ ಬಳಸುತ್ತಾರೆ. ತೆಂಗಿನ ಚಿಪ್ಪನ್ನು ನುಣುಪಾಗಿ ತೇದು ಬಟ್ಟಲು ಮಿಳ್ಳೆ ಮೊದಲಾದ ಸಾಮಾನುಗಳನ್ನು ಮಾಡುವರು; ಕೆಲಸಕ್ಕೆ ಬಾರದ ಚಿಪ್ಪನ್ನು ಒಲೆಗೆ ಹಾಕುವರು. ಕೊಬ್ಬರಿ ತಿನ್ನಲು ಬಲು ಸವಿಯಾಗಿರುವುದು, ಅಡಿಗೆಗೆ ಬಹಳ ಉಪಯೋಗ ಕೊಬ್ಬರಿಯೆಣ್ಣೆಯನ್ನು ತಲೆಗೆ ಹಚ್ಚಿಕೊಳ್ಳುತ್ತಾರೆ ಇದರಿಂದ ಕೂದಲು ನುಣುಪಾಗುವುದಲ್ಲದೆ ಉದ್ದವಾಗಿ ಬೆಳೆವುದು. ಸುವಾಸನೆಯುಳ್ಳ "ಕೇಶರಂಜನ ತೈಲ" ಮೊದಲಾದ ಹೆಸರಿನಿಂದ ಮಾರುವ ಎಣ್ಣೆಗಳೆಲ್ಲ ಕೊಬ್ಬರಿಯೆಣ್ಣೆಗೆ ಮೂಲಿಕೆಗಳು ಸೇರಿ ಆದುವು. ಕೊಬ್ಬರಿಯೆಣ್ಣೆ ದೀಪಕ್ಕೂ ಬರುವುದು, ಅದನ್ನು ಮುಲಾಮಿಗೆ ಸೇರಿಸಿ ಗಾಯಕ್ಕೆ ಬಳಿಯುತ್ತಾರೆ ಈ ಎಣ್ಣೆಯಿಂದ ಮೇಣದ ಬತ್ತಿಯನ್ನೂ ಮಾಡುವರು. ಕೊಬ್ಬರಿಯ ಹಿಂಡಿಯನ್ನು ದನಕರುಗಳಿಗೆ ತಿನ್ನಿಸುವರು, ಇಲ್ಲವೆ ಗೊಬ್ಬರಕ್ಕಾಗಿ ಉಪಯೋಗಿಸುತ್ತಾರೆ. ಹೊಂಬಾಳೆಯನ್ನು ಮಂಟಪವೇ ಮುಂತಾದುವುಗಳಿಗೆ ಅಲಂಕಾರಕ್ಕಾಗಿ ಉಪಯೋಗಿಸುವರು. ಬೇಸಗೆಯಲ್ಲಿ ಎಳನೀರನ್ನು ಕುಡಿಯುತ್ತಾರೆ; ಇದರಿಂದ ದಾಹಶಾಂತಿ ಚನ್ನಾಗಿ ಆಗುವುದು. ಎಳನೀರನ್ನೂ ತೆಂಗಿನಕಾಯಿಯನ್ನೂ ಮರ್ಯಾದೆಗಾಗಿ ತಾಂಬೂಲದ ಜತೆಯಲ್ಲಿ ಕೊಡುವರು. ಫಲದಾನದಲ್ಲಿ ನಾರಿಕೇಳದಾನವು ಪ್ರಶಸ್ತವಾದುದು.

## 7. ಅಡಕೆಯ ಮರ.

ಅಡಕೆಯ ಮರವು ಏಷ್ಯಾಖಂಡದ ಉಷ್ಣದೇಶಗಳಲ್ಲಿಯೂ, ಮಲಯಾ ಆಸ್ಟ್ರೇಲಿಯಾ ದ್ವೀಪಗಳಲ್ಲಿಯೂ ಬೆಳೆವುದು. ಕೊಚಿನ್ ಚೈನಾ, ಇಂಡಿಯಾ ದೇಶಗಳಲ್ಲಿ ವಿಶೇಷ ಆಗುವುದು.

ಈಮರವು ತೆಂಗಿನಮರದಂತೆಯೇ ದುಂಡಗೆ ಅರುವತ್ತಡಿಯಿಂದ ನೂರಡಿಯವರೆಗೂ ಎತ್ತರವಾಗಿ ಬೆಳೆವುದು. ಇದರ ತಾಳು ಬೂದಿಬಣ್ಣ. ಸುತ್ತಳತೆ ಒಂದೂವರೆ ಅಡಿ ವರೆಗೆ ಉಂಟು. ಈ ಮರಕ್ಕೂ ಕೊಂಬೆಗಳಿಲ್ಲ. ತುದಿಯಲ್ಲಿ ಎಲೆಗಳು ಎಲ್ಲಾ ಕಡೆಗೂ ಹರಡಿಕೊಂಡುಕೊಡೆಯಂತೆ ಕಾಣುತ್ತವೆ. ಎಲೆಯನ್ನು ಗರಿಯೆನ್ನುವರು. ನಾಲ್ಕರಿಂದ ಆರಡಿಗಳ ಉದ್ದವಿರುವ ಈಗರಿಗಳ ನಡುವೆ ವರ್ಷಕ್ಕೆ ಮೂರು ಹೊಂಬಾಳೆಗಳು ಹೊರಡುವುವು. ಹೊಂಬಾಳೆ ಬಿರಿದ ಮೇಲೆ ಹೂಗಳು ಕಾಯಿಗೊಂಚಲುಗಳಾಗುತ್ತವೆ. ಒಂದೊಂದು ಗೊಂಚಲಿನಲ್ಲಿ ಇಪ್ಪತ್ತರಿಂದ ಐವತ್ತರ ವರೆಗೆ ಕಾಯಿಗಳಿರುವುವು. ಕಾಯಿ ಮೊದಲು ಹಸುರಾಗಿದ್ದು ಬಲಿಯುತ ಬಲಿಯುತ ಹಳದಿ ಬಣ್ಣಕ್ಕೆ ತಿರುಗುತ್ತದೆ. ಇದು ಸುಮಾರು ನಿಂಬೇಕಾಯಿ ಗಾತ್ರಕ್ಕಿರುವುದು. ದಪ್ಪವಾಗಿಯೂ ನಾರಾಗಿಯೂ ಇರುವ ಇದರ ಸಿಪ್ಪೆಯನ್ನು ಸುಲಿದರೆ ಒಳಗೆ ಅಡಕೆ ಕಾಣುವುದು. ಅಡಕೆ ಗುಂಡಾಗಿ ಸುಮಾರು ದಪ್ಪಗಜ್ಜುಗದಷ್ಟು ಇರುವುದು ವರ್ಷಕ್ಕ ಒಂದು ಗಿಡದಲ್ಲಿ ಸುಮಾರು ಮುನ್ನೂರು ಕಾಯಿಗಳಾಗುತ್ತವೆ. ಅಡಕೆಯ ಗಿಡದಲ್ಲಿ ಚಿಕ್ಕಕಾಯಿಗಿಡ, ದೊಡ್ಡಕಾಯಿಗಿಡ ಎಂಬ ಎರಡು ಜಾತಿಗಳುಂಟು.

ಒಂದಡಿ ಆಳಕ್ಕೆ ಉದ್ದವಾಗಿ ಬಚ್ಚಲುಗಳನ್ನು ಅಗೆದು, ಅರ್ಧದ ವರೆಗೆ ಮರಳನ್ನು ತುಂಬಿ, ಅದರಮೇಲೆ ಬಲಿತ ಅಡಕೆಯ ಕಾಯಿಗಳನ್ನು ಸಾಲು ಸಾಲಾಗಿ ಒಂದರ ಹತ್ತಿರ ಮತ್ತೊಂದನ್ನಿಟ್ಟು, ಮರಳು ಕೊಳೆತ ಗೊಬ್ಬರ ಇವುಗಳಿಂದ ಮುಚ್ಚಬೇಕು. ಇದಕ್ಕೆ ಒಟ್ಟಲು ಎನ್ನುವರು. ನಾಲ್ಕು ತಿಂಗಳ ವರೆಗೆ ಮೂರು ದಿನಕ್ಕೊಂದಾವೃತ್ತಿ ನೀರು ಕಟ್ಟಬೇಕು. ತೋಟವನ್ನು ಚೆನ್ನಾಗಿ ಅಗೆದು ನಾಲ್ಕು ನಾಲ್ಕಡಿದೂರಕ್ಕೆ ಬಾಳೆಯ ಗಿಡಗಳನ್ನು ನೆರಳು ಕೊಡುವಂತೆ ಸಾಲಾಗಿ ಹಾಕತಕ್ಕದ್ದು. ಒಟ್ಟಲಿನ ಸಸಿಗಳು ನಾಟಿಹಾಕಲು ಸಿದ್ಧವಾದೊಡನೆ ಎರಡೆರಡು ಬಾಳೆ ಗಿಡಗಳ ನಡುವೆ ಗುಣಿಗಳನ್ನು ಮಾಡಿ, ಗುಣಿಗೆ ಎರಡರಂತೆ ಸಸಿಗಳನ್ನು ನಡಬೇಕು. ವರ್ಷಕ್ಕೆರಡು ಸಾರಿ ತೋಟವನ್ನು ಅಗೆದು ಆಗಾಗ್ಗೆ ಕಳೆ ಕೀಳಬೇಕು. ಐದು ವರ್ಷಗಳಲ್ಲಿ ಗಿಡಗಳು ಐದಡಿ ಎತ್ತರವಾಗಿ ಫಲ ಬಿಡಲಾರಂಭಿಸಿ, ಮೂವತ್ತು ನಾಲ್ವತ್ತು

ವರ್ಷಗಳವರೆಗೂ ಫಲಕೊಡುತ್ತಿರುವುವು. ಅಡಕೆಯ ಸಸಿಗೆ ತಂಪೂ ನೆರಳೂ ಆವಶ್ಯಕವಾದುದರಿಂದ, ಆ ತೋಟಗಳಲ್ಲಿ ತೆಂಗು ಹಲಸು ನಿಂಬೆ ಕಿತ್ತಿಳೆ ಹೇರಿಳೆ ಮುಂತಾದ ಮರಗಳನ್ನು ಬೆಳೆಯುತ್ತಾರೆ.

ಕಾಯಿಗಳು ಬಲಿತಮೇಲೆ ಅವನ್ನು ಕೊಯ್ದು ಸಿಪ್ಪೆ ಸುಲಿದು ಅಡಕೆಯನ್ನು ನೀರಿನಲ್ಲಿ ಬೇಯಿಸುತ್ತಾರೆ. ಬಳಿಕ ಚೂರು ಚೂರಾಗಿ ಕತ್ತರಿಸಿ ಒಣಗಿಸಿ ಮಾರುತ್ತಾರೆ.

ಅಡಕೆ ಮರವು ಬಹಳ ಕೆಲಸಕ್ಕೆ ಬರುತ್ತದೆ. ತಾಳಿನಿಂದ ಚಾವಣಿ ಚಪ್ಪರ ಮುಂತಾದುದನ್ನು ಕಟ್ಟುವುದಲ್ಲದೆ ನೀರುಹಾಯಿಸತಕ್ಕ ದೋಣಿಗಳನ್ನು ಮಾಡುವರು. ದಬ್ಬೆ ಬಹಳ ಉಪಯುಕ್ತವಾಗಿದೆ. ಹಾಳೆ ಊಟ ಮಾಡುವುದಕ್ಕೂ, ಪದಾರ್ಥಗಳನ್ನು ಕಟ್ಟುವುದಕ್ಕೂ ಆಗುವುದು ಗರಿಗಳನ್ನು ಗುಡಿಸಲು ಮುಂತಾದುದಕ್ಕೆ ಹೊದಿಸುವರು. ಅಡಕೆಯನ್ನು ಸುಣ್ಣಸವರಿದ ವೀಳೆಯದೆಲೆಯೊಡನೆ ಹಾಕಿಕೊಂಡು ಅಗಿವರು. ಇದು ಜೀರ್ಣಕಾರಿ. ಮದುವೆ ಮುಂಜಿ ಮೊದಲಾದ ಶುಭಕಾರ್ಯಗಳಲ್ಲಿಯೂ, ಶ್ರಾದ್ಧ ಮೊದಲಾದ ಅಶುಭಕಾರ್ಯಗಳಲ್ಲಿಯೂ ಮನೆಗೆ ಬಂದವರಿಗೆ ಮರ್ಯಾದಾರ್ಥವಾಗಿಯೂ ಎಲೆಯಡಕೆಯನ್ನು ಕೊಡುವುದು. ಹಿಂದೂಜನರಲ್ಲಿ ಪೂರ್ವಕಾಲದಿಂದಲೂ ವಾಡಿಕೆಯಾಗಿದೆ. ಅಡಕೆಯು ನಾಯಿಗೆ ಭೇದಿಯೌಷಧವು; ಹಾಲಿನಲ್ಲಿ ಅಡಕೆಯನ್ನು ತೇದು ಕೊಟ್ಟರೆ ಅದಕ್ಕೆ ಹೊಟ್ಟೆಯಲ್ಲಿಹುಳು ಸಾಯುವುದೆನ್ನುವರು. ಅಡಕೆಯನ್ನು ಸುಟ್ಟು ಹಲ್ಲುಪುಡಿ ಮಾಡುತ್ತಾರೆ. ಅಡಕೆ ಬೇಯಿಸಿದ ನೀರನ್ನು ಮರಕ್ಕೆ ವಾರ್ನೀಸಾಗಿಯೂ ಗಾಯಕ್ಕೆ ಮದ್ದಾಗಿಯೂ ಉಪಯೋಗಿಸುವರು.

## 8. ಮಾವಿನ ಮರ.

ಮಾವಿನ ಮರವು ಇಂಡಿಯಾದಲ್ಲಿಯೂ ಏಷ್ಯಾಖಂಡದ ಪೂರ್ವದೇಶಗಳಲ್ಲಿಯೂ ಪೂರ್ವದ್ವೀಪ ಸ್ತೋಮದಲ್ಲಿಯೂ ಬೆಳೆಯುತ್ತದೆ.

ಮಾವಿನ ಮರವು ನಾಲ್ವತ್ತು ಐವತ್ತು ಅಡಿಗಳ ಎತ್ತರ ಬೆಳೆವುದು. ಕಸಿಯ ಗಿಡವು ಇಷ್ಟು ಎತ್ತರ ಬೆಳೆವುದಿಲ್ಲ. ಸಾಧಾರಣವಾಗಿ ಇಪ್ಪತ್ತಡಿ ಎತ್ತರದೊಳಗೆ ಇರುತ್ತದೆ. ಮರದ ಕೊಂಬೆಗಳು ನಾಲ್ಕು ಕಡೆಗೂ ಹರಡಿಕೊಳ್ಳುವುವು; ಆದರೆ ಬಲವಾದುವಲ್ಲ. ಇದು ಎಲೆಗಳಿಂದ ತುಂಬಿಕೊಂಡು

ನೋಡುವುದಕ್ಕೆ ಬಲು ಅಂದವಾಗಿರುವುದು. ಅಚ್ಚ ಹಸುರಾದ ಎಲೆಗಳು ಉದ್ದವಾಗಿಯೂ ಕಿರಿಯವಾಗಿಯೂ ಮಿಂಚುತ್ತಲೂ ಇರುವುವು ಇವಕ್ಕೆ ಕಾವೂ ಮಧ್ಯದಲ್ಲಿ ಉದ್ದಕ್ಕೆ ಕಡ್ಡಿಯೂ ಇರುತ್ತವೆ. ಚಿಗುರು ಸ್ವಲ್ಪ ಕೆಂಪಗೆ ಮೃದುವಾಗಿರುತ್ತದೆ. ಚಿಗುರಿದ ಮರವು ನೋಟಕ್ಕೆ ಬಲು ಚೆಲುವು. ಮಾವಿನ ಹೂಗಳು ಸಣ್ಣವು; ಬೆಳ್ಳಗೆ ಗೊಂಚಲು ಗೊಂಚಲಾಗಿರುವುವು. ಹೂ ಉದುರಿದ ಮೇಲೆ ಒಂದೊಂದು ಗೊಂಚಲಿನಲ್ಲಿಯೂ ಮೂವತ್ತು ನಾಲ್ವತ್ತು ಕಾಯಿಗಳ ವರೆಗ ಬಿಡುತ್ತವೆ. ಕಾಯಿ ಹಸುರಾಗಿದ್ದು ಹಣ್ಣಾಗುತ್ತಲೆ ಹಳದಿ ಬಣ್ಣವನ್ನು ಹೊಂದುವುದು. ಹಣ್ಣಿನ ಮೇಲಿರುವ ಸಿಪ್ಪೆಯನ್ನು ತೆಗೆದರೆ ಒಳಗೆ ಸಿಹಿಯಾದ ರಸದಿಂದ ತುಂಬಿ ಮೃದುವಾದ ಹಳದಿ ಬಣ್ಣದ ತಿರುಳು ಇರುತ್ತದೆ. ಇದನ್ನೇ ಜನರು ತಿನ್ನುವರು. ತಿರುಳಿನೊಳಗೆ ಗಟ್ಟಿಯಾದ ಓಟೆಯೂ ಅದರೊಳಗೆ ಬೀಜವೂ ಇರುವುವು. ಮರದಿಂದ ಅಂಟಾಗಿರುವ ಒಂದು ಒಗೆಯ ಹಾಲು ಹೊರಡುವುದು

ಬೀಜಹಾಕಿ ಬೆಳೆದ ಮಾವಿನಲ್ಲಿ ಒಳ್ಳೆಯ ಹಣ್ಣು ಬಿಡದಿರುವುದರಿಂದ, ಈಗ ಕಸಿ ಮಾಡಿದ ಸಸಿಯನ್ನೇ ನಟ್ಟು ಬೆಳೆಸುವ ವಾಡಿಕೆ ವಿಶೇಷವಾಗಿದೆ. ಮಾವು ಎಂಥಾ ಭೂಮಿಯಲ್ಲಾದರೂ ಬೆಳೆವುದು. ತಿಟ್ಟುನೆಲದಲ್ಲಿ ಬೆಳೆದ ಹಣ್ಣು ಉತ್ತಮವೆನ್ನುವರು. ಸಸಿಗಳನ್ನು ಮಳೆಗಾಲದಲ್ಲಿ ನಡಬೇಕು. ನಡುವುದಕ್ಕೆ ಕೆಲವು ತಿಂಗಳ ಹಿಂದೆ ಇಪ್ಪತ್ತು ಮೂವತ್ತು ಅಡಿಗಳ ದೂರದಲ್ಲಿರುವಂತೆ ಗುಂಡಿಗಳನ್ನು ತೋಡಿ ಮಣ್ಣಿನೊಡನೆ ಗೊಬ್ಬರವನ್ನು ಬೆರೆಸಿ ಹಾಕಬೇಕು. ಗಿಡಗಳು ಎಳೆಯವಾಗಿರುವಾಗ ಅವುಗಳ ನಡುವೆ ಇರುವ ನೆಲವನ್ನು ಉತ್ತು ಬೇರೆ ಪಯಿರನ್ನು ಬೆಳೆಸಿ ಆಗಾಗ್ಗೆ ಅಗತೆ ಮಾಡಬೇಕು. ಗಿಡಗಳು ಸುಮಾರು ಹತ್ತಡಿ ಎತ್ತರವಾದಾಗ ಸುತ್ತಲೂ ಎಂಟು ಹತ್ತು ಅಡಿಗಳ ವರೆಗೆ ಅಗೆದು ಗೊಬ್ಬರ ಹಾಕಬೇಕು. ಇಬ್ಬನಿ ಮಾವಿನ ಗಿಡಕ್ಕೆ ಒಳ್ಳೆಯದೆನ್ನುವರು. ಗಿಡಗಳಲ್ಲಿ ಹಣ್ಣು ಬಿಡದಿದ್ದರೆ ಸುತ್ತಲೂ ಅಗೆದು ಚಿಕ್ಕಚಿಕ್ಕ ಬೇರುಗಳನ್ನು ಕತ್ತರಿಸುವರು; ಇಲ್ಲವೆ ತೊಗಟೆಯಲ್ಲಿ ಅಲ್ಲಲ್ಲಿ ಗಾಯ ಮಾಡಿ ಸಣ್ಣಸಣ್ಣ ಕೊಂಬೆಗಳನ್ನು ಕಡಿವರು. ಚೆನ್ನಾಗಿ ಪಕ್ವವಾಗುವುದಕ್ಕೆ ಮುಂಚೆಯೇ ಕಾಯನ್ನು ಕೊಯ್ದು ಬತ್ತದ ಹುಲ್ಲಿನಲ್ಲಿ ಮುಚ್ಚಿ

ಕೆಲವು ದಿನಗಳು ಇಟ್ಟಿದ್ದರೆ ಹಣ್ಣಿಗೆ ಹಳದಿ ಬಣ್ಣವೂ ಸುವಾಸನೆಯೂ ರುಚಿಯೂ ಹುಟ್ಟುವುವು. ಕಾಯನ್ನು ಹಣ್ಣಾಗುವ ವರೆಗೆ ಮರದ ಮೇಲೆ ಬಿಟ್ಟಿರುವುದೂ ಉಂಟು.

ಬಂಗಾಳದಲ್ಲಿ ಮಾವಿನ ಎಲೆ ತೊಗಟೆಗಳಿಂದ ಒಂದುಬಗೆಯ ರಂಗನ್ನು ತೆಗೆವರು. ಡಕ್ಕಾ, ಬಾಂಕೂರ ಈ ಸ್ಥಳಗಳಲ್ಲಿ ಚರ್ಮವನ್ನು ಹದ ಮಾಡು-ವುದರಲ್ಲಿ ಮಾವಿನ ತೊಗಟೆಯನ್ನು ಉಪಯೋಗಿಸುವರು. ತೊಗಟೆಯಿಂದ ಒಂದು ತರದ ಗೋಂದೂ ಸಿಕ್ಕುತ್ತದೆ. ಮದುವೆ ಮುಂತಾದ ಉತ್ಸವ-ಕಾಲಗಳಲ್ಲಿ ಹಿಂದೂಜನರು ಮಾವಿನೆಲೆಗಳನ್ನು ಮನೆಯ ಬಾಗಲಿಗೆ ತೋರ-ಣವಾಗಿ ಕಟ್ಟುತ್ತಾರೆ. ಎಲೆಗಳಿಂದಲೂ ಕಡ್ಡಿಗಳಿಂದಲೂ ಹಲ್ಲುಜ್ಜುವರು. ಹೂವನ್ನು ಭೇದಿ ಆಮಶಂಕೆಗಳಿಗೆ ಔಷಧವಾಗಿ ಉಪಯೋಗಿಸುವರು. ಎಳಗಾಯನ್ನು ಹೆಚ್ಚಿ ಉಪ್ಪು ಕಾರದ ಪುಡಿಗಳೊಂದಿಗೆ ತಿನ್ನುವರು. ಕಾ-ಯಿಂದ ಉಪ್ಪಿನ ಕಾಯಿಯಲ್ಲದೆ ಬಗೆಬಗೆಯ ವ್ಯಂಜನಗಳನ್ನು ಮಾಡುವರು. ಕಾಯನ್ನು ಹೆಚ್ಚಿ ಒಣಗಿಸಿ ಹುಣಸೆಹಣ್ಣಿಗೆ ಬದಲಾಗಿ ಬಳಸುವುದುಂಟು. ಹಣ್ಣು ತಿನ್ನುವುದಕ್ಕೆ ಮಧುರವು ಹೆಚ್ಚಾಗಿ ತಿಂದರೆ ಆಮಶಂಕೆಯೂ ಕಣ್ಣುನೋವೂ ಬರುತ್ತವೆ. ಬೀಜವು ಕ್ರಿಮಿರೋಗಕ್ಕೂ ಮೂಲವ್ಯಾಧಿಗೂ ಭೇದಿಗೂ ಆಮಶಂಕೆಗೂ ಒಳ್ಳೆಯದು. ಮರವನ್ನು ಹಲಗೆಗಳಾಗಿ ಕೊಯ್ದು ಪೆಟ್ಟಿಗೆ ಕದ ಮೊದಲಾದುವನ್ನು ಮಾಡುವರು. ಮರವನ್ನು ಕಡಿದು ಸೌದೆ-ಯಾಗಿಯೂ ಬಳಸುವುದುಂಟು.

## 9. ಬಾಳೆಯ ಗಿಡ.

ಬಾಳೆಯ ಗಿಡವು ಇಂಡಿಯಾ, ಪಸಿಫಿಕ್ ದ್ವೀಪಗಳು, ಬ್ರೆಜಿಲ್, ಗಿನಿ ಈ ದೇಶಗಳಲ್ಲಿ ಬೆಳೆಯುತ್ತದೆ.

ಈ ಗಿಡವು ಎಂಟರಿಂದ ಹದಿನೈದು ಅಡಿಗಳ ಎತ್ತರ ಬೆಳೆವುದು. ಕೆಲವು ಜಾತಿ ನಾಲ್ಕಡಿಗಿಂತ ಉದ್ದವಾಗುವುದಿಲ್ಲ. ಇದರ ತಾಳಿನ ಸುತ್ತಳತೆ ಒಂ-ದೂವರೆ ಅಡಿ. ಮಧ್ಯದಲ್ಲಿ ಬೆಳ್ಳಗೆ ಮೃದುವಾಗಿರುವ ತಾಳಿನ ಭಾಗಕ್ಕೆ ದಿಂ-ಡೆಂದು ಹೆಸರು. ಬಾಳೆಗಿಡಕ್ಕೆ ಕೊಂಬೆಗಳಿಲ್ಲ. ಎಲೆಗಳು ಸುಮಾರು ಆರಡಿ ಉದ್ದವೂ ಎರಡಡಿ ಅಗಲವೂ ಇರುತ್ತವೆ. ಬಹಳ ಎಳದಾಗಿರುವಾಗ ಎಲೆ

ಸ್ವಲ್ಪ ಬಿಳಿದಾಗಿದ್ದು ಆಮೇಲೆ ಹಸುರಾಗುತ್ತದೆ. ಎಲೆಗಳ ಕೆಳಭಾಗಗಳು ಒರೆಯಂತೆ ದಿಂಡನ್ನು ಮುಚ್ಚಿಕೊಂಡಿವೆ ಈ ಭಾಗಗಳಿಗೆ ಪಟ್ಟೆಗಳೆಂದು ಹೆಸರು. ಒಂದು ಗಿಡದಲ್ಲಿ ಒಂದು ಹೂವಿನ ಗೊಂಚಲು ಮಾತ್ರ ಬಿಡುವುದು. ಇದು ಊದಾ ಬಣ್ಣವಾಗಿರುವುದು. ಗೊಂಚಲಿನ ಹಿಂಭಾಗದಲ್ಲಿ ಚಿಪ್ಪುಚಿಪ್ಪಾಗಿ ಕಾಯಿಗಳಿರುವುವು. ಇವೆಲ್ಲಕ್ಕೂ ಗೊಲೆಯೆಂದು ಹೆಸರು ಒಂದು ಗೊಲೆಯಲ್ಲಿ ಹದಿನೈದರವರೆಗೆಚಿಪ್ಪುಗಳೂ ಒಂದುಚಿಪ್ಪಿನಲ್ಲಿ ಇಪ್ಪತ್ತರವರೆಗೆ ಕಾಯಿಗಳೂ ಇರುತ್ತವೆ ಕಾಯಿಗಳು ಉದ್ದವಾಗಿಯೂ ಹಸುರಾಗಿಯೂ ಗಟ್ಟಿಯಾಗಿಯೂ ಇರುವುವು. ಹಣ್ಣಾದಾಗ ಹೊಂಬಣ್ಣದಿಂದ ಕೂಡಿ ಮೆದುವಾಗುತ್ತವೆ. ಹಣ್ಣಿನ ಸಿಪ್ಪೆಯನ್ನು ಸುಲಭವಾಗಿ ಸುಲಿಯಬಹುದು. ಒಳಗೆ ಬಿಳಿದಾಗಿಯೂ ಸಿಹಿಯಾಗಿಯೂ ಇರುವತಿರುಳನ್ನು ಎಲ್ಲರೂ ತಿನ್ನುವರು. ಬಾಳೆಗಿಡದ ಬುಡದಲ್ಲಿ ಗೆಡ್ಡೆಗಳು ಹೊರಡುವುವು. ಈ ಕಂದುಗಳು ಚಿಗುರಿ ಬೇರೆ ಬೇರೆ ಗಿಡಗಳಾಗುವುವು. ಬಾಳೆಯಲ್ಲಿ ನಾನಾ ಜಾತಿಗಳುಂಟು. ರಸಬಾಳೆ, ಕಾಡುಬಾಳೆ, ಬೂದುಬಾಳೆ, ರಾಜಬಾಳೆ, ಪುಟ್ಟಬಾಳೆ, ಮದರಂಗಬಾಳೆ, ಏಲಕ್ಕಿಬಾಳೆ ಮುಂತಾದುವು.

ಬಾಳೆಯನ್ನು ತೋಟಗಳಲ್ಲಿಯೂ ಗದ್ದೆಗಳಲ್ಲಿಯೂ ಹಾಕುತ್ತಾರೆ. ಭೂಮಿಯನ್ನು ಚೆನ್ನಾಗಿ ಉತ್ತು, ಸುಮಾರು ಎಂಟೆಂಟಡಿ ದೂರಕ್ಕೆ ಗುಂಡಿಗಳನ್ನು ತೋಡಿ, ಕಂದುಗಳನ್ನು ನಡುವರು. ಒಳಿಕ ಕ್ರಮವಾಗಿ ನೀರು ಕಟ್ಟಿ ಆಗಾಗ್ಗೆ ಕಳೆಕಿತ್ತು ಗೊಬ್ಬರ ಹಾಕಿ ಅಗತೆ ಮಾಡುವರು. ಸುಮಾರು ಒಂದು ವರ್ಷಕ್ಕೆ ಹೂಬಿಡುವುದು. ಹೂಬಿಟ್ಟ ನಾಲ್ಕು ತಿಂಗಳಿಗೆ ಕಾಯಿ ಚೆನ್ನಾಗಿ ಬಲಿವುದು. ಒಂದು ಗಿಡವು ಒಂದೇ ಗೊಲೆಯನ್ನು ಬಿಡುತ್ತದೆ, ಮತ್ತೆ ಫಲಿಸುವುದಿಲ್ಲ

ಬಾಳೆಗಿಡದ ಪ್ರತಿಭಾಗವೂ ಇಂಡಿಯಾದೇಶದಲ್ಲಿ ಬಹಳ ಉಪಯೋಗಕರವಾಗಿದೆ ಇದರ ಎಲೆಯನ್ನು ಊಟಕ್ಕೆ ಉಪಯೋಗಿಸುವರು. ಸುಟ್ಟಗಾಯಗಳಿಗೆ ಎಳೆಯೆಲೆಯನ್ನು ಕಟ್ಟುವುದುಂಟು. ತರಗಿನಿಂದ ದೊನ್ನೆ ಹಚ್ಚುವರು ದಿಂಡು ಮತ್ತು ಹೂಗಳಿಂದ ಪಲ್ಯ ಮೊದಲಾದುವನ್ನೂ ಬಾಳೆ ಪಟ್ಟೆಗಳಿಂದ ಊಟದ ಎಲೆಗಳನ್ನೂ ಮಾಡುವರು. ಪಟ್ಟೆಯು ಆನೆಗೆ ಒಳ್ಳೆಯ

ಆಹಾರ. ಇದರಿಂದ ನಾರು ತೆಗೆದು, ಹೂ ಎಲೆ ಮುಂತಾದುವನ್ನು ಕಟ್ಟು-ತ್ತಾರೆ. ನಾರಿನಿಂದ ಹಗ್ಗವನ್ನೂ ಪಟ್ಟೆಯಿಂದ ಕಾಗದವನ್ನೂ ಮಾಡುವು-ದುಂಟು. ಹಿಂದೂಗಳು ಮದುವೆಯಲ್ಲಿಯೂ ಹಬ್ಬದಲ್ಲಿಯೂ ಬಾಳೆಯ ಕಂಬಗಳನ್ನು ಮನೆಯ ಬಾಗಲಿಗೂ ಚಪ್ಪರಕ್ಕೂ ಕಟ್ಟುತ್ತಾರೆ. ಬಾಳೆಕಾ-ಯನ್ನು ಅಡಿಗೆಯಲ್ಲಿ ಅನೇಕ ಪದಾರ್ಥ ಮಾಡಲು ವಿಶೇಷವಾಗಿ ಉಪ-ಯೋಗಿಸುವರು. ಹಣ್ಣು ತಿನ್ನಲು ಸಿಹಿಯಾಗಿಯೂ ಮೈಗೆ ಒಳ್ಳೆಯದಾ-ಗಿಯೂ ಇರುವುದು. ಹಣ್ಣಿನ ಸಿಪ್ಪೆಯು ದನಗಳಿಗೆ ತಿಂಡಿ. ಗೆಡ್ಡೆಯ ರಸವು ಮೂತ್ರ ಕಟ್ಟಿದ್ದರೆ ಹೊರಡಿಸುತ್ತದೆ ದಿಂಡಿನ ರಸವು ರಕ್ತಭೇದಿಗೂ ವಾಂತಿಗೂ ಒಳ್ಳೆಯ ಔಷಧ. ಹೂವಿನ ರಸ ಮಕ್ಕಳ ಬಾಯಿಹುಣ್ಣಿಗೆ ಒಳ್ಳೆಯದು. ಬಂಗಾಳದಲ್ಲಿ ಎಲೆ ಮತ್ತು ಸಿಪ್ಪೆಗಳ ಬೂದಿಯಿಂದ ಎಣ್ಣೆ ವನ್ನು ತೆಗೆವರು. ಮಲಯಾ ಪ್ರಾಂತದಲ್ಲಿ ಬಾಳೆಯ ಬೂದಿಯನ್ನು ಚೌಳಿಗೆ ಬದಲಾಗಿ ಉಪಯೋಗಿಸುವರು.

## 10. ಹುಣಸೆ ಮರ.

ಹುಣಸೆಮರವು ದಕ್ಷಿಣ ಇಂಡಿಯಾದೇಶದಲ್ಲಿ ಹೇರಳವಾಗಿ ಬೆಳೆಯು-ತ್ತದೆ. ಇದು ಸುಮಾರು ಐವತ್ತು ಅರುವತ್ತು ಅಡಿ ಎತ್ತರ ಆಗುತ್ತದೆ. ಇದರ ತಾಳಿನ ಸುತ್ತಳತೆ ಇಪ್ಪತ್ತಡಿವರೆಗೂ ಉಂಟು. ಹುಣಸೆಮರವು ಬಹಳ ಗಟ್ಟಿ. ಇದರ ಅನೇಕವಾದ ಕೊಂಬೆಗಳು ಒಳ್ಳೆಯ ನೆಳಲನ್ನು ಕೊಡುತ್ತವೆ. ಇದರ ಬೇರು ಬಹಳ ದೂರ ಎಲ್ಲಾ ಕಡೆಗೂ ವ್ಯಾಪಿಸುವುದು. ಎಲೆಗಳು ಬಲು ಸಣ್ಣ; ಚಿಗುರಾಗಿರುವಾಗ ಬೆಳ್ಳಗೂ, ಬಳಿಕ ಹಸುರಾಗಿಯೂ, ಬಲಿತ-ಮೇಲೆ ಹಳದಿಯಾಗಿಯೂ ಪರಿಣಮಿಸುತ್ತವೆ. ಇದರ ಹೂಗಳೂ ಸಣ್ಣ, ಮತ್ತು ಮಾಸಲು ಬಿಳುಪು. ಹೂಗಳೂ ಕಾಯಿಗಳೂ ಗೊಂಚಲಾಗಿ ಬಿಡುತ್ತವೆ. ಹಸುರು ಮಿಶ್ರವಾದ ಬೂದುಬಣ್ಣವುಳ್ಳ ಕಾಯಿಗಳು ಹೆಬ್ಬೆಟ್ಟಿನ ಗಾತ್ರಕ್ಕೆ ಸುಮಾರು ಚೋಟುದ್ದದವರೆಗೆ ಇರುತ್ತವೆ ಚರ್ಮದಂತೆ ಒಂದು ಪರೆಯು ಕಾಯನ್ನು ಸುತ್ತಿಕೊಂಡು ತಿರುಳೊಂದಿಗೆ ಅಂಟಿಕೊಂಡಿದೆ. ತಿರುಳು ಬಹಳ ಹುಳಿ. ಹಣ್ಣಾದಾಗ ಮೇಲಿನ ಪರೆ ತಿರುಳನ್ನು ಅಂಟದೆ ಸ್ವಲ್ಪ ಬಿಟ್ಟಿರುತ್ತದೆ. ಇದನ್ನು ತೆಗೆದರೆ ಕಪ್ಪು ಮಿಶ್ರವಾದ ಕೆಂಪುಬಣ್ಣವುಳ್ಳ

ತಿರುಳು ಒಳಗೆ ಕಾಣುವುದು. ಈ ತಿರುಳಿನ ಉದ್ದಕ್ಕೂ ನಾರು ಇರುವುದಲ್ಲದೆ ನಡುವೆ ಸ್ವಲ್ಪಸ್ವಲ್ಪ ದೂರಕ್ಕೆ ಒಂದೊಂದು ತಟ್ಟೆಯಾದ ಬೀಜವಿರುತ್ತದೆ. ಬೀಜವನ್ನು ಸುಲಿದರೆ ಬೆಳ್ಳಗಿರುವ ಎರಡು ಬೇಳೆಗಳು ಅಂಟಿಕೊಂಡಿರುತ್ತವೆ.

ಹುಣಸೆಮರವು ವ್ಯವಸಾಯವಿಲ್ಲದೆ ತಾನಾಗಿಯೇ ಬೆಳೆವುದುಂಟು. ಆದುದರಿಂದ ಇದರ ಬೆಳೆಗೆ ವಿಶೇಷ ಕಷ್ಟಪಡಬೇಕಾದುದಿಲ್ಲ ತೋಪುಗಳಲ್ಲಿಯೂ ರಸ್ತೆಯ ಪಕ್ಕಗಳಲ್ಲಿಯೂ ಇದನ್ನು ನಟ್ಟು ಬೆಳೆಸುವರು. ದೂರ ದೂರವಾಗಿ ಗುಂಡಿಗಳನ್ನು ಹೊಡೆದು ಸಸಿಗಳನ್ನು ನಟ್ಟು ಕೆಲವು ದಿನಗಳ ವರೆಗೆ ನೀರುಹಾಕಿ ನೋಡಿಕೊಂಡರೆ ಸಾಕು.

ವರ್ಷಕ್ಕೊಂದುಸಾರಿ ಕಾಯಿಗಳು ಬಲಿತು ಹಣ್ಣಾಗುವುವು. ಹಣ್ಣುಗಳನ್ನು ಕೋಲುಗಳಿಂದ ಬಡಿದು ಉದಿರಿಸಿ, ಬಿಸಿಲಲ್ಲಿ ಒಣಗಿಸಿ, ತಿರುಳನ್ನು ಸಿಪ್ಪೆಯಿಂದ ವಿಂಗಡಿಸುವರು. ಬಳಿಕ ತಿರುಳನ್ನು ಜಜ್ಜಿ ಬೀಜವನ್ನೂ ನಾರನ್ನೂ ತೆಗೆದುಹಾಕಿ ಹಣ್ಣನ್ನು ಉಪಯೋಗಿಸುವರು.

ಕಾಯನ್ನು ಇಡಿದು ಅದಕ್ಕೆ ಉಪ್ಪು ಹಸಿಮೆಣಸಿನ ಕಾಯಿಗಳನ್ನು ಸೇರಿಸಿ ತೊಕ್ಕನ್ನು ಮಾಡುವರು. ಹಣ್ಣನ್ನು ಸಾರು, ಹುಳಿ ಮೊದಲಾದ ಪದಾರ್ಥಗಳಿಗೆ ಪ್ರತಿದಿನವೂ ಹಾಕುತ್ತಾರೆ ಚಿಗುರು ಹೂಗಳು ತಂಪು ಕೊಡುತ್ತವೆಯಾದುದರಿಂದ ಇವುಗಳನ್ನು ಒಣಗಿಸಿ; ಪುಡಿಮಾಡಿ ಉಪ್ಪು ಕಾರಗಳನ್ನು ಸೇರಿಸಿ, ಅನ್ನಕ್ಕೆ ಕಲೆಸಿಕೊಳ್ಳುವರು. ಎಲೆ ಹೂಗಳು ಪಿತ್ತಹರ; ಇವುಗಳಿಂದ ಪಲ್ಯ ಮುಂತಾದುವನ್ನು ಮಾಡುವುದುಂಟು. ಎಲೆ ಬೀಜಗಳ ಕಷಾಯವು ಆಮಶಂಕೆಗೂ ವ್ರಣಗಳಿಗೂ ಮದ್ದು. ಎಲೆಗಳು ಕಷಾಯದ ಆವಿಗೆ ಕಣ್ಣು ಹಿಡಿದರೆ ಕಣ್ಣುನೋವು ವಾಸಿಯಾಗುವುದು. ಎಲೆಗಳಿಂದ ಒಂದು ಬಗೆಯ ಬಣ್ಣವನ್ನು ತೆಗೆವುದುಂಟು ಬೀಜದಿಂದ ಒಂದು ಅಂಟನ್ನು ಮಾಡುವರು ಕೆಲವುಕಡೆ ಬೀಜವನ್ನು ಹುರಿದು ತಿನ್ನುವುದುಂಟು. ಹುಣಸೆಮರವು ಗಟ್ಟಿಯಾದುದರಿಂದ, ಕೊಡತಿ ಒನಕೆ ಮುಂತಾದುದನ್ನು ಇದರಿಂದ ಮಾಡುವರು. ಈ ಮರದ ಸಾದೆ ಬಹಳ ಒಳ್ಳೆಯದು ಹೆಚ್ಚಾಗಿ ಕಾವು ಕೊಡುತ್ತದೆ. ಹುಣಸೆ ತೊಗಟೆ ಔಷಧಕ್ಕೆ ಬರುತ್ತದೆ. ಇದರ ರಸವು ತಾಮ್ರ, ಹಿತ್ತಾಳೆಗಳಲ್ಲಿರುವ ಕೊಳೆಯನ್ನು ಹೋಗಲಾಡಿಸುವುದು.

## II. ಆಲದ ಮರ.

ಆಲದಮರವು ಇಂಡಿಯಾ ದೇಶದಲ್ಲಿ ಮಾತ್ರ ದೊರೆವುದು. ಇದು ಅತ್ಯಂತ ಶ್ರೇಷ್ಠವಾಗಿಯೂ ದೊಡ್ಡದಾಗಿಯೂ ಆಶ್ಚರ್ಯಕರವಾಗಿಯೂ ಇರುವ ವೃಕ್ಷಗಳಲ್ಲಿ ಒಂದಾಗಿದೆ. ಇದು ಎಪ್ಪತ್ತರಿಂದ ನೂರಡಿಗಳ ವರೆಗೆ ಎತ್ತರವಾಗುತ್ತದೆ. ಇದು ಒಂದು ಶತಮಾನದಮೇಲೆ ಜೀವಿಸುತ್ತದೆ. ಇದರ ಎಲೆ ಒಂದಡಿ ಉದ್ದವೂ ಅರ್ಧ ಅಡಿ ಅಗಲವೂ ಆಗುವುದುಂಟು. ಇದರ ಹಣ್ಣು ಸಣ್ಣಗೆ ಕೆಂಪಾಗಿರುವುದು. ಹಣ್ಣಿನೊಳಗೆ ರಾಗಿಕಾಳಿಗಿಂತ ಸಣ್ಣ ಬೀಜಗಳಿರುತ್ತವೆ. ಆಲದ ಮರಕ್ಕೆ ಬಹಳ ಕೊಂಬೆಗಳುಂಟು. ಇವು ಬಲು ಉದ್ದವಾಗಿ ಎಲ್ಲಾ ದಿಕ್ಕುಗಳಿಗೂ ಹರಡಿಕೊಳ್ಳುತ್ತವೆ. ಸುಮಾರು ಇಪ್ಪತ್ತು ವರ್ಷಗಳಾದಮೇಲೆ ಇದರ ಕೊಂಬೆಗಳಿಂದ ಬೀಳಲು ಇಳಿಯುವುದು; ನೆಲವನ್ನು ಮುಟ್ಟಿದಾಗ ಒಂದೊಂದು ಬೀಳಲೂ ಬೇರು ಬಿಟ್ಟುಕೊಂಡು ಇನ್ನೊಂದು ಮರವಾಗಿ ಮೇಲಿನ ಕೊಂಬೆಗೆ ಆಧಾರವಾಗುತ್ತದೆ. ಬಳಿಕ ಆ ಕೊಂಬೆಯು ಬೀಳಲಮೇಲೆ ಒರಗಿಕೊಂಡು ಮುಂದುಮುಂದಕ್ಕೆ ಹರಡಿ-ಕೊಳ್ಳುತ್ತದೆ. ಹೀಗೆ ಮರವು ದೊಡ್ಡದಾಗುತ್ತ ಬಂದು, ಭೂಮಿಯ ಬಹಳ ಭಾಗವನ್ನು ಆಕ್ರಮಿಸಿಕೊಳ್ಳುವುದು. ಒಂದು ಅತಿಮಹತ್ತಾದ ಆಲದ ಮರದ ಕೆಳಗೆ ಸಾವಿರಾರು ಜನರು ನಿಲ್ಲಬಹುದು; ಅದಕ್ಕೆ ಸಾವಿರಾರು ಬೀಳಲುಗಳುಂಟು. ಬೀಳಲುಗಳೊಡನೆ ಕೂಡಿದ ದೊಡ್ಡ ಆಲದ ಮರವು ಪ್ರಾಯಶಃ ಒಂದು ತೋಪಿನ ಹಾಗೆ ಕಾಣಿಸುತ್ತದೆಯೇ ಹೊರತು ಒಂದು ಮರದಂತೆ ಕಾಣಿಸುವುದಿಲ್ಲ. ಕೆಲವರಿಗೆ ಆಲದ ಮರವು ಒಂದು ಗುಡಿ-ಯಂತೆಯೂ ಅದರ ಬೀಳಲುಗಳು ಕಂಭಗಳ ಹಾಗೂ ತೋರುತ್ತದೆ.

ಆಲದ ಮರವನ್ನು ಸಾಧಾರಣವಾಗಿ ತೋಪಿನಲ್ಲಿ ಬೆಳೆಸುವುದುಂಟು. ತೋಟಗಳಲ್ಲಿ ಬೆಳೆಸುವುದಿಲ್ಲ. ರಸ್ತೆಯ ಪಕ್ಕಗಳಲ್ಲಿ ಸರಕಾರದವರು ನೆರಳಿ-ಗಾಗಿ ಬೆಳೆಸುತ್ತಾರೆ. ಈ ಮರವನ್ನು ಬಹಳ ಸುಲಭವಾಗಿ ಬೆಳೆಸಬಹುದು. ಇದರ ಬೀಜವನ್ನು ಎಲ್ಲಿಬೇಕಾದರೂ ಪಾತಿಮಾಡಿ ಹಾಕಿದರೆ ಸಸಿಯಾಗು-ತ್ತದೆ. ಇದು ತಡವಾಗುವುದರಿಂದ ಕೊಂಬೆಗಳನ್ನು ಕಡಿದುಕೊಂಡು ಸ್ವಲ್ಪ ಸ್ವಲ್ಪ ದೂರದಲ್ಲಿ ನಡುತ್ತಾರೆ. ಅವು ಚಿಗುರಿ ಬೆಳೆದು ಶೀಘ್ರದಲ್ಲಿಯೇ ಮರಗಳಾಗುತ್ತವೆ.

ಆಲದ ಮರದಷ್ಟು ಮತ್ತಾವ ಮರವೂ ನೆರಳನ್ನು ಕೊಡುವುದಿಲ್ಲ. ಮಧ್ಯಾಹ್ನದ ಬಿಸಿಲನ್ನು ತಾಳಲಾರದೆ ದಣಿದಿರುವ ದನಗಳಿಗೂ ದಾರಿಗರಿಗೂ, ಈ ಮರದ ನೆರಳು ಒಳ್ಳೆಯ ಆಸರೆ. ತಣ್ಣಗಿರುವ ಈ ಮರದ ನೆರಳಲ್ಲಿ ದಾರಿಗನು ಅನ್ನಬೇಯಿಸಿಕೊಂಡು ತಿಂದು, ಮಲಗಿ, ಆಯಾಸಪರಿಹಾರ ಮಾಡಿಕೊಳ್ಳುತ್ತಾನೆ. ನೂರಾರು ಹಕ್ಕಿಗಳೂ, ಕೋತಿಗಳೂ ಈ ಮರದ ಕೊಂಬೆಗಳಲ್ಲಿದ್ದುಕೊಂಡು, ಇದರ ಹಣ್ಣನ್ನು ತಿಂದು ಬದುಕುತ್ತವೆ. ಆಡುಗಳು ಈ ಮರದ ಎಲೆಗಳನ್ನು ತಿನ್ನುತ್ತವೆ. ಬಡವರು ಈ ಎಲೆಗಳನ್ನು ಹಚ್ಚಿ ಊಟಮಾಡುವುದಕ್ಕೆ ಉಪಯೋಗಿಸುವರು. ಈ ಮರದ ಬಿಳಿಯ ಹಾಲಿನಿಂದ ಬೇಡರು ಹಕ್ಕಿ ಹಿಡಿವ ಅಂಟುಮಾಡುವರು. ಆಲದ ಎಳೆಯ ಕಡ್ಡಿಗಳು ಹಲ್ಲುಜ್ಜುವುದಕ್ಕೆ ಆಗುತ್ತವೆ. ಆಲದ ನಾರಿನಿಂದ ಒಂದು ಬಗೆಯ ಒರಟು ಹಗ್ಗವನ್ನು ಮಾಡುತ್ತಾರೆ. ಒಣಗಿದ ಮರವು ಕಟ್ಟಿಗೆಯಾಗುವುದು.

## 12. ಬೆಳ್ಳಿ.

ಬೆಳ್ಳಿಯು ಹೆಚ್ಚಿನ ಬೆಲೆಯ ಲೋಹವು. ಇದರ ಬಣ್ಣ ಬಿಳಿದು, ಹೆಚ್ಚಾದ ಹೊಳಪುಳ್ಳುದು. ಕೆಲವು ಕಡೆ ಬೆಳ್ಳಿಯು ಗಟ್ಟಿಯ ರೂಪದಲ್ಲಿ ಸಿಕ್ಕುತ್ತದೆ. ಇದು ಮುಖ್ಯವಾಗಿ ಗಂಧಕ, ಸೀಸ, ತಾಮ್ರ ಮುಂತಾದ ವಸ್ತುಗಳೊಡನೆ ಬೆರೆದ ಅದುರಾಗಿ ಗಣಿಗಳಲ್ಲಿ ದೊರೆವುದು.

ಬೊಲಿವಿಯ, ಪೆರು, ಮೆಕ್ಸಿಕೊ, ನಾರ್ವೆ, ಜರ್ಮನಿ, ಹಂಗೆರಿ ದೇಶಗಳಲ್ಲಿ ಬೆಳ್ಳಿ ಲೋಹರೂಪದಲ್ಲಿಯೂ ಅದುರಾಗಿಯೂ ದೊರೆವುದು. ಇಂಡಿಯಾದಲ್ಲಿ ಬೆಳ್ಳಿಯು ಮಿಶ್ರವಾಗಲ್ಲದೆ ಲೋಹರೂಪದಲ್ಲಿ ಸಿಕ್ಕುವುದು ಅಪೂರ್ವ. ಈ ಸ್ಥಿತಿಯಲ್ಲಿ ಕಡಪ, ಕರ್ನೂಲು, ಬಳ್ಳಾರಿ, ಮಧ್ಯಪ್ರಾಂತ್ಯದ ಬಾಗಲ್ಪುರ, ರಾಜಪುಟಾನ ಇವುಗಳಲ್ಲಿ ಸಿಕ್ಕುತ್ತದೆ.

ಗಣಿಗಳಿಂದ ಅದನ್ನು ಅಗೆದು ತೆಗೆದು, ಯಂತ್ರದಿಂದ ಪುಡಿ ಮಾಡಿ, ಬೆಂಕಿಯಲ್ಲಿ ಹುರಿದು ಅರೆದು ಪಾದರಸವನ್ನು ಸೇರಿಸಿದರೆ, ಪಾದರಸವು ಬೆಳ್ಳಿಯೊಂದಿಗೆ ಸೇರಿ, ಉಳಿದ ಹಗುರವಾದ ಕಲ್ಮಷವೆಲ್ಲಾ ಬೇರೆಯಾಗುವುದು. ಈ ಮಿಶ್ರವನ್ನು ಕಾಯಿಸಿದರೆ ಪಾದರಸವು ಹಬೆಯಾಗಿ ಹೋಗಿ ಬೆಳ್ಳಿ ನಿಲ್ಲುವುದು. ಇದನ್ನು ಚೆನ್ನಾಗಿ ಶುದ್ಧಮಾಡಿದರೆ ಚೊಕ್ಕಬೆಳ್ಳಿಯಾ-

ಗುತ್ತದೆ. ಸೀಸದೊಡಗೂಡಿದ ಬೆಳ್ಳಿಯದುರನ್ನು ಬಹಳ ಸಾರಿ ಕರಗಿಸಿ ಆರಿಸಿದರೆ, ಸೀಸವೆಲ್ಲಾ ಬೇರೆಯಾಗಿ, ಸ್ವಲ್ಪ ಸೀಸ ಸೇರಿದ ಬೆಳ್ಳಿ ನಿಲ್ಲುವುದು. ಇದನ್ನು ಕುಲಿಮೆಯಲ್ಲಿಟ್ಟು ಶುದ್ಧಮಾಡಿದರೆ ಚೊಕ್ಕಬೆಳ್ಳಿ ಲಭಿಸುವುದು.

ಬೆಳ್ಳಿ ಚಿನ್ನಕ್ಕಿಂತ ಭಾರದಲ್ಲಿಯೂ ಬೆಲೆಯಲ್ಲಿಯೂ ಕಡಮೆ; ಆದರೆ ಹಿತ್ತಾಳೆ, ತಾಮ್ರ, ತವರ, ಕಬ್ಬಿಣ ಇವಕ್ಕಿಂತ ಹೆಚ್ಚು. ಚೊಕ್ಕಬೆಳ್ಳಿ ಮೆದುವಾಗಿರುತ್ತದೆ. ಚಿನ್ನದಷ್ಟು ಮೆದುವಲ್ಲ. ಬೆಳ್ಳಿಯನ್ನು ಗಟ್ಟಿಮಾಡಲು ಸ್ವಲ್ಪ ತಾಮ್ರವನ್ನು ಸೇರಿಸುತ್ತಾರೆ. ಬೆಳ್ಳಿಯನ್ನು ತೆಳುವಾದ ತಗಡಾಗಿ ಬಡಿಯಬಹುದು; ಆದರೆ ಚಿನ್ನದಲ್ಲಿ ಆಗುವಷ್ಟು ನವುರಾದ ತಗಡನ್ನು ಇದರಲ್ಲಿ ಮಾಡಲಾಗುವುದಿಲ್ಲ. ಬೆಳ್ಳಿ ಲೋಹಗಳಲ್ಲೆಲ್ಲಾ ಅತ್ಯುತ್ತಮವಾದ ಉಷ್ಣವಾಹಕ ಮತ್ತು ವಿದ್ಯುದ್ವಾಹಕ. ಇದನ್ನು ಬಲು ಸಣ್ಣ ತಂತಿಯಾಗಿ ಎಳೆಯಬಹುದು. ಇದು ಬಹಳ ಜಿಗಟಾದ ಲೋಹ. ಇದಕ್ಕೆ ತುಕ್ಕು ಹಿಡಿವುದಿಲ್ಲ. ಇದು ಸಾಮಾನ್ಯವಾಗಿ ಮಾಸುವುದೂ ಇಲ್ಲ. ಗಂಧಕವು ತಗಲಿದರೆ ಮಾತ್ರ ಮಾಸುತ್ತದೆ. ಈ ಕಾರಣದಿಂದಲೇ ಕೆಲವರ ಕಾಲುಂಗುರ ... ಒಳೆಗಳು ಕಪ್ಪಾಗುವುವು. ಕಾಯಿಸಿದರೆ ಬೆಳ್ಳಿ ಚಿನ್ನಕ್ಕಿಂತ ಬೇಗ ಕರಗುವುದು. ಉರಿವಾಗ ಸ್ವಲ್ಪ ಹಸುರಾದ ಜ್ವಾಲೆಯನ್ನು ಕೊಡುತ್ತದೆ. ಇದಕ್ಕೆ ಚೆನ್ನಾಗಿ ಮೆರಗನ್ನು ಕೊಡಬಹುದು; ಅದರಿಂದ ಬಹಳ ಹೊಳಪಾಗುತ್ತದೆ. ಬೆಳ್ಳಿ ಇಂಪಾದ ನಾದವನ್ನು ಕೊಡುವುದು. ಇದರಲ್ಲಿ ಯಾವ ವಿಧವಾದ ವಾಸನೆಯೂ ರುಚಿಯೂ ಇಲ್ಲ.

ಚಿನ್ನದಂತೆಯೇ ಬೆಳ್ಳಿಯೂ ನಾನಾವಿಧಗಳಲ್ಲಿ ಉಪಯುಕ್ತವಾಗಿದೆ. ಬೆಳ್ಳಿಯಿಂದ ಬಗೆಬಗೆಯ ನಗಗಳನ್ನೂ ಪಾತ್ರೆಗಳನ್ನೂ ನಾಣ್ಯಗಳನ್ನೂ ಮಾಡುತ್ತಾರೆ. ಬೀಗದ ಕೈ, ಗಡಿಯಾರ, ಸರಪಣಿ ಮೊದಲಾದುವೂ ಆಗುತ್ತವೆ. ದೀಪಗಳ ಕಾಂತಿಯನ್ನು ಹೆಚ್ಚಿಸಲು ಮೆರಗು ಹಾಕಿದ ಬೆಳ್ಳಿಯ ಬಿಲ್ಲೆಗಳನ್ನು ಜ್ವಾಲೆಯ ಹಿಂದೆ ಇರಿಸುವರು. ಹಿತ್ತಾಳೆ, ತಾಮ್ರ ಪಾತ್ರೆಗಳಿಗೆ ಬೆಳ್ಳಿಯ ಮುಲಾಮು ಮಾಡುವರು. ಬೆಳ್ಳಿಯ ಜರತಾರಿಯನ್ನು ಬಟ್ಟೆಗಳ ಅಂಚಿಗೂ ಸೆರಗಿಗೂ ಹಾಕುವರು. ತಂತಿಯನ್ನು ಪಿಟೀಲಿಗೆ ಉಪಯೋಗಿಸುವುದುಂಟು. ಇಂಡಿಯಾ ದೇಶದಲ್ಲಿ ವೈದ್ಯರು ಬೆಳ್ಳಿಯಭಸ್ಮವನ್ನು ಮಾಡಿ

ಔಷಧಕ್ಕೆ ಉಪಯೋಗಿಸುತ್ತಾರೆ. ದೇವಸ್ಥಾನಗಳಲ್ಲಿಯೂ ಹಣವಂತರ ಮನೆಗಳಲ್ಲಿಯೂ ಬೆಳ್ಳಿಯ ಪಾತ್ರೆಗಳನ್ನು ವಿಶೇಷ ಬಳಸುವರು. ಬೆಳ್ಳಿ ಸೇರಿರುವ ಒಂದುವಸ್ತುವನ್ನು ಛಾಯಾಚಿತ್ರ ತೆಗೆವುದರಲ್ಲಿಯೂ, ಅಳಿಸಿ ಹೋಗದಿರುವ ಮಸಿ, ಕೂದಲಿಗೆ ಕಪ್ಪುರಂಗು ಇವುಗಳನ್ನು ಮಾಡುವುದರಲ್ಲಿಯೂ ಹೆಚ್ಚಾಗಿ ಉಪಯೋಗಿಸುವರು. ಬೆಳ್ಳಿ ಕರಗಿರುವ ನೀರನ್ನೇ ಆಸ್ಪತ್ರೆಗಳಲ್ಲಿ ಕಣ್ಣೋವಿಗೆ ಹಾಕುವರು.

## 13. ಕಬ್ಬಿಣ.

ಕಬ್ಬಿಣವು ನಿಜರೂಪದಲ್ಲಿ ಸಿಕ್ಕುವುದು ಅಪೂರ್ವ. ಬಳಕೆಯ ಕಬ್ಬಿಣವು ಅದುರುಗಳಿಂದ ತೆಗೆದುದು. ಕಬ್ಬಿಣದ ಅದುರು ಸಾಮಾನ್ಯವಾಗಿ ನಾಲ್ಕು ಬಗೆಯೆಂದು ಹೇಳಬಹುದು. ಅವು ಯಾವುವೆಂದರೆ:—ಅಯಸ್ಕಾಂತ, ಕೆಂಪುಬಣ್ಣದ ಕಬ್ಬಿಣ, ಕಂದುಬಣ್ಣದ್ದು, ಕರಿಯಬಣ್ಣದ್ದು. ಇದರ ಅದುರು ಯೂರೋಪಿನಲ್ಲಿ ನಾರ್ವೆ, ಸ್ವೀಡನ್, ರಷ್ಯಾ, ಇಂಗ್ಲೆಂಡ್, ವೇಲ್ಸ್, ಸ್ಕಾಟ್ಲೆಂಡ್, ಬೆಲ್ಜಿಯಮ್, ಈ ದೇಶಗಳಲ್ಲಿಯೂ; ಉತ್ತರ ಅಮೆರಿಕದಲ್ಲಿಯೂ; ಹಿಂದೂದೇಶದಲ್ಲಿ ಹೈದರಾಬಾದ್, ಮಧ್ಯಪ್ರಾಂತ್ಯಗಳು, ಬೊಂಬಾಯಿ, ರಾಜಪುಟಾನ, ಬಂಗಾಳ, ಆಸಾಂ, ಮದ್ರಾಸು ಪ್ರಾಂತ್ಯಗಳಲ್ಲಿಯೂ ಹೇರಳವಾಗಿ ದೊರೆವುದು. ಮೈಸೂರುಸೀಮೆಯಲ್ಲಿ ಮಿತವಾಗಿ ಸಿಕ್ಕುವುದು.

ಕಬ್ಬಿಣದ ಅದುರನ್ನು ಕುಲಿಮೆಗೆ ಹಾಕಿ ಚೆನ್ನಾಗಿ ಕರಗಿಸಿ ಯಂತ್ರಗಳ ಸಹಾಯದಿಂದ ಕಲ್ಮಷಗಳನ್ನು ಬಿಂಗಡಿಸಿ ಗಟ್ಟಿಗಳನ್ನು ಮಾಡುವರು ಇದಕ್ಕೆ ಎರಕದ ಕಬ್ಬಿಣವೆಂದು ಹೆಸರು. ಎರಕದ ಕಬ್ಬಿಣದ ಗಟ್ಟಿಗಳನ್ನು ಒಲೆಯಮೇಲಿಟ್ಟು, ಬಹಳಹೆಚ್ಚಾಗಿಉರಿಹಾಕುವುದರಿಂದ, ಆಗಟ್ಟಿಗಳಲ್ಲಿರುವ ಇಂಗಾಲವೆಲ್ಲ ಸುಟ್ಟುಹೋಗಿ ಕಬ್ಬಿಣವು ಮೃದುವಾಗುತ್ತದೆ. ಈ ತರದ ಕಬ್ಬಿಣಕ್ಕೆ ನಾಡುಕಬ್ಬಿಣವೆಂದು ಹೆಸರು. ಅಚ್ಚ ಇದ್ದಲಿಗೂ ಕಬ್ಬಿಣಕ್ಕೂ ಸಂಯೋಗವುಂಟುಮಾಡಿದರೆ, ಮತ್ತೊಂದು ವಸ್ತು ದೊರೆವುದು. ಇದನ್ನು ಉಕ್ಕೆನ್ನುವರು.

ಇಂಗ್ಲೆಂಡಿನಲ್ಲಿ ಕಬ್ಬಿಣವನ್ನು ಮಾಡುವಂತೆ ಇಂಡಿಯಾದಲ್ಲಿಯೂ ಮಾಡುವುದಕ್ಕೆ ಹಲವು ಬಾರಿ ಪ್ರಯತ್ನಪಟ್ಟರು; ಆದರೆ ಆ ಪ್ರಯತ್ನಗಳೆಲ್ಲ ನಿಷ್ಫಲಗಳಾಗಿ ಪರಿಣಮಿಸಿದುವು; ಏಕೆಂದರೆ, ಮೇಲೆ ಸೂಚಿಸಿದಂತೆ, ಅದುರುಗಳಿಂದ ಕಬ್ಬಿಣವನ್ನು ಬಿಂಗಡಿಸಬೇಕಾದರೆ ಅನೇಕ ಯಂತ್ರಗಳ ಸಹಾಯ

ಬೇಕು. ಯಂತ್ರಗಳ ಸೆಲೆಯೇ ನಮ್ಮವರಿಗೆ ತಿಳಿಯದಷ್ಟೆ! ಇದಲ್ಲದೆ, ಹಿಂದೂದೇಶದಲ್ಲಿ ಕಬ್ಬಿಣದ ಅದುರು ದೊರೆತ ಸ್ಥಳದಲ್ಲಿ ಒಳ್ಳೆಯ ಕಲ್ಲಿದ್ದಲು ದೊರೆವುದಿಲ್ಲ. ಒಳ್ಳೆಯ ಕಲ್ಲಿದ್ದಲಿರುವ ಕಡೆ ಕಬ್ಬಿಣದ ಅದುರು ಇರುವುದಿಲ್ಲ. ಕಲ್ಲಿದ್ದಲ್ಲನ್ನು ಬಿಟ್ಟು ಸೌದೆಯ ಇದ್ದಲನ್ನು ಬಳಸಿದರೆ ವಿಶೇಷ ನಷ್ಟವಾಗು-ವುದು. ಮತ್ತು ದೊಡ್ಡ ಕಬ್ಬಿಣದ ಕಾರ್ಖಾನೆಗಳಿಗೆ ಸಾಕಾಗುವಷ್ಟು ಕಲ್ಲಿ-ದ್ದಲನ್ನು ಹೊಂದಿಸುವುದಸಾಧ್ಯ.

ಎರಕದ ಕಬ್ಬಿಣವು ಬಲು ಪೆಡಸು. ಸುಲಭವಾಗಿ ಕರಗುವುದು. ನಾಡು-ಕಬ್ಬಿಣವನ್ನು ಕರಗಿಸುವುದು. ಪ್ರಯಾಸವು; ಆದರೆ ಎರಕದ ಕಬ್ಬಿಣದ ಹಾಗೆ ಪೆಡಸಲ್ಲ. ಆದುದರಿಂದ ನಾಡುಕಬ್ಬಿಣವನ್ನು ಸುತ್ತಿಗೆಯಿಂದ ಸಾಗಬಡಿಯ-ಬಹುದು. ಕಬ್ಬಿಣವು ಭಾರವುಳ್ಳುದಾಗಿಯೂ, ನೀಲಚ್ಛಾಯೆಯಿಂದಕೂಡಿ ಎಳೆಯಬೂದು ಮಿಶ್ರವಾದ ಬಿಳಿಯಬಣ್ಣವುಳ್ಳುದಾಗಿಯೂ ಇರುವ ಲೋ-ಹವು. ಪಾರದರ್ಶಕವಲ್ಲ. ಮೃದುವಾಗಿ ತಂತಿಯೆಳೆಯಲನುಕೂಲವಾಗಿದೆ. ಬಹಳ ಜಿಗಟಾದುದು. ಕರಗುವುದಕ್ಕೆ ಬಲುಹೊತ್ತು ಬೇಕು. ಇದಕ್ಕೆ ತೇವ ತಗುಲಿದರೆ ತುಕ್ಕು ಹಿಡಿಯುತ್ತದೆ. ಕಬ್ಬಿಣದಿಂದಾದ ಉಕ್ಕು ಬಹಳ ಗಟ್ಟಿ. ಇದನ್ನು ವಜ್ರದಷ್ಟು ಗಟ್ಟಿಯಾಗಿ ಬೇಕಾದರೂ ಮಾಡಬಹುದು. ಬೇಕಾ-ದಷ್ಟು ಬಗ್ಗುವಂತೆ ಮೆದುವಾಗಿಯಾದರೂ ಮಾಡಬಹುದು. ಇದನ್ನು ಕೂದಲಷ್ಟು ಸಣ್ಣದಾದ ತಂತಿಯಾಗಿಯೂ ಎಳೆಯಬಹುದು.

ಲೋಕಕ್ಕೆ ಕಬ್ಬಿಣದಿಂದಾಗುವಷ್ಟು ಪ್ರಯೋಜನವು ಮತ್ತಾವಲೋಹ-ದಿಂದಲೂ ಆಗುವುದಿಲ್ಲ. ಉಕ್ಕೂ ಕಬ್ಬಿಣದಿಂದಲೇ ಆಗುವುದರಿಂದ ಇವೆರ-ಡರಿಂದಾಗತಕ್ಕ ಪದಾರ್ಥಗಳಿಗೆ ಕೊನೆ ಮೊದಲಿಲ್ಲ. ಕಬ್ಬಿಣಕ್ಕೆ ಕರೀದಿ ಕ-ಡಮೆ; ಆದರೆ ಅದರಿಂದಾಗುವ ಪ್ರಯೋಜನಗಳಿಗೆ ಪಾರವಿಲ್ಲ. ಎರಕದ ಕಬ್ಬಿ-ಣದಿಂದ ಹಲವು ಬಗೆಯ ಯಂತ್ರಗಳನ್ನೂ, ಯಂತ್ರಗಳ ಚಕ್ರಗಳನ್ನೂ, ದೊಡ್ಡದೊಡ್ಡ ಕೊಳವೆಗಳನ್ನೂ, ಮನೆ ಮತ್ತು ಸೇತುಗಳಿಗೆ ಉಪಯೋಗಿಸ-ತಕ್ಕ "ಗರ್ಡರ್" ಎಂಬ ತೊಲೆಗಳನ್ನೂ ಕಂಬಗಳನ್ನೂ ಮಾಡುತ್ತಾರೆ. ಎಲ್ಲರ ಮನೆಗಳಲ್ಲಿಯೂ ಬಳಸಿಕೊಳ್ಳುವ ಕಬ್ಬಿಣದ ಒಲೆ, ಬೀಗ, ಬೀಗದ ಕೈ, ಸಾಟು, ಕಾವಲಿ, ಬಾಣಲಿ, ಅಗುಳಿ, ಕೊಡಲಿ, ಮುಂತಾದುವೂ;

ವ್ಯವಸಾಯಕ್ಕಾವಶ್ಯಕವಾದ ನೇಗಲು, ಪಿಕಾಸಿ, ಗುದ್ದಲಿಮೊದಲಾದುವೂ; ಯುದ್ಧಗಳಲ್ಲಿ ಬೇಕಾದ ಫಿರಂಗಿ, ಗುಂಡುಗಳೂ; ಕೈಗಾರಿಕೆಗೆ ಬೇಕಾಗುವ ಸುತ್ತಿಗೆ, ಮೊಳೆ ಮುಂತಾದುವೂ ನಾಡುಕಬ್ಬಿಣದಿಂದ ತಯಾರಾಗುತ್ತವೆ. ಹಡಗು, ಹೊಗೆಗಾಡಿ, ವರ್ತಮಾನ ಕೊಡುವ ತಂತಿ, ಬೇಲಿಯ ತಂತಿ ಇವು-ಗಳನ್ನು ಮಾಡುವುದಕ್ಕೂ ನಾಡುಕಬ್ಬಿಣವನ್ನು ಹೇರಳವಾಗಿ ಬಳಸುವರು. ಉಕ್ಕಿನಿಂದ ಚೂರಿ, ಕತ್ತರಿ, ಕತ್ತಿ, ಗರಗಸ, ಅರ, ಉಳಿ ಮೊದಲಾದ ಹರಿತ-ವಾದ ಸಾಮಾನುಗಳಾಗುವುವಲ್ಲದೆ, ದೊಡ್ಡದೊಡ್ಡ ಸೇತುಗಳನ್ನೂ ಬರೀ ಉಕ್ಕಿನಿಂದಲೇ ಮಾಡುವರು. ಉಕ್ಕಿನ ತಂತಿಗಳಿಂದ ಸೂಜಿಗಳಾಗುವುವು.

ಕಬ್ಬಿಣದಷ್ಟು ಚಿನ್ನ, ಬೆಳ್ಳಿ, ಇವು ಪ್ರಯೋಜನಕ್ಕೆ ಬರುವುದಿಲ್ಲ; ಚಿನ್ನ ಬೆಳ್ಳಿಗಳಿಲ್ಲದೆ ನಾವು ಜೀವಿಸಬಲ್ಲೆವು, ಕಬ್ಬಿಣವಿಲ್ಲದೆ ಬದುಕುವುದು ಕಷ್ಟ. ಆದರೂ ಚಿನ್ನ ಬೆಳ್ಳಿಗಳಿಗೆ ಮಾತ್ರ ಬಹಳ ಬೆಲೆ, ಕಬ್ಬಿಣ ಬಲುಕಡಮೆ ಬೆಲೆ-ಬಾಳುವುದು. ಈ ಭೇದಕ್ಕೆ ಕಾರಣವೇನು? ಚಿನ್ನ ಬೆಳ್ಳಿಗಳು ಲೋಕದಲ್ಲಿರು-ವುದೇ ಕಡಮೆ, ಅವುಗಳನ್ನು ಪಡೆವುದೂ ಬಹಳ ತೊಂದರೆ; ಕಬ್ಬಿಣವು ಲೋಕದಲ್ಲಿ ಹೇರಳವಾಗಿ ದೊರೆವುದು, ಇದನ್ನು ಪಡೆವುದೂ ಅಷ್ಟು ತೊಂದರೆ ಕೊಡುವುದಿಲ್ಲ.

## 14. ತಾಮ್ರ.

ತಾಮ್ರವು ಲೋಹರೂಪವಾಗಿ ಬೆಣಚುಕಲ್ಲಿನ ಬಂಡೆಗಳಲ್ಲಿ ದೊರೆವುದು. ಇದು ಅವುಗಳಲ್ಲಿಮರದ ರೆಂಬೆಯಂತೆ ಹರಡಿಕೊಂಡಿರುವುದು. ಇದುದೊಡ್ಡ ದೊಡ್ಡ ಗಟ್ಟಿಗಳ ರೂಪದಲ್ಲಿಯೂ ಸಿಕ್ಕುವುದುಂಟು. ಆದರೆ ಗಂಧಕ, ಕಬ್ಬಿಣ ಮೊದಲಾದುವುಗಳೊಡನೆ ಬೆರೆದ ಅದುರಾಗಿಯೇ ವಿಶೇಷ ದೊರೆವುದು.

ಉತ್ತರ ಅಮೆರಿಕಾ ಸೈಬೀರಿಯಾ ಕಾಶ್ಮೀರದೇಶಗಳಲ್ಲಿ ತಾಮ್ರವು ಲೋಹರೂಪದಲ್ಲಿ ಸಿಕ್ಕುವುದು. ಇಂಡಿಯಾದಲ್ಲಿ ತಾಮ್ರವು ಮುಖ್ಯವಾಗಿ ಗಂಧಕದೊಡಗೂಡಿದ ಅದುರಾಗಿಯೇ ಕಡಪ, ಕರ್ನೂಲು, ಬಳ್ಳಾರಿ, ಚೋಟಾನಾಗಪುರ ಮಧ್ಯಪ್ರಾಂತ್ಯದ ನರಸಿಂಗಪುರ, ರಾಜಪುಟಾನ ಈ ಸ್ಥಳಗಳಲ್ಲಿಸಿಕ್ಕುವುದು. ಇವುಗಳ ಹಲವೆಡೆಗಳಲ್ಲಿ ಪುರಾತನಕಾಲದ ತಾಮ್ರದ ಗಣಿಗಳೂ, ತಾಮ್ರವನ್ನು ಮಾಡುತ್ತಿದ್ದ ಗುರುತುಗಳೂ ಕಂಡುಬಂದಿವೆ.

ತಾಮ್ರದ ಅದುರನ್ನು ಅಗೆದು ತಂದು ಸಣ್ಣಸಣ್ಣಗೆ ಒಡೆದು ನೀರಿನಲ್ಲಿ ಅನೇಕಾವೃತ್ತಿ ಜಾಲಿಸಿ ದೊಡ್ಡ ಕುಲಿಮೆಯಲ್ಲಿ ಹಾಕಿ ಸುಡುತ್ತಾರೆ. ಬಳಿಕ ಈ ಸುಟ್ಟ ಅದುರನ್ನು ಬೇರೆ ಕುಲಿಮೆಯಲ್ಲಿ ಕರಗಿಸುವರು. ಹೀಗೆ ಬಹಳ ಸಾರಿ ಮಾಡುವುದರಿಂದ ಕಲ್ಮಷಗಳೆಲ್ಲಾ ಬೇರ್ಪಟ್ಟು ಮೇಲೆ ತೇಲುತ್ತವೆ. ತಾಮ್ರವು ಕುಲಿಮೆಯ ತಳದಿಂದ ಹರಿದು ನೆಲದಲ್ಲಿ ಮಾಡಿರುವ ಪಾತೆಗಳಿಗೆ ಬಂದು ಸೇರಿ ಗಟ್ಟಿಯಾಗುತ್ತದೆ. ಇದನ್ನು ಮತ್ತೆ ಕರಗಿಸಿ ಶುದ್ಧ ಮಾಡುವರು.

ಲೋಹಗಳಲ್ಲೆಲ್ಲಾ ಕೆಂಬಣ್ಣವುಳ್ಳದ್ದು ತಾಮ್ರವೊಂದೆ. ಇದು ಕಬ್ಬಿಣಕ್ಕಿಂತ ಭಾರದಲ್ಲಿಯೂ ಮೆದುವಿನಲ್ಲಿಯೂ ಹೆಚ್ಚು. ತಾಮ್ರವನ್ನು ಕರಗಿಸಲು ಕಬ್ಬಿಣದಷ್ಟು ಕಾವು ಬೇಡ. ಇದನ್ನು ಬಹಳ ಸುಲಭವಾಗಿ ತಗಡು ಬಡಿಯಬಹುದು; ಸಣ್ಣ ತಂತಿಯಾಗಿಯೂ ಎಳೆಯಬಹುದು. ತೇವವಾದ ಸ್ಥಳದಲ್ಲಿಟ್ಟರೆ ಇದು ಮಾಸಿ ಕಿಲುಬು ಹಿಡಿಯುತ್ತದೆ. ಈ ಕಿಲುಬು ಹಸುರಾದ ಒಂದು ವಿಷವಾಗಿದೆ. ತಾಮ್ರವು ಜಿಗಟಾಗಿರುವುದಲ್ಲದೆ ಬಡಿದರೆ ಧ್ವನಿ ಕೊಡುತ್ತದೆ. ಇದನ್ನು ಬಿಸಿ ಮಾಡಿದರೂ ಉಜ್ಜಿದರೂ ಒಂದು ತರದ ವಾಸನೆ ತೋರುವುದು. ಬಾಯಿಗೆ ಹಾಕಿಕೊಂಡರೆ ಓಕರಿಕೆಬರುವ ಹಾಗಾಗುವುದು. ತಾಮ್ರವು ಕಾಯಿಸಿದರೆ ಕರಗುವುದಾದರೂ ಎರಕದ ಕೆಲಸಕ್ಕೆ ಬರುವುದಿಲ್ಲ; ಏಕೆಂದರೆ ಕರಗಿದ ತಾಮ್ರವು ಆರಿ ಗಟ್ಟಿಯಾಗುವಾಗ ಕಿರಿದಾಗುವುದು. ತಾಮ್ರದ ಕೆಲಸವೆಲ್ಲಾ ಸುತ್ತಿಗೆಯಿಂದಲೇ ನಡೆಯುವುದು.

ಮನುಷ್ಯನಿಗೆ ವಿಶೇಷ ಪ್ರಯೋಜನಕರವಾದ ಲೋಹಗಳಲ್ಲಿ ತಾಮ್ರವು ಕಬ್ಬಿಣಕ್ಕೆ ಎರಡನೆಯದು. ಇದರಿಂದ ತಪ್ಪಲೆ, ಹಂಡೆ, ಕೊಡ, ಚೆಂಬುಮೊದಲಾದ ಪಾತ್ರೆಗಳನ್ನೂ, ನಾಣ್ಯಗಳನ್ನೂ, ಟಪ್ಪಾಲಿಗೂ ವಿದ್ಯುಚ್ಛಕ್ತಿಗೂ ಬೇಕಾದ ತಂತಿಗಳನ್ನೂ ಮಾಡುತ್ತಾರೆ ಅಚ್ಚುಹಾಕಬೇಕಾದಚಿತ್ರಗಳನ್ನೂ ಅಕ್ಷರಗಳನ್ನೂ ಕೆತ್ತುವುದಕ್ಕೆ ತಗಡನ್ನು ಉಪಯೋಗಿಸುವರು. ನಮ್ಮ ದೇಶದಲ್ಲಿ ತಾಮ್ರದ ತಗಡಿನ ಮೇಲೆ ಯಂತ್ರಗಳನ್ನು ಬರೆವ ವಾಡಿಕೆಯಿದೆ. ಹಡಗಿನ ತಳಕ್ಕೂ ಪಕ್ಕಗಳಿಗೂ ತಾಮ್ರದ ತಗಡುಗಳನ್ನು ಬಡಿವರು. ಚಿನ್ನ ಬೆಳ್ಳಿಗಳ ನಾಣ್ಯಗಳು ಗಟ್ಟಿಯಾಗಿರುವುದಕ್ಕಾಗಿ ಅವನ್ನು ಮಾಡುವಾಗ ಸ್ವಲ್ಪ ತಾಮ್ರ ಬೆರೆಸುತ್ತಾರೆ. ಬಣ್ಣ ಹಾಕುವುದರಲ್ಲಿ ಈ ಲೋಹವು ಉಪ-

ಯುಕ್ತವಾಗಿದೆ. ಇದು ಸೇರಿರುವ ಮೈಲುತುತ್ತವು ಔಷಧಕ್ಕೆ ಬರುತ್ತದೆ. ತಾಮ್ರವನ್ನು ಇತರ ಲೋಹಗಳೊಡನೆ ಸೇರಿಸುವುದರಿಂದ ಬಹಳಉಪಯೋಗವುಳ್ಳ ಹಿತ್ತಾಳೆ, ಕಂಚು, ಬ್ರ್ಯಾನ್ಸ್ ಎಂಬ ಮಿಶ್ರಲೋಹಗಳಾಗುವುವು.

## 15. ಹಿತ್ತಾಳೆ.

ಅತಿ ಪ್ರಸಿದ್ಧವಾದ ಈ ವಸ್ತು ಕಬ್ಬಿಣ ತಾಮ್ರಗಳಂತೆ ಶುದ್ಧಲೋಹವಲ್ಲ. ಆದುದರಿಂದ ಇದು ಅದುರಿನಲ್ಲಿ ಸಿಕ್ಕುವುದಿಲ್ಲ. ಎರಡು ಲೋಹಗಳು ಸೇರಿ ಆಗಿರುವುದರಿಂದ ಇದನ್ನು ಮಿಶ್ರಲೋಹವೆಂದು ಕರೆಯಬಹುದು.

ಮೂರು ಭಾಗ ತಾಮ್ರವನ್ನೂ ಒಂದು ಭಾಗ ಸತುವನ್ನೂ ಬೆರೆಸುವುದರಿಂದ ಹಿತ್ತಾಳೆಯಾಗುವುದು. ಈ ಎರಡು ಲೋಹಗಳನ್ನೂ ಸರಿಯಾದ ಪ್ರಮಾಣದಲ್ಲಿ ಹಾಕಿ ಕರಗಿಸಿ, ಅಚ್ಚುಗಳಿಗೆ ಎರೆದರೆ ಹಿತ್ತಾಳೆಯ ಗಟ್ಟಿಗಳಾಗುತ್ತವೆ. ಎರಕದ ಕೆಲಸಕ್ಕೆ ಬೇಕಾದರೆ ಈ ಗಟ್ಟಿಗಳನ್ನು ಒಡೆದು ಮತ್ತೆ ಕರಗಿಸಿ ಅಚ್ಚುಗಳಿಗೆ ಎರೆದು ಬೇಕಾದ ವಸ್ತುಗಳನ್ನು ಮಾಡುವರು. ಇಲ್ಲದಿದ್ದರೆ ಆ ಗಟ್ಟಿಗಳನ್ನು ಹಾಗೆಯೇ ತಗಡುಮಾಡುವರು. ತಗಡುಮಾಡುವಾಗ ಹಿತ್ತಾಳೆ ಪೆಳಸಾಗದಿರುವಂತೆ ಆಗಿಂದಾಗ್ಗೆ ಕಾಯಿಸಿ ಆರಿಸುತ್ತಾರೆ.

ಹಿತ್ತಾಳೆ ಹಳದಿ ಬಣ್ಣದ ಮಿಶ್ರಲೋಹ. ಉಜ್ಜಿದರೆ ತಾಮ್ರಕ್ಕಿಂತ ಹೊಳಪಾಗುತ್ತದೆ. ಇದು ತಾಮ್ರಕ್ಕಿಂತ ಗಟ್ಟಿ, ಭಾರದಲ್ಲಿ ಕಡಮೆ, ಸುಲಭವಾಗಿ ಕರಗತಕ್ಕದ್ದು. ಇದನ್ನು ಬಹಳ ನವುರಾದ ತಗಡಾಗಿ ಬಡಿಯಬಹುದು. ಐವತ್ತುಸಾವಿರತಗಡುಗಳನ್ನು ಒಂದರಮೇಲೊಂದರಂತೆ ಅಡಕಿದರೆ ಒಂದಂಗುಲಗಾತ್ರವೇ ಆಗುವಷ್ಟು ತೆಳುವಾದ ತಗಡನ್ನು ಮಾಡಬಹುದು. ಬೇಗಡೆಯೆಂಬುದು ಬಹಳ ನವುರಾದ ಹಿತ್ತಾಳೆಯ ರೇಕೆನ್ನಬಹುದು. ಹಿತ್ತಾಳೆಯನ್ನು ಬಹಳ ಸಣ್ಣ ತಂತಿಯಾಗಿ ಎಳೆಯಬಹುದು. ಇದನ್ನು ಅಚ್ಚಿನಲ್ಲಿ ಎರೆದು ಬೇಕಾದ ಪದಾರ್ಥಗಳನ್ನು ಮಾಡಬಹುದು. ಬಹಳ ಹೊಳಪಾಗುವಂತೆ ಇದಕ್ಕೆ ಮೆರಗುಕೊಡಬಹುದು. ಇದು ತಾಮ್ರದಂತೆ ಬೇಗ ಕೊಳೆಯಾಗುವುದಿಲ್ಲ. ಹಿತ್ತಾಳೆಯ ಸಾಮಾನು ಬಡಿದರೆ ಧ್ವನಿಕೊಡುತ್ತದೆ.

ತಾಮ್ರಕ್ಕಿಂತ ಹಿತ್ತಾಳೆ ಅಗ್ಗವಾಗಿಯೂ ಬಾಳಿಕೆ ಬರುವುದಾಗಿಯೂ ಇರುವುದರಿಂದ ಇದನ್ನು ಬಹಳ ಕೆಲಸಗಳಿಗೆ ಉಪಯೋಗಿಸುವರು. ಹಿಂದೂ

ದೇಶದಲ್ಲಿ ಹಿತ್ತಾಳೆಯನ್ನು ಉಪಯೋಗಿಸುವಷ್ಟು ಮತ್ತಾವ ಸೀಮೆಯಲ್ಲೂ ಇಲ್ಲ. ಹಿಂದೂಗಳು ಪ್ರತಿನಿತ್ಯವೂ ಬಳಸುವ ಕೊಡ, ತಪ್ಪಲೆ, ಚೆಂಬು, ಕೊಳ್ಳಗತಪ್ಪಲೆ ಮೊದಲಾದ ಪಾತ್ರೆಗಳೆಲ್ಲಾ ಹಿತ್ತಾಳೆಯವು. ದೀವಿಗೆ, ದೀಪದ ಕಂಬ, ಬೀಗ, ಬೀಗದ ಕೈ, ಸರಪಣಿ, ಗಡಿಯಾರದ ಚಕ್ರ, ಗುಂಡಿ, ಮೊಳೆ ಇವು ಮೊದಲಾದ ಹಲವು ವಸ್ತುಗಳನ್ನೂ ಹಿತ್ತಾಳೆಯಿಂದಲೇ ಮಾಡುವರು. ಹಿತ್ತಾಳೆಯ ತಂತಿಯ ಮೇಲೆ ತವರದ ಮುಲಾಮು ಮಾಡುವುದರಿಂದ ಕಾಗದಕ್ಕೆ ಚುಚ್ಚುವ ಗುಂಡುಸೂಜಿಗಳಾಗುವುವು. ಬೊಂಬಾಯಿ ಆಧಿಪತ್ಯದ ಹುಬ್ಬಳ್ಳಿಯಲ್ಲಿ ವಿಶೇಷವಾಗಿ ಹಿತ್ತಾಳೆಯ ಪಾತ್ರೆಗಳನ್ನು ಮಾಡುವರು. ಇವು ಬಲು ಮೇಲಾದುವೆಂದು ಹೆಸರುಗೊಂಡಿವೆ.

## 16. ಉಪ್ಪು.

ಉಪ್ಪು ಸಮುದ್ರದ ನೀರಿನಲ್ಲೂ ಭೂಮಿಯೊಳಗೂ ಧಾರಾಳವಾಗಿ ಸಿಕ್ಕುವುದು. ಖನಿಜಗಳಲ್ಲಿ ಉಪ್ಪೊಂದನ್ನೇ ಜನರು ಆಹಾರವಾಗಿ ಉಪಯೋಗಿಸುವರು. ಹರಳು ಹರಳಾಗಿಯೂ ಬೆಳ್ಳಗೂ ಇರುವ ಈ ವಸ್ತುವನ್ನು ಎಲ್ಲರೂ ಬಲ್ಲರು. ಇದಿಲ್ಲದಿರುವ ಮನೆಯೇ ಇಲ್ಲ. ಇಂಡಿಯಾ ದೇಶದಲ್ಲಿ ಸಮುದ್ರದ ಉಪ್ಪು, ಬಂಡೆಗಳಲ್ಲಿ ದೊರೆವ ಉಪ್ಪು, ಜೋಗು ಪ್ರದೇಶದ ಉಪ್ಪು, ಮಣ್ಣಿನಿಂದ ಮಾಡಿದ ಚಾಳುಪ್ಪು ಎಂದು ನಾಲ್ಕು ವಿಧವಾದ ಉಪ್ಪು ದೊರೆವುದು.

ಉಪ್ಪಿನ ಗಣಿಗಳು ಇಂಗ್ಲೆಂಡಿನ ಚಷೈರಿನಲ್ಲೂ, ಫ್ರಾನ್ಸ್, ಹಂಗೆರಿ, ಪೋಲೆಂಡ್, ಪ್ರಷ್ಯಾ, ಜರ್ಮನೀ ದೇಶಗಳಲ್ಲಿಯೂ ಇರುವುವು. ಆಫ್ರಿಕಾ ಖಂಡದ ಸಹಾರಾ ಮರಳುಕಾಡಿನಲ್ಲಿ ಉಪ್ಪಿನ ಪ್ರದೇಶಗಳಿವೆ. ಇಂಡಿಯಾ ದೇಶದ ಪಂಜಾಬಿನಲ್ಲಿ ಉಪ್ಪಿನ ಬೆಟ್ಟವೂ ಉಪ್ಪಿನ ಪ್ರದೇಶಗಳೂ ಇರುವುವು. ಇಲ್ಲಿಯ ಸಮುದ್ರತೀರದ ಅನೇಕ ಸ್ಥಳಗಳಲ್ಲಿ ಸಮುದ್ರದ ನೀರಿನಿಂದಲೂ, ರಾಜಪುಟಾನ ದೇಶದ ಸಾಂಬರ್ ಮೊದಲಾದ ದೊಡ್ಡ ಸರೋವರಗಳ ನೀರಿನಿಂದಲೂ, ಗುಜರಾತಿನಲ್ಲಿ ಕೆಲವು ಭಾವಿಗಳ ನೀರಿನಿಂದಲೂ ಉಪ್ಪು ಮಾಡುವರು. ಪಂಜಾಬಿಗೆ ಸೇರಿದ ಬೆಟ್ಟದ ಉಪ್ಪು ಅತ್ಯಂತ ನಿರ್ಮಲವಾದುದು.

ಲೋಹಗಳನ್ನು ಗಣಿಗಳಿಂದ ತೆಗೆವಂತೆಯೇ ಉಪ್ಪನ್ನೂ ಅಗೆದು ತೆಗೆಯುತ್ತಾರೆ. ಹೀಗೆ ತೆಗೆದ ಉಪ್ಪನ್ನು ಕಲ್ಲುಪ್ಪು ಎನ್ನುವರು. ಇದು ಬಂಡೆಗಳ

ಹಾಗೆ ಭೂಮಿಯೊಳಗೆ ಮಣ್ಣುಮುಂತಾದ ಕಶ್ಮಲಗಳೊಂದಿಗೆಸೇರಿರುತ್ತದೆ. ಇದನ್ನು ತುಂಡುತುಂಡಾಗಿ ಕತ್ತರಿಸಿ ನೀರಿನಲ್ಲಿ ಕರಗಿಸಿ, ಆ ಉಪ್ಪುನೀರನ್ನು ಯಂತ್ರದಿಂದ ಮೇಲಕ್ಕೆತ್ತಿ ಪಾತ್ರೆಗಳಲ್ಲಿ ಹಾಕಿ ಕಾಯಿಸಿ ಶೋಧಿಸುತ್ತಾರೆ. ಇದರಿಂದ ಕಶ್ಮಲಗಳು ಬೇರ್ಪಡುತ್ತವೆ. ಬಳಿಕ ಆ ನೀರನ್ನು ದೊಡ್ಡ ಪಾತ್ರೆಗಳಲ್ಲಿ ಕುದಿಸಿದರೆ ನೀರೆಲ್ಲಾ ಆವಿಯಾಗಿ ಹೋಗಿ ಶುದ್ಧವಾದ ಉಪ್ಪು ತಳದಲ್ಲಿ ಉಳಿವುದು.

ಸಮುದ್ರತೀರದ ಸರಿಯಾದ ಸ್ಥಳದಲ್ಲಿ ಆಳವಿಲ್ಲದ ದೊಡ್ಡ ಪಾತೆಗಳನ್ನು ಮಾಡಿ, ಅವುಗಳಿಗೆ ಸಮುದ್ರದ ನೀರನ್ನು ಹಾಯಿಸುತ್ತಾರೆ. ಈ ನೀರು ಬಿಸಿಲಿಂದ ಇಂಗಿಹೋಗಿ ತಳದಲ್ಲಿ ಉಪ್ಪು ನಿಲ್ಲುತ್ತದೆ. ಕೆಲವು ಕಡೆ ಉಪ್ಪು-ನೀರಿನ ಚಿಲುಮೆಗಳಿವೆ. ಇವುಗಳ ನೀರಿನಿಂದಲೂ ಹೀಗೆಯೇ ಉಪ್ಪನ್ನು ಪಡೆವುದುಂಟು. ಮಣ್ಣಿನಿಂದ ಉಪ್ಪನ್ನು ಮಾಡುವಾಗ, ಮೊದಲು ಚೌಳು-ಮಣ್ಣನ್ನು ನೀರಿನಲ್ಲಿ ನನೆಯಿಸಿ, ಆ ನೀರೆಲ್ಲಾ ಒಂದು ಕೆರೆಗೆ ಹರಿವಂತೆ ಮಾಡಿ, ಅಲ್ಲಿಂದ ಸಣ್ಣ ಕೊಳಗಳಿಗೆ ಬಿಟ್ಟು ನೀರನ್ನು ಇಂಗಿಸಿ ಉಪ್ಪನ್ನು ತೆಗೆವರು.

ಉಪ್ಪಿನ ಆವಶ್ಯಕತೆ ಅಷ್ಟಿಷ್ಟೆನ್ನಲು ಸಾಧ್ಯವಲ್ಲ. "ಉಪ್ಪರಿಗೆ ಮನೆ-ಯವನಾದರೂ ಉಪ್ಪಿಲ್ಲದೆ ಆಗದು'' ಎಂಬಂತೆ ಎಷ್ಟು ದೊಡ್ಡ ಹಣಗಾರ-ರಾದರೂ ಉಪ್ಪಿಲ್ಲದೆ ಬದುಕಲಾರರು. ಮನುಷ್ಯರಿಗೂ ದನಕರುಗಳಿಗೂ ಉಪ್ಪುಆಹಾರದೊಡನೆ ಸೇರಬೇಕು. ಇದು ನಮ್ಮ ಆಹಾರಕ್ಕೆ ರುಚಿಕೊಡು-ತ್ತದೆ. ನಮ್ಮ ಆರೋಗ್ಯಕ್ಕೆ ಅಗತ್ಯವಾಗಿ ಬೇಕಾದುದು. ಉಪ್ಪು ಒಳ್ಳೆಯ ಜೀರ್ಣಕಾರಿ. ತಕ್ಕಷ್ಟು ಉಪ್ಪನ್ನು ತಿನ್ನದಿದ್ದರೆ ದೇಹದಲ್ಲಿ ಮಾಂಸವು ಕ್ಷೀಣ-ವಾಗುವುದು. ಹೆಚ್ಚಾಗಿ ತಿಂದರೆ ಮಾಂಸವು ದುರ್ಬಲವಾಗಿ ಕೊಬ್ಬು ಹೆಚ್ಚು-ವುದು. ಹಡಗಿನಲ್ಲಿ ಪ್ರಯಾಣಮಾಡುವಾಗ ಆಹಾರಕ್ಕೆ ಮಾಂಸವು ಆಗಾಗ್ಗೆ ದೊರೆವುದಿಲ್ಲ. ಆದುದರಿಂದ ಉಪ್ಪು ಸವರಿದ ಮಾಂಸವು ಬಹುಕಾಲ ಕೆಡದಿರುವುದರಿಂದ ಇದನ್ನು ಜತೆಯಲ್ಲಿ ತೆಗೆದುಕೊಂಡು ಹೋಗಿ ಬಹಳ ದಿನಗಳ ವರೆಗೆ ಉಪಯೋಗಿಸುವರು. ನಿಂಬೆಕಾಯಿ, ಮಾವಿನಕಾಯಿ ಮೊದಲಾದುವು ಉಪ್ಪಿನ ಸಂಸರ್ಗದಿಂದಲೇ ವರ್ಷಾಂತರಗಳ ವರೆಗೆ ಹುಳು ಬೀಳದೆ ಇರುತ್ತವೆ. ಉಪ್ಪನ್ನು ಗೊಬ್ಬರವಾಗಿಯೂ ಹಾಕುವುದುಂಟು; ಬಹಳ ಹೆಚ್ಚಾಗಿ ಹಾಕಿದರೆ ಗಿಡಗಳು ಸತ್ತುಹೋಗುವುವು. ಉಪ್ಪನ್ನು

ಔಷಧವಾಗಿಯೂ ತೆಗೆದುಕೊಳ್ಳಬಹುದು. ನೀರಿಗೆ ಸ್ವಲ್ಪ ಉಪ್ಪನ್ನು ಸೇರಿಸಿ-ಕೊಟ್ಟರೆ ವಾಂತಿಯಾಗುವುದು. ಸಸ್ಯಸಂಬಂಧವಾದ ವಿಷವನ್ನು ಉಪ್ಪು ನಾಶಮಾಡುತ್ತದೆ. ಮಣ್ಣಿನ ಪಾತ್ರೆಗಳಿಗೆ ಹೊಳಪು ಕೊಡುವುದು, ಉಕ್ಕನ್ನು ಗಟ್ಟಿಮಾಡುವುದು, ಸೋಡಾಮಾಡುವುದು ಇವು ಮೊದಲಾದ ಕೈಗಾರಿ-ಕೆಯ ಕೆಲಸಗಳಲ್ಲಿ ಉಪ್ಪನ್ನು ಬಹಳವಾಗಿ ಉಪಯೋಗಿಸುವರು. ಆಫ್ರಿಕಾ, ಅರೇಬಿಯಾ ಸೀಮೆಗಳಲ್ಲಿ ಉಪ್ಪಿನ ಹಲಗೆಗಳಿಂದ ಮನೆಗಳನ್ನು ಕಟ್ಟುತ್ತಾರೆ.

## 17. ಕಲ್ಲಿದ್ದಲು.

ಸಾವಿರಾರು ವರ್ಷಗಳ ಹಿಂದೆ ಭೂಮಿಯಮೇಲೆ ಬೆಳೆಯುತ್ತಿದ್ದ ಮರ-ಗಳು ಭೂಮಿಯೊಳಗೆ ಹೂತುಹೋಗಿ, ಅವುಗಳ ಮೇಲೆ ಬಿದ್ದ ವಸ್ತುಗಳ ಭಾರದಿಂದಲೂ ಭೂಮಿಯೊಳಗಣ ಶಾಖದಿಂದಲೂ ಬದಲಾವಣೆ ಹೊಂದಿ ಕಲ್ಲಿದ್ದಲಾದುವೆಂದು ಶಾಸ್ತ್ರಜ್ಞರು ನಿರ್ಧರಿಸಿರುತ್ತಾರೆ. ಒಂದು ಕಲ್ಲಿದ್ದಲ ಚೂರನ್ನು ಸೀಳಿನೋಡಿದರೆ ಮರದ ರೆಂಬೆಗಳ ಮತ್ತು ಎಲೆಗಳ ಗುರುತುಗಳು ಕಾಣಿಸುವುವು. ಮುಖ್ಯವಾದ ಖನಿಜಗಳಲ್ಲಿ ಕಲ್ಲಿದ್ದಲೊಂದಾಗಿದೆ. ಸುಲ-ಭವಾಗಿ ಹತ್ತಿಕೊಂಡು ಜ್ವಾಲೆಯೊಡನೆ ಉರಿವುದೆಂತಲೂ, ಸುಲಭವಾಗಿ ಹತ್ತದೆ ಬಹು ಶಾಖವನ್ನು ಕೊಡುತ್ತಾ ಜ್ವಾಲೆಯಿಲ್ಲದಿರುವುದೆಂತಲೂ ಕಲ್ಲಿದ್ದಲಿನಲ್ಲಿ ಎರಡು ಬಗೆಗಳುಂಟು.

ಕಲ್ಲಿದ್ದಲು ಇಂಗ್ಲೆಂಡ್, ಐರ್ಲೆಂಡ್, ಅಮೆರಿಕಾ ಖಂಡದ ಸಂಯುಕ್ತ ರಾಜ್ಯ, ಚೀನಾ, ಜಪಾನ್ ಮೊದಲಾದ ಅನೇಕ ದೇಶಗಳಲ್ಲಿ ದೊರೆವುದು. ಇಂಡಿಯಾದಲ್ಲಿ ಹೈದರಾಬಾದ್, ಮಧ್ಯಪ್ರಾಂತ್ಯ, ಆಸಾಂ ಸೀಮೆಗಳಲ್ಲಿ ಮಿತವಾಗಿಯೂ ಬಂಗಾಳದಲ್ಲಿ ಹೇರಳವಾಗಿಯೂ ಸಿಕ್ಕುತ್ತದೆ. ಬಂಗಾ-ಳದ ರಾಣಿಗಂಜ್ ಎಂಬಲ್ಲಿ ಅತ್ಯಧಿಕವಾಗಿ ಸಿಕ್ಕುವುದು; ಆದರೆ ಆಸಾಂ-ದೇಶದ ಕಲಿದ್ದಲು ಶ್ರೇಷ್ಠವಾದುದು. ಕಲ್ಲಿದ್ದಲು ಇಂಡಿಯಾದೇಶದಲ್ಲಿರು-ವಷ್ಟು ಬೇರೆ ಸೀಮೆಗಳಲ್ಲಿಲ್ಲ. ಇಲ್ಲಿ ಎರಡು ಸಾವಿರ ಕೋಟಿ ಟನ್ ತೂಕ ಕಲ್ಲಿದ್ದಲು ಭೂಮಿಯೊಳಗಿದೆಯೆಂದು ಒಬ್ಬದೊಡ್ಡ ಶಾಸ್ತ್ರಜ್ಞನು ಗೊತ್ತು-ಮಾಡಿದ್ದಾನೆ. ಹೀಗಿದ್ದರೂ ಈ ದೇಶದಲ್ಲಿ ಕಲ್ಲಿದ್ದಲನ್ನು ಭೂಮಿಯಿಂದ ಎತ್ತುವುದಕ್ಕೆ ಬೇಕಾದ ಯಂತ್ರಗಳ ಸಹಾಯವಿಲ್ಲದಿರುವುದರಿಂದಲೂ, ಸ್ಥಳ-

ದಿಂದ ಸ್ಥಳಕ್ಕೆ ಭೂಮಿಯಮೇಲೆ ಕಲ್ಲಿದ್ದಲನ್ನು ಸಾಗಿಸುವ ವೆಚ್ಚವು ಸಮುದ್ರದ ಮೇಲೆ ಸಾಗಿಸುವ ವೆಚ್ಚಕ್ಕಿಂತ ಹೆಚ್ಚಾಗುವುದರಿಂದಲೂ ಈ ದೇಶಕ್ಕೆ ಅನ್ಯದೇಶಗಳಿಂದಲೇ ಕಲ್ಲಿದ್ದಲು ವಿಶೇಷವಾಗಿ ಬರುತ್ತಿದೆ.

ಕಲ್ಲಿದ್ದಲನ್ನು ಗಣಿಗಳಿಂದ ಎತ್ತುತ್ತಾರೆ. ಮೊಟ್ಟಮೊದಲು ಕಬ್ಬಿಣದ ಕೊಳವೆಗಳಿಂದ ಭೂಮಿಯನ್ನು ಕೊರೆದು ಎಷ್ಟು ಆಳದಲ್ಲಿ ಕಲ್ಲಿದ್ದಲು ಸಿಕ್ಕುವುದೆಂದು ನಿಶ್ಚಯಿಸುವರು. ಬಳಿಕ ಐದಡಿಯಿಂದ ಹತ್ತಡಿ ಅಗಲತೆಯುಳ್ಳ ಗುಂಡಾದ ಒಂದು ಹಳ್ಳವನ್ನು ಆಳವಾಗಿ ತೋಡುವರು. ಆ ಹಳ್ಳದಲ್ಲಿ ಕಲ್ಲಿದ್ದಲು ಸಿಕ್ಕುತ್ತಲೆ ಆ ಕಲ್ಲಿದ್ದಲಲ್ಲಿ ಉದ್ದವಾದ ಓಣಿಗಳನ್ನು ಆ ಹಳ್ಳದ ಎಡಕ್ಕೂ ಬಲಕ್ಕೂ ಮಾಡುವರು. ಈ ಓಣಿಗಳಿಗೆ ಅಡ್ಡಲಾಗಿ ಅನೇಕ ಸಣ್ಣ ಓಣಿಗಳನ್ನೂ ಅವಕ್ಕೆ ಅಡ್ಡಲಾಗಿ ಮತ್ತೆ ಬೇರೆ ಓಣಿಗಳನ್ನೂ ಕಲ್ಲಿದ್ದಲಿನಲ್ಲಿಯೇ ತೋಡುವರು. ಒಂದೇಸಲ ಒಟ್ಟಿಗೆ ದೊಡ್ಡ ಗಟ್ಟಿಗಳನ್ನು ಸುರಂಗಹಾಕಿ ಎಬ್ಬಿಸುವುದೂ ಉಂಟು. ಗಣಿಯೊಳಗೆ ಕೆಲಸಮಾಡುವ ಜನರ ಶ್ವಾಸೋಚ್ಛ್ವಾಸಗಳಿಗಾಗಿ ಇನ್ನೆರಡು ಹಳ್ಳಗಳನ್ನು ಭೂಮಿಯಮೇಲಿಂದ ಕೊರೆಯುವರು. ಸಿಕ್ಕಿದ ಕಲ್ಲಿದ್ದಲನ್ನೆಲ್ಲಾ ಕಬ್ಬಿಣದ ಭಾಟೆಗಳ ಮೇಲೆ ಗಾಡಿಗಳಲ್ಲಿ ಗಣಿಯ ಬಾಯಿಗೆ ಸಾಗಿಸಿ ಬಲವಾದ ಯಂತ್ರಗಳ ಸಹಾಯದಿಂದ ಅದನ್ನು ಭೂಮಿಯ ಮೇಲಕ್ಕೆ ತಳ್ಳುವರು.

ಕಲ್ಲಿದ್ದಲು ಕರಿದಾಗಿಯೂ ಗಟ್ಟಿಯಾಗಿಯೂ ಮಿಂಚುತ್ತಲೂ ಇರುವುದು. ಇದು ಪಾರದರ್ಶಕವಲ್ಲ. ಕೆಳಗಡೆ ಎತ್ತಿಹಾಕಿದರೆ ಚೂರುಚೂರಾಗಿ ಮುರಿದುಹೋಗುವುದು. ಬೆಂಕಿಗೆ ಹಿಡಿದರೆ ಹತ್ತಿಕೊಂಡು ಉರಿವುದು. ಕಲ್ಲಿದ್ದಲು ಬಳಕೆಯ ಸೌದೆಗಿಂತ ಹೆಚ್ಚು ಕಾವನ್ನು ಕೊಡುತ್ತದೆ.

ಕಲ್ಲಿದ್ದಲಿಂದ ಬಹಳ ಪ್ರಯೋಜನಗಳುಂಟು. ಚಳಿ ಸೀಮೆಗಳಲ್ಲಿ ಸೌದೆಗೆ ಬದಲು ಕಲ್ಲಿದ್ದಲನ್ನೇ ಉರಿಸುವರು. ಕಲ್ಲಿದ್ದಲಿಂದಾಗುವ ಒಂದು ಬಗೆಯ ವಾಯು ಉರಿವುದರಿಂದ, ಇದನ್ನು ಇಂಗ್ಲೆಂಡ್ ಮೊದಲಾದ ದೇಶಗಳಲ್ಲಿಯೂ ಮುಖ್ಯಮುಖ್ಯಪಟ್ಟಣಗಳಲ್ಲಿಯೂದೀಪವಾಗಿ ಉರಿಸುವರು. ಹೊಗೆಬಂಡಿ, ಹೊಗೆಹಡಗುಗಳು ಸಂಚರಿಸುವುದಕ್ಕೆ ಕಲ್ಲಿದ್ದಲು ಅತ್ಯಾವಶ್ಯಕವು. ಕೈಗಾರಿಕೆಯ ಕಾರ್ಖಾನೆಗಳಲ್ಲಿಯೂ ಬಗೆಬಗೆಯ ಹೊಗೆಯಂತ್ರಗಳು

ನಡೆಯಲು ಕಲ್ಲಿದ್ದಲು ಬೇಕಾಗುವುದರಿಂದ ಇದು ನಾನಾವಿಧವಾದ ಕಸಬುಗಳಿಗೆ ಆಧಾರವಾಗಿದೆ. ಇಂಗ್ಲಂಡಿನ ಐಶ್ವರ್ಯಕ್ಕೆ ಕಲ್ಲಿದ್ದಲೇ ಮುಖ್ಯ ಕಾರಣವೆಂದು ಅನೇಕಪಂಡಿತರು ಅಭಿಪ್ರಾಯಪಡುವರು. ಕಲ್ಲಿದ್ದಲಿಂದ ಬಟ್ಟಲು, ಮಸಿಯ ದಾತಿ, ಪೆಟ್ಟಿಗೆ ಮುಂತಾದುವನ್ನೂ ಮಾಡುವುದುಂಟು. ಇದರಿಂದ ತರತರದ ಬಣ್ಣಗಳೂ ಆಗುವುವು.

## 18. ರೈತ.

ವ್ಯವಸಾಯವು ಸ್ವತಂತ್ರವಾದ ಜೀವನೋಪಾಯಗಳಲ್ಲಿ ಅತ್ಯುತ್ತಮವಾದುದು. ವ್ಯವಸಾಯವನ್ನು ಅವಲಂಬಿಸಿ ದುಡಿವ ರೈತನ ಜೀವನವು ಶ್ಲಾಘ್ಯವಾದುದು. ಬಹಳ ಆಸೆಯಿಲ್ಲದೆ ಶಾಂತಚಿತ್ತನಾಗಿರುವವನಿಗೆ ರೈತನ ಬದುಕು ಯೋಗ್ಯವಾಗಿರುವುದು. ದೊಡ್ಡ ದೊಡ್ಡ ಪಟ್ಟಣಗಳ ಗದ್ದಲದಿಂದ ಮನಸ್ಸು ಕೆಡದೆ ರೈತನು ನಿಶ್ಶಬ್ದವಾಗಿರುವ ಹಳ್ಳಿಗಾಡಿದಲ್ಲಿ ತೃಪ್ತಿಯೊಡನೆ ಸುಖವಾಗಿ ಬದುಕುವನು. ಅವನು ಬೆಳಗಿನಿಂದ ಸಂಜೆಯ ವರೆಗೂ ಕಷ್ಟಪಟ್ಟು ಕೆಲಸಮಾಡುತ್ತಿರುವನು. ವರ್ಷದ ಸರ್ವಕಾಲಗಳಲ್ಲಿಯೂ ಒಂದೊಂದು ಕೆಲಸವನ್ನು ಇಟ್ಟುಕೊಂಡಿರುವನೇ ಹೊರತು ವ್ಯರ್ಥವಾಗಿ ಎಂದಿಗೂ ಕಾಲವನ್ನು ಕಳೆಯನು. ತಾನು ಆರಂಬಮಾಡಿ ಬೆಳೆದುದೇ ರೈತನಿಗೆ ಸಾಕು. ಅಷ್ಟರಲ್ಲಿಯೇ ತೃಪ್ತಿಪಟ್ಟುಕೊಂಡು, ತನ್ನ ಯೋಗ್ಯತೆ ಮೀರಿದ ವೆಚ್ಚಕ್ಕೆ ಎಂದಿಗೂ ಹೋಗನು. ತನ್ನ ಆದಾಯಕ್ಕೆ ತಕ್ಕಂತೆ ವ್ಯಯಮಾಡುತ್ತಾ ಬೆಳೆಯಲ್ಲಿ ಸ್ವಲ್ಪಭಾಗವನ್ನು ಪ್ರತಿವರ್ಷವೂ ಕೂಡಿಡುವನು. ದುಂದುಮಾಡಿ ಕೆಟ್ಟಿರುವ ರೈತನೇ ನಮ್ಮ ಸೀಮೆಯಲ್ಲಿಲ್ಲವೆಂದು ಹೇಳಬಹುದು. ರೈತನಿಂದ ಮಿತವ್ಯಯವೆಂಬ ಸುಗುಣವನ್ನು ಎಲ್ಲರೂ ಕಲಿಯಬೇಕಾಗಿದೆ. ಅವನ ಪ್ರಾಮಾಣಿಕತೆಯೂ, ದೈವಭಕ್ತಿಯೂ, ರಾಜಭಕ್ತಿಯೂ, ಎಲ್ಲರಿಗೂ ಮೇಲ್ಪಂಕ್ತಿಯಾಗಿವೆ. ಸರಕಾರವೆಂದರೆ ರೈತನಿಗೆ ಬಹಳ ಭಯ. ಇದನ್ನು ಕಂಡು ಸರಕಾರದ ಕೆಲವು ಕೆಟ್ಟ ನಾಕರರು ರೈತರನ್ನು ಹೆದರಿಸಿ ಅನ್ಯಾಯವಾಗಿ ಹಣವನ್ನು ಸುಲಿದುಕೊಳ್ಳುವುದುಂಟು. ರೈತನು ತನ್ನ ಕುಲಾಚಾರಗಳನ್ನು ಬಿಟ್ಟು ಎಂದಿಗೂ ನಡೆಯನು. ರೈತನ ತಾಳ್ಮೆಗೆ ಪಾರವಿಲ್ಲ; ಎಷ್ಟು ಕಷ್ಟಪನ್ನಾದರೂ ಸಹಿಸಿಕೊಳ್ಳುವನು. ಕಷ್ಟಕ್ಕೆ ಅಂಜದೆ ತನ್ನ ಕರ್ತವ್ಯವನ್ನು ದೇವ-

ರಮೇಲೆ ಭಾರಹಾಕಿ ಮನಃಪೂರ್ವಕವಾಗಿ ಮಾಡುವನು. ವರ್ತಕನೂ ಸರ-ಕಾರದ ಬಡನಾಕರರೂ ಕುಳಿತೆಡೆಯಲ್ಲಿಯೇ ಬಹಳಹೊತ್ತು ಕುಳಿತುಕೊಂ-ಡಿರಬೇಕಾಗುವುದರಿಂದ ಅವರಿಗೆ ಕೈಕಾಲುಗಳು ಕಟ್ಟಿಹಾಕಿದಹಾಗಾಗಿ ಶುದ್ಧವಾದ ಗಾಳಿಗೆ ಹೋಗಿ ಉಸಿರುಬಿಡಲು ಅವಕಾಶವಿಲ್ಲದೆ ನಿರ್ಬಲರಾಗಿ ಅನಾರೋಗ್ಯವು ಬರಬಹುದು. ರೈತನಾದರೋ ಹಗಲೆಲ್ಲಾ ನಿರ್ಮಲ-ವಾಯುವಿನಲ್ಲಿಯೇ ಕೆಲಸಮಾಡಬೇಕಾಗಿರುವುದರಿಂದ ಅತಿಶಯವಾದ ಆರೋಗ್ಯವನ್ನೂ ದೇಹದಾರ್ಢ್ಯವನ್ನೂ ಅನುಭವಿಸುವನು.

ರೈತನನ್ನೂ ಅವನ ವೃತ್ತಿಯನ್ನೂ ಜರೆವುದು ಕೆಲವರ ಪದ್ಧತಿ. ಚೆನ್ನಾಗಿ ಪರ್ಯಾಲೋಚಿಸಿದರೆ, ಇದು ಕೇವಲ ಅಯುಕ್ತವೆಂದು ತೋರುವುದು. ರೈತರು ಹಗಲೂ ಇರುಳೂ ದುಡಿದು ಕೆಲಸಮಾಡಿ ಬೆಳೆಯದಿದ್ದರೆ ನಮ್ಮೆಲ್ಲ-ರಿಗೂ ಅನ್ನವೆಲ್ಲಿಯದು? ಒಂದುವರ್ಷ ಸರಿಯಾಗಿ ಮಳೆಯಾಗದೆ ಬೆಳೆಕೆಟ್ಟರೆ ಎಷ್ಟೋ ತೊಂದರೆಯಾಗುವುದು. ಹೀಗಿರಲು ನಮ್ಮ ದೇಶದ ರೈತರೆಲ್ಲಾ ಒಂದೇಸಾರಿ ಆರಂಬಮಾಡದೆ ನಿಂತುಬಿಟ್ಟರೆ, ನಮ್ಮ ಗತಿಯೇನಾಗಬೇಕು? ರೈತರೇ ಜನಾಂಗದ ಏಳಿಗೆಗೆ ಮೂಲಾಧಾರ. ಯಾವ ದೇಶದ ರೈತರು ದುಂದುಗಾರರೂ ಡಾಂಭಿಕರೂ ಸೋಮಾರಿಗಳೂ ಆಗುವರೋ ಆ ದೇಶವು ಸ್ವಲ್ಪಕಾಲದಲ್ಲಿಯೇ ಕೊನೆಗಾಣುವುದೆಂಬುದರಲ್ಲಿ ಸಂದೇಹವಿಲ್ಲ. ಈ ವಿಷ-ಯವನ್ನು ಅರಿತವರೊಬ್ಬರೂ ರೈತರನ್ನು ನೋಡಿ ನಗಲಾರರು. ರೈತರು ಬೆಳೆದ ದವಸಗಳು ಅವರಿಗೂ ಅವರ ಸುತ್ತಮುತ್ತ ಹಳ್ಳಿಗಳಲ್ಲಿರುವವರಿಗೂ ಉಪ-ಯುಕ್ತವಾಗಿರುವುವಲ್ಲದೆ, ದೊಡ್ಡ ಪಟ್ಟಣಗಳಲ್ಲಿರುವ ಲಕ್ಷಾಂತರ ಪ್ರಜೆಗಳ ಪ್ರಾಣವನ್ನುಳಿಸುವುವು. ಅವರಿಗಾದ ಬಳಿಕ ಉಳಿದುದು ಸಮುದ್ರದ ಮೇಲೆ ಇಂಗ್ಲೆಂಡ್ ಮುಂತಾದ ಪಶ್ಚಿಮ ದೇಶಗಳಿಗೂ ಹೋಗುತ್ತವೆ. ಹೀಗೆ ರೈತರು ತಮ್ಮ ಸೀಮೆಯವರಿಗಲ್ಲದೆ, ಅನ್ಯದೇಶಗಳ ಗಣಿಗಳಲ್ಲಿಯೂ ಕಾರ್ಖಾನೆಗ-ಳಲ್ಲಿಯೂ ಕೆಲಸಮಾಡುವ ಸಾವಿರಾರು ಕೂಲಿಯವರಿಗೆ ಆಹಾರವನ್ನು ಒದ-ಗಿಸಿಕೊಟ್ಟು ಅಲ್ಲಿಂದ ಹತ್ತಿ, ಬಟ್ಟೆ, ಕಬ್ಬಿಣದ ಸಾಮಾನು, ಉಕ್ಕಿನ ಆಯುಧ ಮೊದಲಾದ ವಸ್ತುಗಳನ್ನು ತರಿಸಿಕೊಳ್ಳಲು ಸಹಕಾರಿಗಳಾಗಿದ್ದಾರೆ.

## 19. ಗಿಡಗಳು.

ಗಿಡಗಳು ಆಕಾರದಲ್ಲಿಯೂ ಗಾತ್ರದಲ್ಲಿಯೂ ಮನುಷ್ಯರಂತೆ ನಾನಾವಿಧ-ಗಳಾಗಿವೆ. ಕೆಲವು ಗಿಡಗಳು ಕೊಂಬೆಗಳಿಲ್ಲದೆ ಕೋಲಿನಂತೆ ಎತ್ತರವಾಗಿ

ಬೆಳೆವುವು. ಇನ್ನು ಕೆಲವು ವಿಶೇಷವಾಗಿ ರೆಂಬೆಗಳೂ ಎಲೆಗಳೂ ತುಂಬಿಕೊಂಡು ನಾಲ್ಕು ಕಡೆಗೂ ಹರಡಿಕೊಳ್ಳುತ್ತವೆ. ಶೀತದೇಶಗಳಲ್ಲಿ ಕೆಲವು ಗಿಡಗಳು ಬೇರಿನಿಂದ ತುದಿವರೆಗೆ ಮೂರು ನಾಲ್ಕಂಗುಲಗಳುದ್ದ ಇವೆ. ಉಷ್ಣರಾಜ್ಯಗಳಲ್ಲಿ ಕೆಲವು ಮರಗಳು ಮುನ್ನೂರಡಿ ಎತ್ತರ ಬೆಳೆವುದುಂಟು. ಪ್ರತಿಯೊಂದು ಗಿಡವೂ ಬೀಜದಿಂದಾದುದು. ಮೊದಲು ಬೀಜವು ಮೊಳೆತು ಸಸಿಯಾಗಿ ಆ ಮೇಲೆ ದೊಡ್ಡ ಗಿಡವಾಗುತ್ತದೆ. ಗಿಡಗಳಿಗೆ ನಮ್ಮಂತೆ ದೇಹಗಳೂ ಅವಯವಗಳೂ ಉಂಟು. ನಾವು ಆಹಾರವನ್ನು ಹೊಟ್ಟೆಯೊಳಕ್ಕೆ ತೆಗೆದುಕೊಳ್ಳುವಂತೆ ವೃಕ್ಷಗಳೂ ತಮ್ಮ ಆಹಾರವನ್ನು ಹೊರಗಿನ ಗಾಳಿಯಿಂದ ಎಲೆಗಳ ಮೂಲಕ ಎಳೆದುಕೊಳ್ಳುತ್ತವೆ. ನಮ್ಮ ಆಹಾರವನ್ನು ರಕ್ತವು ಸಕಲಾವಯವಗಳಿಗೂ ಹೊತ್ತುಕೊಂಡು ಹೋಗಿ ನಮ್ಮ ದೇಹವನ್ನು ಪೋಷಿಸುವಂತೆ, ಎಲೆಗಳ ಮೂಲಕ ಒಳಕ್ಕೆ ತೆಗೆದುಕೊಂಡ ಆಹಾರವನ್ನು ಗಿಡದ ರಸವು ಎಲ್ಲಾ ಭಾಗಗಳಿಗೂ ನಡೆಸುತ್ತದೆ. ಪ್ರತಿ ವರ್ಷವೂ ಒಂದು ಋತುವಿನಲ್ಲಿ ಒಂದೊಂದು ವೃಕ್ಷಕ್ಕೂ ಎಲೆಗಳೆಲ್ಲಾ ಉದುರಿಹೋಗಿ ಇನ್ನೊಂದು ಋತುವಿನಲ್ಲಿ ಮತ್ತೆ ಹುಟ್ಟುವುವು.

ಮನುಷ್ಯರಲ್ಲಿ ಕೆಲವರು ಅದ್ಭುತವಾದ ಗುಣವುಳ್ಳವರಾಗಿರುವರಷ್ಟೆ. ಹಾಗೆಯೇ ವೃಕ್ಷಗಳಲ್ಲಿಯೂ ಕೆಲವು ವಿಲಕ್ಷಣಗುಣವುಳ್ಳವು ಇವೆ. ದಕ್ಷಿಣ ಅಮೆರಿಕಾ ಖಂಡದಲ್ಲಿ ಪಶುವೃಕ್ಷವೆಂಬ ಒಂದು ವಿಚಿತ್ರವಾದ ವೃಕ್ಷವುಂಟು. ಅದನ್ನು ಮೊನೆಯುಳ್ಳ ಆಯುಧದಿಂದ ಚುಚ್ಚಿದಕೂಡಲೇ ಹಸುವಿನ ಹಾಲಿನಂತಿರುವ ರಸವು ಅದರಲ್ಲಿ ಹೊರಡುವುದು. ಸೂರ್ಯೋದಯ ಕಾಲದಲ್ಲಿ ಅಧಿಕವಾಗಿ ಹೊರಡುವ ಈ ರಸವನ್ನು ಅಲ್ಲಿನ ಜನರು, ದೊಡ್ಡ ಪಾತ್ರೆಗಳಲ್ಲಿ ಹಿಡಿದು ಅಲ್ಲಿಯೇ ಕುಡಿವರು. ಅದೇ ಸೀಮೆಯಲ್ಲಿ ವಸ್ತ್ರವೃಕ್ಷವೆಂಬ ಇನ್ನೊಂದು ತರದ ಮರವಿದೆ. ಇದರ ಮುಂಡವನ್ನು ಮೂರಡಿಯ ತುಂಡುಗಳಾಗಿ ಕತ್ತರಿಸಿ ಒಂದೊಂದು ತುಂಡಿನಲ್ಲಿಯೂ ಇರುವ ತಿರುಳನ್ನು ತೆಗೆದು ಹಾಕಿದರೆ ಗಟ್ಟಿಯಾದ ತೊಗಟೆಯು ಮನುಷ್ಯಶರೀರ ಹಿಡಿವಷ್ಟು ಇರುವುದು. ಇದರ ಪಕ್ಕಗಳಲ್ಲಿ ಕೈತೂರಿಸುವುದಕ್ಕೆ ಸ್ಥಳ ಮಾಡಿಕೊಂಡು ಅಲ್ಲಿನ ಬೇಡರು ಇದನ್ನು ಅಂಗಿಯಂತೆ ತೊಟ್ಟುಕೊಳ್ಳುವರು. ಆಫ್ರಿಕಾಖಂಡದಲ್ಲಿ ಒಂದು ವಿಜಾತೀಯವಾದ ಮರವುಂಟು. ಇದರ ಕಾಯಿಯೊಳಗಿರುವ ತಿರುಳನ್ನು

ತೆಗೆದು ಒಣಗಿಸಿ ನೀರು ಹಾಕಿ ಪೇಯಿಸಿದರೆ ಬೆಣ್ಣೆಯಂತಿರುವ ವಸ್ತು-ವುಂಟಾಗುವುದು.

ಗಿಡಗಳು ಪ್ರಪಂಚದಲ್ಲಿ ಪರಮೋಪಕಾರಿಗಳಾದ ವಸ್ತುಗಳು. ಇವು ಭೂಮಿಗೆ ದೈವಿಕವಾದ ಆಭರಣಗಳು. ಗಿಡಗಳಿಲ್ಲದ ದೇಶವನ್ನು ನೋಡು-ವುದಕ್ಕೆ ಬೇಸರವಾಗುತ್ತದೆ. ಇವು ಸೂರ್ಯಕಿರಣಗಳ ಸಹಾಯದಿಂದ ವಾಯುವಿನಲ್ಲಿರುವ ಇಂಗಾಲಾಮ್ಲವೆಂಬ ಕೆಟ್ಟ ವಸ್ತುವನ್ನು ವಿಭಾಗಿಸಿ, ಇಂಗಾಲವನ್ನು ತಮ್ಮೆಲೆಗಳ ಮೂಲಕ ಗ್ರಹಿಸಿ ಉಳಿದ ಆಮ್ಲಜನಕವನ್ನು ಬಿಟ್ಟು ವಾಯುವನ್ನು ಶುದ್ಧಮಾಡುತ್ತವೆ. ಸಂಪಗೆ ಗುಲಾಬಿ ಮೊದಲಾದ ಸುವಾಸನೆಯುಳ್ಳ ಸೊಗಸಾದ ಹೂಗಳನ್ನು ಗಿಡಗಳು ಕೊಡುತ್ತವೆ. ಸವಿ-ಯಾದ ಒಳ್ಳೆಯ ಹಣ್ಣುಗಳೂ ಗಿಡಗಳಿಂದಲೇ ಆಗುತ್ತವೆ. ಇಂಗ್ಲೆಂಡಿನ ಸೇಬೂ, ಯೂರೋಪಿನ ದಕ್ಷಿಣದೇಶಗಳ ದ್ರಾಕ್ಷೀ ಕಿತ್ತಲೆ ಹಣ್ಣುಗಳೂ ನಮ್ಮ ದೇಶದ ತೆಂಗಿನಕಾಯಿ ಮಾವು ದಾಳಿಂಬೆ ಹಲಸಿನಹಣ್ಣುಗಳೂ ಇದಕ್ಕೆ ಉದಾಹರಣೆಗಳು.

ಗಿಡಗಳು ಬದುಕಿರುವಾಗಲ್ಲದೆ, ಕಡಿದು ನೆಲಕ್ಕೆ ಉರಳಿಸಿದ ಮೇಲೆಯೂ ಅಪಾರವಾದ ಉಪಕಾರಗಳನ್ನು ಮಾಡುವುವು. ಮರಗಳಿಲ್ಲದಿದ್ದರೆ ಜನರು ಒದುಕುವುದೇ ದುಸ್ತರವಾಗುತ್ತಿತ್ತು. ಮರದ ದೂಲಗಳೂ ಜಂತೆಗಳೂ ಹಲಗೆಗಳೂ ಇಲ್ಲದಿದ್ದರೆ ಮನೆಗಳನ್ನು ಕಟ್ಟಲಾದೀತೆ? ಕೆನಡಾ ಮತ್ತು ಪಶ್ಚಿಮ ಅಮೆರಿಕಾ ದೇಶಗಳಲ್ಲಿನ ಜನರು ಮರದ ತುಂಡುಗಳನ್ನು ಒಂದರ-ಮೇಲೊಂದಾಗಿಟ್ಟು ಮನೆ ಕಟ್ಟುತ್ತಾರೆ. ಇಟ್ಟಿಗೆಯಿಂದ ಇಲ್ಲವೆ ಕಲ್ಲಿನಿಂದ ಮನೆಗಳನ್ನು ಕಟ್ಟಿಸಿದರೂ, ಮರದ ಕಿಟಿಕಿಗಳೂ ಕದಗಳೂ ಕುರ್ಚಿ ಮೊದ-ಲಾದ ಸಾಮಾನುಗಳೂ ಆವಶ್ಯಕವಾಗಿ ಬೇಕಾಗುವುವು. ಮರದಿಂದಾಗುವ ದೋಣಿಗಳೂ ಹಡಗುಗಳೂ ಇಲ್ಲದಿದ್ದಲ್ಲಿ ದೊಡ್ಡ ನದಿಗಳನ್ನೂ ಸಮುದ್ರ-ವನ್ನೂ ದಾಟಲಾಗದೆ ಒಂದುದೇಶದವರಿಗೂ ದ್ವೀಪಾಂತರದವರಿಗೂ ಸಂಬಂ-ಧವೇ ಇಲ್ಲದೆ ಹೋಗುತ್ತಿತ್ತು. ಮರದಿಂದ ಮಾಡಿದ ಬಂಡಿಗಳೂ ಸಾರೋ-ಟುಗಳೂ ರೈಲುಗಾಡಿಗಳೂ ನಮ್ಮನ್ನು ಸ್ಥಳದಿಂದ ಸ್ಥಳಕ್ಕೆ ಒಯ್ಯುತ್ತವೆ. ಭೂಮಿಯ ವ್ಯವಸಾಯಕ್ಕೆ ಬೇಕಾದ ಸಾಮಾನುಗಳು ಮರದಿಂದ ಮಾಡ-

ಲ್ಪಡುತ್ತವೆ. ಆದುದರಿಂದ ಗಿಡಗಳು ಮರವನ್ನು ಒದಗಿಸದಿದ್ದರೆ, ವ್ಯವಸಾಯ ನಡೆಯದೆ ನಮ್ಮ ಹಿಟ್ಟಿಗೇ ಮಾರ್ಗವಿಲ್ಲದಂತಾಗುವುದು. ಮಕ್ಕಳ ಆಟದ ಸಾಮಾನನ್ನೂ ಎಷ್ಟೋ ವಿಧವಾದ ಅಲಂಕಾರ ವಸ್ತುಗಳನ್ನೂ ಮರದಲ್ಲಿಯೇ ಮಾಡುವರು. ಗಿಡಗಳಿಂದಾಗುವ ಇವು ಮೊದಲಾದ ಉಪಯೋಗಗಳನ್ನು ವರ್ಣಿಸಲಳವಲ್ಲ.

## 20. ಮಳೆಗಾಲದ ದಿನ.

ಮೋಡಮುಚ್ಚಿಕೊಂಡು ಮಳೆ ಬೀಳುತ್ತಿರುವ ದಿನಕ್ಕೆ ಸಂಸ್ಕೃತದಲ್ಲಿ ದುರ್ದಿನವೆಂದು ಹೆಸರು. ಈ ಹೆಸರಿನಿಂದಲೇ ಮಳೆಬಂದ ದಿನದಿಂದ ಬಹಳ ತೊಂದರೆಗಳಾಗುವುವೆಂಬುದು ವ್ಯಕ್ತವು. ಮೇಘಗಳು ಕವಿದುಕೊಂಡು ಕತ್ತಲೆಯಾಗಿ ಜನರಿಗೆ ದಿಕ್ಕು ತೋರದೆ ಮಂಕು ಮುಚ್ಚಿಕೊಂಡ ಹಾಗಿರುತ್ತದೆ. ಪಟ್ಟಣಗಳಿಗಿಂತ ಹಳ್ಳಿಗಳಲ್ಲಿ ಹೀಗೆ ವಿಶೇಷವಾಗಿ ಕಾಣುವುದು. ಹಳ್ಳಿಗಾಡಿನಲ್ಲಿ ಜನರು ಪ್ರಾಯಶಃ ಹೊರಗಡೆಯೇ ಕೆಲಸಮಾಡುವರು. ಆದುದರಿಂದ ಮಳೆಬಿದ್ದಾಗ ಅವರ ಕೆಲಸವು ಮನಸ್ಸಿಗೆ ಬೇಕಾಗಿರುವುದಿಲ್ಲ; ಕೆಲಸವು ನಡೆವುದೇ ದುಸ್ತರ. ಕೆಲಸ ಮಾಡದಿದ್ದಾಗ ಮನೆಬಿಟ್ಟು ಹೊರಗಡೆ ಎಲ್ಲಿಯೂ ಕದಲುವುದಕ್ಕಾಗದೆ, ತಮ್ಮ ಕತ್ತಲೆ ಗೂಡುಗಳಲ್ಲಿಯೇ ಇದ್ದುಕೊಂಡು ಏನು ಮಾಡಬೇಕೋ ತಿಳಿಯದೆ ಕಾಲಕಳೆವುದು ಕಷ್ಟವು. ಹಳ್ಳಿಗಳಲ್ಲಿ ರಸ್ತೆಗಳೂ ಕಲ್ಲಿನ ಚರಂಡಿಗಳೂ ಇರುವುದಿಲ್ಲವಾದಕಾರಣ, ಮಳೆನೀರುಸರಾಗವಾಗಿ ಊರಹೊರಗೆಹೋಗಲು ಅವಕಾಶವಿಲ್ಲದೆ ಬೀದಿಯೆಲ್ಲಾ ಕೆಸರಾಗಿ ಮನೆಯಿಂದ ಮನೆಗೆ ಹೋಗುವುದೇ ಅಸಹ್ಯವಾಗುವುದು.

ದೊಡ್ಡ ಪಟ್ಟಣಗಳಲ್ಲಿ ಮಳೆಯು ಅಷ್ಟು ತೊಂದರೆಗೆ ಕಾರಣವಾಗುವುದಿಲ್ಲ. ಪಟ್ಟಣವಾಸಿಗಳು ತಮ್ಮ ಬಲವಾದ ಮನೆಗಳಲ್ಲಿಯೇ ಪ್ರಾಯಶಃ ಕೆಲಸಮಾಡುತ್ತಿರುವರು. ಮೋಡಮುಚ್ಚಿಕೊಂಡಾಗ ಇಂಥ ಮನೆಗಳೂ ಸ್ವಲ್ಪ ಕತ್ತಲೆಯಿಂದ ರಮ್ಯವಾಗಿ ಕಾಣದಿರಬಹುದು. ಆದರೆ ಮನೆಗಳನ್ನು ಗಟ್ಟಿಯಾಗಿ ಕಟ್ಟಿರುವುದರಿಂದ ನೀರು ಸೋರುವುದಿಲ್ಲ. ದೊಡ್ಡ ಪಟ್ಟಣಗಳಲ್ಲಿ ಮಳೆನೀರು ಬಿದ್ದಕೂಡಲೆ ಚರಂಡಿಗಳ ಮೂಲಕ ಹರಿದು ಹೋಗುವುದರಿಂದ ಕೆಸರಾಗಲು ಅವಕಾಶವಿಲ್ಲ. ಮಳೆ ನಿಂತಕೂಡಲೆ ಹೊರಗೆ ಸಂಚಾರ

ಹೊರಡುವುದು ಹಳ್ಳಿಗಾಡಿನಷ್ಟು ಅಸಹ್ಯವಾಗುವುದಿಲ್ಲ. ಅನೇಕ ಪಟ್ಟಣಗಳಲ್ಲಿ ಬೆಳಕುಳ್ಳ ವಿಶಾಲವಾದ ಪುಸ್ತಕ ಭಂಡಾರಗಳೂ, ಸರ್ವವಸ್ತು ಪ್ರದರ್ಶನಶಾಲೆಗಳೂ, ಇನ್ನೂ ದೊಡ್ಡ ದೊಡ್ಡ ಕಟ್ಟಡಗಳೂ ಇರುತ್ತವೆ. ಮಳೆ ಬೀಳುವಾಗ ಜನರು ಈ ಸ್ಥಳಗಳಲ್ಲಿ ಆನಂದದಿಂದ ಹೊತ್ತು ಕಳೆವುದಲ್ಲದೆ ಪ್ರಯೋಜನವನ್ನೂ ಪಡೆಯಬಹುದು.

ಪಟ್ಟಣಗಳಲ್ಲಿಯೂ ಬಲವಾದ ಮಳೆಬಿದ್ದರೆ, ಬಡವರಿಗೆ ಬಲು ತೊಂದರೆಯಾಗುವುದು. ಬಡವರ ಮನೆಗಳಲ್ಲಿ ಹಳ್ಳಿಯವರ ಮನೆಗಳಂತೆ ಮೇಲು ಛಾವಣಿ ಭದ್ರವಿಲ್ಲದೆ ನೀರು ಸೋರುತ್ತದೆ. ಬಡವರಿಗೆ ಶಾಖವಾಗುವ ಬಟ್ಟೆಗಳಿರುವುದಿಲ್ಲ. ಅವರುಡುವ ಬಟ್ಟೆಗಳು ತಂಗಾಳಿಯಿಂದಲೂ ತೇವದಿಂದಲೂ ಅವರನ್ನು ಕಾಪಾಡಲಾರವು. ಜಡಿಮಳೆ ಸುರಿಯುತ್ತಲೇ ಇದ್ದರೆ ಹೊರಗಿನ ಕೆಲಸಗಳಿಗೆ ತುಂಬಾ ವಿಘ್ನವುಂಟು. ಆದುದರಿಂದ ಮಳೆಗಾಲದ ದಿನವು ಎಲ್ಲರಿಗೂ ಬೇಸರಪಡಿಸುವುದಲ್ಲದೆ, ಬಡವರಿಗೆ ಕ್ಲೇಶವನ್ನೂ ಅನಾರೋಗ್ಯವನ್ನೂ ಉಂಟುಮಾಡಬಹುದು. ಆದರೆ ಮಳೆಯಿಂದಾಗುವ ಅನನುಕೂಲವು ಕ್ಷಣಿಕವು. ಅದರಿಂದಾಗುವ ಶಾಶ್ವತವಾದ ಪ್ರಯೋಜನಗಳನ್ನು ಯೋಚಿಸಿ ಎಲ್ಲರೂ ಈ ಪ್ರತಿಕೂಲಗಳನ್ನು ಲಕ್ಷ್ಯಮಾಡದೆ ಮನಸ್ಸಿಗೆ ಸಮಾಧಾನವನ್ನು ತಂದುಕೊಳ್ಳಬೇಕು. ಮಳೆಯು ವಾಯುಮಂಡಲಕ್ಕೆ ತಂಪುಮಾಡಿ, ಕೆರೆಗಳನ್ನೂ ಹೊಳೆಗಳನ್ನೂ ತುಂಬಿ, ಸೊಗಸಾದ ಬೆಳೆಯಾಗುವುದೆಂಬ ಭರವಸವನ್ನು ಎಲ್ಲರಿಗೂ ಕೊಟ್ಟು ಹರ್ಷವನ್ನುಂಟುಮಾಡುವುದು.

## 21. ದಯೆ.

ಪರರಿಗೆ ಒಳ್ಳೆಯದನ್ನು ಮಾಡುವ ಸ್ವಭಾವವು ದಯೆಯೆನಿಸಿಕೊಳ್ಳುವುದು. ಒಬ್ಬರಿಗೂ ಕೆಡಕನ್ನು ಮಾಡಕೂಡದೆಂಬ ತಿಳಿವಳಿಕೆ ಮಾತ್ರ ದಯೆಯಲ್ಲ. ಹಾಗೆ ತಿಳಿದುಕೊಂಡು, ಯಾರಾದರೂ ಕಷ್ಟಕ್ಕೊಳಗಾಗಿ ನರಳುತಿದ್ದರೆ ನೋಡಿಕೊಂಡು ಸುಮ್ಮನಿರದೆ, ಆತನ ಕಷ್ಟನಿವಾರಣೆಗೆ ತನ್ನ ಕೈಯಲಾದುದನ್ನೆಲ್ಲಾ ಮಾಡುವ ಸ್ವಭಾವವೇ ದಯೆಯು. ಕಾರ್ಯತಃ ದಯೆಯನ್ನು ತೋರಿಸುವುದುತ್ತಮ; ಇದು ಸಾಧ್ಯವಲ್ಲದಿದ್ದರೆ ಮಾತಿನಲ್ಲಾದರೂ ತೋರಿಸಬೇಕು. ಇದರಿಂದಲೂ ಕೂಡಿದಮಟ್ಟಿಗೆ ದುಃಖೋಪಶಮ-

ನವಾಗಿ, ಹರ್ಷವೂ ಧೈರ್ಯವೂ ಮನಸ್ಸಿನಲ್ಲಿ ಮೊಳೆವುವು. ಒಬ್ಬನು ಯಾವುದಾದರೂ ಕಷ್ಟಕ್ಕೊಳಗಾಗುವುದು ಸಹಜ. ಈ ಕಷ್ಟವು ನಮಗೆ ತಿಳಿದರೆ ಸರಿ; ಹಲವು ಸಂದರ್ಭಗಳಲ್ಲಿ ಇದು ತಿಳಿವುದು ಅಸಾಧ್ಯವು. ಆಗ ನಾವು ಮಾಡತಕ್ಕದ್ದೇನು ? ನಿರ್ದಯೆಯಿಂದ ಕಾಣಬಹುದೆ? ಎಂದಿಗೂ ಕೂಡದು. ಪರರನ್ನು ಯಾವಾಗಲೂ ದಯೆಯಿಂದ ಕಾಣುವ ಗುಣವನ್ನು ನಮ್ಮಲ್ಲಿಉಂಟುಮಾಡಿಕೊಳ್ಳಬೇಕು. ಇಲ್ಲದಿದ್ದರೆಅಚಾತುರ್ಯದಿಂದಾಡಿದ ಕಠಿನೋಕ್ತಿಗಳುಮೊದಲೇನೊಂದಿರುವವರವ್ಯಥೆಯನ್ನು ಹೆಚ್ಚುಮಾಡಾವು.

ದಯೆಯನ್ನು ಹಲವು ಬಗೆಗಳಲ್ಲಿತೋರಿಸಬಹುದು. ಕಷ್ಟಕ್ಕೊಳಗಾಗಿರುವವರನ್ನು ಉಪೇಕ್ಷಿಸದೆ ಅನುತಾಪಪಡುವುದೊಂದು ವಿಧ. ಪ್ರೀತಿಯನ್ನು ತೋರಿಸುವುದು ಮತ್ತೊಂದು ವಿಧ. ಅಂತಹ ಪ್ರೀತಿಯು ಸಹೋದರರಲ್ಲಿ ಪ್ರಾರಂಭಿಸಬೇಕು. ಒಡಹುಟ್ಟಿದವರೇ ಒಬ್ಬರನ್ನೊಬ್ಬರು ನೋಡಿ ಅಸಹನ ಪಡುವುದುಂಟು. ಹೀಗೆ ನಡೆದುಕೊಳ್ಳದೆ ಎಲ್ಲರೂ ಒಬ್ಬರನ್ನೊಬ್ಬರು ಪ್ರೀತಿಸಬೇಕು. ದುರ್ದಶೆಯಲ್ಲಿರುವವರನ್ನು ಕನಿಕರಗೊಂಡು ಸಂತೈಸಬೇಕು. ‘‘ಕಷ್ಟಕ್ಕಾದವನೇ ಸಂಟ’’ ಎಂಬಂತೆ ಕಷ್ಟಕಾಲದಲ್ಲಿ ಸಹಾಯಮಾಡುವುದೇ ಸ್ನೇಹಿತರ ಮತ್ತು ಬಂಧುಗಳ ಲಕ್ಷಣ. ಸಹಾಯಮಾಡಲು ಆವಶ್ಯಕತೆಯಿದೆಯೇ ಇಲ್ಲವೇ ಎಂಬುದನ್ನು ಮೊದಲು ನಿರ್ಧರಿಸಬೇಕು. ಆವಶ್ಯಕತೆಯಿಲ್ಲದವನಿಗೆ ಮಾಡಿದ ಸಹಾಯವು ದಯೆಯೆನಿಸಿಕೊಳ್ಳಲಾರದು. ಹಸು, ನಾಯಿ ಮೊದಲಾದ ಮೂಗು ಜಂತುಗಳಿಗೆ ತಕ್ಕ ತಿಂಡಿಯನ್ನೂ ಇರುವುದಕ್ಕೆ ಜಾಗವನ್ನೂ ಕೊಟ್ಟು ಪೋಷಿಸುವುದೂ ದಯಾಶಾಲಿಗೆ ಸೇರಿದುದು. ಇವುಗಳನ್ನು ಯಾವಾಗಲೂ ಕರುಣೆಯಿಂದ ಕಾಣಬೇಕು.

ದಯೆ ಎಂದಿಗೂ ವ್ಯರ್ಥವಾಗಲಾರದು. ಒಬ್ಬರಿಗೆ ನಾವು ದಯೆಯನ್ನು ತೋರಿಸಿದರೆ, ನಮ್ಮನ್ನು ಅವರೂ ದಯೆಯಿಂದ ಕಾಣುವರು. ದಯಾಗುಣವು ಪರಲೋಕಕ್ಕೆ ಸಾಧನವು. ಯಶಸ್ಸಿನ ಮೇಲೆ ಆಸೆಯಿಂದಲೂ, ತಾನು ಅನ್ಯರಿಗೆ ಮಹೋಪಕಾರಮಾಡತಕ್ಕವನೆಂಬ ದುರಭಿಮಾನದಿಂದಲೂ ದಯೆಯನ್ನು ತೋರಬಾರದು. ಪಾರಮಾರ್ಥಿಕವಾಗಿ ತೋರಿಸಿದ ದಯೆಯೇ ಮೇಲೆನಿಸಿಕೊಳ್ಳುವುದು.

ದಯಾರಸದ ಶಕ್ತಿ ಅಪಾರವಾದುದು. ವೈಗಳ್ಳನಾದ ಹುಡುಗನಿಗೆ ತಕ್ಕಸಮಯದಲ್ಲಿ ಆಡಿದ ಒಳ್ಳೆಯ ಮಾತಿನಿಂದ ಬುದ್ಧಿ ಬಂದು, ಅವನು ಕಷ್ಟಪಟ್ಟೋದಿ ಪಂಡಿತನಾಗಿರುವುದುಂಟು. ದುಃಖದಲ್ಲಿ ಮುಳುಗಿರುವ-ವರಿಗೆ ತೋರಿಸಿದ ದಯೆ ಅವರಲ್ಲಿ ಧೈರ್ಯವನ್ನು ಹುಟ್ಟಿಸಿ ಚೇತರಿಸಿ-ಕೊಳ್ಳುವಂತೆ ಮಾಡಿದೆ. ಯಾವ ವಿಧವಾದ ಉಪಾಯಕ್ಕೂ ಸಗ್ಗದಿರುವ-ವರು ದಯಾಪಾಶಕ್ಕೆ ಸಿಕ್ಕಿ ಸನ್ಮಾರ್ಗಹಿಡಿದಿರುವುದಕ್ಕೆ ಅನೇಕ ದೃಷ್ಟಾಂ-ತಗಳುಂಟು. ತಿರ್ಯಗ್ಜಂತುಗಳೂ ಒಳ್ಳೆಯ ಮಾತಿಗೆ ವಶವಾಗುತ್ತವೆ. ಒಳ್ಳೆಯ ಮಾತಾಡಿ ಬೆನ್ನುತಟ್ಟಿದರೆ ಇವುಗಳಿಂದ ಎಷ್ಟು ಕೆಲಸವನ್ನು ಮಾಡಿಸಬಹುದೋ ಅಷ್ಟು ಕೆಲಸವನ್ನು ಕೋಲಿನಿಂದ ಹೊಡೆದು ಮಾಡಿಸ-ಲಾಗುವುದಿಲ್ಲ. ಮನುಷ್ಯನಿಗಿರುವ ಸುಗುಣಗಳಲ್ಲಿ ದಯೆಯನ್ನು ಎಲ್ಲರೂ ಮರೆಯದೆ ಶಾಶ್ವತವಾಗಿ ಕೊಂಡಾಡುವರು.

## 22. ಸ್ವದೇಶಾಭಿಮಾನ.

ತಾಯ್ತಂದೆಗಳು ತಮಗೂ ತಮ್ಮ ಮಕ್ಕಳಿಗೂ ಭೇದಮಾಡದೆ ಅವರಲ್ಲಿ ಅತ್ಯಂತ ಪ್ರೇಮದಿಂದ ಅವರಿಗಾಗಿ ಯಾವ ಕಷ್ಟವನ್ನಾದರೂ ಅನುಭವಿಸು-ವರು. ಮಕ್ಕಳು ಮುಂದಕ್ಕೆ ಬರಬೇಕೆಂದು ಮಾಡಬಹುದಾದುದನ್ನೆಲ್ಲಾ ಮನಃಪೂರ್ವಕವಾಗಿಮಾಡುವರು. ಇದರಿಂದ ಅವರಮಕ್ಕಳು ಅಭಿವೃದ್ಧಿಗೆ ಬರುವರು. ಹಾಗೆಯೇ ಒಂದುದೇಶವು ಏಳಿಗೆಗೆಬರಬೇಕಾದರೆ, ಅದರಲ್ಲಿರುವ ಪ್ರತಿ ಮನುಷ್ಯನೂ ಸ್ವದೇಶವನ್ನು ತನ್ನ ಸಂಸಾರದಂತೆ ಭಾವಿಸಿಕೊಂಡು ಪ್ರೀತಿಸುತ್ತಾ ಅದರ ಶ್ರೇಯಸ್ಸಿಗಾಗಿ ಯಾವ ಕಷ್ಟವನ್ನಾದರೂ ಅನುಭವಿ-ಸುವುದಕ್ಕೆ ಹಿಂಜರಿಯದಿರಬೇಕು. ಸ್ವದೇಶದ ವಿಷಯದಲ್ಲಿ ಪ್ರತಿಯೊಬ್ಬ-ನಿಗೂ ಇರಬೇಕಾದ ಇಂಥ ಪ್ರೀತಿಗೆ ಸ್ವದೇಶಾಭಿಮಾನವೆಂದು ಹೆಸರು. ಯಾವ ದೇಶದ ಪ್ರಜೆಗಳು ಸ್ವಾರ್ಥಪರರಾಗಿಯೂ ದೇಶಾಭಿಮಾನಹೀನ-ರಾಗಿಯೂ ಇರುವರೋ ಆ ದೇಶವು ಎಂದಿಗೂ ಏಳಿಗೆಗೆ ಬರಲಾರದು.

ಸ್ವದೇಶಾಭಿಮಾನಕ್ಕೆ ಪ್ರಖ್ಯಾತಿಗೊಂಡ ಮಹಾಪುರುಷರು ಪ್ರತಿದೇಶ-ದಲ್ಲಿಯೂ ಉಂಟು. ಪೂರ್ವಕಾಲದಲ್ಲಿ ಗ್ರೀಕರಲ್ಲಿಯೂ ರೋಮನ್ ಜನ-ರಲ್ಲಿಯೂ ಇಂಥವರನೇಕರಿದ್ದರು. ಅದರಿಂದಲೇ ಅವರ ರಾಜ್ಯಗಳು ಬಹಳ

ಉನ್ನತಸ್ಥಿತಿಗೆ ಬಂದುವು. ಹಿಂದೂದೇಶದಲ್ಲಿಯೂ ಪೂರ್ವದಲ್ಲಿ ರಾಜಪುತ್ರರೂ ಮರಾಟೆಯವರೂ ಸ್ವದೇಶಕ್ಕಾಗಿ ಪ್ರಾಣಗಳನ್ನು ಒಪ್ಪಿಸಿರುವರು. ಈಗಿನ ಕಾಲದಲ್ಲಿ ಇಂಗ್ಲೆಂಡ್, ಸ್ವಿಡ್ಜರ್ಲೆಂಡ್, ಜಪಾನ್ ದೇಶಗಳ ಜನರು ಸ್ವದೇಶಾಭಿಮಾನಕ್ಕೆ ಪ್ರಸಿದ್ಧರು. ಜಪಾನ್‌ದೇಶದ ಪ್ರತಿಯೊಬ್ಬ ಪುರುಷನೂ ಸ್ತ್ರೀಯೂ ಸ್ವದೇಶಕ್ಕಾಗಿ ಪ್ರಾಣಕೊಡಲು ಸಿದ್ಧರಾಗಿರುವರು. ಕೆಲವು ವರ್ಷಗಳ ಕೆಳಗೆ ಜಪಾನಿಗೂ ರಷ್ಯಾಕ್ಕೂ ನಡೆದ ಯುದ್ಧದಲ್ಲಿ ಲಕ್ಷಾಂತರ ಜಪಾನ್‌ದೇಶೀಯರು ಹೊಡೆದಾಡಿ ಪ್ರಾಣಗಳನ್ನೊಪ್ಪಿಸಿದ್ದರಿಂದಲೇ ಅವರ ಕಡೆ ಅದ್ಭುತವಾದ ಜಯವುಂಟಾಯಿತು ಆ ಯುದ್ಧದಲ್ಲಿ ಮನೆಮನೆಗೂ ಒಬ್ಬರಿಗೂ ಕಡಮೆಯಿಲ್ಲದೆ ಕಾಳಗಕ್ಕೆ ತಾವಾಗಿಯೇ ನುಗ್ಗಿದರು. ಒಂದು ಮನೆಯಲ್ಲಿ ತಾಯಿಗೆ ಒಬ್ಬನೇ ಮಗನಿದ್ದನು. ಎಲ್ಲರಂತೆ ತಾನೂ ಯುದ್ಧಸನ್ನದ್ಧನಾಗಿದ್ದರೂ, ಆತನು ತನ್ನ ತಾಯನ್ನು ದಿಕ್ಕಿಲ್ಲದೆಬಿಟ್ಟು ಹೋಗಲಾರದೆ ಚಿಂತಿಸುತಿದ್ದನು ಇದನ್ನರಿತು ಆತನತಾಯಿ "ನಿನ್ನ ದೇಶವು ನನಗಿಂತ ಹೆಚ್ಚು ಪ್ರೀತಿಗೆ ಪಾತ್ರವಾದುದು. ಅದಕ್ಕೆ ಮಹಾ ವಿಪತ್ತು ಬಂದಿರುವಲ್ಲಿ ನಿನ್ನ ಕರ್ತವ್ಯವನ್ನು ಮಾಡದೆ ಹಿಮ್ಮೆಟ್ಟಕೂಡದು." ಎಂದು ಹೇಳುತ್ತಾ ತನ್ನ ಪ್ರಾಣವನ್ನು ಕಳೆದುಕೊಂಡು, ಮಗನು ಯುದ್ಧಕ್ಕೆ ಹೋಗಲು ಅನುಕೂಲ ಮಾಡಿಕೊಟ್ಟಳು.

ಸ್ವದೇಶಾಭಿಮಾನವನ್ನು ತೋರಿಸಲು ಎಲ್ಲರೂ ಸಿಪಾಯಿಗಳಾಗಿ ಪ್ರಾಣಬಿಡಬೇಕಾದುದಿಲ್ಲ. ಸ್ವದೇಶಾಭಿಮಾನವು ಎಂಥ ಕೆಲಸ ಮಾಡುವನಲ್ಲಾದರೂ ಇರಬಹುದು. ಯಾರು ತನ್ನ ದೇಶಕ್ಕೆ ಕೆಟ್ಟಹೆಸರು ಬಾರದೆ ಎಚ್ಚರಿಕೆಯಾಗಿರುವನೋ, ಯಾರು ತನ್ನ ಕಾರ್ಯಗಳಿಂದ ತನ್ನ ದೇಶಕ್ಕೆ ಗೌರವವೂ ಯಶಸ್ಸೂ ಒರುವಂತೆ ನಡೆದುಕೊಳ್ಳುವನೋ ಅವನು ಸ್ವದೇಶಾಭಿಮಾನವುಳ್ಳವನು. ಸ್ವದೇಶಾಭಿಮಾನಿಯು ಎಷ್ಟೇ ಕೀಳುತರದ ಕೆಲಸ ಮಾಡುತ್ತಿರಲಿ, ಅದನ್ನು ತನ್ನ ಶಕ್ತಿಯನ್ನೆಲ್ಲಾ ಉಪಯೋಗಿಸಿ ಚೆನ್ನಾಗಿ ಮಾಡುವನು. ಎಂದಿಗೂ ಸನ್ಮಾರ್ಗವನ್ನು ಬಿಟ್ಟು ಹೋಗನು. ಸ್ವದೇಶೀಯರನ್ನು ತನ್ನ ಸಹೋದರರಂತೆ ಪ್ರೀತಿಸುವನು. ತನ್ನ ಒಳ್ಳೆಯ ನಡತೆಯಿಂದ ಎಲ್ಲರಿಗೂ ಮೇಲ್ಪಂಕ್ತಿಯಾಗಿರುವನು. ಇತರರಲ್ಲಿ ಕಂಡುಬರುವ ದೋಷಗಳನ್ನು ತಿದ್ದುವುದಕ್ಕೆ ಪ್ರಯತ್ನಿಸುವನು. ಒಬ್ಬರಿಗೆ ಮೋಸಮಾಡಿ ಲಾಭ ಸಂಪಾದಿಸನು.

ಯಾವಾಗಲೂ ಪ್ರಜಾಕ್ಷೇಮಚಿಂತನೆಯಲ್ಲಿಯೂ ರಾಜಭಕ್ತಿಯಲ್ಲಿಯೂ ನಿರತನಾಗಿರುವನು. ಅನ್ಯದೇಶೀಯರನ್ನು ದ್ವೇಷಿಸುವುದೂ ನಿಂದಿಸುವುದೂ, ಸ್ವದೇಶೀಯರ ವಿಷಯದಲ್ಲಿ ಕಣ್ಣುಮುಚ್ಚಿಕೊಂಡಿರುವುದೂ, ಸರಕಾರವನ್ನು ಸುಮ್ಮನೆ ದೂಷಿಸುವುದೂ ಸ್ವದೇಶಾಭಿಮಾನಕ್ಕೆ ಲಕ್ಷಣಗಳಲ್ಲ. ಕೆಲವರು ವಾಚಾಲರು ತಾವು ಸ್ವದೇಶಾಭಿಮಾನಿಗಳೆಂದು ತೋರಿಸಿಕೊಂಡು ಉಪ-ನ್ಯಾಸಗಳನ್ನು ಮಾಡಿ, ಜನರಿಗೆ ತಮ್ಮಲ್ಲಿ ನಂಬಿಕೆ ಹುಟ್ಟಿಸಿ ಅವರನ್ನು ವಶ-ಮಾಡಿಕೊಂಡು ಅವರಿಂದ ತಮ್ಮ ಕೆಲಸವನ್ನು ನೆರವೇರಿಸಿಕೊಳ್ಳುವುದುಂಟು. ಇಂಥ ಸ್ವಾರ್ಥಪರರನ್ನು ಸ್ವದೇಶಾಭಿಮಾನಿಗಳೆಂದು ಗಣಿಸದೆ ದೂರ ತ್ಯಜಿಸಬೇಕು.

ಸ್ವದೇಶಾಭಿಮಾನಕ್ಕೆ ಎಲ್ಲೆಲ್ಲಿಯೂ ಪುರಸ್ಕಾರವುಂಟು. ಸ್ವದೇಶಾಭಿ-ಮಾನಿಗಳ ಹೆಸರು ಶಾಶ್ವತವಾಗಿ ನಿಲ್ಲುವಂತೆ, ಅವರ ಜ್ಞಾಪಕಾರ್ಥವಾಗಿ ಕಟ್ಟಡಗಳನ್ನು ಕಟ್ಟಿಸುವ ವಾಡಿಕೆಯಿದೆ. ದೇಶದ್ರೋಹಿಗೆ ಅತಿಕಠಿನವಾದ ಶಿಕ್ಷೆಯನ್ನು ವಿಧಿಸುವರು. ಪೂರ್ವಕಾಲದಲ್ಲಿ ನಮ್ಮ ದೇಶವು ಪಡೆದಿದ್ದ ಹೆಚ್ಚುಗಾರಿಕೆಯನ್ನು ನೆನೆದುಕೊಂಡು ಸುಮ್ಮನೆ ತೃಪ್ತರಾಗಿದ್ದರೆ ಏನೂ ಫಲವಿಲ್ಲ. ಪೂರ್ವದ ಯಶಸ್ಸು ಮುಂದೆಯೂ ನಿಂತು, ಅದಕ್ಕಿಂತ ಅತಿ-ಶಯವಾದ ಕೀರ್ತಿ ನಮ್ಮ ದೇಶಕ್ಕೆ ಒದಗುವಂತೆ ನಾವೆಲ್ಲರೂ ನಡೆದು-ಕೊಳ್ಳುವುದು ಕರ್ತವ್ಯವಾಗಿದೆ.

## 23. ಹೂಗಳು.

ಹೂಗಳು ಭಗವಂತನ ಸೃಷ್ಟಿಯ ಅತಿಸುಂದರವಾದ ವಸ್ತುಗಳಲ್ಲಿ ಸೇರಿದುವು. ಚಿನ್ನ, ಬೆಳ್ಳಿ, ವಜ್ರ, ಕೆಂಪು—ಇವು ಸಿಕ್ಕುವುದೇ ಕಡಮೆ. ಇವುಗಳಿಂದ ಮಾಡಿದ ಒಡವೆಗಳಿಗೆ ಬೆಲೆ ಹೆಚ್ಚು. ಆ ಒಡವೆಗಳು ಹಣ-ಗಾರರಿಗೆ ಸಾಧ್ಯವು. ಬಡವರಿಗೆ ದುರ್ಲಭ. ಹೂಗಳಾದರೋ ಸೀಮೆ-ಸೀಮೆಗಳಲ್ಲಿ ಎಲ್ಲೆಲ್ಲಿಯೂ ಅಷ್ಟು ದುಡ್ಡಿಡದೆ ಹೇರಳವಾಗಿ ದೊರೆವುವು. ಹೂಗಳು ಒಡವೆಗಳಿಗಿಂತ ಅಂದವಾಗಿರುತ್ತವೆ. ಆದುದರಿಂದಲೇ ಹೂಗ-ಳನ್ನು ತಲೆಯಲ್ಲಿ ಮುಡಿದುಕೊಳ್ಳುವ ವಾಡಿಕೆ ಎಲ್ಲಾ ದೇಶಗಳಲ್ಲಿಯೂ ಇದೆ. ಹೂಗಳನ್ನು ಎಂಥಾ ಬಡವರಾದರೂ ಮುಡಿಯಬಹುದು. ಹಣಗಾರರಲ್ಲಿರುವ

"ಶಾಮಂತಿಬಿಲ್ಲೆ," "ರೋಜಾಹೂ" ಮೊದಲಾದ ಬಂಗಾರದ ಒಡವೆ-ಗಳೂ ಪ್ರಸಿದ್ಧವಾದ ಹೂಗಳ ನೋಟದಲ್ಲಿಯೇ ಮಾಡಲ್ಪಡುತ್ತವೆ.

ಹೂಗಳಲ್ಲಿ ನಾನಾ ಜಾತಿಗಳುಂಟು. ಬಣ್ಣವೊಂದರಲ್ಲಿಯೇ ಎಷ್ಟೋ ಭೇದಗಳಿವೆ. ಕೆಲವು ಬಿಳಿಯವು, ಕೆಲವು ಹಳದಿ; ಕೆಲವಕ್ಕೆ ಕೆಂಪು, ಇನ್ನು ಕೆಲವಕ್ಕೆ ಬಗೆಬಗೆಯ ಬಣ್ಣಗಳು ಬೆರೆದಿರುವುವು. ಕೆಲವು ಪುಷ್ಪಗಳು ಸು-ವಾಸನೆಯುಳ್ಳವು, ಇನ್ನು ಕೆಲವು ನಿರ್ಗಂಧಗಳು, ಮತ್ತೆ ಕೆಲವು ತಲೆನೋವು ಬರುವಷ್ಟು ಬಲು ವಾಸನೆಯುಳ್ಳವು. ಹೂಗಳು ಹೆಸರುಬೇಳೆಯ ಅಗಲದಿಂದ ಒಂದು ಕೈಯ ಅಗಲದ ವರೆಗೆ ಇರುತ್ತವೆ. ಕೆಲವು ಹೂಗಳು ಮಿಕ್ಕವನ್ನು ಚೆಲುವಿನಲ್ಲಿ ಮೀರುತ್ತವೆ. ಒಬ್ಬೊಬ್ಬರಿಗೆ ಒಂದೊಂದು ಹೂವನ್ನು ಕಂಡರೆ ಇಷ್ಟ. ಒಂದೊಂದು ದೇಶದವರಿಗೆ ಒಂದೊಂದು ಜಾತಿಯ ಹೂ ಪ್ರೇಮಾ-ಸ್ಪದವಾಗಿರುತ್ತದೆ. ಇಂಗ್ಲೆಂಡಿನವರಿಗೆ ಗುಲಾಬಿಹೂವಿನ ಮೇಲೆ ಪ್ರಾಣ. ಇದು ಎಲ್ಲಾ ಸೀಮೆಗಳಲ್ಲಿಯೂ ಪ್ರಾಶಸ್ತ್ಯಕ್ಕೆ ಬಂದಿದ್ದರೂ ಇಂಗ್ಲೆಂಡಿನಲ್ಲಿ ಅಗ್ರಗಣ್ಯವಾಗಿದೆ. ಹಿಂದೂದೇಶದಲ್ಲಿ ಕಮಲವು ಬಹುಕಾಲದಿಂದಲೂ ಶ್ರೇ-ಷ್ಠವಾಗಿ ಭಾವಿಸಲ್ಪಟ್ಟಿದೆ. ಆದುದರಿಂದಲೇ ರೂಪಾಯಿಯ ಮೇಲೆ ಕಮಲ-ವನ್ನು ಗುಲಾಬಿ ಹೂವಿನ ಸಂಗಡ ಸೇರಿಸಿರುವರು. ಹಿಂದೂದೇಶದ ಕವಿ-ಗಳು ಮುಖವನ್ನು ವರ್ಣಿಸುವಾಗ ಕಮಲದ ಸಾಮ್ಯವನ್ನು ಹೇಳುವುದೂ, ಇಂಗ್ಲಿಷ್ ಕವಿಗಳು ಕೆನ್ನೆಗಳನ್ನು ಗುಲಾಬಿಹೂವಿಗೆ ಹೋಲಿಸುವುದೂ ವಾಡಿಕೆಯಾಗಿವೆ. ಹಿಂದೂಜನರು ಕಮಲವನ್ನು ಲಕ್ಷ್ಮೀದೇವಿಯ ವಾಸ-ಸ್ಥಾನವೆಂದು ನಂಬಿರುತ್ತಾರೆ. ಕಮಲವಲ್ಲದೆ ಶಾಮಂತಿಗೆ, ಮಲ್ಲಿಗೆ, ಜಾಜಿ, ಸಂಪಗೆ ಮೊದಲಾದ ಅನೇಕ ಪುಷ್ಪಗಳನ್ನು ಇವರು ಉಪಯೋಗಿಸುತ್ತಾರೆ.

ಹೂಗಳನ್ನು ಹಿಂದೂದೇಶದಲ್ಲಿ ದೇವರಿಗೆ ಪೂಜೆಮಾಡುವಾಗ ಅರ್ಪಿಸು-ವರು. ಬಳಿಕ ಅವುಗಳನ್ನು ನಾರಿನಲ್ಲಿ ಕಟ್ಟಿಯೂ ಬಿಡಿಯಾಗಿಯೂ ತಲೆಯಲ್ಲಿ ಮುಡಿದುಕೊಳ್ಳುವರು. ಮದುವೆ, ಮುಂಜಿ, ಮೊದಲಾದ ಶುಭಕಾರ್ಯಗಳನ್ನು ನಡೆಸುವಾಗ ಎಲ್ಲರಿಗೂ ಫಲತಾಂಬೂಲಗಳೊಡನೆ ಹೂವಿನಹಾರಗಳನ್ನು ಕೊಡುವ ಸಂಪ್ರದಾಯವು ಹಿಂದೂಗಳಲ್ಲಿ ಪುರಾತನಕಾಲದಿಂದಲೂ ಉಂಟು. ಹೊಸದಾಗಿ ಬಂದ ಹುದ್ದೆದಾರರಿಗೂ, ವರ್ಗವಾಗಿ ಊರು ಬಿಟ್ಟು ಹೋಗುವ

ಹುದ್ದೆದಾರರಿಗೂ, ಸಭಾಧ್ಯಕ್ಷರಿಗೂ ಮರ್ಯಾದಾರ್ಥವಾಗಿ ಸೊಗಸಾದ ಹೂವಿನ ಹಾರಗಳನ್ನು ಕೊರಳಿಗೆ ಹಾಕುವ ವಾಡಿಕೆ ವಿಶೇಷವಾಗಿದೆ.

ಮನುಷ್ಯರು ಉಪಯೋಗಿಸುವ ಹೂಗಳು ಸ್ವಲ್ಪ. ಅವರು ಕೈಹಾಕದಿರುವುವು ಇನ್ನೂ ಎಷ್ಟೋ ಇವೆ. ಅವರು ನೋಡದೆಯೇ ಇರುವುವು ಎಣಿಕೆಯಿಲ್ಲದಷ್ಟಿವೆ. ಅವುಗಳೆಲ್ಲಾ ಕಾಡಿನಲ್ಲಿಬಾಡಿ ಉದುರಿಹೋಗುತ್ತವೆ. ಅನೇಕ ಪುಷ್ಪಗಳ ಹೆಸರೇ ಮನುಷ್ಯರಿಗೆ ತಿಳಿಯದು. ಪಟ್ಟಣವಾಸಿಗಳಿಗಿಂತಹಳ್ಳಿಯವರು ಬಹಳ ಹೂಗಳನ್ನು ಬಲ್ಲರು. ವಿದ್ಯಾವಂತರಾದವರು ಕಾಡಿಗೆ ಆಗಾಗ್ಗೆ ಹೋಗಿ ಹೊಸಹೊಸದಾಗಿ ಹೂಗಳ ಪರಿಚಯ ಮಾಡಿಕೊಂಡು ಅವುಗಳನ್ನು ಚೆನ್ನಾಗಿ ಪರೀಕ್ಷಿಸುತ್ತಾ ಬರಬೇಕು. ಇದರಿಂದಅವರಿಗೆನೇತ್ರಾನಂದವೂ ಉಲ್ಲಾಸವೂ ಆಗುವುದಲ್ಲದೆ ಗುಣಗ್ರಹಣಶಕ್ತಿಯೂ ವೃದ್ಧಿಹೊಂದುವುದು.

## 24. ಪುಸ್ತಕಭಂಡಾರಗಳು.

ಜ್ಞಾನಾಭಿವೃದ್ಧಿಗೆ ಪುಸ್ತಕಭಂಡಾರವು ಬಲುಸಹಕಾರಿಯು. ನಾವು ಸ್ವಂತವಾಗಿ ಕೊಳ್ಳಲಾರದೆ ಅನೇಕ ಪುಸ್ತಕಗಳನ್ನು ಆ ಭಂಡಾರಗಳಲ್ಲಿಓದಬಹುದು. ಪುಸ್ತಕಭಂಡಾರಗಳು ದರಿದ್ರರಾದ ವಿದ್ಯಾರ್ಥಿಗಳಿಗೆ ವಿಶೇಷ ಸಹಾಯಮಾಡುತ್ತವೆ; ಏಕೆಂದರೆ ಕೊಂಡುಕೊಳ್ಳಲು ಅವರಿಗೆ ಹಣವಿರುವುದಿಲ್ಲ. ಎರವಲು ತಂದ ಪುಸ್ತಕಗಳನ್ನು ಮಟ್ಟಿಗೆ ಓದುವುದಾದರೆ, ಜ್ಞಾನವು ಹೆಚ್ಚಲು ಅವಕಾಶವಿಲ್ಲದೆ ಅವರ ವಿದ್ಯಾಭ್ಯಾಸಕ್ಕೆ ವಿಘ್ನವುಂಟಾಗುವುದು. ಹಣವಂತರಾದವರು ಕೂಡ ತಮಗೆ ಬೇಕಾದ ಪುಸ್ತಕಗಳೆಲ್ಲವನ್ನೂ ಕೊಳ್ಳುವುದಕ್ಕಾಗುವುದಿಲ್ಲ. ಆದುದರಿಂದ ಬಡವರಿಗೂ ಭಾಗ್ಯವಂತರಿಗೂ ಓದಲು ಅನುಕೂಲಿಸುವಂತೆ, ಸರಕಾರದವರು ಎಲ್ಲತರದ ಪುಸ್ತಕಗಳನ್ನೂ ಭಂಡಾರಗಳಲ್ಲಿ ಸೇರಿಸಿಡುತ್ತಾರೆ.

ಒಳ್ಳೆಯ ಪುಸ್ತಕಭಂಡಾರದಲ್ಲಿಎಲ್ಲಿಯೂ ಸಿಕ್ಕದ ಅಮೂಲ್ಯವಾದಪುಸ್ತಕಗಳು ದೊರೆವುದಲ್ಲದೆ, ಅದರಿಂದ ಇತರ ವಿಧದಲ್ಲಿಯೂ ವಿದ್ಯಾಭಿವೃದ್ಧಿಗೆ ಒತ್ತಾಸೆಯುಂಟು. ಮನೆಯಲ್ಲಿ ಓದುತ್ತಿರುವಾಗ ಗದ್ದಲವೇ ಮೊದಲಾದ ಹಲವು ತೊಂದರೆಗಳಾಗುವುವು. ಇದರಿಂದ ವಿದ್ಯಾರ್ಥಿಗೆ ಪುಸ್ತಕದ ಮೇಲೆ ಚಿತ್ತೈಕಾಗ್ರತೆ ತಪ್ಪಿ, ಓದಿದ ವಿಷಯವು ಮನಸ್ಸಿಗೆ ಹತ್ತುವುದೇ ಕಷ್ಟ. ಪುಸ್ತಕಭಂಡಾರಗಳಲ್ಲಿಯಾದರೊ ಯಾವ ವಿಧವಾದ ತೊಂದರೆಯೂ ಇಲ್ಲದೆ

ನಿಶ್ಶಬ್ದವಾಗಿರುವುದು. ಸಾವಿರಾರು ಪುಸ್ತಕಗಳುಳ್ಳಭಂಡಾರವನ್ನೂ, ಅದರಲ್ಲಿ ಸದ್ದುಮಾಡದೆ ಓದುತ್ತಿರುವ ಅನೇಕರನ್ನೂ ನೋಡಿದಮಾತ್ರದಿಂದಲೇ ಅಲ್ಲಿಗೆ ಹೋದವನಿಗೆ ತಾನೂ ಹಾಗೆಯೇ ಪುಸ್ತಕಗಳನ್ನೋದಿ, ಓದಿದ್ದನ್ನು ಚೆನ್ನಾಗಿ ಪರ್ಯಾಲೋಚಿಸಿ ತಿಳಿದುಕೊಳ್ಳುವ ಅಭಿಲಾಷೆಯುಂಟಾಗುವುದು.

ಲಂಡನ್ ಪಟ್ಟಣದಲ್ಲಿರುವ "ಬ್ರಿಟಿಷ್ ಮ್ಯೂಸಿಯಂ" ಎಂಬ ದೊಡ್ಡ ಪುಸ್ತಕಭಂಡಾರವು ಲೋಕದಲ್ಲೆಲ್ಲ ಅತ್ಯುತ್ಕೃಷ್ಟವಾಗಿರುವುದು. ಅದರಲ್ಲಿ ಮುನ್ನೂರು ಜನಗಳು ಒಟ್ಟಿಗೆ ಕುಳಿತುಕೊಂಡು ಓದುವುದಕ್ಕನುಕೂಲಿಸುವಷ್ಟು ಸ್ಥಳವಿರುವುದಂತೆ. ಸಾಧಾರಣವಾಗಿ ಎಲ್ಲರೂ ಅಡಿಗಡಿಗೆ ನೋಡಲಪೇಕ್ಷಿಸುವ ಪುಸ್ತಕಗಳೆಲ್ಲಗುಂಡಾಗಿರುವ ಆ ಕಟ್ಟಡದ ಸುತ್ತಲೂ ಇಡಲ್ಪಟ್ಟಿವೆ. ಇವುಗಳನ್ನು ಭಂಡಾರಾಧ್ಯಕ್ಷನ ಅಪ್ಪಣೆಯಿಲ್ಲದೆಯೇ ಬಳಸಿಕೊಳ್ಳಬಹುದು. ಬೇರೆ ಪುಸ್ತಕಗಳು ಬೇಕಾದರೆ, ಒಂದು ಚೀಟಿಯ ಮೇಲೆ ಬರೆದು ಅಧ್ಯಕ್ಷನಿಗೆ ಕಳುಹಿಸಿ, ಆತನು ಅದನ್ನು ತಂದುಕೊಡುವ ವರೆಗೂ ತನ್ನ ಸ್ಥಳದಲ್ಲಿಯೇ ನಿಶ್ಶಬ್ದವಾಗಿ ಕುಳಿತಿರಬೇಕು. ಈ ಪದ್ಧತಿಯನ್ನು ಎಲ್ಲಾ ಪುಸ್ತಕಭಂಡಾರಗಳಲ್ಲಿಯೂ ಅನುಸರಿಸುವುದುತ್ತಮ. ಏಕೆಂದರೆ, ಒಬ್ಬವಿದ್ಯಾರ್ಥಿ ತನಗೆ ತಿಳಿಯದಿರುವ ಒಂದು ಕಷ್ಟವಾದ ಭಾಗವನ್ನು ದೊಡ್ಡದೊಡ್ಡ ಪುಸ್ತಕಗಳಿಂದ ತಿಳಿದುಕೊಳ್ಳಬೇಕೆಂದುಒಂದು ಪುಸ್ತಕಭಂಡಾರಕ್ಕೆ ಹೋಗುತಾನೆಂದಿಟ್ಟುಕೊಳ್ಳೋಣ. ಅವನಿಗೆ ತಿಳಿಯದ ಆ ಅಂಶವು ಯಾವ ಪುಸ್ತಕದಲ್ಲಿ ಸ್ಪಷ್ಟವಾಗಿ ಹೇಳಿದೆಯೋ ಅದನ್ನರಿಯದೆ, ಅವನು ಬಾರಿಬಾರಿಗೂ ಅಧ್ಯಕ್ಷನಿಗೆ ಬರೆದುಕಳುಹಿಸಬೇಕಾಗುವುದು ಇದರಿಂದ ಭಾಂಡಾರಿಕನಿಗೂ ಅನಾವಶ್ಯಕವಾದ ತೊಂದರೆಯುಂಟಾಗುವುದು. ಆದುದರಿಂದಸಾಮಾನ್ಯವಾಗಿ ಎಲ್ಲರಿಗೂ ಅಡಿಗಡಿಗೆ ಬೇಕಾಗುವ ದೊಡ್ಡ ಪುಸ್ತಕಗಳನ್ನು ಓದುವವರ ಹತ್ತಿರದಲ್ಲಿಯೇ ಮೇಜಿನ ಮೇಲಿರಿಸಿ, ಇತರ ಪುಸ್ತಕಗಳನ್ನು ತನ್ನಲ್ಲಿ ಇಟ್ಟುಕೊಂಡು, ಓದುವವರು ಚೀಟಿಬರೆದುಕಳುಹಿಸಿದಾಗ ಅವರಿಗೆ ಕೊಡಬೇಕು. ಮೇಜಿನ ಮೇಲಿಟ್ಟಿರುವ ಅಂಥದೊಡ್ಡದೊಡ್ಡ ಪುಸ್ತಕಗಳನ್ನು ಯಾರಾದರೂ ಪತ್ತೆಯಿಲ್ಲದೆ ಸಾಗಿಸುವುದು ಅಸಾಧ್ಯ. ಆದುದರಿಂದಲೇ ಬ್ರಿಟಿಷ್ ಮ್ಯೂಸಿಯಮ್ಮಿನಲ್ಲಿ ಈಕ್ರಮವನ್ನನುಸರಿಸಿರುವರು. ಇಂಥ ಪುಸ್ತಕಭಂಡಾರಗಳನ್ನು ಪ್ರತಿಯೊಂದುದೇಶದದೊಡ್ಡಪಟ್ಟಣಗಳಲ್ಲಿಯೂ ಸ್ಥಾಪಿಸುವುದುಆವಶ್ಯಕವು.

## 25. ದೊಡ್ಡ ಪಟ್ಟಣಗಳಲ್ಲಿ ವಾಸಮಾಡುವುದರ ಪ್ರಯೋಜನ.

"ಕೆಟ್ಟು ಪಟ್ಟಣಸೇರು" ಎಂಬ ಗಾದೆಯಂತೆ ದೊಡ್ಡ ಪಟ್ಟಣಗಳಲ್ಲಿ ವಾಸಮಾಡುವುದರಿಂದ ಅನೇಕ ಪ್ರಯೋಜನಗಳಾಗುತ್ತವೆ. ಕಲ್ಕತ್ತೆ, ಬೊಂಬಾಯಿ, ಮದ್ರಾಸು ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವಾಸಮಾಡುವುದರಿಂದಾಗುವ ಪ್ರಯೋಜನಗಳು ಮುಖ್ಯವಾಗಿ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟುವು. ಹಳ್ಳಿಗಳಲ್ಲಿ ಚಿಕ್ಕ ಶಾಲೆಗಳೇ ಹೊರತು ಕಾಲೇಜುಗಳಿರುವುದಿಲ್ಲ. ದೊಡ್ಡ ಪಟ್ಟಣಗಳಲ್ಲಿ ಆಯಾ ವಿದ್ಯಾಭಾಗಗಳಲ್ಲಿ ಪ್ರವೀಣರಾದ ಉಪಾಧ್ಯಾಯರುಳ್ಳ ಅನೇಕ ಶಾಲೆಗಳೂ ಕಾಲೇಜುಗಳೂ ಇರುವುವು. ನ್ಯಾಯವಿಚಾರವನ್ನು ತಿಳಿಯಬೇಕಾದರೆ ಆ ಕಾಲೇಜಿನಲ್ಲಿ ಓದಬಹುದು. ವೈದ್ಯಶಾಸ್ತ್ರ, ಶಿಲ್ಪಶಾಸ್ತ್ರ, ಇಂಜಿನಿಯರಿಂಗ್ ಮೊದಲಾದ ಯಾವ ವಿಧವಾದ ಶಾಸ್ತ್ರವನ್ನಾಗಲಿ ಆಯಾ ಕಾಲೇಜುಗಳಲ್ಲಿ ಅಭ್ಯಾಸಮಾಡಬಹುದು. ಈ ಕಾಲೇಜುಗಳಲ್ಲಿ ಕಷ್ಟಪಟ್ಟು ಓದುವ ಕೆಲವರಿಗೆ ವಿದ್ಯಾರ್ಥಿವೇತನಗಳು ದೊರೆವುದರಿಂದ ಬಡ ವಿದ್ಯಾರ್ಥಿಗಳು ಓದಲು ತುಂಬಾ ಪ್ರೋತ್ಸಾಹವುಂಟು. ದೊಡ್ಡ ಪಟ್ಟಣಗಳಲ್ಲಿ ಶಾಲೆಗಳನ್ನೂ ಕಾಲೇಜುಗಳನ್ನೂ ಸೇರುವುದರಿಂದುಂಟಾಗುವ ಉಪಯೋಗಗಳನ್ನು ಪಡೆವುದಲ್ಲದೆ ದೊಡ್ಡ ದೊಡ್ಡ ಪುಸ್ತಕಭಂಡಾರಗಳಿಗೆ ಹೋಗಿ ಉತ್ತಮವಾದ ನಾನಾ ಗ್ರಂಥಗಳನ್ನು ಓದಿ ಜ್ಞಾನಾಭಿವೃದ್ಧಿಯನ್ನು ಮಾಡಿಕೊಳ್ಳಬಹುದು; ಮತ್ತು ಲೋಕದಲ್ಲಿ ನಡೆದ ಅನೇಕ ವಿಷಯಗಳನ್ನು ವೃತ್ತಾಂತಪತ್ರಿಕೆಗಳ ಮೂಲಕ ತಿಳಿಯಬಹುದು.

ವಿದ್ಯಾಭ್ಯಾಸವೆಂದರೆ ಪುಸ್ತಕಗಳನ್ನೋದುವುದೆಂದರ್ಥವಲ್ಲ. ಸ್ಕೂಲುಗಳಲ್ಲಿಯೂ, ಕಾಲೇಜುಗಳಲ್ಲಿಯೂ, ಪುಸ್ತಕಭಂಡಾರಗಳಲ್ಲಿಯೂ ಪಡೆದ ಜ್ಞಾನದಿಂದಲೇ ನಮ್ಮ ವಿದ್ಯಾಭ್ಯಾಸವು ಸಂಪೂರ್ಣವಾಯಿತೆಂದು ತಿಳಿಯಕೂಡದು. ಈ ಜ್ಞಾನವನ್ನು ಪ್ರಪಂಚದ ಅಪೂರ್ವವಸ್ತುಗಳನ್ನು ಪರೀಕ್ಷಿಸುವುದರಿಂದಲೂ, ವಿದ್ವಾಂಸರ ಸಹವಾಸದಿಂದಲೂ ವೃದ್ಧಿಪಡಿಸಬೇಕು. ಇಂಥ ಜ್ಞಾನಾಭಿವೃದ್ಧಿಗೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ತುಂಬಾ ಅವಕಾಶವುಂಟು. ನಾಗರಿಕತೆಯು ಮೊದಲು ನಗರಗಳಲ್ಲಿ ನೆಲೆಗೊಂಡು ಅಲ್ಲಿಂದ ಎಲ್ಲಾ ಕಡೆಗೂ ಹಬ್ಬುವುದು. ನೋಟಕ್ಕೆ ಅತ್ಯಾಶ್ಚರ್ಯಕರವಾದ ಕಟ್ಟಡಗಳೂ ವಸ್ತುಗಳೂ ಸಕಲಶಾಸ್ತ್ರಗಳಲ್ಲಿಯೂ ಪಾರಂಗತರಾದ ವಿದ್ವಾಂಸರೂ

ದೊಡ್ಡ ಪಟ್ಟಣಗಳಲ್ಲಿರುವರು. ಘನಪಂಡಿತರಾದವರಿಗೂ ಪಟ್ಟಣವಾಸವು-ಚಿತವು; ಇವರು ದೊಡ್ಡ ಪಟ್ಟಣಗಳಲ್ಲಿದ್ದರೆ ಸಮಾನರ ಸಹವಾಸದಿಂದ ಆನಂದವೂ ಪ್ರಯೋಜನವೂ ಆಗುವುವಲ್ಲದೆ, ಇವರ ಹೆಸರು ಮುಂದಕ್ಕೆ ಬರುವುದು. ಹಳ್ಳಿಗಾಡಿನಲ್ಲಿಯೇ ಇದ್ದರೆ ಕೇಳುವವರಿಲ್ಲದೆ ಇವರು ಕೂಪ-ಕೂರ್ಮಕ್ಕೆ ಸಮಾನರಾಗುವರು.

ನಮ್ಮ ದೇಶದಲ್ಲಿ ಈಗಿನ ಅನೇಕ ವಿದ್ಯಾರ್ಥಿಗಳು ಈ ವಿಷಯವನ್ನರಿ-ಯದೆ ಯಾವಾಗಲೂ ಪುಸ್ತಕಗಳನ್ನೋದುತ್ತಿರುವರೇ ಹೊರತು ತಾವು ವಾಸಿಸುತ್ತಿರುವ ಪಟ್ಟಣದಲ್ಲಿ ನೋಡತಕ್ಕ ವಸ್ತುಗಳನ್ನು ನೋಡುವುದಕ್ಕೂ, ಕೇಳತಕ್ಕ ಸಂಗತಿಗಳನ್ನು ಕೇಳುವುದಕ್ಕೂ ಪ್ರಯತ್ನಿಸುವುದಿಲ್ಲ. ವಿರಾಮವಾ-ದಾಗ, ವಿದ್ಯಾರ್ಥಿಗಳು ದೊಡ್ಡ ದೊಡ್ಡ ಕಟ್ಟಡ, ಅಂಗಡಿ, ಆಶ್ಚರ್ಯಕರವಾದ ಯಂತ್ರ, ಹಡಗು, ರೇವು, ಮೊದಲಾದುವುಗಳಿಗೆ ಹೋಗಿ ತಮ್ಮ ಬುದ್ಧಿ ಬಲ-ದಿಂದ ಚೆನ್ನಾಗಿ ಪರಿಶೀಲಿಸಿ ನೋಡಬೇಕು. ಅನೇಕರು ದೊಡ್ಡ ಪಟ್ಟಣಗಳಲ್ಲಿ-ದ್ದರೂ ಅಲ್ಲಿನ ವಿಶೇಷವಿಷಯಗಳನ್ನು ಹಳ್ಳಿಯವರಿಗಿಂತ ಸ್ವಲ್ಪವೂ ಹೆಚ್ಚಾಗಿ ಅರಿಯದೆ ಅನೇಕ ಪ್ರಯೋಜನಗಳನ್ನು ಹಾಳುಮಾಡಿಕೊಳ್ಳುವರು. ಆದರೆ ಹಳ್ಳಿಗಳಿಂದ ಬಂದು ಪಟ್ಟಣಗಳಲ್ಲಿ ಓದುವವರು ಪಟ್ಟಣವಾಸಿಗಳಲ್ಲಿರುವ ದುರ್ವ್ಯಾಪಾರಗಳಿಗೆ ದಾರಿಕೊಡದಹಾಗೆ ಬಲು ಎಚ್ಚರಿಕೆಯಿಂದಿರಬೇಕು. ಅಂತಹ ದುರ್ವ್ಯಾಪಾರಗಳಿಗೆ ಒಳಗಾಗದೆ, ರಜಾದಿವಸ ಬಂದಾಗ ಹಳ್ಳಿಗ-ಳಲ್ಲಿ ವಾಸಿಸುತ್ತಿದ್ದರೆ, ಆ ವಿದ್ಯಾರ್ಥಿಗಳಿಗೆ ಪಟ್ಟಣದಿಂದುಂಟಾಗುವ ಪ್ರಯೋ ಜನಗಳು ದೊರೆವುವಲ್ಲದೆ, ಅವರ ಆರೋಗ್ಯವೂ ಸೌಖ್ಯವೂ ಹೆಚ್ಚುವುವು.

## 26. ಪ್ರಾಣಿಹಿಂಸೆ.

ಪರೋಪಕಾರಧರ್ಮವು ಪ್ರಾಣಿಗಳ ವಿಷಯದಲ್ಲಿ ನಾವು ಕ್ರೂರರಾಗಿರ-ಕೂಡದೆಂಬುದನ್ನು ಬೋಧಿಸುತ್ತದೆ. ಮನುಷ್ಯರ ಸೌಖ್ಯಕ್ಕಾಗಿ ಪ್ರಾಣಿಗಳ ಸೌಖ್ಯವನ್ನು ಕೋರಬೇಕೇ ಹೊರತು ಬೇರೆ ಅಲ್ಲವೆಂದು ಕೆಲವರು ಹೇಳು-ವರು. ಅವರಿಗನುಸಾರವಾಗಿ ಪ್ರಾಣಿಗಳ ವಿಷಯದಲ್ಲಿ ನಾವು ದಯಾಶಾಲಿ-ಗಳಾಗಿರಬೇಕೆನ್ನುವುದಕ್ಕೆ ಮುಖ್ಯಕಾರಣವೇನೆಂದರೆ:—ನಾವು ಅವುಗಳನ್ನು ದಯೆಯಿಂದ ಕಂಡರೆ ಅವೂ ನಮ್ಮ ವಿಷಯದಲ್ಲಿ ಚೆನ್ನಾಗಿ ನಡೆದುಕೊಳ್ಳು-

ತ್ತವೆ; ಅಥವಾ ನಾವು ಅವುಗಳ ವಿಷಯದಲ್ಲಿ ಕ್ರೂರರಾಗಿದ್ದರೆ ಅವೂ ನಮ್ಮ ವಿಷಯದಲ್ಲಿ ಹಾಗೆಯೇ ಇರುವುವು. ಪರದುಃಖವನ್ನು ಹೋಗಲಾಡಿಸಿ ಸುಖವನ್ನು ಹೆಚ್ಚಿಸುವುದು ನಮ್ಮ ಕರ್ತವ್ಯವು. ಇದನ್ನು ಮನುಷ್ಯರ ವಿಷಯದಲ್ಲಲ್ಲದೆ ಸುಖದುಃಖಗಳು ಪ್ರಾಣಿಸಾಮಾನ್ಯಕ್ಕೂ ಇರುವುದರಿಂದ ಎಲ್ಲಾ ಪ್ರಾಣಿಗಳ ವಿಷಯದಲ್ಲಿಯೂ ಆಚರಿಸಬೇಕೆಂದು ಅನೇಕ ನೀತಿಶಾಸ್ತ್ರಜ್ಞರು ಒಪ್ಪಿರುವರು. "ಮಾಹಿಂಸ್ಯಾತ್ಸರ್ವಭೂತಾನಿ' ಎಂದು ನಮ್ಮ ವೇದದಲ್ಲಿ ಹೇಳಿದೆ. ಮನುಷ್ಯರಿಗೆ ಸೌಖ್ಯವು ಹೆಚ್ಚಾಗದಿದ್ದರೂ ಪ್ರಾಣಿಗಳ ಸೌಖ್ಯವನ್ನು ನೋಡಿಕೊಳ್ಳುವುದು ಕರ್ತವ್ಯವೆಂದು ಎಲ್ಲರಿಗೂ ವ್ಯಕ್ತವಾಗಿಯೇ ಇರಬೇಕು. ಗಾಯಹೊಂದಿ ನೋವಿನಿಂದ ನರಳುತ್ತಿರುವ ಒಂದು ಚಿಕ್ಕ ಹುಳುವನ್ನು ನೋಡಿದರೂ, ಅದರ ನೋವನ್ನು ತೊಲಗಿಸುವುದಕ್ಕೆ ಯತ್ನಿಸುವುದು ಸಾಮಾನ್ಯವಾಗಿ ಎಲ್ಲರ ಸಮ್ಮತವಾಗಿದೆ ಆದರೂ ಇಂಥ ಕೆಲಸಮಾಡಲು ಎಲ್ಲರಿಗೂ ಮನಸ್ಸುಬಂದೀತೆ? ಯಾವನು ಈ ಅಸಹ್ಯವಾದ ಕೆಲಸಮಾಡಿ, ಅದರಿಂದ ತನಗೆ ಒಂದು ವೇಳೆ ನೋವುಂಟಾದರೂ ಚಿಂತಿಸದಿರುವನೋ ಅವನೇ ಇದನ್ನು ಮಾಡತಕ್ಕವನು.

ಯಾರು ನಿಷ್ಕಾರಣವಾಗಿ ಪ್ರಾಣಿಗಳನ್ನು ನೋಯಿಸುವರೋ ಅವರು ಹಾಗೆ ಮಾಡಿದುದರಿಂದ ಮನುಷ್ಯರಿಗೆ ಬಾಧೆಯಾಗಲಿ, ಆಗದಿರಲಿ, ಶಿಕ್ಷೆಗೆ ಅರ್ಹರು. ಮನುಷ್ಯರ ವಿಷಯದಲ್ಲಾಗಲಿ, ಇತರ ಪ್ರಾಣಿಗಳ ವಿಷಯದಲ್ಲಾಗಲಿ ಮಾಡಿದ ನೋವನ್ನು ಮರೆಮಾಡುವಷ್ಟು ಲೋಕಕ್ಕೆ ಒಳ್ಳೆಯದು ಉಂಟಾಗುವ ಪಕ್ಷದಲ್ಲಿ ಅಂಥ ನೋವು ದಂಡನೀಯವಲ್ಲವು. ಆದುದರಿಂದಲೇ—"ವೈದ್ಯರು ಪ್ರಾಣಿಗಳ ವಿಷಯದಲ್ಲಿ ಕತ್ತರಿಸುವುದು, ಕೊಯ್ಯುವುದು ಮುಂತಾದ ಕ್ರೂರಕೃತ್ಯಗಳನ್ನು ನಡೆಸುವುದರಿಂದ ವೈದ್ಯಶಾಸ್ತ್ರದಲ್ಲಿ ಎಷ್ಟೋ ಹೊಸ ವಿಷಯಗಳು ಕಂಡುಹಿಡಿಯಲ್ಪಡುವುವಲ್ಲದೆ, ಇವುಗಳಿಂದ ಅನೇಕ ಹೊಸಔಷಧಗಳುಂಟಾಗಿ ಜನರ ಹಲವುಬಗೆಯ ರೋಗಗಳುತೊಲಗುವುವು. ಮನುಷ್ಯರು ಇತರಪ್ರಾಣಿಗಳಿಗಿಂತ ಮುಖ್ಯರಾದುದರಿಂದ ಮನುಷ್ಯರ ರೋಗಗಳನ್ನು ವಾಸಿಮಾಡುವ ಹೊಸ ಔಷಧಗಳನ್ನು ಕಂಡು ಹಿಡಿಯಲು, ನಾಯಿ, ಕಪ್ಪೆ, ಮುಂತಾದ ಜಂತುಗಳಿಗೆ ಹಿಂಸೆಕೊಟ್ಟರೂ ಚಿಂತೆಯಿಲ್ಲ,'' ಎಂದು ಕೆಲವರು ಹೇಳುತ್ತಾರೆ. ಹೀಗೆ ಹೇಳುವುದು ಎಲ್ಲರೂ

ಸಂಪೂರ್ಣವಾಗಿ ಒಪ್ಪತಕ್ಕದ್ದೋ ಅಲ್ಲವೋ ಅದುಹಾಗಿರಲಿ; ಪ್ರಾಣಿಗಳನ್ನು ಬಾಧಿಸುವುದು ತಪ್ಪೇ ಅಲ್ಲವೆಂದು ಯಾರೂ ಹೇಳಲಾಗುವುದಿಲ್ಲ. ಲೋಕಹಿತಾರ್ಥವಾಗಿ ವೈದ್ಯರು ಪ್ರಾಣಿಹಿಂಸೆಯನ್ನಾದರೂ ಮಾಡುವುದು ಸರಿಯೆಂದು ನಿರ್ಧರಿಸುವುದಕ್ಕೆ ಹೊರಟಾಗಲೇ ಪ್ರಾಣಿಹಿಂಸೆ ಬಲು ಕೆಟ್ಟದೆಂದು ಒಪ್ಪಿದ ಹಾಗಾಯಿತು.

ಇತರ ಪ್ರಾಣಿಗಳಿಗೆ ನಾವು ಬಹಳ ಕೃತಜ್ಞರಾಗಿರಬೇಕು. ಅವು ನಮ್ಮ ಮೂಟೆಗಳನ್ನು ಹೊರುತ್ತವೆ; ನಮ್ಮ ತಿಂಡಿಯನ್ನೂ ಉಡುಪನ್ನೂ ಹೊಂದಿಸಿ ಕೊಡುತ್ತವೆ ; ನಮ್ಮನ್ನು ಬೆನ್ನಿನಮೇಲೆ ಹೊತ್ತುಕೊಂಡು ಹೋಗಿ ನಮಗೆ ಕಾಲು ನೋವನ್ನು ತಪ್ಪಿಸುವುವು; ನಮ್ಮ ಮನೆಯ ಮುಂದೆ ಕಾವಲು ಬಿದ್ದಿರುವುವು. ಹೀಗೆ ನಾನಾರೀತಿಗಳಲ್ಲಿ ನಮಗೆ ಉಪಕಾರಮಾಡುವ ಜಂತುಗಳನ್ನು ಅನ್ಯಾಯವಾಗಿ ಹಿಂಸಿಸುವುದು ಪರಮನೀಚತನ. ಅವುಗಳನ್ನು ಪ್ರೀತಿಯಿಂದ ಕಾಣಬೇಕೆಂದು ದೇವರು ನಮ್ಮ ವಶಕ್ಕೆ ಕೊಟ್ಟಿದ್ದಾನೆ. ಮಕ್ಕಳಿಗೆ ಚಿಕ್ಕಂದಿನಿಂದಲೂ ಪ್ರಾಣಿಗಳಲ್ಲಿ ದಯೆತೋರಿಸುವುದನ್ನು ಕಲಿಸಬೇಕು. ಬೆಕ್ಕು, ನಾಯಿ, ಗಿಣಿ, ಹಸು ಮೊದಲಾದ ಮನೆಯಲ್ಲಿ ಸಾಕುವ ಪ್ರಾಣಿಗಳ ಮೂಲಕ ಅವರಿಗೆ ಕನಿಕರವು ಹೆಚ್ಚುವಂತೆ ಮಾಡಬಹುದು.

ಇಂಡಿಯ ಮುಂತಾದ ಪೂರ್ವದೇಶಗಳ ಮಹನೀಯರು "ಅಹಿಂಸಾ ಪರಮೋಧರ್ಮಃ," "ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಂ" ಎಂದು ಪ್ರಾಣಿಗಳವಿಷಯದಲ್ಲಿ ದಯೆಯಿಂದನಡೆದುಕೊಳ್ಳುವುದನ್ನು ಒಂದು ದೊಡ್ಡ ಧರ್ಮವಾಗಿ ಎಣಿಸಿರುವರು. ಆತ್ಮಗಳಿಗೆ ಪ್ರಾಣಿಹಿಂಸೆಯಿಂದುಂಟಾಗುವ ಪಾಪಕ್ಕನುಸಾರವಾಗಿ ಆಯಾ ಜನ್ಮಾಂತರವು ಸಂಭವಿಸುವುದೆಂದು ಶಾಸ್ತ್ರಗಳಲ್ಲಿ ಹೇಳಿದೆ. ಆತ್ಮನಿಗೆ ಜನ್ಮಾಂತರವುಂಟೆಂದು ನಂಬತಕ್ಕವನು ಪ್ರಾಣಿಗಳ ಸೌಖ್ಯಾಭಿವೃದ್ಧಿಯನ್ನು ಮಾಡಬೇಕೆಂಬ ಅಭಿಲಾಷೆಯಿಂದಲೇ ಅಲ್ಲದೆ, ತಾನುಹಿಂಸಿಸುವ ಪ್ರಾಣಿಯಲ್ಲಿಯೂ ತನಗೆ ಬಲು ಹತ್ತಿರದ ಬಂಧುವಿನಂತೆ ತನ್ನಹಾಗಿರುವ ಆತ್ಮನು ಸೇರಿರುವನೆಂಬ ಅಭಿಪ್ರಾಯದಿಂದಲೂ ಪ್ರಾಣಿಗಳಲ್ಲಿ ತುಂಬಾ ಕನಿಕರವಿಡಬೇಕೆಂದು ಬೋಧಿಸುತ್ತಾನೆ. ಆದುದರಿಂದಪ್ರಾಣಿಗಳ ವಿಷಯದಲ್ಲಿ ಕ್ರೌರ್ಯವನ್ನು ನಿರೋಧಿಸಲು ಸಭೆ ಮೊದಲಾದುದನ್ನು ಏರ್ಪಡಿಸುವ ಆವಶ್ಯಕತೆಯು ಯೂ-

ರೋಪ್ ಮುಂತಾದ ಪಶ್ಚಿಮ ದೇಶದಲ್ಲಿರುವಷ್ಟು ಇಂಡಿಯ ಮೊದಲಾದ ಪೂರ್ವ ದೇಶಗಳಲ್ಲಿಲ್ಲ.

## 27. ದಾನ.

ದಾನವು ಇಂಡಿಯ ಮುಂತಾದ ಪೂರ್ವದೇಶಗಳಲ್ಲಿ ಶ್ರೇಷ್ಠವಾದ ಧರ್ಮವೆಂದು ತಿಳಿಯಲ್ಪಟ್ಟು ಬಹುವಾಗಿ ಆಚರಣೆಯಲ್ಲಿದೆ. ದೊರೆಗಳೂ ಶ್ರೀಮಂತರೂ ತುಲಾಭಾರವನ್ನು ತೂಗಿಸಿಕೊಂಡು ಚಿನ್ನವನ್ನಾದರೂ ಬೆಳ್ಳಿಯನ್ನಾದರೂ ದರಿದ್ರರಿಗೆ ದಾನ ಮಾಡುವ ಪದ್ಧತಿ ಹಿಂದೂದೇಶದಲ್ಲಿ ಪೂರ್ವದಿಂದಲೂ ಉಂಟು. ಶಿವಾಜಿ ತುಲಾಭಾರವನ್ನು ತೂಗಿಸಿಕೊಂಡನು. ಇವನಿಗೆ ಹಿಂದೆಯೂ ಮುಂದೆಯೂ ಅನೇಕರು ಹೀಗೆ ಮಾಡಿದರು. ಹಿಂದೂ ದೇಶದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಪರೋಪಕಾರಿಗಳಾದ ಅನೇಕ ಧನಿಕರು ಧರ್ಮಾರ್ಥವಾಗಿ ಸ್ಕೂಲುಗಳನ್ನೂ, ಕಾಲೇಜುಗಳನ್ನೂ, ಆಸ್ಪತ್ರೆಗಳನ್ನೂ, ಛತ್ರಗಳನ್ನೂ ಕಟ್ಟಿಸಿದ್ದಾರೆ. ಆದರೆ ದಾನಮಾಡಲು ಅಧಿಕಾರವು ಭಾಗ್ಯವಂತರಿಗೇ ಅಲ್ಲ. ಪರೋಪಕಾರಬುದ್ಧಿ ಬಡವರಿಗೂ ಸಹಜವಾಗಿ ಉಂಟು.

ದಾನದಲ್ಲಿ ಮೂರು ವಿಧಗಳುಂಟೆಂದು ಶ್ರೀಭಗವದ್ಗೀತೆಯಲ್ಲಿ ಹೇಳಿದೆ. ದಾನಮಾಡುವುದು ಧರ್ಮವೆಂದುಭಾವಿಸಿ ಪ್ರತಿಫಲಾಪೇಕ್ಷೆಯಿಲ್ಲದೆ ಅರ್ಹನಾದವನಿಗೆ ದೇಶಕಾಲಗಳನ್ನರಿತು ಮಾಡಿದ ದಾನವು ಸಾತ್ವಿಕದಾನವೆನಿಸುವುದು. ಪ್ರತ್ಯುಪಕಾರರೂಪದಿಂದಾಗಲಿ, ಪ್ರತಿಫಲಾಪೇಕ್ಷೆಯಿಂದಾಗಲಿ, ಕೊಡುವುದಕ್ಕೆ ರಾಜಸದಾನವೆಂದು ಹೆಸರು. ದೇಶಕಾಲವಿವೇಚನೆಯಿಲ್ಲದೆ ಅಪಾತ್ರರಿಗೆ ಕೊಡುವುದು ತಾಮಸದಾನವೆನಿಸುವುದು ಕೆಲವರು ತಮ್ಮ ದಾತೃತ್ವವನ್ನು ಹೊರಗೆ ತೋರ್ಪಡಿಸಿಕೊಳ್ಳಲಾಗಲಿ, ಸರ್ಕಾರದ ಪ್ರೀತಿಯನ್ನು ಪಡೆವುದಕ್ಕಾಗಲಿ ದಾನಮಾಡುವುದುಂಟು. ಪಾರಮಾರ್ಥಿಕವಾಗಿ ರಹಸ್ಯದಲ್ಲಿ ಮಾಡುವದಾನವು ಅತ್ಯುತ್ಕೃಷ್ಟವಾದುದು. ಈ ಸಾತ್ವಿಕದಾನದಿಂದ ನಮಗೆ ವಸ್ತುಗಳಲ್ಲಿರುವ ಮಮತೆ ಕಡಮೆಯಾಗುವುದರ ಮೂಲಕ ವಿರಕ್ತಿ ಹೆಚ್ಚುವುದಕ್ಕೆ ಅವಕಾಶವುಂಟೆಂದು ವೇದಾಂತಿಗಳು ಹೇಳುವರು.

ಕೈಲಾದ ಮಟ್ಟಿಗೂ ದಾನಮಾಡುವುದು ನಮ್ಮ ಧರ್ಮವು. ಆದರೆ ದಾನಮಾಡುವುದರಲ್ಲಿ ವಿವೇಚನೆ ಬೇಕು. ಹೊಟ್ಟೆತುಂಬಿದವನಿಗೆ ಅನ್ನ ಹಾ-

ಕುವುದರಿಂದೇನು ಫಲ? ಹಲ್ಲುಹಿಡಿದು ನೋಡುವವನಿಗೆ ಎಮ್ಮೆಯನ್ನು ಧರ್ಮಾರ್ಥವಾಗಿ ಕೊಡಬಹುದೆ?

ಧನಿಕಂಗೆ ಮಾಳ್ಪದಾನಂ ।
ವನನಿಧಿಯೊಳ್ಕರೆವ ಮಳೆಗೆ ತೊಣೆಯೆನಲಕ್ಕುಂ ॥

ಪರದುಃಖವನ್ನು ಹೋಗಲಾಡಿಸುವುದೇ ದಾನಮಾಡುವುದರ ಉದ್ದೇಶವು; ಆದರೆ ಪಾತ್ರವಿವೇಚನೆಯಿಲ್ಲದೆ ಮಾಡಿದ ದಾನವುಯಾಚನಾವೃತ್ತಿಯನ್ನು ಪ್ರೋತ್ಸಾಹಿಸಿ ಲೋಕಕ್ಕೆ ಕೇಡುಮಾಡುತ್ತದೆ. ನಮ್ಮದೇಶದಲ್ಲಿ ದಾತೃಗಳೆನಿಸಿಕೊಂಡಿರುವ ಅನೇಕರು ದಾನಮಾಡುವುದು ತಮ್ಮ ಧರ್ಮವೆಂದರಿತು. ಪಾತ್ರಾಪಾತ್ರವಿವೇಚನೆಯಿಲ್ಲದೆ ತಮ್ಮಲ್ಲಿಗೆಬಂದ ಪ್ರತಿಯೊಬ್ಬ ಯಾಚಕನಿಗೂ ಸಹಾಯಮಾಡುತ್ತ ಬರುವರು. ಈ ರೀತಿ ಮಾಡದೆ ಪಾತ್ರಾಪಾತ್ರ ವಿವೇಚನೆಮಾಡುವ ಪಕ್ಷದಲ್ಲಿ, ಶಕ್ತರಾಗಿದ್ದರೂ ಸೋಮಾರಿತನದಿಂದ ಅಹನ್ಯಹನಿ ಕಾಲಕ್ಷೇಪಮಾಡುತ್ತ ಕಷ್ಟಪಡುತ್ತಿರುವ ಅನೇಕ ಯಾಚಕರು ನೀಚವಾದ ಯಾಚನಾವೃತ್ತಿಯನ್ನು ಬಿಟ್ಟು ದೇಶದಲ್ಲಿ ಉಪಯುಕ್ತರಾದ ಜನರಾಗಬಹುದು. ಈಗ ಹಿಂದೂಗಳಲ್ಲ ಬಲುಮಂದಿ ಯಾಚಕರಾಗಿರುವುದಕ್ಕೆ ತುಂಬಾ ಸಂತೋಷಿಸುವರು; ಇವರಲ್ಲಿ ಕೆಲವರು, ಬಡಕೆಲಸಗಾರನು ಕಷ್ಟಪಟ್ಟು, ಎದೆಯೊಡೆದುಕೊಂಡು, ದುಡಿದುಪಡೆವ ಕೂಲಿಹಣಕ್ಕಿಂತಲೂ ಹೆಚ್ಚಾಗಿ ಯಾಚನೆಯಿಂದಲೇ ಸಂಪಾದಿಸುವರು. ಹೀಗಾದುದರಿಂದಲೇ ಹಿಂದೂದೇಶದ ದೊಡ್ಡ ಪಟ್ಟಣಗಳಲ್ಲಿ ಲೆಕ್ಕವಿಲ್ಲದಷ್ಟು ಯಾಚಕರು ಬೀದಿ ಬೀದಿಯಲ್ಲಿಯೂ ಅಲೆಯುತ್ತಿರುವುದು ಆಶ್ಚರ್ಯವಲ್ಲ.

ಹಣಗಾರನಿಗೆ ತನ್ನ ಹಣವನ್ನು ದಾನಮಾಡಬೇಕೆಂಬ ಕೋರಿಕೆಯಿದ್ದರೆ ದಾನಾರ್ಹರಾದ ದರಿದ್ರರಿಗೆ ಕೊಡಬೇಕು. ಅಂಗಹೀನರಾಗಿದ್ದು, ದುಡಿದು ಜೀವಿಸಲಾರದ ಬಡವರೂ ವಿದ್ಯಾರ್ಥಿಗಳೂ ದಾನಕ್ಕೆ ಪಾತ್ರರು. ಇಂಥವರನ್ನು ತಾನೇ ಹುಡುಕಿನೋಡಿ ದಾನಮಾಡಬೇಕು. ಇದಕ್ಕೆ ಕಾಲವಿಲ್ಲದಿದ್ದರೆ, ದಾನಪಾತ್ರರನ್ನು ಆರಿಸಲೇರ್ಪಟ್ಟಿರುವ ಸಭೆಯ ಮೂಲಕವಾದರೂ ಸತ್ಪಾತ್ರಕ್ಕೆ ದಾನಮಾಡಲು ಯತ್ನಿಸುವುದು. ಆದರೆ ದಾನಮಾಡುವುದಕ್ಕೆ ಮೊದಲು ತನ್ನ ಮಕ್ಕಳುಮರಿಯನ್ನು ನೋಡಿಕೊಳ್ಳಬೇಕು ಹೊರಗಿನವರಿಗೆ

ಯಥೇಚ್ಛವಾಗಿ ಕೊಟ್ಟು ತನ್ನ ಕುಟುಂಬಭರಣಕ್ಕೇ ಗತಿಯಿಲ್ಲದೆ ಮಾಡಿಕೊಳ್ಳುವುದು ಹುಚ್ಚತನವು. ಆದುದರಿಂದ ದಾನಮಾಡುವುದರಲ್ಲಿ ಎರಡು ವಿಷಯಗಳನ್ನು ಚೆನ್ನಾಗಿ ನೆನಪಿನಲ್ಲಿಡಬೇಕು ಸ್ವಕುಟುಂಬಭರಣಕ್ಕೆ ಬೇಕಾದುದನ್ನೆಲ್ಲಾ ಮೊದಲು ನೋಡಿಕೊಳ್ಳುವುದು; ಮತ್ತು ಹೊರಗಿನವರಲ್ಲಿ ಅರ್ಹರಾದವರನ್ನು ನೋಡುವುದು. ಇಲ್ಲದಿದ್ದರೆ ಕಾಯಶಕ್ತಿಯಿದ್ದು ಕೆಲಸ ಮಾಡಿ ಜೀವಿಸಬಲ್ಲ ಅನೇಕರು ಯಾಚನೆಯೇ ಸೌಖ್ಯವೆಂದರಿತು ಯಾಚಕರಾಗುವುದರಿಂದ ಸೋಮಾರಿತನವು ಲೋಕದಲ್ಲಿ ಹೆಚ್ಚಿ ತುಂಬಾ ಕೆಡಕುಗಳು ಸಂಭವಿಸುವುವು. ಭೂಕಂಪ, ಬಿರುಗಾಳಿ, ಬೆಂಕಿಬೀಳುವುದು, ಪ್ರವಾಹ ಇವು ಮುಂತಾದ ಅಪಾಯಗಳಿಂದ ಹಠಾತ್ತಾಗಿ ಕೆಟ್ಟುಹೋದ ನಿರ್ಭಾಗ್ಯರಾದ ಜನರಿಗೆ ಸಹಾಯ ಮಾಡುವುದರಲ್ಲಿ ಮೇಲೆ ಸೂಚಿಸಿದ ಎರಡನೆಯ ವಿಧಿಯ ಅಡ್ಡಿಯೇನೂ ಇರುವುದಿಲ್ಲ. ಇಂಥ ಸಂದರ್ಭದಲ್ಲಿ ಸ್ವಲ್ಪ ಸಹಾಯ ಮಾಡಿದರೂ ಒಡನೆಯೇ ತುಂಬಾ ಕಷ್ಟ ಶಮನವಾಗುವುದು; ಮತ್ತು ಈ ತರದ ಸಹಾಯದಿಂದ ಯಾವ ವಿಧವಾದ ಕೆಡಕೂ ಮುಂದೆ ಉಂಟಾಗುವುದಿಲ್ಲ.

## 28. ಸ್ನೇಹ.

ರಕ್ತಸಂಬಂಧವಿಲ್ಲದಿರುವವರಲ್ಲಿ ಒಬ್ಬರಮೇಲೊಬ್ಬರಿಗಿರುವ ಪ್ರೀತಿಗೆ ಸ್ನೇಹವೆಂದು ಹೆಸರು. ಸಭೆಗಳಲ್ಲಿ ನಾನಾವಿಧವಾದ ನಮ್ಮ ಅಭಿಪ್ರಾಯಗಳನ್ನು ತಿಳಿಯಪಡಿಸುವುದಕ್ಕೂ, ಸಭಿಕರು ನಮ್ಮ ತಪ್ಪುಗಳನ್ನು ತಿದ್ದುವುದಕ್ಕೂ ಅವಕಾಶವುಂಟೆಂದು ಕೆಲವರು ತಿಳಿದಿರಬಹುದು. ಸ್ವಲ್ಪಯೋಚಿಸಿ ನೋಡಿದರೆ, ಆ ಉದ್ದೇಶ ನೆರವೇರುವುದಕ್ಕೆ ಸಭೆಗಳು ಅಷ್ಟು ಸರಿಯಾದ ಸ್ಥಳವಲ್ಲವೆಂದು ತೋರುವುದು. ಬಹಳ ಸಲುಗೆಯುಳ್ಳ ನಮ್ಮ ಗೆಳೆಯರೊಡನೆ ನಾವು ಮಾತಾಡುವಾಗ ಯಾವ ನಿರ್ಬಂಧವೂ ಇಲ್ಲ. ಮನಸ್ಸಿಗೆ ಬಂದಂತೆ ನಮ್ಮ ಅಭಿಪ್ರಾಯಗಳನ್ನು ಧಾರಾಳವಾಗಿ ತಿಳಿಸಲವಕಾಶವುಂಟು.

ಮಿತ್ರರು ನಮ್ಮ ಕಷ್ಟಕಾಲದಲ್ಲಿ ಕಷ್ಟವನ್ನು ಹೋಗಲಾಡಿಸುವರು; ಸಂತೋಷಕಾಲದಲ್ಲಿ ತಾವೂ ಸಂತೋಷಪಡುವರಲ್ಲದೆ ನಮ್ಮ ಸಂತೋಷವನ್ನು ಇನ್ನೂ ಹೆಚ್ಚಿಸುವರು. ಪಟ್ಟಣಗಳಿಗೆ ಕೋಟೆಯಂತೆ ನಮಗೆ ಆಪ್ತಮಿತ್ರನು ಒಳ್ಳೆಯ ರಕ್ಷಕನು; ಅಜ್ಞಾನವೆಂಬ ಕತ್ತಲೆಯನ್ನೂ ದುಷ್ಟಾಲೋಚನೆಗಳೆಂಬ

ಮಂಜುಗಳನ್ನೂ ಪರಿಹರಿಸುವ ಸೂರ್ಯನು. "ಪ್ರಪಂಚದಲ್ಲಿ ಗೆಳೆತನವಿಲ್ಲದಿರುವುದು ಸೂರ್ಯನಿಲ್ಲದಿರುವ ಹಾಗೆ" ಎಂದು ಒಬ್ಬ ವಿದ್ವಾಂಸನೂ, "ಗೆಳೆಯರಿಲ್ಲದ ಪ್ರಪಂಚವರಣ್ಯವು" ಎಂದು ಮತ್ತೊಬ್ಬ ಘನಪಂಡಿತನೂ ಹೇಳಿರುತ್ತಾರೆ. ಯೋಗ್ಯನಾದ ಸಖನೊಡನೆ ಮಾತಾಡುವುದರಿಂದ ಬುದ್ಧಿ ಹೆಚ್ಚುವುದು. ಅವನೊಡನೆ ಒಂದು ಘಂಟೆಯವರೆಗೆ ಮಾಡಿದ ಸಂವಾದದಿಂದ ಆಗುವ ಪ್ರಯೋಜನವು, ನಾವೇ ಒಂದು ದಿನವೆಲ್ಲ ಯೋಚಿಸಿದರೂ ಆಗಲಾರದು.

ಅಂಥ ಗೆಳೆಯರನ್ನು ಪಡೆವುದು ಬಲು ಕಷ್ಟ. ನಾವು ಸೌಖ್ಯವನ್ನೂ ಅಂತಶ್ಶುದ್ಧಿಯನ್ನೂ ಕೋರುವುದಾದರೆ ಗೆಳೆಯರನ್ನು ಬಹಳ ಬುದ್ಧಿವಂತಿಕೆಯಿಂದ ಆರಿಸಿಕೊಳ್ಳಬೇಕು. ಗೆಳೆಯರು ಒಳ್ಳೆಯವರಾದರೆ ನಮ್ಮನ್ನು ಮುಂದಕ್ಕೆ ತರುತ್ತಾರೆ, ಅಲ್ಲದಿದ್ದರೆ ಹಾಳುಮಾಡುತ್ತಾರೆ. ಕೆಲವರು ಸಿಕ್ಕಿದವರ ಸಂಗಡಲೆಲ್ಲ ಸ್ನೇಹ ಬೆಳೆಸುವರು. ಇದು ದೊಡ್ಡ ತಪ್ಪು. ನಮ್ಮ ಹತ್ತಿರ ಬಂದವರನ್ನು ಮರ್ಯಾದೆಯಿಂದಲೂ ಪ್ರೀತಿಯಿಂದಲೂ ಕಾಣುವುದು ಯುಕ್ತವು; ಆದರೆ ಬಂದವರನ್ನೆಲ್ಲ ಗೆಳೆಯರನ್ನಾಗಿ ಮಾಡಿಕೊಳ್ಳುವುದನುಚಿತವು. ಮಗ್ಗಲುಮನೆಯಲ್ಲಿ ವಾಸಿಸುವುದರಿಂದಲೋ, ಒಂದೇ ಕೆಲಸಗಾರನಾದುದರಿಂದಲೋ, ಒಂದೇ ರೈಲಿನಲ್ಲಿ ಪ್ರಯಾಣಮಾಡಿದುದರಿಂದಲೋ, ಅಥವಾ ಇನ್ನಾವ ಅಲ್ಪಕಾರಣದಿಂದಲೋ ಕೆಲವರು ಒಬ್ಬನ ಸ್ನೇಹವನ್ನು ಬೆಳೆಸುವರು. ಹೀಗೆ ಮಾಡಿಕೊಂಡ ಗೆಳೆಯರಿಗೆ "ಸ್ನೇಹದ ಪ್ರತಿಬಿಂಬಗಳು" ಎಂಬ ಹೆಸರನ್ನು ಒಬ್ಬ ಮಹಾಪಂಡಿತನು ಕೊಟ್ಟಿದ್ದಾನೆ.

ಆದುದರಿಂದ ಗೆಳೆಯರನ್ನು ಪಡೆಯಬೇಕಾದರೆ,

"ಸೌಹಾರ್ದಸ್ವರ್ಣರೇಖಾಣಾಂ ಮುಚ್ಛಾವಚಭಿದಾಜುಷಾಂ |
ಪರೋಕ್ಷಮಿತಿ ಕೋಽಪ್ಯಸ್ತಿ ಪರೀಕ್ಷಾನಿಕಷೋಪಲಃ ||"

ಎಂಬಂತೆ ಅವರನ್ನು ಚೆನ್ನಾಗಿ ಪರಿಶೀಲಿಸಿನೋಡಬೇಕು. ಕಲವರು ಸ್ವಪ್ರಯೋಜನಕ್ಕಾಗಿ ಬಂದು ಸೇರಿ ಅಚ್ಚುಮೆಚ್ಚಾಗಿರುತ್ತಿದ್ದು ತಮ್ಮ ಪ್ರಯೋಜನವನ್ನು ಪಡೆದಮೇಲೆ ಬಿಟ್ಟು ನಡೆವರು; ಮರಳಿ ಸುಳಿವುದಿಲ್ಲ. ಗೆಳೆಯನಾಗಬೇಕಾದರೆ ಅವನು ನಂಬಿಕೆಗೆ ಅರ್ಹನಾಗಿರಬೇಕು. ಸ್ಥೈರ್ಯಾದಿ ಸುಗುಣಗಳು, ಒಳ್ಳೆಯ ನಡತೆ, ಹೆಚ್ಚಿನ ತಿಳಿವಳಿಕೆ, ಯುಕ್ತಾಯುಕ್ತವಿವೇಕ,

ಐಶ್ವರ್ಯವಯಸ್ಸುಗಳಲ್ಲಿ ಸಾಮ್ಯ, ಇವು ಮಿತ್ರನ ಮುಖ್ಯಲಕ್ಷಣಗಳು. ಒಂದು ದಿನದಲ್ಲಿ ಸ್ನೇಹಿತನಾಗಿರುವುದು, ಒಡನೆಯೇ ಬಿಟ್ಟುಬಿಡುವುದು, ಮತ್ತೆ ಬಂದು ಸೇರುವುದು, ಈ ರೀತಿಯಿಲ್ಲದೆ ಮೊದಲಿಂದ ಕಡೆವರೆಗೂ ಒಂದೇ ವಿಧವಾಗಿರುವುದು ಸ್ಥೈರ್ಯವು. ಐಶ್ವರ್ಯವಯಸ್ಸುಗಳಲ್ಲಿ ಸಮನಾಗಿಲ್ಲದಿದ್ದರೆ ತಿರಸ್ಕಾರದಿಂದ ಕಾಣುವನು.

ಈ ರೀತಿಯಲ್ಲಿ ಬಲು ಚೆನ್ನಾಗಿ ಪರೀಕ್ಷಿಸಿ ಸಂಪಾದಿಸಿಕೊಂಡ ಗೆಳೆಯನನ್ನು ನಮ್ಮ ಜೀವಮಾನವಿರುವವರೆಗೂ ಬಿಡಬಾರದು. ಮೈತ್ರಿಯನ್ನು ಶಾಶ್ವತವಾಗಿ ಕಾಪಾಡಿಕೊಳ್ಳುವುದಕ್ಕೆ ತಕ್ಕ ಎಲ್ಲಾ ಪ್ರಯತ್ನಗಳನ್ನೂ ಮಾಡಬೇಕು. ನಾವು ಮಿತ್ರರ ವಿಷಯದಲ್ಲಿ ಒಂದೇ ವಿಧವಾಗಿಯೂ ಸರಿಯಾಗಿಯೂ ನಡೆದುಕೊಳ್ಳಬೇಕು. ಮಿತ್ರರ ಮನಸ್ಸುಗಳನ್ನು ಕೆಡಿಸುವ ಕೆಲವು ಸಂದರ್ಭಗಳು ಪ್ರಾಪ್ತವಾಗಬಹುದು. ಅಂಥ ದುಷ್ಕಾಲದಲ್ಲಿ ತಾಳ್ಮೆಯನ್ನವಲಂಬಿಸಿ ಎಲ್ಲವನ್ನೂ ಮರೆತುಬಿಟ್ಟು ಮನಸ್ಸುಗಳನ್ನು ಸಮಾಧಾನಪಡಿಸಿಕೊಳ್ಳುವುದು. "ಮಿತ್ರಂಸ್ವಚ್ಛತಯಾ" ಎಂಬಂತೆ ಮಿತ್ರನನ್ನು ನಾವು ನಿರ್ಮಲಹೃದಯದಿಂದ ಕಾಣಬೇಕು.

## 29. ಕಾಲೋಪಯೋಗ.

ಕಾಲವೆಂಬುದು ದೇವರು ನಮಗೆ ಕೊಟ್ಟಿರುವವುಗಳಲ್ಲಿ ಅತ್ಯಂತ ಬೆಲೆಯುಳ್ಳದ್ದು, ಅಲ್ಲದೆ ಅದು ಬಲು ಜಾಗ್ರತೆಯಾಗಿ ಕಳೆದು ಹೋಗತಕ್ಕದ್ದು. ಋತುಗಳು, ಚಂದ್ರಸೂರ್ಯರು ಇವು ಹೋಗಿ ಮತ್ತೆ ಬರುವುವು. ಕಳೆದ ಕಾಲವನ್ನು ಮರಳಿ ಹೊಂದಲಾಗುವುದಿಲ್ಲ. ಒಂದು ರೂಪಾಯಿ ಹೋದರೆ ಬಹಳ ಪೇಚಾಡುತ್ತೇವೆ. ದಿನಗಳು ಒಂದಾದಮೇಲೊಂದು ಕಳೆದು ಹೋಗುವುದನ್ನು ನಾವು ಲಕ್ಷ್ಯಮಾಡುವುದೇ ಇಲ್ಲ. ಇದು ತಪ್ಪು. ಕಾಲವೇ ಹಣ. ಇದಕ್ಕೆ ಬೆಲೆ ಕಟ್ಟುವುದಕ್ಕೆ ಆಗುವುದಿಲ್ಲ. ಈ ಅಂಶವನ್ನರಿಯದೆ ಅನೇಕರು ಕಾಲವನ್ನು ವ್ಯರ್ಥವಾಗಿ ಕಳೆವರು. ನಮ್ಮ ಜೀವಮಾನದ ಪ್ರತಿಕ್ಷಣವನ್ನೂ ಸತ್ಕಾರ್ಯದಲ್ಲಿ ಉಪಯೋಗಿಸಿದರೆ ನಮಗೂ ಲೋಕಕ್ಕೂ ಎಷ್ಟೋ ಪ್ರಯೋಜನಗಳಾಗುತ್ತವೆ.

ನಮ್ಮ ಜೀವಮಾನವು ಕಾಲವಲ್ಲದೆ ಬೇರೆಯಲ್ಲ. ಮರಣವನ್ನು ನೆನೆದಾಗ ನಡುಗುವೆವು. ಪ್ರಾಣವನ್ನುಳಿಸಿಕೊಳ್ಳಲು, ಪಡಬಹುದಾದ ಕಷ್ಟಗಳನ್ನೆಲ್ಲಾ ಪಡುವುದಲ್ಲದೆ, ಮಾಡಬಹುದಾದ ವೆಚ್ಚಗಳನ್ನೆಲ್ಲಾ ಮಾಡುತ್ತೇವೆ. ನಾವು ಜೀವಿಸುವ ಘಂಟೆಗಳು, ದಿನಗಳು ಇವುಗಳನ್ನೆಲ್ಲಾ ಕೂಡಿದರೆ ನಮ್ಮ ಒಟ್ಟು ಜೀವಮಾನವಾಗುವುದು. ಇದನ್ನು ಮರೆತು ಒಂದು ನಿಮಿಷವಾಗಲಿ, ಘಂಟೆಯಾಗಲಿ, ದಿನವಾಗಲಿ, ತಿಂಗಳಾಗಲಿ, ಎಷ್ಟು ಸ್ವಲ್ಪಕಾಲವನ್ನು ವ್ಯರ್ಥವಾಗಿ ಕಳೆದರೆ ಅಷ್ಟುಭಾಗವು ನಮ್ಮ ಜೀವಮಾನದಿಂದ ನಷ್ಟವಾಗಿ ಹೋದಂತೆ ತಿಳಿಯಬೇಕು. ಆದುದರಿಂದ ಕಾಲವನ್ನು ವ್ಯರ್ಥವಾಗಿ ಕಳೆವುದು ಒಂದು ಬಗೆಯ ಆತ್ಮಹತ್ಯವು

ಇನ್ನೊಂದು ವಿಷಯವನ್ನು ಮರೆಯದೆ ಚೆನ್ನಾಗಿ ನೆನಪಿನಲ್ಲಿಟ್ಟಿದ್ದರೆ, ಕಾಲವನ್ನು ವ್ಯರ್ಥವಾಗಿ ಕಳೆಯಲವಕಾಶ ಕಡಮೆಯಾಗುವುದು. ನಮ್ಮ ಜೀವಮಾನವು ಬಹಳ ಅಲ್ಪವು. ನಾವು ಸುಮಾರು ಅರುವತ್ತು ಅಥವಾ ಎಪ್ಪತ್ತು ವರ್ಷಗಳು ಬದುಕಿದ್ದರೆ ಹೆಚ್ಚು. ಇದರಲ್ಲಿ ಅರ್ಧಕ್ಕಿಂತ ಹೆಚ್ಚು ಪಾಲು ನಿದ್ದೆಯಲ್ಲಿ ಹೋಗುತ್ತದೆ. ಸ್ವಲ್ಪಭಾಗವನ್ನು ಆಟಪಾಟ, ಊಟ, ಉಪಚಾರಗಳಲ್ಲಿಯೂ, ಇನ್ನೂ ಸ್ವಲ್ಪವನ್ನು ಉಡಿಗೆ, ತೊಡಿಗೆ, ಪ್ರಯಾಣ ಮುಂತಾದವುಗಳಲ್ಲಿಯೂ, ಮತ್ತೆ ಸ್ವಲ್ಪಭಾಗವನ್ನು ಕಾಯಿಲೆಯಲ್ಲಿಯೂ ಕಳೆದುಬಿಡುತ್ತೇವೆ. ಇವುಗಳನ್ನೆಲ್ಲ ತಳ್ಳಿಬಿಟ್ಟರೆ ನಮ್ಮ ಜೀವಮಾನದಲ್ಲಿ ಉಳಿವುದು ಹದಿನೈದು ಇಪ್ಪತ್ತು ವರ್ಷಗಳ ಮೇಲಿಲ್ಲ. ಇದನ್ನು ಯಾರು ನೆನಪಿನಲ್ಲಿಡುವರೋ ಅವರು ಒಂದು ಕ್ಷಣಮಾತ್ರವನ್ನೂ ವ್ಯರ್ಥವಾಗಿ ಕಳೆಯಲಾರರು.

ಕಾಲವನ್ನು ವ್ಯರ್ಥವಾಗಿ ಎಂದಿಗೂ ಕಳೆಯಬಾರದು; ಇದನ್ನು ಸದ್ವಿನಿಯೋಗಪಡಿಸಬೇಕು. ಕಾಲದ ಸದ್ವ್ಯಯವಾವುದು? ದುರ್ವ್ಯಯವಾವುದು? ತನಗೂ ಇತರರಿಗೂ ಫಲವಾಗುವಂತೆ ಕಾಲವನ್ನು ಪಯೋಗಿಸುವುದೇ ಅದರ ಸದ್ವ್ಯಯವು; ಇದಲ್ಲದಿರುವುದೇ ದುರ್ವ್ಯಯವು. ಕಾಲವನ್ನು ಸರಿಯಾಗಿ ಕಳೆವುದಕ್ಕೆ ಅನೇಕ ಮಾರ್ಗಗಳುಂಟು. ಇವುಗಳಲ್ಲಿ ಉತ್ತಮವಾದುವು ಅನಾಥರಿಗೆ ಸಹಾಯಮಾಡುವುದು, ದುಃಖಿತರನ್ನು ಸಂತೈಸುವುದು, ಅಜ್ಞಾನಿಗೆ ಜ್ಞಾನೋಪದೇಶಮಾಡುವುದು, ಕೋಪಗೊಂಡವರಿಗೆ ಕೋಪ ಬಿಡಿಸು-

ವುದು, ದೇವರ ಧ್ಯಾನ ಮುಂತಾದ ಸತ್ಕಾರ್ಯಗಳು. ಮತ್ತಾವ ಕೆಲಸವೂ ಇಲ್ಲದ ಕಾಲದಲ್ಲಿ ಪರಮಾಪ್ತನೂ ಸದ್ಗುಣಿಯೂ ಆದ ಮಿತ್ರನೊಡನೆಮಾತನಾಡುವುದು ಬಹೂಪಯೋಗಕಾರಿಯು. ತನಗೆ ಉಪಯುಕ್ತವೂ ಇತರರಿಗೆ ಅಬಾಧಕವೂ ಆಗಿರುವ ಅಂಗಸಾಧನೆಯ ಆಟಗಳಲ್ಲಿ ಕಾಲವನ್ನು ಕಳೆಯುವುದೂ ಸರಿಯೆ. ಇಸ್ಪೇಟು ಮುಂತಾದ ಆಟಗಳಲ್ಲಿಯೇ ದಿನಕ್ಕೆ ಹತ್ತು ಹನ್ನೆರಡು ಘಂಟೆಗಳನ್ನು ಕೆಲವರು ಕಳೆವುದುಂಟು. ಇವುಗಳಿಂದ ಇತರರಿಗೆಬಾಧೆಯೇನೂ ಆಗುವುದಿಲ್ಲವಾದರೂ ಯಾರಿಗೂ ಪ್ರಯೋಜನವೇನೂ ಇಲ್ಲ. ಇಂಥ ಆಟವಾಡುವವರು "ಯಾವಕೆಲಸಮಾಡುವುದಕ್ಕೂ ವಿರಾಮವಿಲ್ಲ'' ಎಂದು ಪೇಚಾಡಿದರೆ ತಿಳಿದವರು ಇದನ್ನು ಕೇಳಿ ಹಾಸ್ಯಮಾಡಲಾರರೆ ? ನಾಟಕವನ್ನು ನೋಡುವುದೇನೋ ಒಳ್ಳೇದೆ; ಆದರೆ ಈಗಿನ ನಾಟಕಗಳು ಉದ್ದೇಶಕ್ಕನುಸಾರವಾಗಿ ನಡೆಯದಿರುವುದರಿಂದ ನಾಟಕ ನೋಡುವುದೂ ಈಗ ವೃಥಾಕಾಲಹರಣಕ್ಕೆ ಸೇರುವುದು.

ಸೋಮಾರಿತನದಲ್ಲಿ ಎಂದಿಗೂ ಕಾಲಹರಣ ಮಾಡಬಾರದು. ಯಾವ ಒಳ್ಳೆಯಕೆಲಸವನ್ನೂ ಮಾಡದೆ ಸೋಮಾರಿಯಾಗಿ ಸುಮ್ಮನೆ ಕುಳಿತಿದ್ದರೆ, ಕೆಟ್ಟಕೆಲಸ ಮಾಡುವುದಕ್ಕೆ ಬುದ್ಧಿಯುಂಟಾಗುವುದು ಮನುಷ್ಯನಿಗೆಸ್ವಭಾವ ಸಿದ್ಧವು. ಆದುದರಿಂದ ಪ್ರತಿದಿನವೂ ತಂತಮ್ಮ ಕೆಲಸಗಳನ್ನು ತಾವು ಬಿಡದೆ ನೆರವೇರಿಸುತ್ತಿರಬೇಕು. ಮೇಲೆ ಹೇಳಿದ ಎಲ್ಲಾ ವಿಧಗಳಿಗಿಂತ ಜ್ಞಾನವನ್ನು ಸಂಪಾದಿಸಿಕೊಳ್ಳುವುದು ಅತ್ಯುತ್ತಮ. ಪ್ರಸಿದ್ಧರಾದಹಲವುಕವಿಗಳಗ್ರಂಥಗಳೂ ಶಾಸ್ತ್ರಗಳೂ ಹೇರಳವಾಗಿರುವುವು. ಇವಕ್ಕೆ ಪಾರವೇ ಇಲ್ಲ. ಇವುಗಳನ್ನೋದಿಜ್ಞಾನವನ್ನು ಜೀವಮಾನದಕೊನೆವರೆಗೂಹೆಚ್ಚಿಸುತ್ತಬರಬೇಕು.

## 30. ಕಸಬುಗಳಲ್ಲಿ ಆವುದನ್ನು ಆಶ್ರಯಿಸಿಕೊಳ್ಳಬೇಕು?

ಯಾವ ಕಸಬಿನಲ್ಲಿ ತುಂಬಾ ಆದಾಯವಾಗಿ ನಾವು ಉನ್ನತಸ್ಥಿತಿಗೆ ಬರಬಹುದೋ ಅಂಥ ಕಸಬನ್ನು ಆರಿಸಿಕೊಳ್ಳಬೇಕು. ನಮ್ಮ ಏಳಿಗೆಗೆ ಅನುಕೂಲವಾದ ಕಸಬನ್ನು ಹೇಗೆ ಕಂಡುಹಿಡಿವುದು? ಸಿಕ್ಕಿದುದನ್ನು ಅವಲಂಬಿಸಿದರೆ ನಮ್ಮ ಉದ್ದೇಶವು ನೆರವೇರುವುದೆ? ಎಂದಿಗೂ ಇಲ್ಲ. ಯಾವುದಾದರೂ ಒಂದು ಕಸಬನ್ನು ಅವಲಂಬಿಸುವುದಕ್ಕೆ ಮೊದಲು ಬಹಳ ಆಲೋಚಿ-

ಸಬೇಕು. ದೇಶಕಾಲಗಳನ್ನು ಪರ್ಯಾಲೋಚಿಸಿ ಯಾವ ಕಸಬಿನಲ್ಲಿ ನಮ್ಮ ಬುದ್ಧಿಕೌಶಲ್ಯವು ಓಡುವುದೋ ಅಂಥದನ್ನು ಹಿಡಿಯುವುದು. ಆದುದರಿಂದ ತಾಯ್ತಂದೆಗಳು ಕಸಬುಗಳಿಗೆ ಬೇಕಾದ ವಿದ್ಯೆಗಳನ್ನು ತಮ್ಮ ಮಕ್ಕಳಿಗೆಕಲಿಸುವುದರಲ್ಲಿ ಬಲು ಎಚ್ಚರಿಕೆಯಿಂದಿರಬೇಕು. ತಾವು ಅವಲಂಬಿಸಿರುವ ಅಥವಾ ತಾವು ಒಡಂಬಟ್ಟಿರುವ ಕಸಬನ್ನೇ ತಮ್ಮ ಮಕ್ಕಳೂ ಹೊಂದಬೇಕೆಂದು ಅವರನ್ನು ಬಲಾತ್ಕರಿಸುವುದು ಅನುಚಿತವು. ಒಂದುವೇಳೆತಂದೆಯ ಕಸಬು ಮಗನಿಗೆ ಒಂಟಿದರೆ ಸರಿ. ಇಲ್ಲದಿದ್ದರೆ ಗತಿಯೇನು? ಕಲಿಸಿದ ವಿದ್ಯೆ ವ್ಯರ್ಥವಾಗುವುದಲ್ಲದೆ ಮಗನ ಪಾಡು ಕೆಟ್ಟುಹೋಗುವುದು.ಆದುದರಿಂದ ಮಗನಿಗೆ ಯಾವ ಕಸಬಿನಲ್ಲಿ ಅಭಿರುಚಿಯಿದೆಯೋ ಅದನ್ನು ಕಂಡುಕೊಂಡು. ಅವನನ್ನು ಅದಕ್ಕೆ ಬಿಟ್ಟು, ಅದರಲ್ಲಿ ಮುಂದಕ್ಕೆ ಬರುವುದಕ್ಕೆ ತಕ್ಕ ಒತ್ತಾಸೆ ಕೊಡಬೇಕು.

ಮೇಲಣ ವಿಧಿಯನ್ನು ಇಂಗ್ಲೆಂಡಿನಲ್ಲಿತಾಯ್ತಂದೆಗಳೆಲ್ಲ ಅನುಸರಿಸುವರು. ತಮ್ಮ ಮಕ್ಕಳಿಗೆ ತಕ್ಕ ಕಸಬನ್ನು ಆರಿಸಿಕೊಡುವುದು ಬಹಳ ಕಷ್ಟವಾದ ಕೆಲಸವೆಂಬುದು ಅವರಿಗೆ ಚೆನ್ನಾಗಿ ಗೊತ್ತುಂಟು. ಆದುದರಿಂದಲೇ ಅವರು ತಮ್ಮ ಮಕ್ಕಳ ಬುದ್ಧಿಚಾತುರ್ಯಾದಿಗಳನ್ನು ಪರೀಕ್ಷಿಸಿತಕ್ಕಂತೆಕಸಬುಗಳನ್ನು ತೋರಿಸಿಕೊಡುವವಾಡಿಕೆಯನ್ನಿಟ್ಟುಕೊಂಡಿದ್ದಾರೆ.ಬಹುಕಾಲದಿಂದಲೂ ಹೀಗೆ ನಡೆದುಕೊಂಡು ಬಂದಿರುವುದರಿಂದಲೇ ಇಂಗ್ಲಿಷರುಹಿಡಿದಕಸಬುಗಳಲ್ಲಿ ಬಹಳ ಏಳಿಗೆಗೆ ಬಂದು, ಎಲ್ಲರೂ ಬಲು ಸಿರಿವಂತರಾಗಿರುವರು. ಆದರೆ ಹಿಂದೂದೇಶದಲ್ಲಿ ಜನರನ್ನು ವರ್ಣಗಳಾಗಿ ವಿಂಗಡಿಸಿ ಇಂಥವರ್ಣದವರು ಈ ಕೆಲಸವನ್ನೇ ಮಾಡಬೇಕು ಎಂದು ಗೊತ್ತುಮಾಡಿರುವುದರಿಂದ, ಇಂಗ್ಲಿಷರಂತೆ ನಮ್ಮಲ್ಲಿಕಸಬುಗಳ ವಿಚಾರದಲ್ಲಿ ಆಲೋಚನೆಯ ತೊಂದರೆಯೇ ಚಿರಕಾಲದಿಂದಲೂ ಇಲ್ಲ. ಆದರೂ ಈಚೆಗೆ ಇಂಡಿಯಾದಲ್ಲಿಯೂ ವಿದ್ಯಾವಂತರು ತಮ್ಮ ತಂದೆಗಳು ಮಾಡುತ್ತಿದ್ದ ಕೆಲಸವನ್ನೇ ಮಾಡದೆ ಹೊಸದಾಗಿ ಬೇಕಾದ ಕಸಬನ್ನು ಆರಿಸಿಕೊಳ್ಳಲು ಅವಕಾಶವುಂಟಾಗಿದೆ.

ಕಸಬುಗಳಲ್ಲಿ ಹಲವು ಬಗೆಗಳುಂಟು. ಸ್ವತಂತ್ರವಾಗಿ ಜೀವಿಸಬೇಕೆಂದಿರುವವರು ವ್ಯವಸಾಯ, ಕೈಗಾರಿಕೆ, ಇವುಗಳನ್ನನುಸರಿಸಬಹುದು;ಅಥವಾ

ಲಾಯರುಗಳೂ ವರ್ತಕರೂ ಆಗಬಹುದು. ಲೋಕವ್ಯವಹಾರಜ್ಞಾನವೂ ವಾಕ್ಪಟುತ್ವವೂ ಹೆಚ್ಚಾಗಿರುವವರು ಲಾಯರುಗಳಾಗುವುದು ಒಳ್ಳೆಯದು. ಸ್ವತಂತ್ರಜೀವನಗಳಲ್ಲೆಲ್ಲಾ ವ್ಯಾಪಾರಜೀವನಕ್ಕೆ ಸಮಾನವಾವುದೂ ಇಲ್ಲ. ಇದಕ್ಕೆ ಇಂಗ್ಲೆಂಡ್ ಜಪಾನ್ ದೇಶಗಳ ಜನರೇ ದೃಷ್ಟಾಂತ. ಸೇವಾವೃತ್ತಿ ಒಗ್ಗತಕ್ಕವರು ಸರ್ಕಾರದ ಕೆಲಸಕ್ಕೆ ಸೇರಬಹುದು. ನಮ್ಮ ದೇಶದವರಿಗೆ ಇದು ಬಲು ಅನುಕೂಲವಾಗಿ ಕಂಡುಬಂದಂತೆ ತೋರುತ್ತಿದೆ. ಇದರಲ್ಲಿ ಬುದ್ಧಿಶಾಲಿಗಳಿಗೂ ಮೂಢರಿಗೂ ಅವಕಾಶವುಂಟು. ಕಾಲಕ್ಕೆ ಸರಿಯಾಗಿ ಕ್ಲಪ್ತವಾದ ಸಂಬಳವೂ, ಸರ್ವಿಸ್ಸಾದ ಮೇಲೆ ಪೆನ್ಷನ್ನೂ ಸರ್ಕಾರದ ನೌಕರಿಯಲ್ಲಿ ಆಸೆಯನ್ನುಂಟುಮಾಡುವುವು. ಇದರಲ್ಲಿ ಬಗೆಬಗೆಯ ಕಸಬಿನ ಹಲವು ಇಲಾಖೆಗಳಿವೆ. ಭಾಷಾಗ್ರಂಥಗಳಲ್ಲಿ ವಿಶೇಷ ಆಸಕ್ತಿಯೂ ಪರಿಶ್ರಮವೂ ಉಳ್ಳವರು, ಬೋಧನಾಶಕ್ತಿಯನ್ನೂ, ತಾಳ್ಮೆಯನ್ನೂ, ಹುಡುಗರನ್ನು ವಶದಲ್ಲಿಟ್ಟುಕೊಳ್ಳುವ ಸಾಮರ್ಥ್ಯವನ್ನೂ ಹೊಂದಿದ್ದರೆ, ವಿದ್ಯಾಭ್ಯಾಸದ ಇಲಾಖೆಗೆ ಸೇರಬಹುದು. ಕೈಕೆಲಸದಲ್ಲಿ ಚಮತ್ಕಾರವುಳ್ಳವರು ಇಂಜನಿಯರಿಂಗ್ ಇಲಾಖೆಗೆ ಹೋಗಬೇಕು. ಹೆಚ್ಚಿನ ತಾಳ್ಮೆಯೂ, ಪರೋಪಕಾರಬುದ್ಧಿಯೂ, ದಯೆಯೂ ಇರುವವರು ವೈದ್ಯರಾಗಬೇಕು.

ಹೀಗೆ ಅವರವರ ಯೋಗ್ಯತಾನುಸಾರ ಕಸಬುಗಳನ್ನಾರಿಸಿಕೊಳ್ಳಬೇಕು. ನಮ್ಮ ದೇಶದಲ್ಲಿ ವಿದ್ಯಾವಂತರು ಈ ರೀತಿ ನಡೆದುಕೊಳ್ಳದೆ ಎಲ್ಲರೂ ಸರ್ಕಾರದ ನೌಕರಿಗೇ ನುಗ್ಗುವುದರಿಂದ, ವಿದೆಗೆ ತಕ್ಕ ಸಂಬಳ ದೊರೆಯದೆ ಅನೇಕರಿಗೆ ಜೀವನ ನಡೆವುದೇ ಕಷ್ಟವಾಗಿದೆ. ತಮಗೆ ಇದೇ ಸರಿಯೆಂದು ಜಂಭದಿಂದ ಇನ್ನಾವುದಕ್ಕೂ ಪ್ರವರ್ತಿಸುವುದಿಲ್ಲ ಹೀಗೆ ಒಂದೇ ಕಡೆ ಸೇರುವುದಕ್ಕಿಂತಲೂ ವ್ಯವಸಾಯ, ವ್ಯಾಪಾರ ಮೊದಲಾದುವುಗಳಿಗೆ ಹೊರಡುವುದು ಒಳ್ಳೆಯದು. ಇದರಿಂದ ತನಗೂ ಇತರರಿಗೂ ವಿಶೇಷವಾದ ಪ್ರಯೋಜನವುಂಟು.

## 31. ವೃತ್ತಾಂತ ಪತ್ರಿಕೆಗಳು.

ಚರಿತ್ರೆಯು ಆಯಾ ದೇಶದಲ್ಲಿ ನಡೆದ ಪೂರ್ವಕಾಲದ ವೃತ್ತಾಂತವನ್ನು ತಿಳಿಸುತ್ತದೆಯೆನ್ನುವುದು ಎಲ್ಲರಿಗೂ ತಿಳಿದೇಯಿದೆಯಷ್ಟೆ. ಆದರೆ ವೃತ್ತಾಂತಪತ್ರಿಕೆಗಳಿಲ್ಲದಿದ್ದರೆ ನಮ್ಮ ಕಾಲದಲ್ಲಿ ಏನೇನು ನಡೆವುದೋ ನಮಗೆ ತಿಳಿಯ-

ದೆಯೇ ಹೋಗುತ್ತಿತ್ತು; ಏಕೆಂದರೆ, ವೃತ್ತಾಂತಪತ್ರಿಕೆಗಳು ತತ್ಕಾಲದಲ್ಲಿ ನಡೆವ ಸಂಗತಿಗಳನ್ನು ತಿಳಿಸುವ ಚರಿತ್ರೆಯಾಗಿವೆ.

ವೃತ್ತಾಂತಪತ್ರಿಕೆಗಳನ್ನೋದುವುದುನಿಷ್ಫಲವೆಂತಲೂ, ಅವನ್ನೋದುವುದರಲ್ಲಿಕಳೆದ ಕಾಲವು ವ್ಯರ್ಥವೆಂತಲೂ ಕೆಲನರು ಹೇಳುವರು. ಹೀಗೆಹೇಳು-ವುದು ಸರಿಯಲ್ಲ. ಪತ್ರಿಕೆಗಳಲ್ಲಿರುವ ಕೆಲವಂಶಗಳು ಕೆಲವರಿಗೆ ಮಾತ್ರ ಅನು-ಪಯುಕ್ತವಾಗಿರಬಹುದಾದರೂ, ಈ ಕೆಲವಂಶಗಳಿಗಾಗಿ ಪತ್ರಿಕೆಗಳೋದುವುದನ್ನೇ ಸಂಪೂರ್ಣವಾಗಿ ಬಿಡುವದನುಚಿತವು. ವೃತ್ತಾಂತಪತ್ರಿಕೆಗಳಿಂದ ಹೊಸ ಸಮಾಚಾರಗಳೇ ಅಲ್ಲದೆ, ಇನ್ನೂ ಹಲವುಬಗೆಯ ವಿಷಯಗಳು ತಿಳಿ-ಯಬರುವುವು. ಮೊದಲುಮೊದಲು ಪ್ರಕಟಿಸಿದ ವೃತ್ತಾಂತಪತ್ರಿಕೆಗಳಿಗೆ ರಾಜ್ಯಭಾರದ ಆಡಳಿತಗಳನ್ನು ಪ್ರಜೆಗಳಿಗೆ ಬೋಧಿಸುವುದೂ;ಕ್ಷೇಮಾರ್ಥ-ವಾದ ಏರ್ಪಾಡಿನ ವಿಷಯದಲ್ಲಿಪ್ರಜೆಗಳಪ್ರಾರ್ಥನೆಗಳನ್ನು ಸರ್ಕಾರದವರಿಗೆ ತಿಳಿಯಪಡಿಸುವುದೂ ಮುಖ್ಯೋದ್ದೇಶಗಳಾಗಿದ್ದವು. ಈಗಿನ ಪತ್ರಿಕೆಗಳು ಈ ಕೆಲಸವನ್ನು ಮಾಡುವುದಲ್ಲದೆ, ರಾಜ್ಯತಂತ್ರ, ನೀತಿ, ವಿದ್ಯೆ, ಜಾತಿ, ಮತ ಮುಂತಾದ ಅನೇಕ ವಿಷಯಗಳಲ್ಲಿತಿಳಿಯಬೇಕಾದುದನ್ನೂ ಬೋಧಿಸುತ್ತವೆ. ಈಗ ಶ್ರೇಷ್ಠವಾದ ಪತ್ರಿಕೆಗಳನ್ನು ನಡೆಸುವವರು ಸಕಲ ಶಾಸ್ತ್ರಗಳನ್ನೂ ತಿಳಿದ ಪಂಡಿತರು. ಆದುದರಿಂದ ಅವರ ಪತ್ರಿಕೆಯಲ್ಲಿ ಬರೆದಿರುವ ಸಂಗತಿಗಳನ್ನು ಜನರೆಲ್ಲ ಓದಿ ತಿಳಿಯುತ್ತಾರೆ. ಇಂಥ ವೃತ್ತಾಂತಪತ್ರಿಕೆಗಳಿಂದ ಆಗುವ ಕೆಲಸಗಳು ಅದ್ಭುತವಾಗಿವೆ. ಇವು ರಾಜ್ಯಭಾರಗಳನ್ನೇ ತಲೆಕೆಳಗಾಗಿಮಾ-ಡಬಹುದು ಇದಲ್ಲದೆ ಭೌತಿಕಶಾಸ್ತ್ರ,ಜ್ಯೋತಿಶ್ಶಾಸ್ತ್ರ ಮುಂತಾದುವುಗಳಲ್ಲಿ ವಿದ್ವಾಂಸರು ಹೊಸದಾಗಿ ಕಂಡುಹಿಡಿದ ವಿಷಯಗಳನ್ನರಿಯಬೇಕಾದರೂ, ಹೊಸದಾಗಿ ಪ್ರಚಾರಕ್ಕೆ ಬಂದಗ್ರಂಥಗಳವಿಚಾರವನ್ನು ತಿಳಿಯಬೇಕಾದರೂ, ವೃತ್ತಾಂತಪತ್ರಿಕೆಗಳನ್ನು ಬಿಟ್ಟು ಮತ್ತಾವುದೂ ಇಲ್ಲ. ಒಂದು ಪತ್ರಿಕೆಯಲ್ಲಿ ಯಾವುದೋ ಒಂದು ವಿಷಯವನ್ನು ಒಂದು ಬಗೆಯಲ್ಲಿ ಚರ್ಚಿಸಿ ಬರೆದಿರ-ಬಹುದು. ಮತ್ತೊಂದರಲ್ಲಿ ಅದೇ ವಿಷಯವನ್ನು ಬೇರೆ ರೀತಿಯಲ್ಲಿ ಹೇಳಿರ-ಬಹುದು. ಈ ಎರಡು ಪತ್ರಿಕೆಗಳನ್ನೂ ಓದಿ, ಚರ್ಚಿತವಾದ ವಿಷಯವನ್ನು ಪರ್ಯಾಲೋಚಿಸಿ ಗ್ರಹಿಸುವುದರಿಂದ ನಮ್ಮ ಬುದ್ಧಿಕೌಶಲ್ಯವು ಹೆಚ್ಚುವುದು.

ಒಂದು ದೇಶದ ಪತ್ರಿಕೆಯನ್ನು ಮತ್ತೊಂದು ದೇಶದಲ್ಲಿ ಓದುವುದರಿಂದ, ಎರಡು ದೇಶಗಳ ಆಡಳಿತಗಳನ್ನೂ ತಿಳಿಯಲು ಪರಸ್ಪರ ಅಭಿಲಾಷೆ ಹುಟ್ಟಿ ಸ್ನೇಹ ಹೆಚ್ಚುವುದು. ಈ ಕಾರಣಗಳಿಂದ ಪತ್ರಿಕೆಗಳನ್ನು ಸಾಮಾನ್ಯರು ಓದಬೇಕಾದುದಲ್ಲದೆ, ಧೊರೆಗಳೂ ಅವರ ಮಂತ್ರಿಗಳೂ ಓದುವುದು ಅತ್ಯಾವಶ್ಯಕವು. ಅವರು ವೃತ್ತಾಂತ ಪತ್ರಿಕೆಗಳನ್ನೋದದಿದ್ದರೆ, ಜನ ರಂಜಕವಾದ ಏರ್ಪಾಡುಗಳನ್ನೂ ಬದಲಾವಣೆಗಳನ್ನೂ ಮಾಡಲು ಬುದ್ಧಿ ಓಡದೆ ಪ್ರಜೆಗಳಿಗೆ ಕೇಡಾಗುವುದು.

ವೃತ್ತಾಂತಪತ್ರಿಕೆಗಳು ಜನರಿಗೆಮಾಡುವ ಉಪಕಾರಗಳನ್ನೆಲ್ಲಾ ತಿಳಿಯ-ಬೇಕಾದರೆ, ಯೂರೋಪ್ ಮತ್ತು ಅಮೆರಿಕ ದೇಶಗಳ ಚರಿತ್ರೆಗಳನ್ನೋದ-ಬೇಕು. ಸುಮಾರು ಇನ್ನೂರು ವರ್ಷಗಳ ಕೆಳಗೆ ಇಂಗ್ಲೆಂಡಿನಲ್ಲಿ ಜನರ ನಡತೆ ಬಹಳ ಕೆಟ್ಟಿತ್ತು. ಇದನ್ನು ತಿದ್ದಬೇಕೆಂದು "ಅಡಿಸನ್" ಎಂಬ ಒಬ್ಬ ಮಹಾಪಂಡಿತನು "ಸ್ಪೆಕ್ಟೇಟರ್" ಎಂಬ ಪತ್ರಿಕೆಯನ್ನು ಹೊರಡಿಸಿ, ಪ್ರತಿ ಪ್ರಾತಃಕಾಲದಲ್ಲಿಯೂ ಒಂದೊಂದು ಪ್ರಬಂಧವನ್ನು ಜನರಿಗೆಜ್ಞಾನೋದ-ಯವಾಗುವಂತೆ ಪ್ರಕಟಿಸುತ್ತಾ ಬಂದನು. ಇದರಿಂದ ಕೆಲವು ವರ್ಷಗಳಲ್ಲಿ ಜನರು ದುರ್ವ್ಯಾಪಾರಗಳನ್ನು ಬಿಟ್ಟು ಸನ್ಮಾರ್ಗವನ್ನು ಹಿಡಿದರು. ಮೊದಲು ಇಂಗ್ಲೆಂಡಿನಲ್ಲಿ ವೃತ್ತಾಂತಪತ್ರಿಕೆಗಳು ರಾಜ್ಯತಂತ್ರವಿಚಾರಗಳನ್ನು ಚರ್ಚಿಸ ಕೂಡದೆಂಬ ನಿರ್ಬಂಧವಿತ್ತು; ಆದರೆ ಕ್ರಿ. ಶ. 1771 ರಲ್ಲಿ ಮಾಡಿದ ಕಾನೂ-ನಿನಿಂದ ಇದು ಹೋಯಿತು. ಅಂದಿನಿಂದ ಇಂಗ್ಲೆಂಡಿದಲ್ಲಿ ವೃತ್ತಾಂತಪತ್ರಿ-ಕೆಗಳು ಲೋಕೋಪಕಾರಕ್ಕಾಗಿ ಸರ್ಕಾರದವರೊಡನೆ ಹೋರಾಡಿ ತುಂಬಾ ಗೌರವವನ್ನೂ, ಜನರಂಜನೆಯನ್ನೂ, ಕೀರ್ತಿಯನ್ನೂ ಪಡೆದು, ಸರ್ಕಾ-ರದವರು ಕೂಡ ಪತ್ರಿಕೆಗಳ ಅಭಿಪ್ರಾಯಗಳನ್ನು ಗೌರವಿಸಿ, ಹಲವುವೇಳೆ ಅವುಗಳಂತೆ ಏರ್ಪಾಡುಗಳನ್ನು ಮಾಡುವಷ್ಟು ಪ್ರಾಮುಖ್ಯವನ್ನು ಹೊಂದಿವೆ.

ಹಿಂದೂದೇಶದಲ್ಲಿಯೂ ವೃತ್ತಾಂತಪತ್ರಿಕೆಗಳಿಲ್ಲದ ದೊಡ್ಡ ಪಟ್ಟಣಗಳೇ ಇಲ್ಲ. ಇಂಗ್ಲಿಷಿನಲ್ಲಿಯೇ ಅಲ್ಲದೆ, ತಮಿಳು, ಕನ್ನಡ, ಮರಾಟಿ, ಗುಜರಾತಿ, ಬಂಗಾಳಿ ಮುಂತಾದೆಲ್ಲಾ ದೇಶಭಾಷೆಗಳಲ್ಲಿಯೂ ಪತ್ರಿಕೆಗಳನ್ನು ಪ್ರಕಟಿ-ಸುತ್ತಿದ್ದಾರೆ. ಹಿಂದೂದೇಶದಲ್ಲಿ ಮೊಟ್ಟಮೊದಲು ಹೊರಟ ಪತ್ರಿಕೆಯಲ್ಲಿ

ರಾಜ್ಯತಂತ್ರವಿಚಾರವನ್ನು ಚರ್ಚಿಸಲು ಅದರ ಎಡಿಟರಿಗೆ "ಗಡೀಪಾರ್" ಮಾಡಿಸಿದರು. ಈಗ ಅಂಥ ಭಯವೇನೂ ಇಲ್ಲ. ಯಾವ ವಿಷಯದಲ್ಲಿ ಬೇಕಾದರೂ ನ್ಯಾಯವನ್ನತಿಕ್ರಮಿಸದೆ ಚರ್ಚಿಸುವ ಸ್ವಾತಂತ್ರ್ಯವನ್ನು ಇಲ್ಲಿನ ಪತ್ರಿಕೆಗಳು ಕಾಲಕ್ರಮವಾಗಿ ಹೊಂದಿವೆ. ನಮ್ಮ ದೇಶವನ್ನು ಅನ್ಯದೇಶೀಯರು ಆಳುತ್ತಿರುವುದರಿಂದ ಪ್ರಭುಗಳ ವಿಷಯವನ್ನು ಪ್ರಜೆಗಳಿಗೂ, ಪ್ರಜೆಗಳ ಸಂಗತಿಗಳನ್ನು ಪ್ರಭುಗಳಿಗೂ ತಿಳಿಯಪಡಿಸುವುದಕ್ಕೆ ವೃತ್ತಾಂತಪತ್ರಿಕೆಗಳೆಂಬ ಮಧ್ಯಸ್ಥಗಾರರಿರುವುದು ಅತ್ಯಾವಶ್ಯಕವು.

## 32. ರೈಲು.

ರೈಲುಗಾಡಿ ಮೊಟ್ಟಮೊದಲು ಕಂಡುಹಿಡಿಯಲ್ಪಟ್ಟಾಗ ಈಗಿನಸ್ಥಿತಿಯಲ್ಲಿರಲಿಲ್ಲ. ಜಾರ್ಜ್ ಸ್ಟೀವನ್‌ಸನ್ ಎಂಬ ಸಾಹೇಬನು ನೀರಿನ ಆವಿಗೆ ಚಲನವನ್ನುಂಟುಮಾಡುವ ಶಕ್ತಿಯಿದೆಯೆಂಬುದನ್ನು ಕಂಡುಹಿಡಿದನು. ಈ ಅಂಶವನ್ನು ಪಯೋಗಿಸಿ ಜೇಮ್ಸ್ ವ್ಯಾಟ್ ಎಂಬುವನು 1765 ರಲ್ಲಿ ಎಂಜಿನನ್ನು ಮಾಡಿದನು. ಈಚೆಗೆ ಬಂದ ಶಾಸ್ತ್ರಜ್ಞರು ವ್ಯಾಟ್ ಮಾಡಿದ ಎಂಜಿನ್ನಿನಲ್ಲಿ ಹಲವು ವ್ಯತ್ಯಾಸಗಳನ್ನು ಮಾಡಿ ಅದನ್ನು ಈಗಿನ ಸ್ಥಿತಿಗೆ ತಂದಿರುವರು. ರೈಲುಗಾಡಿ ಲೋಕಕ್ಕೆ ಮಾಡಿರುವ ಉಪಯೋಗಗಳು ಅಮೂಲ್ಯವಾದುವು. ನಮ್ಮ ದೇಶದಲ್ಲಿ ಈಗ ಮಾಡುವ ಪ್ರಯಾಣದ ರೀತಿಯನ್ನು ಪೂರ್ವಕಾಲದಲ್ಲಿ ಮಾಡಬೇಕಾಗಿದ್ದ ಪ್ರಯಾಣದ ರೀತಿಯೊಡನೆ ಹೋಲಿಸಿ ನೋಡಿದರೆ ಈ ಉಪಯೋಗಗಳು ವ್ಯಕ್ತವಾಗುವುವು.

ಪೂರ್ವಕಾಲದಲ್ಲಿ ನಮ್ಮ ದೇಶದಲ್ಲಿ ಚಾಪೆಗಾಡಿಗಳಲ್ಲಿಯೂ, ಒಡ್ಡಬಂಡಿಗಳಲ್ಲಿಯೂ, ಎತ್ತುಕುದುರೆಗಳ ಮೇಲೆಯೂ, ಕಾಲ್ನಡೆಯಿಂದಲೂ ಊರಿಂದೂರಿಗೆ ಪ್ರಯಾಣಮಾಡಬೇಕಾಗಿದ್ದಿತು. ಈಗ ರೈಲಿನಮೂಲಕ ಒಂದೆರಡು ಘಂಟೆಗಳ ಕಾಲದಲ್ಲಿಯೇ ಆಗುವ ಪ್ರಯಾಣಕ್ಕೆ ಒಂದು ದಿನವೆಲ್ಲಾ ಹಿಡಿಯುತ್ತಿದ್ದಿತು. ಒಂದೆರಡು ದಿನಗಳಲ್ಲಿ ರೈಲಿನ ಮಾರ್ಗವಾಗಿ ಈಗ ಮುಗಿಸಬಹುದಾದ ದಾರಿಗೆ ಒಂದೆರಡು ತಿಂಗಳು ಬೇಕಾಗಿತ್ತು. ಹೀಗೆ ಕಾಲವಿಳಂಬವಾದರೂ ಆಗಲಿ, ಚಿಂತೆಯಿಲ್ಲ, ಎನ್ನಬಹುದು. ಆದರೆ ದಾರಿಯಲ್ಲಿ ಕಳ್ಳರಿಂದ ಮಾನಹಾನಿಯೂ, ಅರ್ಥಹಾನಿಯೂ, ಪ್ರಾಣಹಾನಿಯೂ ಉಂ

ಟಾಗಿ ಸಂಚಾರವು ದುಷ್ಕರವಾಗಿದ್ದಿತು. ಇಲ್ಲದೆ ಗಾಡಿಗಳ ಅಲ್ಲಾಟದಿಂದ ದೇಹಕ್ಕೆ ಪೆಟ್ಟುತಗಲಿ ಆಗುತ್ತಿದ್ದ ಆಯಾಸವನ್ನು ಹೇಳತೀರದು. ''ಬಂಡಿ ಬಂಡಾಟ, ಹೇರು ಹೆಡ್ಡಾಟ.'' ರೈಲು ಬಂದಾದಿನಿಂದ ಈ ಕಷ್ಟಗಳೂ ಭೀತಿಗಳೂ ತಪ್ಪಿವೆ. ಸ್ವಲ್ಪ ದುಡ್ಡು ವೆಚ್ಚ ಮಾಡಿದರೆ, ದೇಶದಲ್ಲೆಲ್ಲ ಸ್ವಲ್ಪಕಾಲದಲ್ಲಿಯೇ ಸುಖದಿಂದಸಂಚಾರಮಾಡಬಹುದು. ಪ್ರಯಾಣಸೌಲಭ್ಯವೇ ಅಲ್ಲದೆ ರೈಲಿನಿಂದ ನಮ್ಮ ದೇಶಕ್ಕೆ ಇನ್ನೂ ಅನೇಕ ಉಪಯೋಗಗಳುಂಟು. ಪೂರ್ವಕಾಲದಲ್ಲಿ ಒಂದು ಸೀಮೆಯ ಕಣಜಗಳಲ್ಲಿ ಧಾನ್ಯವು ಯಥೇಚ್ಚವಾಗಿ ತುಂಬಿರಬಹುದಾಗಿದ್ದರೂ, ಮತ್ತೊಂದು ಸೀಮೆಯಲ್ಲಿ ಜನರು ತಿನ್ನುವುದಕ್ಕೆ ಹಿಟ್ಟಿಲ್ಲದೆ ಬರದಿಂದ ಸಾಯುತ್ತಿದ್ದರು. ಈಗ ಎಲ್ಲಿಧಾನ್ಯ ಹೆಚ್ಚಾಗಿದೆಯೋ ಅಲ್ಲಿಂದ ಬರಬಾದಿರುವ ಕಡೆಗೆ ದವಸವನ್ನು ರೈಲುಗಾಡಿಗಳಲ್ಲಿ ಸ್ವಲ್ಪಕಾಲದಲ್ಲಿಯೇ ಸಾಗಿಸುವುದು ಸಾಧ್ಯವಾಗಿದೆ. ಇದರಿಂದ ವ್ಯಾಪಾರವು ಹೆಚ್ಚಿ ಅನೇಕರು ಹಣಗಾರರಾಗಿರುವರು. ವ್ಯಾಪಾರಕ್ಕೆ ಬೇಕಾದ ಸರಕುಗಳನ್ನು ಗಳಿಸುವುದಕ್ಕಾಗಿ ಜನರು ಬೆಳೆಗಳನ್ನು ತೆಗೆಯಲುದ್ಯೋಗಿಸಿ ವ್ಯವಸಾಯವು ಹೆಚ್ಚಿದೆ. ವ್ಯಾಪಾರವು ಎಷ್ಟು ಪ್ರಬಲವಾಗಿದೆಯೆಂಬುದನ್ನು ತಿಳಿಯಬೇಕಾದರೆ, ಈಗ ರಫ್ತಾಗುವ ಪದಾರ್ಥಗಳ ಬೆಲೆಯನ್ನು ಮೂವತ್ತು ವರ್ಷಗಳ ಕೆಳಗೆ ರಫ್ತಾಗುತ್ತಿದ್ದ ಸಾಮಾನುಗಳ ಬೆಲೆಯೊಡನೆ ಹೋಲಿಸಿನೋಡಬೇಕು. ವ್ಯಾಪಾರವು ಸ್ವದೇಶದಲ್ಲಿಯೇ ಅಲ್ಲದೆ ಅನ್ಯದೇಶಗಳೊಡನೆಯೂ ಹೆಚ್ಚುತ್ತಾ ಬಂದಿದೆ. ಇಂಗ್ಲೆಂಡಿಗೆ ಧಾನ್ಯದ ಸರಪರಾಯಿಯನ್ನು ಬಾರಿಬಾರಿಗೂ ಮಾಡುವುದರಿಂದ ಪಂಜಾಬು ಮತ್ತುವಾಯವ್ಯ ಪ್ರಾಂತ್ಯಗಳು ಧಾನ್ಯಬೆಳೆವ ದೊಡ್ಡ ದೇಶಗಳೆಂದು ಹೆಸರುಗೊಂಡಿವೆ.

ಆದುದರಿಂದ ರೈಲುಭಾಟೆಯಿರುವ ದೇಶದಲ್ಲಿ ಪ್ರಯಾಣಕ್ಕಾಗಿ ಹಣವೂ, ಅದಕ್ಕಿಂತ ಹೆಚ್ಚು ಬೆಲೆಯುಳ್ಳ ಕಾಲವೂ ತುಂಬಾ ವೆಚ್ಚವಾಗುವುದಿಲ್ಲ. ವ್ಯವಸಾಯವೂ ವ್ಯಾಪಾರವೂ ಪ್ರಬಲಿಸಿ, ಜನರ ಐಶ್ವರ್ಯವು ಹೆಚ್ಚುವುದು. ಹಳ್ಳಿಗಳನ್ನು ಬಿಟ್ಟು ವಿದ್ಯೆಯನ್ನು ಕಲಿಯಕೋರುವವರು ನಾಗರಿಕತೆಗೂ ವಿದ್ಯೆಗೂ ನೆಲೆಯಾದ ದೊಡ್ಡದೊಡ್ಡ ಪಟ್ಟಣಗಳಿಗೆ ಹೋಗಲು ಬಲು ಅನುಕೂಲ್ಯವುಂಟು. ನಾನಾಜಾತಿಯವರು ಒಂದೇ ರೈಲುಗಾಡಿಯಲ್ಲಿಪ್ರಯಾಣ

ಮಾಡಬೇಕಾಗಿ ಬರುವುದರಿಂದ, ತಾವು ಮೇಲು, ಅವರು ಕೀಳು ಎಂಬ ಅಭಿಪ್ರಾಯಗಳು ಹೋಗಿ ಜನರಲ್ಲಿ ಅನ್ಯೋನ್ಯಭಾವವುಂಟಾಗುವುದು.

ಇಷ್ಟು ಉಪಯುಕ್ತವಾಗಿದ್ದರೂ ಹುಳುಕನ್ನೇ ಹುಡುಕುವ ಕೆಲವರು ರೈಲನ್ನು ನಿರಾಕರಿಸುವುದುಂಟು. ಅವರೆನ್ನುವುದೇನಂದರೆ:—"ಸಾಮಾನ್ಯವಾಗಿ ರೈಲುಬಂಡಿ ಎಲ್ಲಿಯೂ ಬಹಳ ಹೊತ್ತು ನಿಲ್ಲುವುದಿಲ್ಲವಾದುದರಿಂದ ಜನರಿಗೆ ಊಟ ಮುಂತಾದುವುಗಳಿಗೆ ಅವಕಾಶವಿಲ್ಲದೆ ಬಲು ತೊಂದರೆಯಾಗುವುದು. ಇದರ ಅತಿವೇಗವೂ ಸೆಕೆಯೂ ಕೆಲವರಿಗೆ ಒಗ್ಗುವುದಿಲ್ಲ. ಅಂಟುರೋಗವು ಒಂದೆಡೆಯಿದ್ದರೆ, ರೈಲಿನಿಂದ ನಾಲ್ಕು ಕಡೆಗೂ ಹರಡುತ್ತದೆ, ಅಲ್ಲದೆ ರೈಲುದಾರಿಯಲ್ಲಿ ಆಗಾಗ್ಗೆ ಅಪಾಯಗಳು ಸಂಭವಿಸುವುದುಂಟು.'' ಈ ಮಾತುಗಳು ಸ್ವಲ್ಪಮಟ್ಟಿಗೆ ದಿಟವಾಗಿದ್ದರೂ, ರೈಲಿನ ದೋಷಗಳಿಗೂ ಅದರಿಂದಾಗುವ ಅಪಾರವಾದ ಪ್ರಯೋಜನಗಳಿಗೂ ಅಜಗಜಾಂತರವಿರುವುದು. ಮುಖ್ಯವಾಗಿ ರೈಲಿಗಿಂತಲೂ ಸುಖಕರವಾಗಿಯೂ, ಕಾಲದ್ರವ್ಯಗಳಲ್ಲಿ ಸ್ವಲ್ಪ ವೆಚ್ಚವನ್ನು ಮಾಡುವುದಾಗಿಯೂ, ನಿರುಪಾಧಿಕವಾಗಿಯೂ ಇರುವ ಪ್ರಯಾಣಸಹಕಾರಿಯಾದ ವಸ್ತುವಿನ್ನಾವುದೂ ಸದ್ಯದಲ್ಲಿ ದೊರೆಯಲಾರದು.

## 33. ಪೋಸ್ಟಾಫೀಸುಗಳು.

ಒಂದೂರಿನಿಂದ ಮತ್ತೊಂದೂರಿಗೆ ಅತಿಸ್ವಲ್ಪದ್ರವ್ಯದ ವೆಚ್ಚದಿಂದ ಯೋಗಕ್ಷೇಮಸಮಾಚಾರಗಳನ್ನು ತಿಳುಹಲು ನಾಗರಿಕರಾದ ಜನರು ಮಾಡಿಕೊಂಡಿರುವ ಉಪಾಯಕ್ಕೆ "ಪೋಸ್ಟಾಫೀಸು'' ಎಂದು ಹೆಸರು. ಒಬ್ಬನು ಒಂದೇ ಪಟ್ಟಣದಲ್ಲಿ ವಾಸಿಸುತ್ತಿರುವ ತನ್ನ ಮಿತ್ರನಿಗೆ ಕಾಗದವನ್ನು ಕಳುಹಬೇಕಾದರೆ, ಜವಾನನನ್ನು ಕಳುಹುವನು. ಕಾಗದವನ್ನು ಕೊಂಡೊಯ್ದು ಕೆಲಸಕ್ಕಾಗಿ ಜವಾನನಿಗೆ ಕೂಲಿ ಕೊಡಬೇಕು. ಆಳಿಗೆ ಕೊಡುವ ದುಡ್ಡು ದೂರಕ್ಕೆ ತಕ್ಕಂತೆ ಹೆಚ್ಚುತ್ತದೆ. ಒಂದು ವೇಳೆ ಒಬ್ಬ ಆಳು ಮೈಸೂರಿಂದ ಬೊಂಬಾಯಿಗಾಗಲಿ ಕಲ್ಕತ್ತೆಗಾಗಲಿ ಒಂದು ಕಾಗದವನ್ನು ತಲಪಿಸಬೇಕಾಗಿ ಒಂದಲ್ಲಿ ದೂರಕ್ಕೆ ತಕ್ಕಂತೆ ತುಂಬಾ ಹಣವನ್ನು ಕೇಳುವನು. ಒಂದು ಕಾಗದವನ್ನು ಕಳುಹುವುದಕ್ಕಾಗಿ ಅಷ್ಟು ಹಣವನ್ನು ಕೊಡತಕ್ಕವರು ಯಾರೂ ಇರಲಾರರು. ಆದರೆ ಪೋಸ್ಟಾಫೀಸಿನ ಸಹಾಯದಿಂದ, ಅರ್ಧಾಣೆಯನ್ನಾಗಲಿ ಕಾಲಾಣೆಯನ್ನಾಗಲಿ ವೆಚ್ಚಮಾಡಿದರೆ, ಈ ಕೆಲಸವನ್ನು ಯಾವನಾದರೂ

ಮಾಡಬಲ್ಲನು. ಇಷ್ಟೇ ಅಲ್ಲ. ಒಂದೇ ಆಣೆಯನ್ನು ಕೊಟ್ಟರೆ, ಇಂಡಿಯಾದಲ್ಲಿ ಯಾವ ಊರಿಂದಾಗಲಿ ದ್ವೀಪಾಂತರವಾಗಿರುವ ಇಂಗ್ಲೆಂಡ್, ಸ್ಕಾಟ್ಲೆಂಡ್ ಐರ್ಲೆಂಡ್ ದೇಶಗಳಲ್ಲಿನ ಯಾವ ಊರಿಗೆ ಬೇಕಾದರೂ ಕಾಗದವನ್ನು ಕಳುಹಬಹುದು!

ಮೈಸೂರಿಂದ ಕಲ್ಕತ್ತೆಗೆ ಒಂದು ಕಾಗದವನ್ನು ಆಳಿನ ಕೈಯಲ್ಲಿ ಕಳುಹಿದರೆ ಬಹಳ ವೆಚ್ಚವಾಗುವುದೆಂದು ಹೇಳಿದುದಾಯಿತು. ಒಂದು ಕಾಗದವನ್ನು ತೆಗೆದುಕೊಂಡು ಹೋಗುವ ಆಳಿಗೆ ಅದರೊಡನೆ ಐವತ್ತು ಅಥವಾ ನೂರು ಕಾಗದಗಳನ್ನು ಕೊಂಡೊಯ್ಯುವುದೇನೂ ಭಾರವಾಗುವುದಿಲ್ಲ. ಈ ಕಾಗದಗಳನ್ನು ಕಳುಹಿಸುವುದರಲ್ಲಿ ಇಬ್ಬರು ಸೇರಿದರೆ, ಆದ ಖರ್ಚನ್ನು ಇಬ್ಬರೂ ಸಮವಾಗಿ ಹಂಚಿಕೊಳ್ಳಬೇಕಾಗುವುದು. ನೂರು ಮಂದಿ ಸೇರಿದರೆ, ಒಟ್ಟು ವೆಚ್ಚದಲ್ಲಿ ನೂರರಲ್ಲೊಂದು ಪಾಲು ಒಬ್ಬೊಬ್ಬರಿಗೆ ಬೀಳುವುದು. ದೇಶದವರೆಲ್ಲರೂ ಸೇರಿದರೆ, ಒಟ್ಟು ವೆಚ್ಚವನ್ನು ಎಲ್ಲರಿಗೂ ಸಮವಾಗಿ ಹಂಚಬೇಕಾಗುವುದು. ಹೀಗೆ ಮಾಡುವುದರಿಂದ ಒಬ್ಬೊಬ್ಬನಿಗೆ ಅತಿ ಸ್ವಲ್ಪ ದ್ರವ್ಯವೆಚ್ಚವಾಗುತ್ತದೆ. ಇದೇ ಪೋಸ್ಟಾಫೀಸುಗಳ ಒಳಗುಟ್ಟು. ಹೀಗೆ ಕಾಗದಗಳನ್ನು ಸ್ಥಳದಿಂದ ಸ್ಥಳಕ್ಕೆ ತಲಪಿಸುವವರು ಸರ್ಕಾರದವರೇ ಆಗಿರಬೇಕೆಂಬ ವಿಧಿಯಿಲ್ಲ. ಪೋಸ್ಟಾಫೀಸುಗಳು ಸರ್ಕಾರದವರ ಅಧೀನದಲ್ಲಿರುವುದು ಹಲವು ಸೀಮೆಗಳಲ್ಲಿ ಅನುಕೂಲವಾಗಿ ತೋರಿದೆ. ಇಂಗ್ಲೆಂಡಿನಲ್ಲಿ ಪೋಸ್ಟಾಫೀಸುಗಳಿಗೆಲ್ಲ ಅಧಿಪತಿಯಾದ ಅಧಿಕಾರಿಯನ್ನು ರಾಜ್ಯಭಾರದ ಮಂತ್ರಿಗಳಲ್ಲೊಬ್ಬನನ್ನಾಗಿ ಮಾಡಿದ್ದಾರೆ. ಇದರಿಂದ ಆ ಸೀಮೆಯಲ್ಲಿ ಪೋಸ್ಟಾಫೀಸುಗಳಿಗೆ ಎಷ್ಟು ಪ್ರಾಮುಖ್ಯವನ್ನು ಕೊಟ್ಟಿರುವರೆಂಬುದು ವ್ಯಕ್ತವಾಗುವುದು.

ಪೋಸ್ಟಾಫೀಸುಗಳು ಕಾಗದಗಳನ್ನು ಸ್ಥಳದಿಂದ ಸ್ಥಳಕ್ಕೆ ಸಾಗಿಸುವುದೇ ಅಲ್ಲದೆ, ಹಣವನ್ನೂ ಊರಿಂದೂರಿಗೆ ತಲಪಿಸುತ್ತವೆ. ಇದಕ್ಕೂ ಅದೇ ಮೇರೆ ವೆಚ್ಚ ಕಡಮೆ. ಹೀಗೆಯೇ ಪುಸ್ತಕ, ಒಡವೆ, ಬಟ್ಟೆ ಮುಂತಾದುವನ್ನೂ ಪೋಸ್ಟಾಫೀಸುಗಳ ಮೂಲಕ ಸ್ವಲ್ಪವೆಚ್ಚದಿಂದಲೇ ನಿರ್ಭಯವಾಗಿ ಕಳುಹಿಸಬಹುದು. ನಮಗೆ ಬರುವ ಆದಾಯದಲ್ಲಿ ವೆಚ್ಚ ಕಳೆದು ಪುಡಿಕಾ-

ಸೇನಾದರೂ ಮಿಕ್ಕರೆ, ಕಷ್ಟಕಾಲಕ್ಕೊದಗುವಂತೆ ಸೇರಿಸಿಡುವುದಕ್ಕನುಕೂಲವಾಗಿ "ಸೇವಿಂಗ್ಸ್ ಬ್ಯಾಂಕ್" ಎಂಬುದನ್ನು ಪೋಸ್ಟಾಫೀಸುಗಳೆಲ್ಲ ಒಳಗೊಂಡಿವೆ. ಸೇವಿಂಗ್ಸ್‌ಬ್ಯಾಂಕು ಬಂದುದರಲ್ಲಿ ಸ್ವಲ್ಪ ಮಿಗಿಸಬೇಕೆಂಬ ಅಭಿಲಾಷೆ ಹುಟ್ಟಿಸಿ ಜನರಲ್ಲಿ ಮಿತವ್ಯಯವೆಂಬ ಸುಗುಣವನ್ನುಂಟುಮಾಡುವುದು. ಇವಲ್ಲದೆ, ಸಮಾಚಾರಗಳನ್ನು ತಂತಿಯಮೂಲಕ ಕಳುಹುವುದಕ್ಕೆ ತಕ್ಕಂತೆ ತಂತಿ ಆಫೀಸೂ ಪೋಸ್ಟಾಫೀಸುಗಳಲ್ಲಿಯೇ ಇದೆ. ಮತ್ತು ಈಚೆಗೆ "ಕ್ವಿನೈನ್" ಎಂಬ ಜ್ವರಹರವಾದ ಪುಡಿಯನ್ನೂ ಪೋಸ್ಟಾಫೀಸುಗಳಲ್ಲಿಯೇ ಮಾರುವಂತೆ ಮಾಡಿದ್ದಾರೆ.

ಪೋಸ್ಟಾಫೀಸು ಜನರಿಗೆ ಇಷ್ಟು ಸೌಕರ್ಯವನ್ನುಂಟುಮಾಡಿರುವುದು ಪೋಸ್ಟೇಜುಸ್ಟಾಂಪುಗಳಿಂದಾಗಿದೆ. ಸರ್ ರೋಲೆಂಡ್ ಹಿಲ್ ಎಂಬಸಾಹೇಬನು ಸ್ಟಾಂಪುಗಳನ್ನು ಏರ್ಪಡಿಸಿದಂತೆಹೇಳುತ್ತಾರೆ. ನಾವಂಟಿಸುವಸ್ಟಾಂಪು ಕಾಗದವನ್ನು ಕೊಂಡೊಯ್ದು ವಿಳಾಸದಾರನಿಗೆ ತಲಪಿಸುವುದಕ್ಕಾಗಿ ಕೊಡಬೇಕಾದ ಕೂಲಿಯನ್ನು ತೋರಿಸುವುದು. ಸ್ಟಾಂಪು ಹಚ್ಚುವುದರಿಂದಪೋಸ್ಟಾಫೀಸಿನವರಿಗೆದುಡ್ಡು ವಸೂಲ್ಮಾಡುವ ತೊಂದರೆ ತಪ್ಪುವುದು. ಸ್ಟಾಂಪಿನ ಮೇಲೊತ್ತುವ ಮುದ್ರೆ ಬೇಕಾದ ಹಣ ಸಂದಿದೆಯೆಂದು ತೋರಿಸುತ್ತದೆ. ಪೋಸ್ಟೇಜು ಸ್ಟಾಂಪು ಏರ್ಪಾಡಾಗುವುದಕ್ಕೆ ಮುಂಚೆ ವಿಳಾಸದಾರನಿಗೆ ಕಾಗದವನ್ನು ತಲಪಿಸಿದಾಗಲೇದುಡ್ಡನ್ನೂ ವಸೂಲ್ಮಾಡುವಪದ್ಧತಿಯಿದ್ದಿತು. ಈ ಪದ್ಧತಿಯಿಂದ ಕಾಗದ ತಲಪಿಸುತ್ತಿದ್ದ ಪೋಸ್ಟಾಫೀಸು ಜವಾನನಿಗೆ ಬಲು ತೊಂದರೆಯೂ ಜವಾಬುದಾರಿಯೂ ಇರುತ್ತಿದ್ದುವು. ಮತ್ತುಕಾಗದವನ್ನು ಪೋಸ್ಟಾಫೀಸಿಗೆ ತೆಗೆದುಕೊಂಡುಹೋಗಿ, ಮೊಬಲಗನ್ನು ಕೊಟ್ಟು ಕಾಗದವನ್ನು ಅವರ ವಶಪಡಿಸಿ, ಅವರಿಂದ ಅದಕ್ಕೆ ಬದಲಾಗಿ ರಶೀದಿಯನ್ನು ಪಡೆವ ಸಂಪ್ರದಾಯವೂ ಇದ್ದಿತು.

ಈಗಿರುವ ಪೋಸ್ಟಾಫೀಸು ಇಂಗ್ಲಿಷರು ಲೋಕಕ್ಕೆಲ್ಲಾ ಮಾಡಿರುವ ಒಂದು ದೊಡ್ಡ ಉಪಕಾರವಾಗಿದೆ. ನಾಗರಿಕತೆಯುಳ್ಳ ಎಲ್ಲಾ ಸೀಮೆಗಳ ಸರ್ಕಾರದವರೂ ಇಂಥ ಪೋಸ್ಟಾಫೀಸುಗಳನ್ನು ತಂತಮ್ಮ ದೇಶಗಳಲ್ಲಿಏರ್ಪಡಿಸಿಕೊಂಡಿದ್ದಾರೆ. ಈಚೆಗೆ ಯಾವ ದೇಶಕ್ಕೆ ಬೇಕಾದರೂ ಕಳುಹುವಂತೆ ಪೋಸ್ಟುಕಾರ್ಡುಗಳನ್ನು ಮಾಡಿದ್ದಾರೆ. ನಾವು ಕೊಡುವ ಮೊಬಲಗುನಮ್ಮ

ಕಾರ್ಡ್ರು ಹಾದುಹೋಗುವದೇಶಗಳಸರ್ಕಾರದವರಿಗೆಯಥೋಚಿತವಿಭಾಗಿ-
ಸಲ್ಪಟ್ಟು, ನಮ್ಮ ಕಾರ್ಡ್ರು ಯಾವ ಸೀಮೆಗೆ ಬೇಕಾದರೂ ಹೋಗಬಹುದು.

## 34. ಹಿಂದೂದೇಶದಲ್ಲಿ ಇಂಗ್ಲಿಷರ ಆಳಿಕೆ.

ಪಶ್ಚಿಮ ಸಮುದ್ರದ ಒಂದು ಚಿಕ್ಕ ದ್ವೀಪದವರು ಬಂದು, ವಿಶಾಲವಾದ ಈ ಹಿಂದೂ ದೇಶವನ್ನು ಜಯಿಸಿ, ಅದನ್ನು ಆಳುತ್ತಿರುವುದು ಲೋಕದಲ್ಲಿನಡೆ-ದಿರುವ ಸಂಗತಿಗಳಲ್ಲೆಲ್ಲ ಅತ್ಯದ್ಭುತವಾದುದು. ಗ್ರೀಸ್, ರೋಮ್ ಮೊದ-ಲಾದ ದೇಶದವರು ತಮ್ಮ ಸುತ್ತಮುತ್ತಲ ಸೀಮೆಗಳನ್ನು ಜಯಿಸಿ ಆಳಿದು-ದುಂಟು; ಆದರೆ ಇಂಗ್ಲೆಂಡಿಗೂ ಇಂಡಿಯಾಕ್ಕೂ ಸಾವಿರಾರು ಮೈಲಿಗಳ ದೂರವಿದ್ದರೂ, ಸಮುದ್ರಗಳ ಮೇಲೆ ಪ್ರಯಾಣಮಾಡುವ ಶಕ್ತಿಯಿಂದ ಆ ಸೀಮೆಯವರು ನಮ್ಮ ಸೀಮೆಯನ್ನು ತಮ್ಮ ಪಾಲಾಗಿಮಾಡಿಕೊಂಡಿರುವರು. ಭರತಖಂಡದಲ್ಲಿ ಆಂಗ್ಲೇಯರಾಜ್ಯಭಾರವು ಅಭೂತಪೂರ್ವವು. ಇಂಥ ಆಶ್ಚರ್ಯಕರವಾದಕೆಲಸದಪರಿಣಾಮವೇನಾದೀತೆನ್ನುವುದನ್ನು ಈಗನಿರ್ಧ-ರಿಸಲಾಗುವುದಿಲ್ಲವಾದರೂ, ಇಂಗ್ಲಿಷರು ಇಂಡಿಯಾವನ್ನು ಅರಾಜಕವಾದ ಸ್ಥಿತಿಯಿಂದಮೇಲಕ್ಕೆತ್ತಿ, ದೇಶಕ್ಕೆಲ್ಲಸಮಾಧಾನವನ್ನೂ ನ್ಯಾಯವನ್ನೂ ಕೊ-ಟ್ಟಿದ್ದಾರೆಂಬಯಶಸ್ಸನ್ನು ಯಾವುದೂ ಹೋಗಲಾಡಿಸುವುದಕ್ಕಾಗುವುದಿಲ್ಲ.

ಇಂಗ್ಲಿಷರಆಳಿಕೆಯಿಂದಹಿಂದೂದೇಶಕ್ಕುಂಟಾಗಿರುವಮುಖ್ಯಪ್ರಯೋ-ಜನಗಳೇನೆಂಬ ಪ್ರಶ್ನೆಗೆ ಉತ್ತರವನ್ನು ಹಿಂದಿನ ವಾಕ್ಯದಲ್ಲಿಯೇ ಹೇಳಿದ ಹಾಗಾಯಿತು. ಮೊದಲನೆಯುಪಯೋಗವು ದೇಶಕ್ಕೆಲ್ಲಸಮಾಧಾನವು ಒಂ-ದುದು. ಸಿಂಧುನದಿಯ ಮುಖದಿಂದ ಗಂಗಾಮುಖದವರೆಗೂ ಹಿಮಾಲಯ-ದಿಂದ ಕನ್ಯಾಕುಮಾರಿಯವರೆಗೂ ಇರುವ ಪ್ರತಿಯೊಬ್ಬನೂಯಾವವಸ್ತು-ವನ್ನು ಬೇಕಾದರೂ ನಿರ್ಭಯವಾಗಿಟ್ಟುಕೊಂಡು ಅನುಭವಿಸಬಹುದು. ನಮ್ಮ ದೇಶವನ್ನು ಕೊಳ್ಳೆಹೊಡೆವುದಕ್ಕಾಗಿ ಪರರಾಜರು ಆಗಾಗ್ಗೆ ಮಾಡುತ್ತಿದ್ದ ದಂಡಯಾತ್ರೆಗಳ ಭೀತಿ ಈಗಲೂ ತಪ್ಪಿಲ್ಲ. ಅದಕ್ಕೆ ತಕ್ಕುದನ್ನು ಮಾಡಿ ಈ ಸೀಮೆಯ ಗಡಿಗಳ ರಕ್ಷಣೆಯನ್ನೂ ಇಂಗ್ಲಿಷ್ ಸರ್ಕಾರದವರುಮಾಡುತ್ತಿ-ದ್ದಾರೆ. ದೆಹಲಿ ಇಂಗ್ಲಿಷರ ಕೈವಶವಾದಂದಿನಿಂದ ನಾದಿರ್ ಷಹನಂಥವನು ಯಾರೂ ಅದನ್ನು ಲೂಟಿ ಮಾಡಿಲ್ಲ. ಇಂಗ್ಲಿಷ್ ರಾಜ್ಯಭಾರದ ಸಹಾಯ-

ದಿಂದ ಈ ದೇಶದಲ್ಲಿ ನಡೆವ ಸಕಲಕಾರ್ಯಗಳೂ ನ್ಯಾಯವನ್ನನುಸರಿಸಿವೆ. ದೇಶಕ್ಕೆ ಅಪಾಯವುಂಟಾದಾಗ, ಇಂಡಿಯಾದವೈಸರಾಯಿಗೆಮೇಲ್ಪಟ್ಟವರು ಕೊಟ್ಟಿರುವಧಿಕಾರವನ್ನು ಮೀರಿ ನಡೆವ ಶಕ್ತಿಯುಂಟು. ಈ ಶಕ್ತಿ ಹೊರತು, ವೈಸರಾಯಿಯೂ ಒಬ್ಬ ಬಡ ರೈತನೂ ಇಂಗ್ಲಿಷ್ ನ್ಯಾಯದ ಕಟ್ಟಳೆಗಳಿಗೆ ಒಂದೇ ರೀತಿಯಲ್ಲಿಬದ್ಧರು. ನ್ಯಾಯಸ್ಥಾನಗಳು ಸರ್ಕಾರಕ್ಕೆ ಅಧೀನವಾಗದೆ ಯುಕ್ತವಾಗಿ ತೋರಿದಂತೆ ತೀರ್ಪು ಮಾಡಬಹುದು. ಜಾತಿಗಳಲ್ಲಿ ಇದು ಕೀಳು, ಇದು ಮೇಲು ಎಂಬ ಭೇದವಿಲ್ಲದೆ, ಎಲ್ಲಾ ಜಾತಿಯವರಿಗೂ ನಿಷ್ಪಕ್ಷಪಾತವಾಗಿಶಿಕ್ಷೆಯನ್ನು ನ್ಯಾಯಾಧಿಪತಿಗಳುವಿಧಿಸುತ್ತಿದ್ದಾರೆ. ಇಂಗ್ಲೀಷರ ಆಳಿಕೆಯಲ್ಲಿನಮಗೆ ಏನೇನೂ ಸ್ವಾತಂತ್ರ್ಯವಿಲ್ಲವೆಂದು ಕೆಲವರುಹೇಳಬಹುದು. ಎಷ್ಟೋ ಪ್ರಾಣಗಳನ್ನು ಬಲಿಗೊಟ್ಟು, ಬಗೆಬಗೆಯ ಕಷ್ಟಗಳನ್ನೆಲ್ಲಾ ಅನುಭವಿಸಿ, ಇಂಗ್ಲೀಷರು ತಮ್ಮ ದೇಶದಲ್ಲಿಸಂಪಾದಿಸಿಕೊಂಡಿರುವ ಬೆಲೆಯಿಲ್ಲದ ಸ್ವಾತಂತ್ರ್ಯವನ್ನು ಪರಾಜಿತರಾದ ನಮಗೆ ಹೇಗೆ ತಾನೆ ಒಡನೆಕೊಟ್ಟು ಬಿಡುವುದಕ್ಕೆ ಮನಸ್ಸು ಬಂದೀತು? ಸ್ವಾತಂತ್ರ್ಯವಿಲ್ಲವೆಂದು ಪೇಚಾಡುವುದಕ್ಕೂ ಕಾರಣಗಳು ಈಚೆಗೆ ಕಡಮೆಯಾಗುತ್ತಾ ಬರುತ್ತಿವೆ. ಹೇಗೆಂದರೆ, ರಾಜ್ಯಭಾರದ ವಿಚಾರದಲ್ಲಿ ಸಮ್ಮತಿಪ್ರಾಯಗಳನ್ನೂ ವೃತ್ತಾಂತಪತ್ರಿಕೆಗಳ ಮೂಲಕ ತಿಳಿಯಪಡಿಸಲು ಅಪ್ಪಣೆ ಕೊಟ್ಟಿದ್ದಾರೆ. ಇಂಗ್ಲೀಷರ ಒತ್ತಾಸೆಯಿಂದಲೇ "ಇಂಡಿಯನ್ ನ್ಯಾಷನಲ್ ಕಾನ್‌ಗ್ರೆಸ್" ಎಂಬೊಂದುಮಹಾಸಭೆ ಇಪ್ಪತ್ತು ಮೂರು ವರ್ಷಗಳಿಂದ ಏರ್ಪಟ್ಟಿದೆ. ಇದು ಪ್ರತಿ ವರ್ಷವೂ ಒಂದೊಂದು ದೊಡ್ಡ ಪಟ್ಟಣದಲ್ಲಿಸೇರುತ್ತದೆ. ಇದಕ್ಕೆ ಇಂಡಿಯಾದನಾನಾ ಭಾಗಗಳಿಂದಲೂ ಸಾಮಾಜಿಕರು ಬಂದು ಸೇರಿ, ದೇಶದಕ್ಷೇಮಾಭಿವೃದ್ಧಿಗೆ ಮಾಡಬೇಕಾದ ಏರ್ಪಾಡುಗಳನ್ನು ಚರ್ಚಿಸಿ ಸರ್ಕಾರದವರಿಗೆ ತಿಳಿಸುತ್ತಿದ್ದಾರೆ. ವಿದ್ಯಾಭ್ಯಾಸವು ಹೆಚ್ಚಿತು. ಇದರೊಡನೆ ನಾಗರಿಕತೆಯೂ ಏಳಿಗೆಗೆ ಬಂದಿತು. ರೈಲು, ಟೆಲಿಗ್ರಾಫ್, ಪೋಸ್ಟಾಫೀಸು, ಅಚ್ಚುಹಾಕುವುದು ಮುಂತಾದುವು ಬಂದು ಜನರಿಗೆಲ್ಲ ಅಪಾರವಾದ ಉಪಕಾರಗಳಾಗಿವೆ.

ಪ್ರಪಂಚದಲ್ಲಿದೋಷಗಳಿಲ್ಲದಿರುವ ವಸ್ತುವೇ ಇಲ್ಲವಷ್ಟೆ: ಇಂಗ್ಲೀಷರ ಆಳಿಕೆಯಲ್ಲಿಯೂ ದೋಷವಿಲ್ಲದಿಲ್ಲ. ಆ ದೋಷಗಳನ್ನೂ ಇಲ್ಲಿ ತಿಳಿಸದಿರು-

ವುದು ಸರಿಯಲ್ಲ. ಕ್ಷಾಮವು ಪದೇಪದೇ ಬರುತ್ತಿದೆ. ಇದು ಸಂಪೂರ್ಣ-ವಾಗಿ ಬಾರದಂತೆ ಮಾಡಲು ತಕ್ಕ ಏರ್ಪಾಡುಗಳನ್ನು ಸರ್ಕಾರದವರು ಕೈ-ಕೊಂಡಿಲ್ಲ.ಬಗೆಬಗೆಯ ತೆರಿಗೆಗಳನ್ನು ಹಾಕಿದುದರಿಂದ ಜನರಿಗೆ ಬಾಧೆಯಾ-ಗಿದೆ. ಕತ್ತಿ,ತುಬಾಕಿ ಮುಂತಾದ ಆಯುಧಗಳನ್ನು ಧಾರಾಳವಾಗಿ ಉಪ-ಯೋಗಿಸುವುದಕ್ಕಿಲ್ಲ. ಈ ಪ್ರಭುತ್ವವು ಮೊದಲಾದಂದಿನಿಂದ ನಮ್ಮ ಕಾಯ-ಶಕ್ತಿ ಕುಂದುತ್ತ ಬಂದಿದೆ. ಆದುದರಿಂದ ಇಂಗ್ಲಿಷರು ನಮ್ಮ ದೇಶವನ್ನು ಬಿಟ್ಟು ಹೋಗಬೇಕಾಗಿ ಬಂದಾಗ, ಶತ್ರುಗಳು ನಮ್ಮ ಮೇಲೆ ಬಂದುಬಿದ್ದರೆ, ಅವರನ್ನು ಪೂರ್ವದಂತೆ ಪ್ರತಿಭಟಿಸುವ ಸಾಮರ್ಥ್ಯವಿಲ್ಲದೆ, ನಾವು ಅವರ ವಶರಾಗಿ, ಅವರುನಮಗುಂಟುಮಾಡುವ ತೊಂದರೆಗಳಿಗೆಲ್ಲಗುರಿಯಾಗಬೇ-ಕಾಗುವುದು. ಹೀಗೆ ಇಂಗ್ಲಿಷರು ನಮ್ಮ ದೇಶಕ್ಕೆ ಮಾಡಬೇಕಾಗಿರುವ ಕೆಲಸಗಳು ಇನ್ನೂ ಹಲವಿದ್ದರೂ, ಅವರ ಆಳಿಕೆಯಿಂದ ನಮ್ಮ ಸೀಮೆಗೆ ಬಲು ಒಳ್ಳೆಯದು ಆಗಿದೆಯೆಂಬುದರಲ್ಲಿ ಸಂಶಯವಿಲ್ಲ.

## 35. ಒಳ್ಳೆಯ ನಡತೆ.

ಪ್ರಪಂಚದಲ್ಲಿ ಒಳ್ಳೆಯನಡತೆಯೆಂತಲೂ, ಕೆಟ್ಟನಡತೆಯೆಂತಲೂ ಪ್ರತ್ಯೇಕ ಲಕ್ಷಣಗಳುಳ್ಳ ಎರಡು ನಡತೆಗಳು ಎಲ್ಲರಿಗೂ ತಿಳಿದೇ ಇವೆ. ಒಳ್ಳೆಯನಡೆತೆ ಅಥವಾ ಸನ್ಮಾರ್ಗವೆಂದರೆ ಪರರಿಗೆ ಹಿತಕರವಾಗಿ, ನಮಗೂ ಸುಖ ಮತ್ತು ಶ್ರೇಯಸ್ಸುಗಳುಂಟುಮಾಡುವ ಬಹಿಶ್ಚರ್ಯೆ. ಪರರಿಗೆ ಹಿಂಸಾಕರವಾಗಿ-ಯೂ, ನಮಗೆ ಕೆಟ್ಟುದನ್ನು ಮಾಡಿ ನಮ್ಮನ್ನು ಜನರ ಹಗೆಗೆ ಗುರಿಮಾ-ಡುವುದಾಗಿಯೂ ಇರುವ ಬಹಿಶ್ಚರ್ಯೆಯು ಕೆಟ್ಟನಡತೆ ಅಥವಾ ದುರ್ಮಾ-ರ್ಗವೆನಿಸಿಕೊಳ್ಳುವುದು.

ಈ ಶಬ್ದಾರ್ಥಗಳಿಂದಲೇ ಮನುಷ್ಯನು ಕೆಟ್ಟನಡತೆಯನ್ನು ಬಿಟ್ಟು ಒಳ್ಳೆಯ ನಡತೆಯನ್ನು ಹೊಂದಬೇಕೆಂಬುದುಸ್ಪಷ್ಟವಾಗಿದೆ.ಪ್ರಪಂಚವ್ಯವಹಾರವನ್ನು ಪರೀಕ್ಷಿಸಿನೋಡಿದರೂ, ಇದೇ ಗೊತ್ತಾಗುವುದು. ಕೆಟ್ಟನಡತೆಯವನು ಲೋಕಕಂಟಕನೂ, ಸೌಖ್ಯರಹಿತನೂ, ಪಾಪಿಯೂ ಆಗಿ ತನಗೆ ಮೊದಲಿದ್ದ ಮರ್ಯಾದೆಯನ್ನು ಹಾಳುಮಾಡಿಕೊಳ್ಳುವನು. ಒಳ್ಳೆಯನಡತೆಯವನು ಹೆಚ್ಚು ಮರ್ಯಾದೆಯನ್ನೂ ಸಂಪಾದಿಸಿ, ಕ್ರಮೇಣ ಅಧಿಕವಾಗಿ ಸುಖಪಟ್ಟು,

ಪುಣ್ಯವಂತನೆನಿಸಿಕೊಂಡು, ಜನರ ಪ್ರೀತಿಯನ್ನು ಸಂಪಾದಿಸಿ, ಅವರೂ ಸನ್ಮಾರ್ಗವನ್ನನುಸರಿಸುವಂತೆ ಮಾಡಿ, ಲೋಕಸೌಖ್ಯವನ್ನು ವೃದ್ಧಿಗೊಳಿಸಿ, ಬಹು ಶ್ರೇಯಸ್ಸನ್ನು ಪಡೆಯುತ್ತಾನೆ. ಈ ವಿಷಯವು ಅನೇಕರಿಗೆ ಗೊತ್ತಿದ್ದರೂ, ಅವರು ತಮ್ಮ ಕೆಟ್ಟ ನಡತೆಯನ್ನು ಬಿಟ್ಟಿಲ್ಲ. ಒಂದು ಕೆಲಸವನ್ನು ಮಾಡಿದುದರಿಂದ ಒಳ್ಳೆಯದಾಗುವುದೋ ಕೆಟ್ಟುದಾಗುವುದೋ ಎರಡೂ ಅರಿಯದೆ ಅದಕ್ಕೆ ಪ್ರವರ್ತಿಸುವುದು ದಡ್ಡತನವು. ಅದರಿಂದಾಗುವ ಕೇಡನ್ನು ತಿಳಿದ ಮೇಲೆಯೂ, ಅದನ್ನೇ ಮಾಡಹತ್ತುವುದನ್ನೇನೆಂದು ಕರೆಯೋಣ! ಪ್ರಪಂಚದಲ್ಲಿ ಇದನ್ನು ತಿಳಿದವರು ಬಹಳ, ತಿಳಿಯದವರು ಸ್ವಲ್ಪ. ಸನ್ಮಾರ್ಗದಲ್ಲಿ ನಡೆವವರು ಕೆಲವರು, ದುರ್ಮಾರ್ಗಪ್ರವೃತ್ತರು ಹಲವರು. ತಿಳಿದವರೆಲ್ಲ ಕೆಟ್ಟನಡತೆಯನ್ನು ಬಿಟ್ಟರೆ, ಅವರಿಗೆ ಯಾವ ಸೌಖ್ಯವೂ ಮರ್ಯಾದೆಯೂ ಉಂಟಾಗುವುದಸಾಧ್ಯ? ಇವರೆಲ್ಲರೂ ಸನ್ಮಾರ್ಗದಲ್ಲಿ ನಡೆವುದನ್ನು ನೋಡಿ, ಮೂಢರಾದ ಉಳಿದವರು ತಮ್ಮನ್ನು ತಿದ್ದಿಕೊಂಡು, ತಾವೂ ಸನ್ಮಾರ್ಗವನ್ನೇ ಹಿಡಿಯುವರು. ಈಯರ್ಥವನ್ನೇ ಶ್ರೀಮದ್ಭಗವದ್ಗೀತೆಯೂ ಬೋಧಿಸುವುದು:—

> ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋಜನಃ ।
>
> ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥

ಆಗ ಒಬ್ಬನಿಂದೊಬ್ಬನಿಗೆ ತೊಂದರೆಯೆನ್ನುವುದು ಸಂಭವಿಸದು. ಇದರಿಂದ ತೊಂದರೆಮಾಡಿದವರನ್ನು ವಿಚಾರಿಸಿ ದಂಡಿಸುವುದಕ್ಕಾಗಿ ಏರ್ಪಟ್ಟಿರುವ ನ್ಯಾಯಸ್ಥಾನಗಳೂ ಅನಾವಶ್ಯಕಗಳಾಗಬಹುದು.

ಹಣವಂತನು ಎಂಥ ಕೆಟ್ಟಕೆಲಸಮಾಡಿದರೂ, ಅದನ್ನು ಯಾರೂ ಕೆಟ್ಟುದಾಗಿ ಎಣಿಸುವುದಿಲ್ಲವೆಂದು ಕೆಲವರು ತಿಳಿದಿರುವರು. ಇದು ಯುಕ್ತವಲ್ಲ. ಹೇಗೆಂದರೆ, ಒಬ್ಬ ದುರ್ಮಾರ್ಗಿಯಾದವನಲ್ಲಿ ಬೇಕಾದಷ್ಟು ಹಣವಿದ್ದರೂ ಅವನು ಅದನ್ನು ಸ್ವೇಚ್ಛೆಯಾಗಿ ವೆಚ್ಚಮಾಡಿ ಸ್ವಲ್ಪಕಾಲದಲ್ಲಿಯೇ ಮುಗಿಸಿಬಿಡುವನು. ಅವನು ಹಣವಂತನಾದುದರಿಂದ ಅವನೂರಿನವರಿಗೆ ಏನಾದರೂ ಪ್ರಯೋಜನವುಂಟೇ? ಅವನ ನೆರೆಯವರಿಗೆ ಸುಖವುಂಟೇ? ಬಡವರಿಗೆ ಸಹಾಯವಾಗುತ್ತದೆಯೇ? ಯಾವುದೂ ಇಲ್ಲ. ಆದುದರಿಂದ ಅವನು ಹಣ-

ಗಾರನಾದುದೂ ಆಗದಿರುವುದೂ ಎರಡೂ ಸಮ. ಅದೇ ಮನುಷ್ಯನು ಗುಣವಂತನಾಗಿದ್ದರೆ, ಆತನು ತನ್ನ ಸುಗುಣಗಳಿಂದ ಎಲ್ಲರನ್ನೂ ಮೆಚ್ಚಿಸುವನು ; ಕೈಲಾದ ಪರೋಪಕಾರ ಮಾಡುವನು. ಅವನನ್ನು ನೋಡಿದವರಲ್ಲಿ ಕೆಲವರಾದರೂ ಅವನಂತೆ ಆಗಲು ಯತ್ನಿಸುವರು. ಗುಣವಿಲ್ಲದ ಹಣಗಾರರು ಶೀಘ್ರವಾಗಿಯೇ ಬಡವರಾಗುವುದನ್ನೂ, ಗುಣಿಗಳಾದ ಬಡವರು ಹಣವಂತರಾಗುವುದನ್ನೂ ಪ್ರಪಂಚದಲ್ಲಿ ನೋಡುತ್ತಲೇ ಇದ್ದೇವೆ. ಆದುದರಿಂದ ಗುಣವು ಹಣಕ್ಕಿಂತ ಶ್ರೇಷ್ಠವೆನ್ನುವುದರಲ್ಲಿ ಸಂಶಯವಿಲ್ಲ.

> "ಗುಣಹಾನಿಯಿಂದಧೋಗತಿ |
> ಗುಣದಿಂ ಸ್ವರ್ಗಾಪವರ್ಗಸುಖಮುಕ್ಕುಮೆನಲ್ ||
> ಗುಣಹೀನನ ಸಿರಿಯಿಂದಂ |
> ಗುಣಿಗಳ ಬಡತನಮೆ ನಾಡೆಯುಂ ಲೇಸಲ್ತೆ ||"

ಎಂದು ಅಭಿನವಪಂಪನು ಹೇಳುತ್ತಾನೆ.

ಇದರಿಂದ ಮನುಷ್ಯನು ಹಣವನ್ನೇ ಸಂಪಾದಿಸಕೂಡದೆಂದಲ್ಲ. ದುರ್ಮಾರ್ಗಿಗೆ ಹಣವು ಹೆಚ್ಚಾಗಿ ದೊರೆಯಬಾರದು. ಗುಣವಂತನಿಗೆ ಇದು ಎಷ್ಟು ಸಿಕ್ಕಿದರೂ ಲೋಕಕ್ಕೆ ಮೇಲು. ಗುಣಿಗಳು ಲೋಕಕ್ಕೆ ಭೂಷಣ. ಇವರಿಲ್ಲದಿದ್ದರೆ ಪ್ರಪಂಚವು ಜನಾವಾಸಕ್ಕೆ ಯೋಗ್ಯವಾಗುವುದಿಲ್ಲ.

## 36. ವ್ಯಾಪಾರ.

ಅತಿಚಿರಕಾಲದ ಹಿಂದೆ, ಪ್ರಪಂಚದಲ್ಲಿ ಜನರು ನಾಗರಿಕತೆಯಿಲ್ಲದೆ ಬಲು ಮೂಢರಾಗಿದ್ದರು. ಆಗ್ಗೆ ಜನರು ತಮಗೆ ಬೇಕಾದ ವಸ್ತುಗಳನ್ನು ಪಡೆಯಲು, ಕುರಿ, ಕೋಳಿ, ಕೋಣ, ದನ, ಅಕ್ಕಿ, ರಾಗಿ ಮುಂತಾದುವುಗಳನ್ನೇ ಬದಲು ಕೊಡಬೇಕಾಗಿದ್ದಿತು ಈ ತರದ ಮಾರ್ಪಾಟವು ಬಲು ತೊಂದರೆಗೆ ಕಾರಣವಾಗಿ ಕಂಡುಬಂದು ಕ್ರಮೇಣ ನಾಗರಿಕತೆ ಹೆಚ್ಚಿ ನಾಣ್ಯವು ಬಳಕೆಗೆ ಬಂದಿತು. ಅಂದಿನಿಂದ ಪದಾರ್ಥಗಳ ಮಾರ್ಪಾಟವು ಅತಿ ಸುಲಭವಾಗಿ, "ವ್ಯಾಪಾರವು" ಈಗಿನಂತೆ ಮೊದಲಾಯಿತು.

ವ್ಯಾಪಾರವು ಒಂದು ದೇಶಕ್ಕೆ ಬೇಕಾದ ವಸ್ತುಗಳನ್ನೆಲ್ಲಾ ತಂದುಕೊಟ್ಟು, ಅದಕ್ಕೆ ಬೇಕಾಗದಷ್ಟು ಹೆಚ್ಚಾಗಿರುವ ವಸ್ತುಗಳನ್ನು ಹೊರಗೆ

ತೆಗೆದುಕೊಂಡು ಹೋಗುವುದು. ಇದರಿಂದ ಪ್ರಪಂಚಕ್ಕೆ ಬಹಳ ಪ್ರಯೋಜನ. ಒಂದು ದೇಶದಲ್ಲಿ ಬೆಳೆವುದೇ ಅದಕ್ಕೆ ಗತಿಯಾಗಿದ್ದರೆ, ಅದರ ಜನರಿಗೆ ತುಂಬಾ ಕಷ್ಟ. ಬಂಗಾಳದ ಕೆಲವು ಜಿಲ್ಲೆಗಳಲ್ಲಿ ಅಕ್ಕಿ ಅವುಗಳಿಗಾಗಿ ಮಿಗುವಷ್ಟು ಹೆಚ್ಚಾಗಿ ಬೆಳೆವುದು. ಇನ್ನು ಕೆಲವು ಜಿಲ್ಲೆಗಳಿಗೆ ಪರಸ್ಪರ-ವ್ಯಾಪಾರವಿಲ್ಲದಿದ್ದಲ್ಲಿ, ಒಂದು ಜಿಲ್ಲೆಯವರು ಹೊಟ್ಟೆಗೆ ಅನ್ನವಿಲ್ಲದೆಯೂ, ಇನ್ನೊಂದು ಜಿಲ್ಲೆಯವರು ಹೊದೆವುದಕ್ಕೆ ಬಟ್ಟೆಯಿಲ್ಲದೆಯೂ ಇರಬೇಕಾಗುವುದು. ಬರಗಾಲದಲ್ಲಿ ಹಿಟ್ಟಿಲ್ಲದೆ ಯಮಪಟ್ಟಣಕ್ಕೆ ಒಟ್ಟೊಟ್ಟಾಗಿ ತೆರಳಲು ಸಿದ್ಧರಾಗಿರುವವರನ್ನು ಉಳಿಸಿಕೊಳ್ಳುವುದರಲ್ಲಿ ವ್ಯಾಪಾರದುಪಯೋಗವು ಅಪರಿಮಿತವಾದುದು.

ವ್ಯಾಪಾರದಿಂದ ನಾಗರಿಕತೆ ಹೆಚ್ಚುವುದು. ಒಂದುದೇಶಕ್ಕೆ ಇನ್ನೊಂದರೊಡನೆ ವ್ಯಾಪಾರವಿಲ್ಲದಿದ್ದರೆ, ಜನರು ತಾವು ಬೆಳೆಸಿದುದರಲ್ಲಿಯೇ ಜೀವಿಸಬೇಕಾಗುವುದು. ಐಶ್ವರ್ಯವಂತರು ಅನ್ಯಾಯವಾಗಿ ದುರ್ಮಾರ್ಗಗಳಲ್ಲಿ ಹಣವನ್ನು ಹಾಳುಮಾಡಿಬಿಡುವರು. ವರ್ತಕರು ಅನ್ಯದೇಶಗಳಿಂದ ವ್ಯಾಪಾರಕ್ಕಾಗಿ ಸಾಮಾನುಗಳನ್ನು ತಂದುಹಾಕಿದರೆ, ಜನರಿಗೆ ಆ ಸೀಮೆಗಳ ಸರಕುಗಳನ್ನು ಒಳಸಿಕೊಳ್ಳುವುದರಲ್ಲಿ ಇಚ್ಛೆ ಹುಟ್ಟಿ ಹಣವನ್ನು ವ್ಯಾಪಾರದಲ್ಲಿ ವ್ಯಯಮಾಡುವರು. ಅನ್ಯದೇಶೀಯರು ತಮ್ಮೊಡನೆ ಮಾಡುವ ವ್ಯಾಪಾರದಿಂದ ಪಡೆವಲಾಭವನ್ನು ಕಂಡು, ತಾವೂ ತಮ್ಮ ದೇಶದ ಸಾಮಾನುಗಳನ್ನು ಹೆರರಿಗೆ ಮಾರಲು ತೊಡಗುವರು. ತಮ್ಮ ಸರಕುಗಳನ್ನು ಅನ್ಯದೇಶೀಯರಿಗೆ ಮಾರಬೇಕಾದರೆ, ತಾವು ಅವುಗಳನ್ನು ಹೇರಳವಾಗಿ ಬೆಳೆಯಬೇಕಾಗಿ ಬರುವುದು. ಹೀಗೆ ವ್ಯವಸಾಯವು ಹೆಚ್ಚುವುದಲ್ಲದೆ, ಹೊಸ ಕಾರ್ಖಾನೆಗಳು ಸ್ಥಾಪಿಸಲ್ಪಡುವುವು. ಇವು ಕೆಲವು ಕಾಲ ನಡೆಯಬೇಕಾದರೆ, ಸ್ವದೇಶದ ಪದಾರ್ಥಗಳೇ ಅಲ್ಲದೆ ಅನ್ಯದೇಶದವುಗಳೂ ಬೇಕಾಗುವುವು. ಇತರ ಸ್ಥಳಗಳಿಂದ ಹತ್ತಿ ರೇಷ್ಮೆಗಳು ಇಂಗ್ಲೆಂಡಿಗೆ ಹೋಗುವುದಕ್ಕೆ ಮುಂಚೆ, ಹತ್ತಿ ರೇಷ್ಮೆಗಳ ಕೈಗಾರಿಕೆ ಅಲ್ಲಿ ಸರಿಯಾಗಿ ನಡೆವುದು ಅಸಾಧ್ಯವಾಗಿದ್ದಿತು. ವ್ಯಾಪಾರವು ನೆಲೆಸಿದ ದೇಶದಲ್ಲಿ, ಸಿರಿಯು ಹೆಚ್ಚಿ, ಸಾಹುಕಾರರು ಬಲು ಬೆಲೆಯುಳ್ಳ ಪದಾರ್ಥಗಳನ್ನು ಕೊಂಡು ಜನರಿಗೆ ಪ್ರೋತ್ಸಾಹಪಡಿಸುವರು.

ಹಿಂದೆ ಫಿನಿಷಿಯಾ ದೇಶದವರು ಯೂರೋಪಿನಲ್ಲೆಲ್ಲ ವ್ಯಾಪಾರದಲ್ಲಿ ವಿಖ್ಯಾತರಾಗಿದ್ದರು. ಇವರು ಕಡಲಮೇಲೆ ವ್ಯಾಪಾರಮಾಡಹತ್ತಿ, ತಾವು ಹೊಕ್ಕದೇಶದ ನಾಗರಿಕತೆಯನ್ನನುಸರಿಸುತ್ತ ಏಳಿಗೆಗೆ ಬಂದರು. ಇವರಿಂದ ವ್ಯಾಪಾರವನ್ನು ಕಲಿತು ಪ್ರಾಚೀನಗ್ರೀಕರು ನಾಗರಿಕತೆಯನ್ನು ಹೊಂದಿ-ದುದಲ್ಲದೆ, ಮೆಡಿಟರೇನಿಯನ್ ಸಮುದ್ರದ ಸುತ್ತಲೂ ಇದ್ದ ಸೀಮೆಗಳಲ್ಲಿ ತಮ್ಮ ನಾಗರಿಕತೆಯನ್ನು ಸ್ಥಾಪಿಸಿದರು. ಗುಡ್‌ಹೋಪ್ ಭೂಶಿರವನ್ನು ಕಂಡುಹಿಡಿದ ಬಳಿಕ ಮೂಡಸೀಮೆಗಳಿಗೆ ದಾರಿ ಸರಾಗವಾಗಲು, ಪೋ-ರ್ಟ್ಯುಗಲ್, ಹಾಲೆಂಡ್, ಇಂಗ್ಲೆಂಡ್ ದೇಶಗಳ ಜನರು ಮೂಡಸೀಮೆಗಳೊ-ಡನೆ ವ್ಯಾಪಾರಮಾಡಿ ನಾಗರಿಕತೆಯಲ್ಲಿಯೂ ಅಭಿವೃದ್ಧಿಯನ್ನು ಪಡೆದರು. ಅಮೆರಿಕಾಖಂಡವು ಕಂಡು ಹಿಡಿಯಲ್ಪಟ್ಟು, ಶೀಘ್ರವಾಗಿಯೇ ಯೂರೋ-ಪಿನ ನಾಗರಿಕತೆಯನ್ನು ಸ್ಪರ್ಧಿಸುವಷ್ಟು ಏಳಿಗೆಗೆ ಬಂದುದೂ ಮುಖ್ಯವಾಗಿ ವ್ಯಾಪಾರದಿಂದಲೇ. ಈಚೆಗೆ ಪಾಶ್ಚಾತ್ಯರ ವಿದ್ಯೆಯೂ, ಅವರು ಕಂಡು-ಹಿಡಿದಿರುವ ಅದ್ಭುತವಸ್ತುಗಳೂ ಇಂಡಿಯ, ಜಪಾನ್ ದೇಶಗಳಿಗೆ ವ್ಯಾ-ಪಾರ ಮೂಲಕ ಬಂದು ಇಲ್ಲಿನ ನಾಗರಿಕತೆಯನ್ನು ಹೆಚ್ಚಿಸಿವೆ.

ಒಂದುದೇಶದಲ್ಲಿ ತಿಳಿದಿರುವಂಶಗಳು ಮತ್ತೊಂದುದೇಶಕ್ಕೆ ವ್ಯಾಪಾರಿ-ಗಳ ಮೂಲಕ ತಿಳಿಯಬರುವುದರಿಂದ ಪ್ರಪಂಚದಲ್ಲಿ ಜ್ಞಾನಾಭಿವೃದ್ಧಿಯುಂ-ಟಾಗುವುದು. ಇಂಗ್ಲಿಷ್ ವರ್ತಕರು ಯೂರೋಪಿನಲ್ಲಿ ತಿಳಿದಿರುವ ವಿಷಯ-ಗಳನ್ನು ಇಂಡಿಯ, ಚೀನಾ, ಜಪಾನ್ ದೇಶಗಳಿಗೆ ತಿಳಿಸಿ, ಇಲ್ಲಿನ ಕಲಾ-ಕೌಶಲ್ಯವೇ ಮುಂತಾದುವುಗಳನ್ನು ತಮ್ಮ ಸೀಮೆಗೆ ಕೊಂಡೊಯ್ವರು. ಇದ-ರಿಂದ ಅನೇಕ ಪದಾರ್ಥಗಳನ್ನು ಹೊಸದಾಗಿ ಕಂಡು ಹಿಡಿವುದಕ್ಕೆ ಅವಕಾಶ-ವಾಯಿತು. ಮದ್ದು, ಅಚ್ಚು ಹಾಕುವುದು, ಸೂಜಿಗಲ್ಲು ಈ ಮೂರೂ ಯೂ-ರೋಪಿನಲ್ಲಿ ತಿಳಿವುದಕ್ಕೆ ಅನೇಕ ಶತಮಾನಗಳ ಹಿಂದೆಯೇ ಚೀನಾದೇಶದಲ್ಲಿ ಕಂಡುಹಿಡಿಯಲ್ಪಟ್ಟಿದ್ದುವೆಂದು ಹೇಳುವರು. ಚೀನಾ ಸೀಮೆಗೆ ಅನ್ಯದೇ-ಶಗಳೊಡನೆ ಚಿರಕಾಲ ಸಂಬಂಧವೇ ಇಲ್ಲದಿದ್ದುದರಿಂದ, ಚೀಣರು ತಮಗೆ ಗೊತ್ತಿದ್ದುದನ್ನು ತಮ್ಮಲ್ಲಿಯೇ ಇಟ್ಟುಕೊಳ್ಳಬೇಕಾಗಿ ಬಂದು ಅವನ್ನು ವಿಶೇಷ ಉಪಯೋಗಕ್ಕೆ ತರಲಾಗದೆ ಹೋದರಂತೆ. ಹೀಗೆ ಹೊಸ ಸಂಗತಿಗಳು

ವರ್ತಕರ ಮೂಲಕ ಒಡನೆಯೇ ಹರಡಿಕೊಂಡಿದ್ದರೆ, ಇನ್ನೂ ಎಷ್ಟೋ ಮುಂಚೆಯೇ ನಾಗರಿಕತೆ ಲೋಕದಲ್ಲೆಲ್ಲಾ ವ್ಯಾಪಿಸುತ್ತಿತ್ತು.

ವ್ಯಾಪಾರದಿಂದ ಕೆಡಕುಗಳೂ ಇಲ್ಲದೆ ಇಲ್ಲ; ಇದರಿಂದ ಜನರಲ್ಲಿ ಡಂಭವೂ ದುಂದುಗಾರತನವೂ ಉಂಟಾಗಬಹುದು. ದುಂದು ಕುಂದಿಗೆಕಾರಣವು. ವ್ಯಾಪಾರದ ಮೂಲಕ ಒಂದು ಸೀಮೆಗೂ ಮತ್ತೊಂದಕ್ಕೂ ಮೇಲಾಟವುಂಟಾಗಿ ಕೊನೆಗೆ ವಿರೋಧದಲ್ಲಿ ಪರಿಣಮಿಸಿ, ಇದರಿಂದ ಅರ್ಥನಾಶ, ಪ್ರಾಣನಾಶಗಳಾಗಬಹುದು. ಇದಲ್ಲದೆ ವ್ಯಾಪಾರದ ವ್ಯಾಜದಿಂದ ಸೀಮೆಗಳನ್ನು ಜಯಿಸಿ ಅಲ್ಲಿನ ಜನರನ್ನು ವಶಮಾಡಿಕೊಳ್ಳುವುದಕ್ಕೆ ಅವಕಾಶವುಂಟು. ಇದಕ್ಕೆ ಹಿಂದೂದೇಶವೇ ದೃಷ್ಟಾಂತವು.

## 37. ಸ್ವಾರ್ಥಪರತ್ವ.

"ತಾನುಂಟೋ ಮೂರುಲೋಕವುಂಟೋ" ಎಂಬಂತೆ ಸ್ವಾರ್ಥಪರನಾದವನು ಹೆರರ ಸೌಖ್ಯಕ್ಕೆ ಲಕ್ಷ್ಯಮಾಡದೆ ತನ್ನ ಸೌಖ್ಯವನ್ನೇ ಪ್ರಧಾನವಾಗಿಟ್ಟುಕೊಂಡಿರುವನು. ಲೋಕದಲ್ಲಿ ಸಿಕ್ಕಿದ ಒಳ್ಳೆಯ ವಸ್ತುಗಳನ್ನೆಲ್ಲಾ ಸ್ವಸೌಖ್ಯಕ್ಕಾಗಿ ಮಾಡಿಕೊಳ್ಳುವನು. "ದೊರೆಗಳು ತಮ್ಮ ವಿಷಯಾಭಿಲಾಷೆಯನ್ನು ಪೂರೈಸಿ ಸೌಖ್ಯವನ್ನು ಪಡೆದರೆ ಎಲ್ಲರೂ ಸುಖದಿಂದಿದ್ದಂತೆಯೇ" ಎಂಬದಾಗಿ ಹತ್ತಿರರುವವರಿಂದ ಅನೇಕ ರಾಜರು ಬೋಧಿಸಲ್ಪಟ್ಟು ಸ್ವಾರ್ಥಪರರಾಗಿ ಹೋದರೆಂದು ಚರಿತ್ರೆ ತಿಳಿಸುತ್ತದೆ. ಇಂಗ್ಲೆಂಡ್ ದೇಶದ ಇಂಥ ದೊರೆಗಳಲ್ಲಿ ಎಂಟನೆಯ ಹೆನ್ರಿ ಮತ್ತು ಎರಡನೆಯ ಚಾರ್ಲ್ಸ್ ಎಂಬಿಬ್ಬರು ಪ್ರಮುಖರು. ನಮ್ಮ ದೇಶದ ದೊರೆಗಳಲ್ಲಿಯೂ ಹೀಗೆ ಸ್ವಾರ್ಥಪರರಾದವರಿದ್ದರು.

ಎಲ್ಲಾ ಪದಾರ್ಥಗಳನ್ನೂ ತಮ್ಮ ಪಯೋಗಕ್ಕೆ ಅನ್ಯಾಯವಾಗಿ ತಿರುಗಿಸಿಕೊಂಡು, ಇತರರನ್ನು ತಮ್ಮ ಸೌಖ್ಯಕ್ಕೆಸಾಧಕರನ್ನಾಗಿ ಮಾಡಿಕೊಳ್ಳುವರು ಲೋಕದಲ್ಲಿ ಅನೇಕರುಂಟು. ನಂಟರು, ಇಷ್ಟರು, ಮಿತ್ರರು ಯಾರೇ ಆಗಲಿ ಅವರ ಸೌಖ್ಯವನ್ನು ಸ್ವಲ್ಪವೂ ಲಕ್ಷ್ಯಮಾಡದೆ ಇಂಥ ಸ್ವಾರ್ಥಪರರು ಎಲ್ಲರನ್ನೂ ತಮ್ಮ ಪ್ರಯೋಜನಕ್ಕೇ ಸೆಳೆದುಕೊಳ್ಳುವರು. ಈ ಸ್ವಭಾವವುಳ್ಳ ಒಬ್ಬ ಹೆಂಗಸೋ ಗಂಡಸೋ ಒಂದೊಂದು ಸಂಸಾರದಲ್ಲಿರು-

ವುದುಂಟು. ಇವರಿಗೆ ಯಾವವಿಧದಲ್ಲಿಯಾದರೂ ಪ್ರತಿಕೂಲವಾಗಿ ನಡೆ-ದರೆ ಇತರರಿಗೆ ತುಂಬಾ ಜುಗುಪ್ಸೆಯುಂಟಾಗುವಂತೆ ಆಡುತ್ತಾರೆ. ಯಾವು-ದಾದರೂ ಒಂದು ಅಪೂರ್ವವಾದ ವಸ್ತುವನ್ನು ಮನೆಗೆ ತಂದರೆ, "ನನಗೆ ಬೇಕು" ಎಂದು ಒಡನೆಯೇ ಅದನ್ನು ಕಿತ್ತುಕೊಂಡು ತಮ್ಮಲ್ಲಿಟ್ಟುಕೊಳ್ಳು-ವರು. ನಂಟರು, ಇಷ್ಟರು, ಯಾರಾದರೂ ಒಂದೆರಡುದಿನ ತಮ್ಮ ಮನೆಗೆ ಬಂದಿಳಿದುಕೊಂಡರೆ ಸಹಿಸುವುದಿಲ್ಲ ; ಚಿಟುಗುಟ್ಟುವರು. ಬಡಬಗ್ಗರು ಭಿಕ್ಷೆಗೆ ಬಂದರೆ, ನೀಡುವುದಕ್ಕೆ ಹಿಂದೆಗೆಯುವರು. ಹೀಗೆ ತಮ್ಮ ಹೊಟ್ಟೆ-ಯನ್ನು ಹೊರೆದುಕೊಳ್ಳುವುದರಲ್ಲಿಯೇ ನಿರತರಾಗಿರುವವರ ಹತ್ತಿರ ಯಾರು ಸೇರುತ್ತಾರೆ?—ಎನ್ನಬಹುದು. ನಿಸ್ಪೃಹರಾಗಿಯೂ, ತಮಗೆ ಮಾಡಿದ ಕೆಡಕಿಗೆ ಸಿಟ್ಟುಗೊಳ್ಳದೆಯೂ ಇರುವ ಸಜ್ಜನರೇ ಇವರಿಗೆ ಗತಿ.

ನಾವು ಸ್ವಾಭಾವಿಕವಾಗಿ ಪರರ ಕ್ಷೇಮಚಿಂತನೆಯನ್ನು ಮಾಡದಿದ್ದರೆ, ನಮಗೆ ನೈಜವಾದ ಸೌಖ್ಯವುಂಟಾಗದಂತೆ ದೇವರು ನಮ್ಮನ್ನು ಸೃಷ್ಟಿಸಿದ್ದಾನೆ. ಆದುದರಿಂದ ನಮಗೆ ಸೌಖ್ಯವು ಬೇಕಾದರೆ, ಅನ್ಯರಿಗೆ ಸೌಖ್ಯವನ್ನುಂಟು ಮಾಡುವುದಾವಶ್ಯಕವು. ಕನಿಕರದಿಂದ ಮಾಡಿದ ಪ್ರತಿಯೊಂದು ಕೆಲಸವೂ ಎರಡು ಬಗೆಯ ಸೌಖ್ಯವನ್ನು ಕೊಡುವುದೆಂದು ಹೇಳಬಹುದು: ಹಿತಕಾರಿಗೆ ಉಂಟಾಗುವ ಸುಖವೊಂದು, ಉಪಕಾರವನ್ನು ಪಡೆದವನಿಗೆ ಆಗುವ ಸುಖವು ಎರಡನೆಯದು. ಮೊದಲನೆಯದು ಸ್ವಾರ್ಥಪರನಿಗೆ ಲಭಿಸಲಾರದೆಂಬುದು ವ್ಯಕ್ತವು. ಇಂಥವನು ಪರಹಿತವನ್ನೇ ನೆನೆಯದಿರುವುದರಿಂದ, ಅವರು ಇವನಿಗೆ ಸಹಾಯಮಾಡಲು ಕಾರಣವೇ ಇಲ್ಲದೆ, ಎರಡನೆಯ ಸೌಖ್ಯವೂ ಇವನಿಗೆ ದುರ್ಲಭವು. ಇವನ ಜತೆಗೆ ಸೇರದಿರುವುದಕ್ಕೂ, ಇವನ ಮೇಲೆ ಕೋಪಗೊಳ್ಳದಿರುವುದಕ್ಕೂ ವಿಧಿಯಿಲ್ಲದಿರುವ ಜನರ ಸಹಾಯದಿಂದ ತನ್ನ ಉದ್ದೇಶವನ್ನು ಕೆಲವುಕಾಲ ನೆರವೇರಿಸಿಕೊಳ್ಳಬಹುದು. ಇಂಥ ಸಹಾಯ-ಗಳು ಮನಃಪೂರ್ವಕವಾಗಿ ಮಾಡಲ್ಪಡದಿರುವುದರಿಂದ ಇವನಿಗೆ ನಿಜ-ವಾದ ಸೌಖ್ಯವನ್ನು ಸ್ವಲ್ಪವೂ ಹೆಚ್ಚಿಸುವುದಿಲ್ಲ. ಹೀಗೆ ಬಲಾತ್ಕಾರಕ್ಕೊಳ-ಗಾದವರು ಅವನ ಸಹವಾಸವನ್ನು ಬಿಟ್ಟು, ಪರಹಿತೈಷಿಗಳೂ ಪ್ರತ್ಯುಪ-ಕಾರಾರ್ಹರೂ ಆದ ಬೇರೆ ಜನರಿಗೆ ಸಹಾಯಮಾಡುವುದುತ್ತಮವೆಂದು ತಿಳಿಯುವರು.

ಸ್ವಾರ್ಥಪರತೆಯು ಬಲು ನಿಂದ್ಯವಾದ ದುರ್ಗುಣವು; ಸ್ವಾರ್ಥಪರನು ಸ್ನೇಹಕ್ಕೆ ಅನರ್ಹನು. ಅವನೊಡನೆ ಮಾತನಾಡದೆ ದೂರ ತ್ಯಜಿಸಬೇಕು. ಅವನ ದುರ್ಗುಣಕ್ಕೆ ಔದಾಸೀನ್ಯವೇ ಮದ್ದು. ಇದರಿಂದ ಕ್ರಮೇಣ ಅವನು ತನ್ನ ತಪ್ಪನ್ನು ತಿದ್ದಿಕೊಳ್ಳಬಹುದೇ ಹೊರತು, ಬೇರೆ ಪ್ರತಿಕ್ರಿಯೆಯಿನ್ನಾವುದೂ ಕಾಣಲಿಲ್ಲ. "ಕಾಕೋಽಪಿ ಜೀವತಿ ಚಿರಾತ್ತು ಬಲಿಂಚ ಭುಜ್ತೇ" ಎಂಬಂತೆ ಕಾಗೆ ಮೊದಲಾದ ಜಂತುಗಳೂ ಕೂಡ ತಮಗೆ ಬೇಕಾದ ತಿಂಡಿಯನ್ನು ಸಂಪಾದಿಸಿಕೊಂಡು ತಿಂದು ಬಹುಕಾಲ ಬದುಕಿರುವುವು. ಏನುಪ್ರಯೋಜನ ? ಇತರರಿಗೆ ಸಹಾಯಮಾಡುವ ಶಕ್ತಿ ಅವಕ್ಕುಂಟೆ? ಅಂಥ ಶಕ್ತಿಯೊಡಗೂಡಿದ ಮನುಷ್ಯನೂ ಸ್ವೋದರಪರಾಯಣನಾದರೆ, ಅವನಿಗೂ ಅಜ್ಞಾನಿಗಳಾದ ತಿರ್ಯಗ್ಜಂತುಗಳಿಗೂ ಏನೂ ಭೇದವಿರುವುದಿಲ್ಲ.

## 38. ತೃಪ್ತಿ.

ತೃಪ್ತಿಯೆಂಬುದು ನಮ್ಮ ಮನಸ್ಸ್ವಭಾವವನ್ನನುಸರಿಸಿದೆಯೇ ಹೊರತು ನಮ್ಮಲ್ಲಿರುವ ವಸ್ತುಗಳ ಸಂಖ್ಯೆಯನ್ನಲ್ಲ. "ನನ್ನ ಮಗ್ಗಲು ಮನೆಯವನಷ್ಟು ಐಶ್ವರ್ಯವು ನನಗಿದ್ದರೆ ಸಾಕು" ಎಂದೊಬ್ಬನು ಹೇಳಬಹುದು. ಆದರೆ ಮಗ್ಗಲುಮನೆಯವನ ಐಶ್ವರ್ಯಬಂದಾಗ, ಅವನಿಗಿಂತ ಭಾಗ್ಯವಂತನಾದ ಮತ್ತೊಬ್ಬನ ಮೇಲೆ ಕಣ್ಣುಹಾಕುತ್ತಾನೆ. "ಒಂದು ಬೆಳ್ಳಿಯ ಚಿಕ್ಕ ನಾಣ್ಯವನ್ನು ಕೊಟ್ಟರೆ ಉಪಾದಾನದವನು ತೃಪ್ತನಾಗುವನು; ಪಾರ್ಸಿದೇಶವೆಲ್ಲ ಸ್ವಾಧೀನವಾಗಿದ್ದರೂ, ದೊರೆ ಅತೃಪ್ತನಾಗಿದ್ದಾನೆ" ಎಂದೊಬ್ಬ ಪಾರ್ಸಿಕವಿ ಹೇಳಿರುವನು. ತಕ್ಕಮಟ್ಟಿಗೆ ನೆಮ್ಮದಿಯಾಗಿದ್ದರೂ, ಇರುವ ಸ್ಥಿತಿಗಿಂತ ಉತ್ತಮವಾದುದಕ್ಕೆ ಹಾರೈಸುವುದು ಅನೇಕರ ಸ್ವಭಾವವಾಗಿದೆ. ಇಂಥ ಅತೃಪ್ತಿಯಿಂದ ಮನಸ್ಸಿಗೆ ತುಂಬಾ ವ್ಯಥೆಯೂ, ಚಿಂತೆಯೂ, ಕಳವಳವೂ ಉಂಟಾಗುವುವು. ಇರುವಷ್ಟಕ್ಕೆ ಸಂತುಷ್ಟರಾಗಿರುವುದು "ಪೇಚಾಟಗಳನ್ನೆಲ್ಲ ಅಡಗಿಸುವುದು; ಅಸಾಧಾರಣವಾದ ಆಶೆಯನ್ನು ನಾಶಮಾಡುವುದು; ನಮ್ಮ ಮಾತನ್ನು ಮನೋಹರವಾಗಿ ಮಾಡುವುದು; ನಮ್ಮಭಿಪ್ರಾಯಗಳಿಗೆ ಸಂತತವಾದಶಾಂತಿಯನ್ನು ಕೊಡುವುದು." ಎಂದು ಅಡಿಸನ್ ಎಂಬ ಮಹಾಪಂಡಿತನು ಹೇಳಿರುವನು. ತೃಪ್ತನಾಗಿರುವವನೇ ನಿತ್ಯಸುಖಿಯಾಗಿ-

ಶುವನು, ಇಂದ್ರಿಯ ನಿಗ್ರಹಕ್ಕೆ ತೃಪ್ತಿಯು ಬಹಳ ಸಾಧಕವೆಂಬುದಾಗಿ ನಮ್ಮ ಶಾಸ್ತ್ರಗಳು ಹೇಳುವುವು.

ತೃಪ್ತಿಯೆಂಬ ಗುಣವನ್ನು ವೃದ್ಧಿಪಡಿಸಿಕೊಳ್ಳಬಹುದು. ನಮಗಿಂತ ಉತ್ತಮ ಸ್ಥಿತಿಯಲ್ಲಿರುವವರೊಡನೆ ನಮ್ಮನ್ನು ಹೋಲಿಸಿಕೊಳ್ಳುವುದರಿಂದಲೂ, ನಮಗೆ ಬೇಕಾಗಿಯೂ ನಮ್ಮಲ್ಲಿಲ್ಲದೆಯೂ ಇರುವ ವಸ್ತುಗಳ ವಿಷಯವಾಗಿ ಯೋಚಿಸುವುದರಿಂದಲೂ ನಮಗೆ ಅತೃಪ್ತಿಯುಂಟಾಗುವುದು ತೃಪ್ತರಾಗಿರುವುದಕ್ಕೆ ಬಯಸುವವರು ತಮ್ಮ ಸ್ಥಿತಿಯನ್ನು ತಮಗಿಂತ ಕೀಳಾಗಿರುವವರ ಸ್ಥಿತಿಯೊಡನೆ ಹೋಲಿಸಿಕೊಳ್ಳುವುದಕ್ಕೆ ಮನಸ್ಸುಮಾಡಬೇಕು. ತಮಗಿಂತ ಉನ್ನತಪದವಿಯಲ್ಲಿರುವವರೊಡನೆ ತಮ್ಮನ್ನು ಹೋಲಿಸಿಕೊಂಡರೆ, ತಮ್ಮಲ್ಲಿರುವ ಕೊರತೆಗಳು ಸ್ಪಷ್ಟವಾಗಿ ಕಂಡುಬಂದು ಅತೃಪ್ತಿಗೆ ಕಾರಣವಾಗುವುದು.

ಯಾವ ಒಳ್ಳೆಯ ವಸ್ತುವೂ ಇಲ್ಲದಿರುವಷ್ಟು ನಿರ್ಭಾಗ್ಯರಾಗಿರುವವರು ಅಪೂರ್ವ. ಒಬ್ಬನು ಅತಿದರಿದ್ರನಾದರೂ ಆರೋಗ್ಯಭಾಗ್ಯವುಳ್ಳವನಾಗಿಯೂ ಆಪ್ತಮಿತ್ರಸಹಾಯಸಂಪನ್ನನಾಗಿಯೂ ಇರಬಹುದು. ಮತ್ತೊಬ್ಬನು ನಿರ್ಜನವಾದ ಪ್ರದೇಶದಲ್ಲಿರಬೇಕಾಗಿ ಬಂದು, ಮಾತನಾಡಿಸುವುದಕ್ಕೆ ಯಾರೂ ದಿಕ್ಕಿಲ್ಲದಿರಬಹುದು; ಆದರೆ ಇಂಥವನಿಗೆ ಗ್ರಂಥಗಳನ್ನೋದುವ ಅಭಿಲಾಷೆ ತುಂಬಾ ಇದ್ದು, ಪುಸ್ತಕಗಳ ಮೂಲಕ ಕಾಲಾಂತರದಲ್ಲಿದ್ದ ಅನೇಕ ವಿದ್ವಾಂಸರ ಸಹವಾಸವನ್ನನುಭವಿಸುವ ಶಕ್ತಿಯಿರಬಹುದು. ಇದೆಲ್ಲಾ ಹಾಗಿರಲಿ. ದುಃಖಕ್ಕೆಲ್ಲ ತೌರುಮನೆಯಾದ ಅನಾರೋಗ್ಯವು ಪ್ರಾಪ್ತವಾಗಿದ್ದರೂ, ಜನರು ತಮಗೆ ಗೆಳೆಯರೂ ನಂಟರೂ ಕನಿಕರದಿಂದ ಮಾಡುವ ಉಪಕಾರವನ್ನು ನೆನೆದು ಮನಸ್ಸನ್ನು ಸಮಾಧಾನಕ್ಕೆ ತಂದುಕೊಳ್ಳಬಹುದು. ಹೀಗೆ ಇದ್ದುದರಲ್ಲಿ ಸಂತೋಷವನ್ನುಂಟುಮಾಡಿಕೊಳ್ಳುವುದಕ್ಕೆ ಒಬ್ಬೊಬ್ಬರಿಗೊಂದೊಂದು ದಾರಿಯುಂಟು.

"ನಾನು ಇರುವ ಸ್ಥಿತಿಗಿಂತಲೂ ಇನ್ನೂ ಕೆಟ್ಟಸ್ಥಿತಿಯಲ್ಲಿರಬಹುದಾಗಿದ್ದಿತು; ಹಾಗೆ ಇಡದೆ ದೇವರು ಇಷ್ಟಾದರೂ ಕೊಟ್ಟಿದ್ದಾನೆಯಲ್ಲ, ಇದೇ ಸಾಕು.'' ಎಂದು ಪ್ರತಿಯೊಬ್ಬನೂ ಯೋಚಿಸಿಕೊಂಡರೆ ತೃಪ್ತಿ ಬಲುಮಟ್ಟಿಗೆ ದೊರೆಯುವುದು. ಈ ಲೋಕದಲ್ಲಿ ನಮ್ಮ ಸ್ಥಿತಿ ಎಂಥದಾಗಿದ್ದರೂ,

ಪರಲೋಕದಲ್ಲಿ ನಮ್ಮ ಯೋಗ್ಯತಾನುಸಾರ ಫಲಪ್ರಾಪ್ತಿಯಾಗುವುದು. ದೇವರು ನಮ್ಮ ಅಧಿಕಾರ, ಐಶ್ವರ್ಯ, ಯಶಸ್ಸು ಇವುಗಳನ್ನು ನೋಡುವುದಿಲ್ಲ; ಸತ್ಯ, ಸೌಜನ್ಯ, ಭಕ್ತಿ ಇವುಗಳೇ ಆತನಿಗೆ ಬೇಕಾದ ಗುಣಗಳು. ಇವುಗಳಿದ್ದ ಮೇಲೆ ಐಹಿಕಸುಖವನ್ನು ಮಾತ್ರ ಕೊಡುವ ವಸ್ತುಗಳನ್ನು ಏತಕ್ಕೆ ಬಯಸಬೇಕು? ಇದಲ್ಲದೆ, ನಾವು ಬದುಕಿರುವುದು ಸ್ವಲ್ಪಕಾಲ. ಬಡವನೂ ಭಾಗ್ಯವಂತನೂ, ದೊರೆಯೂ ಜವಾನನೂ, ರೋಗಿಯೂ ದೃಢಾಂಗನೂ ಎಲ್ಲರೂ ಒಂದೇರೀತಿಯಲ್ಲಿ ಮರಣದ ಬಾಯಿಗೆ ತುತ್ತಾಗುವರು. ಆದುದರಿಂದಭೂಮಿಯಮೇಲಿರುವವರೆಗೂ ಅತೃಪ್ತಿಪಟ್ಟು ಏಕೆ ಕಳವಳಗೊಳ್ಳಬೇಕು?

ತೃಪ್ತಿಗೂ ಮಿತಿಯುಂಟು. ಅದನ್ನು ಮೀರಿದರೆ ಉಪೇಕ್ಷೆ, ಸೋಮಾರಿತನ ಎಂಬ ದುರ್ಗುಣಗಳು ಹುಟ್ಟುವುವು. ಹೀಗಾಗದಂತೆ ನೋಡಿಕೊಳ್ಳಬೇಕು. ಅತಿತೃಪ್ತಿಯು ನಮ್ಮ ದೇಶದಲ್ಲಿ ಅನೇಕರನ್ನು ಸೋಮಾರಿಗಳನ್ನಾಗಿ ಮಾಡಿ, ಅವರ ಏಳಿಗೆಗೆ ಕುಂದನ್ನು ತಂದಿದೆ. ಐರ್ಲೆಂಡ್ ದೇಶದ ರೈತರಅಧಮಸ್ಥಿತಿಗೂ ಅವರ ಅತಿತೃಪ್ತಿಯೇ ಕಾರಣ. ಇದ್ದುದಕ್ಕೆ ಸಂತುಷ್ಟರಾಗಿರುವುದು ಸೌಖ್ಯಕ್ಕೆ ಆಸ್ಪದವೆನ್ನುವುದೇನೊ ಸರಿಯೆ; ಆದರೆ ಅತೃಪ್ತಿಯೇ ಕೆಲವು ಸಂದರ್ಭಗಳಲ್ಲಿ ಶ್ಲಾಘ್ಯವಾದುದು. ನಮಗಿಂತಲೂ ಸುಗುಣಗಳಲ್ಲಿ ಉತ್ತಮರಾದವರು ಗೊತ್ತಿದ್ದರೂ, ಅವರಂತೆ ನಡೆದುಕೊಳ್ಳಲು ಯತ್ನಿಸದಿರುವುದು ತಪ್ಪು. ಇರುವ ಜ್ಞಾನಕ್ಕೇನೆ ತೃಪ್ತಿಪಟ್ಟುಕೊಂಡು ಜ್ಞಾನಾಭಿವೃದ್ಧಿಗೆ ಅವಕಾಶವಿದ್ದರೂ ಸುಮ್ಮನೆ ಕುಳಿತಿರುವುದು ಹೆಡ್ಡತನವು. ಪರೋಪಕಾರ ವಿಷಯದಲ್ಲಿ ಎಂದಿಗೂ ತೃಪ್ತಿಯಿರಬಾರದು. ನಮ್ಮ ಕೈಲಾದ ಸಾಹಸವನ್ನೆಲ್ಲಾ ಮಾಡಿ ಲೋಕಕ್ಕುಪಕಾರ ಮಾಡುತ್ತಲೇ ಇರಬೇಕು. ಜನರು ಪಡುತ್ತಿದ್ದ ಕಷ್ಟಗಳನ್ನು ನೋಡಿ ತನಗುಂಟಾದ ಶ್ಲಾಘ್ಯವಾದ ಅತೃಪ್ತಿಯಿಂದಲೇ ಗೌತಮಬುದ್ಧನು ತನ್ನ ತಂದೆಯರಮನೆಯಲ್ಲಿ ಸುಖದಿಂದಿರದೆ ಜನರನ್ನುತ್ತಮಸ್ಥಿತಿಗೆ ತರಲೆಳಸಿ ಹಲವು ಕಷ್ಟಗಳನ್ನನುಭವಿಸಿದನು.

## 39. ಯುದ್ಧ.

ನಾಗರಿಕತೆಯುಳ್ಳದೇಶಗಳಲ್ಲಿ ಇಬ್ಬರಿಗೆ ತಾವುತಾವೇ ತೀರ್ಮಾನಮಾಡಿಕೊಳ್ಳಲಾಗದಷ್ಟು ವಿವಾದವುಂಟಾದರೆ ಅವರು ನ್ಯಾಯಸ್ಥಾನಕ್ಕೆ ಹೋಗು-

ವರು. ಅಲ್ಲಿ ನ್ಯಾಯಾಧಿಪತಿ ಆ ಕಲಹವನ್ನು ತೀರಿಸುತ್ತಾನೆ. ಎರಡು ಸೀಮೆಗಳಿಗೆ ಉಂಟಾದ ಕಲಹವನ್ನೂ ಹೀಗೆಯೇ ನ್ಯಾಯರೀತಿಯಲ್ಲಿ ವಿಚಾರಿಸಿ ತೀರ್ಪು ಕೊಡುವ ಪದ್ಧತಿಯನ್ನು ಕೆಲವು ವೇಳೆ ಅನುಸರಿಸುವುದುಂಟು. ಆದರೂ ಒಂದು ಜನಾಂಗಕ್ಕೆ ಇನ್ನೊಂದರೊಡನೆ ವ್ಯಾಜ್ಯವು ಹತ್ತಿದರೆ, ಅದನ್ನು ಯುದ್ಧಮಾಡಿ ತೀರ್ಮಾನಮಾಡಿಕೊಳ್ಳುವುದು ಒಲುವಾಡಿಕೆಯಲ್ಲಿದೆ. ಇಬ್ಬರಿಗೆ ಜಗಳ ಬಿದ್ದಾಗ, ಬಲಿಷ್ಠನಿಗೇ ಜಯವಾಗಬೇಕೆಂಬ ನಿರ್ಬಂಧವೇನೂ ಇಲ್ಲ. ಆದರೆ ಒಂದು ಜನಾಂಗವು ಮತ್ತೊಂದರೊಡನೆ ಜಗಳವಾಡುವಾಗ, ಯಾವುದಕ್ಕೆ ಶಕ್ತಿ ಹೆಚ್ಚೋ ಆದರ ಕಡೆ ಜಯವಾಗುವುದು ಸಹಜವೆಂಬುದನ್ನು ಅಂಗೀಕರಿಸಿ ಯುದ್ಧಕ್ಕೆ ಪ್ರಾರಂಭಿಸುವರು.

ಯುದ್ಧವು ಹಿಂದೆ ಪಾಮರರು ಒರಟುತನದಿಂದ ಮಾಡುತ್ತಿದ್ದ ಕ್ರೂರ ಕೃತ್ಯಗಳಲ್ಲಿ ಒಂದು ಭಯಂಕರವಾದ ಕೃತ್ಯವು. ಇದು ನಮ್ಮ ಕಾಲಕ್ಕೂ ಬಂದಿದೆ. ಇಂಥ ನಾಗರಿಕತೆಯುಳ್ಳ ಕಾಲದಲ್ಲಿಯೂ ಈ ಅಸಹ್ಯವಾದ ಯುದ್ಧವಿರುವುದು ಅತಿಸುಂದರವಾದ ಒಂದು ಚಿತ್ರದ ಮೇಲೆ ಮಶಿಯಲ್ಲಿ ಗೀಚಿದ ಹಾಗಾಗಿದೆ. ಈಗ ಶಾಸ್ತ್ರಪರಿಚಯವು ಹೆಚ್ಚಿದ ಹಾಗೆಲ್ಲಾ ಮನುಷ್ಯರ ಪ್ರಾಣಗಳನ್ನು ಸುಲಭವಾಗಿ ತೆಗೆಯುವುದಕ್ಕನುಕೂಲವಾದ ಆಯುಧಗಳನ್ನೂ ಉಪಾಯಗಳನ್ನೂ ಕಂಡುಹಿಡಿಯಲವಕಾಶವಾಗಿದೆ ಆದರೆ ಕನಿಕರವೂ ಪರಸ್ಪರ ಹಿತಚಿಂತೆಯೂ ನಾಗರಿಕತೆಯೊಡನೆ ಹೆಚ್ಚಿ, ಯುದ್ದದಿಂದುಂಟಾಗುವ ಭೀತಿಯನ್ನು ಸ್ವಲ್ಪಮಟ್ಟಿಗೆ ಕಡಮೆಮಾಡಿವೆ. ಹಿಂದೆ ಅಸ್ಸಿರಿಯಾದೇಶದವರು ಯುದ್ಧದಲ್ಲಿ ಸೆರೆಹಿಡಿದವರನ್ನು ಶೂಲಕ್ಕೆ ಹಾಕಿಸುತ್ತಿದ್ದರು. ಗ್ರೀಕರೂ ರೋಮನ್ ಜನರೂ ಅವರನ್ನು ಗುಲಾಮರನ್ನು ಮಾಡಿಕೊಳ್ಳುತ್ತಿದ್ದರು. ಇನ್ನು ಕೆಲವು ಕ್ರೂರರಾದವರು ಮುತ್ತಿಗೆ ಹಾಕಿದ ಪಟ್ಟಣಗಳಲ್ಲಿದ್ದ ಗಂಡಸರನ್ನೂ ಹೆಂಗಸರನ್ನೂ ಮಕ್ಕಳನ್ನೂ ಕೊಂದು ಆ ಪಟ್ಟಣಗಳನ್ನು ನೆಲಸಮನಾಗಿ ಮಾಡುತ್ತಿದ್ದರು. ಇದಕ್ಕೆ ಘಜನಿಯ ಮಹಮ್ಮದನು ಔರಂಗಜೇಬನು, ಅಲ್ಲಾವುದಿನ್ ಖಿಲ್ಜಿ ಇವರಿಗಿಂತ ಬೇರೆ ಉದಾಹರಣೆಗಳು ಬೇಕೆ? ಇಂಗ್ಲೆಂಡಿನ ಚರಿತ್ರೆಯಲ್ಲಿಯೂ ಇದಕ್ಕೆ ಹಲವು ನಿದರ್ಶನಗಳುಂಟು. ಇಂಥ ಭಯಂಕರವಾದ ಕ್ರೂರಕೃತ್ಯಗಳು ಈಗಿನ ನಾಗರಿಕರ ಯುದ್ಧಗಳಲ್ಲಿ ವಿಶೇಷ

ನಡೆವುದಿಲ್ಲ. ಯುದ್ಧದಿಂದಾಗುವ ಕೆಡಕುಗಳನ್ನು ಕಡಮೆ ಮಾಡಲು ಈಚೆಗೆ ಕೆಲವು ಕರಾರುಗಳನ್ನು ಮಾಡಿಕೊಂಡಿರುವರು: ಇವುಗಳಿಂದ ಯುದ್ಧಕಾಲದಲ್ಲಿ ಒಬ್ಬನಿಗೆ ಸೇರಿದ ಸ್ವತ್ತಿಗೆ ಮತ್ತೊಬ್ಬನು ಹೋಗಕೂಡದು; ಗಾಯದಿಂದ ನರಳುತ್ತಿರುವ ಸಿಪಾಯಿಗಳನ್ನೂ, ಅವರನ್ನು ನೋಡಿಕೊಳ್ಳುತ್ತಿರುವ ವೈದ್ಯರನ್ನೂ ಕೊಲ್ಲಲಾಗದು.

ಇಂಥ ಎಷ್ಟು ನಿಬಂಧನೆಗಳನ್ನು ಮಾಡಿಕೊಂಡರೂ, ಯುದ್ಧವಿರುವವರೆಗೂ ಅದರ ಅಸಂಖ್ಯಾತವಾದ ಕೆಡಕುಗಳು ತಪ್ಪುವುದಿಲ್ಲ. ಕಾಳಗವು ನಡೆಯುತ್ತಿರುವಾಗ,ಯುದ್ಧರಂಗದ ಸುತ್ತಮುತ್ತಲೂ ಅರಾಜಕವಾದ ಸ್ಥಿತಿ ಒಂದು, ಕೇಳುವವರೇ ಇಲ್ಲದೆ, ದುಷ್ಟರಿಗೆ ದಂಡಭಯವು ತಪ್ಪಿ, ಕೊಳ್ಳೆ ಹೊಡೆವವರು ಗುಂಪುಗುಂಪಾಗಿ ನುಗ್ಗಿ ದೇಶವನ್ನೆಲ್ಲಾ ಹಾಳುಮಾಡುವರು. ಯುದ್ಧನಡೆವ ದೇಶದ ಘೋರವಾದಸ್ಥಿತಿಯನ್ನು ವರ್ಣಿಸಲಳವಲ್ಲ. ಜನರೆಲ್ಲರೂ "ಯಾವಾಗ ಏನು ಬರುವುದೋ" ಎಂಬ ಭೀತಿಯಿಂದ ಪ್ರತಿಕ್ಷಣವೂ ಕಳವಳಪಡುವರು. ಅವರವರ ಕಸಬುಗಳನ್ನು ಮಾಡುವುದಕ್ಕೇ ಮನಸ್ಸು ಬರುವುದಿಲ್ಲ ಯಾವ ಕೆಲಸಮಾಡಲೂ ದಿಕ್ಕುತೋರದೆ ಸ್ತಬ್ಧರಾಗಿ,ಪ್ರಾಣಭೀತಿಯಿಂದ ಚಳಿಬಂದವರಂತೆಗಡಗಡನೆ ನಡುಗುವರು. ವ್ಯವಸಾಯ,ವ್ಯಾಪಾರ, ವಿದ್ಯಾಭ್ಯಾಸ,ಕೈಗಾರಿಕೆ ಮೊದಲಾದುವೆಲ್ಲ ನಿಂತುಬಿಡುವುವು. ಹೊರಗಿನಿಂದಲೂ ಸಾಮಾನುಬಾರದೆ ತಿನ್ನುವುದಕ್ಕೆ ಹಿಟ್ಟಿಲ್ಲದೆ ಜನರೆಲ್ಲ ಸಾಯುವುದಕ್ಕೆ ಮೊದಲಾಗುವುದು. "ಕುಂಬಾರನಿಗೆ ವರ್ಷ, ದೊಣ್ಣೆಗೆ ನಿಮಿಷ" ಎಂಬಂತೆ ಸಾವಿರಾರುರೂಪಾಯಿ ಮುಟ್ಟಿಸಿ ವರ್ಷಾಂತರದಿಂದಕಟ್ಟಿದ ಕಟ್ಟಡಗಳನ್ನು ಬಲವಾದ ಫಿರಂಗಿ ಸ್ವಲ್ಪಕಾಲದಲ್ಲಿಯೇ ಉರುಳಿಸಿ ಬಿಡುವುದು. ಯುದ್ಧದಿಂದ ನಷ್ಟವಾಗುವ ಪ್ರಾಣಗಳನ್ನೂ ಹಣವನ್ನೂ ಎಣಿಸಲಾಗುವುದಿಲ್ಲ. ಆಸ್ತಿಯೆಲ್ಲಾ ಸೂರೆಹೋದುದರಿಂದಲೂ, ಕಾಪಾಡುವ ನಾಥರು ಕಾಳಗದಲ್ಲಿ ಮಡಿದುದರಿಂದಲೂ, ಅನೇಕ ಕುಟುಂಬಗಳು ಮುಳುಗಿಹೋಗಿ, ಹೊಟ್ಟೆಗಿಲ್ಲದೆ ಅಲೆಯಬೇಕಾಗಿ ಬರುತ್ತದೆ. ಮೇಲೆ ವಿವರಿಸಿದಂತೆ ಯುದ್ಧದ ಕೆಡಕುಗಳು ಮಂದಟ್ಟಾಗಬೇಕಾದರೆ ನಾಲ್ಕೈದು ವರ್ಷಗಳವರೆಗೂ ಆಫ್ರಿಕಖಂಡದಲ್ಲಿ ನಡೆದ "ಟ್ರಾನ್ಸ್ವಾಲ್ ಯುದ್ಧ"ದ ಚರಿತ್ರೆಯನ್ನೋದಬೇಕು. ಯುದ್ಧ ನಡೆ-

ಯುತ್ತಿದ್ದಾಗ, ಟ್ರಾನ್ಸ್‌ವ್ವಾಲ್ ದೇಶದ ಮತ್ತು ಅದರ ಬೋಯರ್ ಜನರ ಸ್ಥಿತಿಗಳ ಘೋರವಾದ ವರ್ಣನೆಗಳನ್ನು ಆಗಿನ ವೃತ್ತಾಂತಪತ್ರಿಕೆಗಳಲ್ಲಿ ಯಾರುತಾನೆ ಕಣ್ಣೀರು ಸುರಿಸದೆ ಓದುತ್ತಿದ್ದರು ?

ಈಗ ಯೂರೋಪಿನಲ್ಲಿ ಪ್ರತಿಯೊಂದು ಮನೆಯಲ್ಲಿಯೂ ಪ್ರಾಯದವರೆಲ್ಲ ಸೈನ್ಯದಲ್ಲಿ ಯುದ್ಧಕ್ಕೆ ಸಿದ್ಧರಾಗಿರಬೇಕೆಂಬೊಂದು ಕಾನೂನನ್ನು ಮಾಡಿ-ಕೊಂಡಿದ್ದಾರಂತೆ. ಇದರಿಂದ ಯುದ್ಧದ ಹಾನಿಗಳನ್ನು ಹೆಚ್ಚಿಸಿದಂತಾ-ಯಿತು. ಹಾನಿಯನ್ನು ಹೆಚ್ಚಿಸುವ ಈ ಸಂಗತಿಯೇ ಅನೇಕರನ್ನು ಯು-ದ್ಧಕ್ಕೆ ಹೋಗದಂತೆ ಮಾಡಿ ಲೋಕದಲ್ಲಿ ಶಾಂತಿಯನ್ನು ವೃದ್ಧಿಪಡಿಸ-ಬಹುದು. ಯಾವನು ತಾನೆ ಪ್ರಾಣದಮೇಲೆ ದೃಷ್ಟಿಯಿಡದೆ ಸೈನ್ಯಕ್ಕೆಸುಗ್ಗಿ ಹೆದರದೆ ರಣರಂಗದಲ್ಲಿ ಹೋರಾಡುವನು? ಈ ಜ್ಞಾನವು ಚಿರಕಾಲದಿಂದ-ಲೂ ಪ್ರಾಣಹಾನಿಗಾಕರವಾದ ಜನರ ಯುದ್ಧಾಭಿಲಾಷೆಯನ್ನು ಕುಂದಿಸಿ ಲೋಕಕ್ಕೆಲ್ಲ ಕ್ಷೇಮವನ್ನು ಹೆಚ್ಚಿಸಬಹುದು.

## 40. ಅಚ್ಚು ಹಾಕುವುದು.

ಅಚ್ಚು ಹಾಕುವುದನ್ನು ಬಹುಕಾಲದ ಹಿಂದೆ ಕಂಡುಹಿಡಿದಿದ್ದರೂ, ಅದರ ಚರಿತ್ರೆ ವಿಶದವಾಗಿ ತಿಳಿದಿಲ್ಲ. ಯೂರೋಪಿನಲ್ಲಿ ಇದನ್ನು ತಿಳಿವುದಕ್ಕೆ ಮುಂ-ಚೆಯೇ, ಚೀನಾ ಜಪಾನ್ ದೇಶಗಳಲ್ಲಿ ಮರದ ಕೊರಡುಗಳಿಂದಲೂ ಮು-ದ್ರಾಕ್ಷರಗಳಿಂದಲೂ ಅಚ್ಚು ಹಾಕುವುದು ನಡೆಯುತ್ತಿದ್ದಿತೆಂದು ಹೇಳುತ್ತಾರೆ. ಯೂರೋಪಿನಲ್ಲಿ ಮೊಟ್ಟಮೊದಲು ಮರದಮೊದ್ದುಗಳಮೇಲೆ ಅಕ್ಷರಗಳನ್ನು ಕೊರೆದು ಅಚ್ಚು ಹಾಕಿದರು. ವರ್ಣಮಾಲೆಯ ಪ್ರತಿಯೊಂದಕ್ಷರಕ್ಕೂ ಬೇರೆ-ಬೇರೆ ಮುದ್ರಾಕ್ಷರವನ್ನು ಕಲ್ಪಿಸುವವರೆಗೂ, ಅಚ್ಚು ಹಾಕುವುದು ಉಪಯು-ಕ್ತವೂ ಆಶ್ಚರ್ಯಕರವೂ ಆಗಿರಲಿಲ್ಲ. ಹೀಗೆ ಬೇರೆ ಮುದ್ರಾಕ್ಷರಗಳನ್ನು ಕಂಡುಹಿಡಿದ ಮಹಾಪುರುಷನ ಹೆಸರು ಗೊತ್ತಿಲ್ಲ. ಯೂರೋಪಿಗೆ ಸೇರಿ-ದವನಾಗಿ ಅವುಗಳನ್ನು ತಾನೇ ಹೊಸದಾಗಿ ಕಂಡುಹಿಡಿದನೋ, ಅಥವಾ ಚೀನಾ ಜಪಾನ್‌ದೇಶಗಳ ಜನರಿಂದ ಕಲಿತನೋ ಅದೂ ತಿಳಿಯದು. ದೃಢ-ವಾಗಿ ತಿಳಿದಿರತಕ್ಕುದೇನೆಂದರೆ:—ಸ್ಥಳದಿಂದ ಸ್ಥಳಕ್ಕೆ ಸಾಗಿಸಲಾಗುತ್ತಿದ್ದ ಮುದ್ರಾಕ್ಷರಗಳಿಂದ ಅಚ್ಚು ಹಾಕುವುದು ಕ್ರಿ. ಶ. ಹದಿನೈದನೆಯ ಶತಮಾನದ

ಮಧ್ಯಭಾಗದಲ್ಲಿ ಯೂರೋಪಿನಲ್ಲಿ ಆರಂಭಿಸಲ್ಪಟ್ಟು, ಐವತ್ತು ವರ್ಷಗಳೊಳಗೆ ಇಟಲಿ, ಜರ್ಮನಿ, ಫ್ರಾನ್ಸ್, ಇಂಗ್ಲೆಂಡ್ ದೇಶಗಳಲ್ಲೆಲ್ಲಾ ಸಾಮಾನ್ಯ-ವಾಗಿ ಪ್ರಚಾರಕ್ಕೆ ಬಂದಿದ್ದಿತು.

ಈಗ ನಾಗರಿಕತೆಯುಳ್ಳ ದೇಶಗಳಲ್ಲೆಲ್ಲಾ ಅಚ್ಚುಹಾಕುವುದು ಹರಡಿ-ಕೊಂಡಿದೆ. ಇದರಿಂದಾಗಿರುವ ಉಪಯೋಗಗಳು ಅಪರಿಮಿತವಾದುವು. ಇ-ವುಗಳಲ್ಲಿ ಎಲ್ಲಾಗ್ರಂಥಗಳೂ ಅಲ್ಪಕ್ರಯಕ್ಕೆ ಸಿಕ್ಕುವಂತಾದುದು ಬಲುಮು-ಖ್ಯವು. ಕ್ರಿ.ಶ. 15ನೆಯ ಶತಮಾನದ ಮಧ್ಯಭಾಗಕ್ಕೆ ಮುಂಚೆ ಪುಸ್ತಕಗಳನ್ನು ಹೆಚ್ಚಿಸಬೇಕಾಗಿದ್ದರೆ, ಬಹುವರ್ಷಗಳವರೆಗೂ ಶ್ರಮಪಟ್ಟು ಬರೆಯಬೇಕಾ-ಗಿದ್ದಿತು. ಇದರಿಂದಲೂ, ಬರೆದವರು ವಿರಳವಾಗಿದ್ದುದರಿಂದಲೂ ಗ್ರಂಥಗಳ ಪ್ರತಿಗಳೇ ದುರ್ಲಭವಾಗಿದ್ದುವು. ಬರೆಸಬೇಕಾದರೆ ತುಂಬಾ ವೆಚ್ಚ ಆಗು-ತ್ತಿದ್ದಿತು. ಯೂರೋಪಿನಲ್ಲಿ ಮೊದಲು ವೈದಿಕರೇ ಪುಸ್ತಕಗಳನ್ನು ಬರೆಯು-ತ್ತಿದ್ದರು. ಇವರು ಬರೆಯುತ್ತಿದ್ದುವೆಲ್ಲ ಮತಕ್ಕೆ ಸಂಬಂಧಿಸಿದ್ದುವು. ಆದು-ದರಿಂದ ಮುದ್ರಾಯಂತ್ರವು ಬರುವುದಕ್ಕೆ ಮೊದಲು ಯೂರೋಪಿನಲ್ಲಿಯೂ ಪುಸ್ತಕಗಳು ಎಲ್ಲಿಯೋ ಕೆಲವೇ ಇದ್ದುವು; ಅವುಗಳನ್ನು ಬರೆಸುವುದಕ್ಕೂ ಕೊಳ್ಳುವುದಕ್ಕೂ ತುಂಬಾ ಹಣ ಬೇಕಾಗಿದ್ದಿತು; ಇದ್ದ ಪುಸ್ತಕಗಳಲ್ಲಿಯೂ ಮುಕ್ಕಾಲೂ ಮೂರುವೀಸಪಾಲು ಮತವಿಷಯಕವಾಗಿದ್ದುವು. ಇದರಿಂದ ಜನರ ತಿಳಿವಳಿಕೆ ಇದ್ದ ಸ್ಥಿತಿಯಲ್ಲಿಯೇ ಇದ್ದು ಹೆಚ್ಚುವುದಕ್ಕವಕಾಶವೇ ಇರಲಿಲ್ಲ. ಆದರೆ ಅಚ್ಚುಹಾಕುವುದು ಬಂದಮೇಲೆ ಮತವಿಷಯಕವಾದ ಪುಸ್ತಕಗಳೇ ಅಲ್ಲದೆ, ಎಣಿಸಲಾಗದಷ್ಟು ಹಲವು ಬಗೆಯ ಪುಸ್ತಕಗಳು ಪ್ರ-ಕಟಿಸಲ್ಪಟ್ಟುವು. ಇದರಿಂದ ಜನರೆಲ್ಲರೂ ಪುಸ್ತಕಗಳನ್ನೋದಿ ಜ್ಞಾನವನ್ನು ಅಭಿವೃದ್ಧಿಪಡಿಸಿಕೊಂಡರು. "ಬೈಬಲ್" ಎಂಬ ಕ್ರಿಸ್ತರ ವೇದದ ಅಚ್ಚಾದ ಪ್ರತಿಗಳು ಸಾಮಾನ್ಯರಿಗೆಲ್ಲ ಸಿಕ್ಕಲು, ಅದನ್ನು ತಾವೇ ಓದಿ ಅರ್ಥಮಾಡಿ ಕೊಂಡು, ಅದುವರೆಗೂ, ರೋಮನ್ ಕ್ಯಾಥಲಿಕ್ ಜನರು ಹೇಳಿಕೊಡು-ತ್ತಿದ್ದರ್ಥವನ್ನು ನಿರಾಕರಿಸುತ್ತ ಬಂದರು. ಇದರಿಂದ ಯೂರೋಪಿನಲ್ಲಿ ಮತವಿಚಾರದಲ್ಲಿ ಬಹಳ ಬದಲಾವಣೆಗಳು ನಡೆದುವು.

ಅಚ್ಚುಹಾಕುವುದು ಯೂರೋಪಿನಲ್ಲಿ ಮತವಿಷಯಕವಾದ ಜ್ಞಾನವನ್ನು

ಮಾತ್ರ ಮುಂದಕ್ಕೆ ತರಲಿಲ್ಲ. 15ನೆಯ ಶತಮಾನದಿಂದೀಚೆಗೆ ಅನೇಕ ಶಾಸ್ತ್ರಗಳೂ ಅಭಿವೃದ್ಧಿಗೆಬಂದಿವೆ. ಖಿಲವಾಗಿದ್ದ ಹಳೆಯ ಶಾಸ್ತ್ರಗಳು ಜೀರ್ಣೋದ್ಧಾರಮಾಡಲ್ಪಟ್ಟುವಲ್ಲದೆ, ಅನೇಕ ಹೊಸ ಶಾಸ್ತ್ರಗಳು ಹೊರಪಟ್ಟಿವೆ. ಈಗ ಯೂರೋಪಿನಲ್ಲಿ ಅಚ್ಚುಹಾಕಿರುವ ಪುಸ್ತಕಗಳನ್ನೆಲ್ಲಾ ಒಟ್ಟುಗೂಡಿದರೆ, ಪ್ರಪಂಚದಲ್ಲೆಲ್ಲ ಅತ್ಯಂತ ವಿಶಾಲವಾದ ಕಟ್ಟಡವನ್ನೂ ಹಿಡಿಸುವುದಿಲ್ಲವಂತೆ. ಇದರಿಂದಅಚ್ಚುಹಾಕುವುದು ಮೊದಲಾದಂದಿನಿಂದ ಎಷ್ಟುವಿಷಯಗಳು ಪ್ರಕಟಿಸಲ್ಪಟ್ಟು ಜ್ಞಾನಾಭಿವೃದ್ಧಿಗೆ ಕಾರಣವಾಗಿದೆಯೋ ಊಹಿಸಬಹುದು.

ಅಚ್ಚುಹಾಕುವುದರ ಪ್ರಯೋಜನಗಳನ್ನು ಯೂರೋಪಿನವರೇ ಅನುಭವಿಸುತ್ತಿಲ್ಲ. ಅವರು ಹೊಕ್ಕ ಸೀಮೆಗಳಲ್ಲೆಲ್ಲ ಇದರ ಉಪಯೋಗಗಳುಂಟಾಗಿವೆ. ಹಿಂದೂದೇಶಕ್ಕೆ ಅಚ್ಚುಹಾಕುವುದು ಬಂದು ಐವತ್ತು ವರ್ಷಗಳಾಗಿದ್ದರೂ, ನಮಗೆಲ್ಲ ಬಲು ಉಪಕಾರವಾಗಿದೆ. ಪೂರ್ವದಲ್ಲಿ ಎಕ್ಕದೆಲೆ, ಓಲೆಗರಿ ಮುಂತಾದವುಗಳಮೇಲೆ ಬರೆಯಬೇಕಾಗಿದ್ದುದರಿಂದ ಒಂದು ಪುಸ್ತಕವಾಗಬೇಕಾಗಿದ್ದರೂ, ವರ್ಷಾಂತರಗಳು ಶ್ರಮಪಟ್ಟರೂ ಮುಗಿಯುತ್ತಿರಲಿಲ್ಲ. ಹೀಗೆ ಕಷ್ಟಪಟ್ಟು ಬರೆಯುತ್ತಿದ್ದುದರಿಂದ, ಪುಸ್ತಕಗಳನ್ನು ಜನರು ತಮ್ಮಪ್ರಾಣಕ್ಕಿಂತಲೂ ಹೆಚ್ಚಾಗಿ ಭಾವಿಸಿ,ಎರವಲು ಕೊಡುವುದೂ ಕಷ್ಟವಾಗಿದ್ದಿತು. ಎಲ್ಲಿಯೋ ಕೆಲವು ವೈದಿಕ ಬ್ರಾಹ್ಮಣರು ಮಾತ್ರ ಗ್ರಂಥಗಳನ್ನು ಶ್ರಮಪಟ್ಟು ಬರೆದೋದಿ ಬುದ್ಧಿವಂತರಾಗಿದ್ದರು. ಅಚ್ಚುಹಾಕುವುದು ಬಂದ ಮೇಲೆ ಖಿಲವಾಗಿದ್ದ ಪ್ರಾಚೀನ ಗ್ರಂಥಗಳು ಮುದ್ರಿಸಿ ಉಜ್ಜೀವಿಸಲ್ಪಟ್ಟು, ಎಲ್ಲಾ ಜಾತಿಯವರೂ ಓದಿ ವಿದ್ಯಾವಂತರಾಗಲವಕಾಶವಾಯಿತು. ಲೋಕದಲ್ಲಿ ಛಾಪಿಸುತ್ತಿರುವ ಕೋಟ್ಯಂತರ ಪುಸ್ತಕಗಳೊಡನೆ ಪ್ರತಿದಿನವೂ ಹೊರಡುವ ಲಕ್ಷಾಂತರ ವೃತ್ತಾಂತಪತ್ರಿಕೆಗಳನ್ನು ಕೂಡಿಸಿದರೆ, ಲೋಕದಲ್ಲೆಲ್ಲ ಜ್ಞಾನವನ್ನು ಹರಡುವುದಕ್ಕೆ ಅಚ್ಚುಹಾಕುವುದು ಎಷ್ಟು ಸಾಧಕವಾಗಿದೆಯೆಂಬುದು ವ್ಯಕ್ತವಾಗಿ ಗೊತ್ತಾಗದಿರಲಾಗದು.

## 41. ಪರೀಕ್ಷೆಗಳು.

ಕಾಲೇಜುಗಳಲ್ಲಿಯೂ ಸ್ಕೂಲುಗಳಲ್ಲಿಯೂ ಚೆನ್ನಾಗಿ ಓದುವ ವಿದ್ಯಾರ್ಥಿಗಳನ್ನಾರಿಸಿಕೊಂಡು, ಅವರಿಗೆಬಹುಮಾನಗಳನ್ನೂ ವೇತನಗಳನ್ನೂ ಕೊಟ್ಟು

ಪ್ರೋತ್ಸಾಹಪಡಿಸುವುದಕ್ಕಾಗಿ ಪರೀಕ್ಷೆಗಳನ್ನು ಮಾಡುವರು. ಪರೀಕ್ಷೆಗಳು ವಿದ್ಯಾರ್ಥಿಗಳನ್ನು ಕಷ್ಟಪಟ್ಟೋದುವಂತೆ ಮಾಡುವುವು. ಇವುಗಳಿಂದ ಸ್ವಭಾವವಾಗಿ ಮನಸ್ಸಿಟ್ಟು ಚೆನ್ನಾಗಿ ಓದದಿರುವ ಹುಡುಗರೂ,ತವ್ಮೊಡನೆ ಓದುತ್ತಿರುವವರನ್ನು ಪರೀಕ್ಷೆಗಳಲ್ಲಿ ಮೀರಿಸಬೇಕೆಂಬ ಕುತೂಹಲವುಳ್ಳವ-ರಾಗಿ ಆಸ್ಥೆಯಿಂದ ಓದುವಹಾಗಾಗುವುದು;ಅವರು ಆಟಪಾಟಗಳಲ್ಲಿಬಹಳ ಹೊತ್ತನ್ನು ಕಳೆಯಲಾರರು. ಕೆಲವರು ಕೇವಲ ಜ್ಞಾನಸಂಪಾದನೆಗಾಗಿ ಓದುವರು. ಮತ್ತೆ ಕೆಲವರು ವಿದ್ವಾಂಸರಾಗಿ ತಮ್ಮ ಮೇಲೆ ಪೈಪೋಟಿಗೆ ಬಂದವರನ್ನು ವಾದದಲ್ಲಿ ಜಯಿಸಿ ಪ್ರಸಿದ್ಧರಾಗಬೇಕೆಂದು ವ್ಯಾಸಂಗಮಾಡುವರು. ಸಾಮಾನ್ಯವಾಗಿ ಈಗಿನ ಚಿಕ್ಕಚಿಕ್ಕ ವಿದ್ಯಾರ್ಥಿಗಳಾದರೋ ಪರೀಕ್ಷೆಗಳಲ್ಲಿ ತೇರ್ಗಡೆಯನ್ನು ಹೊಂದಬೇಕೆಂಬ ಕೋರಿಕೆಯಿಂದೋದುವರು. ದೊಡ್ಡವರಾಗಿ ಸಾಂಸಾರಿಕರಾದಾಗ ಸರಿಯಾಗಿ ಬಾಳಬೇಕಾದರೆ ದೊಡ್ಡದೊಡ್ಡ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವುದಾವಶ್ಯಕವೆಂದು ಈಗಿನ ವಿದ್ಯಾರ್ಥಿಗ-ಳಿಗೆ ತೋರಿದೆ ದೊಡ್ಡ ಅಧಿಕಾರಗಳು ಸಿಕ್ಕುವಂತೆ ಉತ್ತಮವಾದ ತರಗತಿ-ಯಲ್ಲಿ ತೇರ್ಗಡೆಯಾಗುವುದು ಕೆಲವರಿಗೆ ಅಸಾಧ್ಯವಾಗಿರಬಹುದು; ಇಂಥವರು ಸಾಧಾರಣವಾದ ತರಗತಿಯಲ್ಲಿಯಾದರೂ ಒರುವುದಕ್ಕೆ ಶ್ರಮಪಟ್ಟೋದುವರು. ಹೀಗೆ ಪರೀಕ್ಷೆಗಳಿಂದ ವಿದ್ಯಾವ್ಯಾಸಂಗಕ್ಕೆ ಬಹಳ ಪ್ರೋತ್ಸಾಹವುಂಟು.

ಪರೀಕ್ಷೆಗಳಿಂದ ಕೆಲವು ಕೆಡಕುಗಳೂ ಆಗುವುದುಂಟು. ಕೆಲವರಿಗೆ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವ ಆಸೆ ಹೆಚ್ಚಿ, ಅವರು ಹಗಲೂ ಇರುಳೂ ವಿರಾಮವಿಲ್ಲದೆ ಓದುವಂತಾಗುವುದು;ಇದರಿಂದ ಅವರ ಆರೋಗ್ಯಭಾಗ್ಯ-ಕ್ಕೆ ಕುಂದು ಬರುವುದು. ಈಗಿನ ಕಾಲದಲ್ಲಿ ಅನೇಕರಿಗೆ ಪರೀಕ್ಷೆಗಳಲ್ಲಿ ತೇ-ರ್ಗಡೆ ಹೊಂದಿದ ಹೊರತು ಜೀವನೋಪಾಯಕ್ಕೆ ಮಾರ್ಗವಿಲ್ಲದಿರುವುದ-ರಿಂದ ಎಡೆಬಿಡದೆ ಪುಸ್ತಕಗಳನ್ನೋದಿ ತೇರ್ಗಡೆಯಾಗಬೇಕೆಂಬ ಹುಚ್ಚು ಎಲ್ಲರಿಗೂ ಹಿಡಿದಿದೆ. ಇದರಿಂದ ಹಲವರು ಚಿಕ್ಕವಯಸ್ಸಿನಲ್ಲಿಯೇ ಆರೋ-ಗ್ಯವನ್ನು ಹಾಳುಮಾಡಿಕೊಂಡು, ನಿರ್ಬಲರಾಗಿ, ದೃಷ್ಟಿಪಾಟವಶೂನ್ಯರಾಗಿರುವುದನ್ನು ನಾವು ನೋಡುತ್ತಲೇ ಇದ್ದೇವೆ. ಪರೀಕ್ಷೆಗಳಲ್ಲಿಜಯಿಸಬೇಕೆಂಬಾತುರದಿಂದ, ಹಲುವಂದಿ ವಿದ್ಯಾರ್ಥಿಗಳು ತಾವು ಓದುವುದನ್ನು ಮನಸ್ಸಿನಲ್ಲಿ ಚೆನ್ನಾಗಿ ಪರ್ಯಾಲೋಚಿಸಿ ಅರ್ಥವನ್ನು ಗ್ರಹಿಸುವುದಕ್ಕೆಬದಲುಪುಸ್ತ-ಕಗಳನ್ನು ಉರುಹಾಕುತ್ತಾರೆ. ಇದರಿಂದ ಅವರ ಮಿದುಳಿಗೆ ಪರ್ಯಾಲೋ-

ಜನಾಶಕ್ತಿ ಕುಂದುವುದು, ಕೆಲವರಸತ್ಸ್ವಭಾವವೂ ಪರೀಕ್ಷೆಗಳಿಂದ ಕೆಡಬಹು-ದು. ಹುಡುಗರು ಪರೀಕ್ಷೆಗಳಲ್ಲಿ ಜತೆಯವರನ್ನು ವಿಾರಿಸಬೇಕೆಂದು ಹುರುಡಿನ ಮೇಲೆ ಓದುವುದರಿಂದ, ತಮಗೆದೊರೆತ ಒಳ್ಳೆಯ ಪುಸ್ತಕಗಳನ್ನೂ ತೇರ್ಗಡೆಗೆ ಬೇಕಾದ ಇತರ ಸಾಧನಗಳನ್ನೂ ಜತೆಯವರಿಗೆ ಹೇಳದೆ ತಾವೇ ಬಳಸಿಕೊಂಡು ಸ್ವಾರ್ಥಪರರಾಗುವುದುಂಟು. ಪರೀಕ್ಷೆಗಳಲ್ಲಿ ಗೆಲ್ಲುವ ದುರಾಶೆ ಹೆಚ್ಚಿ, ಕೆಲ-ವರು ಪ್ರಶ್ನಪತ್ರಿಕೆಗಳಿಗೆ ಉತ್ತರಗಳನ್ನು ಬರೆವಾಗ ಕಳ್ಳದಾರಿಗಳನ್ನವಲಂಬಿಸಿ ತಪ್ಪಿತವನ್ನು ಮಾಡಿ ಶಿಕ್ಷೆಗೆ ಗುರಿಯಾಗುವರು. ಇಂಥಕೆಟ್ಟ ಕೆಲಸಗಳನ್ನು ಹುಡುಗರು ಮಾಡದಂತೆ ಉಪಾಧ್ಯಾಯರೂ ತಾಯ್ತಂದೆಗಳೂ ನೋಡಿಕೊಳ್ಳಬೇಕು.

ಸರ್ಕಾರದ ದೊಡ್ಡ ಹುದ್ದೆಗಳಿಗೆ ಅರ್ಹರನ್ನು ಆರಿಸಿಕೊಳ್ಳುವುದಕ್ಕಾಗಿ-ಯೂ ಪರೀಕ್ಷೆಗಳನ್ನಿಡುವುದುಂಟು. ಆದರೆ “ಪರೀಕ್ಷಾಗ್ರಂಥಗಳನ್ನು ಗಟ್ಟಿ-ಮಾಡಿ ತೇರ್ಗಡೆಯಾದವರು ಸರ್ಕಾರದ ಕೆಲಸಗಳನ್ನು ಚೆನ್ನಾಗಿ ಮಾಡುವು-ದರಲ್ಲಿ ಸಮರ್ಥರಾಗಿರುವರೆಂಬುದು ಹೇಗೆ?” ಎಂದು ಕೇಳಬಹುದು. ಪರೀ-ಕ್ಷೆಗಳಲ್ಲಿ ಒಳ್ಳೆಯ ಜಯವನ್ನು ಹೊಂದಿದವರಲ್ಲಿ ಕೆಲವರು ಸರ್ಕಾರದ ಕೆಲಸಗಳನ್ನು ಮಾಡಲು ಸಮರ್ಥರಲ್ಲದೆ ಹೋಗಬಹುದು. ಎಲ್ಲರೂ ಹೀಗಾಗಲಾ-ರರು. ಪ್ರಾಯಶಃ ತೇರ್ಗಡೆಯಾದವರಲ್ಲಿ ಮುಕ್ಕಾಲೂ ಮೂರು ವೀಸಪಾಲು ಜನರು ತೇರ್ಗಡೆಯಾಗದಿರುವರಿಗಿಂತ ಗಟ್ಟಿಗರಾಗಿರುತ್ತಾರೆನ್ನುವುದರಲ್ಲಿ ಸಂಶಯವಿಲ್ಲ. ನಾನಾಭಾಷೆಗಳಲ್ಲಿರುವ ಗ್ರಂಥಗಳನ್ನೂ ಶಾಸ್ತ್ರಗಳನ್ನೂ ಓದಿ ತಿಳಿದುಕೊಂಡಿರುವವರು ಸಾಮಾನ್ಯವಾಗಿ ಬೇರೆಯಾವ ಕೆಲಸವನ್ನು ಕೊಟ್ಟರೂ ಚೆನ್ನಾಗಿಯೇ ಮಾಡುವರು. ಕಠಿನವಾದ ಪರೀಕ್ಷಾಗ್ರಂಥಗಳನ್ನು ಮನಸ್ಸಿಟ್ಟು ಓದಿ ಜ್ಞಾನವನ್ನು ಸಂಪಾದಿಸುವುದು. ಸರ್ಕಾರದ ಹುದ್ದೆಗೆಬೇಕಾದ ಬುದ್ಧಿಚಾತುರ್ಯವನ್ನೂ, ಬೇಸರುಪಡದೆ ಕೆಲಸಮಾಡುವ ಸ್ವಭಾವವನ್ನೂ ತಾಳ್ಮೆಯನ್ನೂ ತೋರಿಸುತ್ತದೆ. ಆದುದರಿಂದ ಪರೀಕ್ಷೆಗಳಲ್ಲಿ ಗಟ್ಟಿಗರೇ ಸಾಮಾನ್ಯವಾಗಿ ಮುಂದಕ್ಕೆ ಬರುವರು. ಕೆಲಸಗಳಿಗೆ ಜನರನ್ನು ಆರಿಸು-ವುದಕ್ಕೆ ಬೇರೆ ಉತ್ತಮವಾದುಪಾಯವಾವುದೂ ಇನ್ನೂ ತೋರಿಲ್ಲ; ತೋರುವವರೆಗೂ ಪರೀಕ್ಷೆಗಳನ್ನೇ ಇಟ್ಟುಕೊಳ್ಳಬೇಕಾಗಿದೆ.

## 42. ರಜಾ ದಿನಗಳು.

ವಿರಾಮವಿಲ್ಲದೆಯಾವಾಗಲೂ ದುಡಿಯುತ್ತಿರುವುದು ಎಲ್ಲರಿಗೂ ಅಸಾಧ್ಯ.

ಯಾವ ವಿಧವಾದ ಕೆಲಸವನ್ನೇ ಆಗಲಿ ಕಷ್ಟಪಟ್ಟು ಮಾಡಿದ ಮೇಲೆ ವಿಶ್ರಾಂತಿ ಬೇಕು. ಶ್ರಮಕ್ಕೆ ತಕ್ಕ ಫಲವು ವಿಶ್ರಾಂತಿ. ಕೆಲಸಮಾಡುವ ದಿನಗಳಲ್ಲಿ ಪ್ರತಿದಿನವೂ ಒಂದೆರಡು ಘಂಟೆಯ ಕಾಲ ವಿರಾಮ ಬೇಕಾಗಿರುವುದಲ್ಲದೆ, ಅವು ಮುಗಿದ ಮೇಲೆ ಪ್ರತಿದಿನವೂ ವಿನೋದದಿಂದ ಕಾಲವನ್ನು ಕಳೆಯಲು ಅದಕ್ಕಿಂತಲೂ ಹೆಚ್ಚು ವಿರಾಮ ಬೇಕು. ಕೆಲಸಮಾಡುವ ಕಾಲವು ಹೆಚ್ಚಿ-ದಷ್ಟೂ ಫಲವೂ ಹೆಚ್ಚುವುದೆಂದು ಕೆಲವರು ತಿಳಿದಿರುವರು. ಯಾವ ಬಗೆಯ ಕೆಲಸದ ವಿಷಯದಲ್ಲಿಯೂ ಇದು ಸರಿಯಲ್ಲ; ಬುದ್ಧಿಕಾರ್ಯದ ವಿಷಯ-ದಲ್ಲಂತು ಬರೀ ಸುಳ್ಳು. ಒಬ್ಬ ವಿದ್ಯಾರ್ಥಿ ಸ್ಕೂಲಿದ್ದ ದಿನಗಳಲ್ಲಿ ಚೆನ್ನಾಗಿ ಕಷ್ಟಪಟ್ಟೋದುತ್ತಿದ್ದು, ರಜಾ ಬಂದಾಗ ಮಿದುಳಿಗೆ ವಿಶೇಷ ಕೆಲಸಕೊಡದೆ ವಿನೋದವಾಗಿ ಹೊತ್ತು ಕಳೆಯಬಹುದು. ಮತ್ತೊಬ್ಬನು ಆ ವರ್ಷದಲ್ಲಿ ಒಂದು ದಿನವನ್ನೂ ಬಿಡದೆ ಮೊದಲಿಂದ ಕೊನೆವರೆಗೂ ಒಂದೇ ವಿಧವಾಗಿ ದುಡಿಯ ಬಹುದು. ಇವರಿಬ್ಬರಲ್ಲಿ ಮೊದಲನೆಯವನೇ ಹೆಚ್ಚಾಗಿ ಕಲಿಯತಕ್ಕವನು. ಅವನು ಎರಡನೆಯವನಷ್ಟು ಹೊತ್ತು ಓದದಿದ್ದರೂ, ಆಗಾಗ್ಗೆ ಹೊಂದುತ್ತಿದ್ದ ವಿಶ್ರಾಂತಿಯಿಂದ ಅವನಿಗೆ ಉಲ್ಲಾಸವುಂಟಾಗಿ, ಅವನ ಕೆಲಸವು ತುಂಬಾ ಫಲದಾಯಕವಾಗುವುದು. ಇದರಿಂದ ಕೆಲಸವು ಪರಿಮಾಣದಲ್ಲಿ ಕಡಮೆಯಾ-ದುದಕ್ಕೂ, ಫಲಕಾರಿಯಾಗುವುದರಲ್ಲಿ ಹೆಚ್ಚಿದುದಕ್ಕೂ ಸರಿಹೋಗುತ್ತದೆ.

ಈಗಿನ ಕಾಲದಲ್ಲಿ ಪರೀಕ್ಷೆಗಳಲ್ಲಿ ತೇರ್ಗಡೆಯನ್ನು ಹೊಂದಬೇಕೆಂದಿರು-ವವರು ವರ್ಷಾಂತರಗಳವರೆಗೂ ಒಟ್ಟಿಗೆ ಓದಬೇಕಾಗಿದೆ. ಇಂಥವರಿಗೆ ರಜಾ-ದಿನಗಳು ತುಂಬಾ ಆವಶ್ಯಕ. ಒಬ್ಬನು ಒಂದು ವರ್ಷವೆಲ್ಲ ಎಡೆಬಿಡದೆ ಓದು-ತ್ತಿದ್ದರೆ, ಮುಂದಲವರ್ಷದಲ್ಲಿ ಪ್ರಯೋಜನವಾಗುವಂತೆ ಕೆಲಸಮಾಡಲು, ಅವನ ಮಿದುಳಿಗೆ ಶಕ್ತಿಯೇ ಇರುವುದಿಲ್ಲ. ಹೇಗೆಂದರೆ ವಿದ್ಯಾರ್ಥಿಗಳು ವರ್ಷಾಂತರಗಳ ವರೆಗೆ ವ್ಯಾಸಂಗಮಾಡಿ ಪರೀಕ್ಷೆಗಳಲ್ಲಿ ಮೇಲ್ಮೆಯಿಂದ ತೇರ್ಗಡೆಯನ್ನು ಹೊಂದಬಹುದು. ಆದರೆ ಆಗಾಗ್ಗೆ ಬಂದ ರಜಾದಲ್ಲಿ, ಅವರು ತಮ್ಮ ಮನಸ್ಸುಗಳಿಗೆ ವಿಶ್ರಾಂತಿಕೊಡದೆ ಹೋಗಿದ್ದರೆ, ಸ್ವತಂತ್ರವಾಗಿ ಬಾಳುವಾಗ ಅವರ ಮಿದುಳುಗಳು ಬಲುದಣಿದು ಯಾವ ಕೆಲಸವನ್ನು ಮಾ-ಡುವುದಕ್ಕೂ ಓಡದೆ, ಅವರು ನಿರ್ಬಲರೂ ರೋಗಪೀಡಿತರೂ ಆಗುವರು. ಮತ್ತೆ ಕೆಲವರು ಪರೀಕ್ಷೆಗಳಲ್ಲಿ ಕೀಳುತರಗತಿಗಳಲ್ಲಿ ಉತ್ತೀರ್ಣರಾಗಿರಬಹುದು ಆದರೂ ಇವರು ಮಿದುಳಿಗೆ ದಣಿವಷ್ಟು ಕೆಲಸಕೊಡದೆ, ಬಂದ ರಜಾವನ್ನು

ಸರಿಯಾಗಿ ಉಪಯೋಗಿಸಿಕೊಂಡಿದ್ದರೆ, ದೇಹದಾರ್ಢ್ಯವೂ ಬುದ್ಧಿಶಕ್ತಿಯೂ ಉಳ್ಳವರಾಗಿ ಮೇಲುತರಗತಿಯವರನ್ನೂ ಹಲವು ಬಗೆಗಳಲ್ಲಿ ಮೀರಿಸುವರು.

ರಜಾದಿನಗಳು ನಮ್ಮ ಜೀವಮಾನವನ್ನು ಹೆಚ್ಚಿಸಲು ಸಹಕಾರಿಯಾಗುತ್ತವೆ. ‟ಬೇಟೆಯಲ್ಲಿ ಕಳೆದ ಕಾಲವನ್ನು ನಮ್ಮ ಜೀವಮಾನದ ಜತೆಯಲ್ಲಿ ಗಣಿಸಬಾರದು.'' ಎಂಬುದಾಗಿ ಒಂದು ಅರಾಬಿದೇಶದ ಗಾದೆ ಹೇಳುತ್ತದೆ. ಬೇಟೆಯಾಡುವುದರಲ್ಲಿ ಕಳೆದಷ್ಟು ಕಾಲದಿಂದ ನಮ್ಮ ಜೀವಮಾನವು ಹೆಚ್ಚುವುದೆಂದು ಅದರ ತಾತ್ಪರ್ಯವು. ರಜಾಕಾಲವನ್ನು ಪಯೋಗಿಸಿಕೊಳ್ಳತಕ್ಕ ಎಲ್ಲಾ ರೀತಿಗಳ ವಿಚಾರದಲ್ಲಿಯೂ ಇದೇ ಮಾತನ್ನು ಹೇಳಬಹುದು. ಕೆಲಸವಾದಮೇಲೆ ತಪ್ಪದೆ ವಿಶ್ರಾಂತಿಯನ್ನು ತೆಗೆದುಕೊಳ್ಳುವ ಪದ್ಧತಿಯಿರುವವನ ಜೀವಮಾನವು ಹೆಚ್ಚುವುದು. ಇಂಥವನು ಮಾಡಿದುದೆಲ್ಲ ಚೆನ್ನಾಗಿರುತ್ತದೆ. ಇವನು ಬಹುಕಾಲ ಬದುಕುವುದರಿಂದ ಕೆಲಸದ ಪರಿಮಾಣವೂ ಹೆಚ್ಚುವುದು.

ಇದರಿಂದ ರಜಾ ಬಂದರೆ ಸೋಮಾರಿತನದಿಂದ ವೇಳೆಯನ್ನು ವ್ಯರ್ಥವಾಗಿ ಕಳೆಯಬೇಕೆಂದಲ್ಲ. ಕೆಲವರು ರಜಾದಿನಗಳಲ್ಲಿ ಮೂರು ಹೊತ್ತೂ ಇಸ್ಪೀಟು ಮುಂತಾದುವನ್ನಾಡುವುದರಲ್ಲಿಯೇ ಇದ್ದುಬಿಡುವರು. ಇದು ಸರಿಯಲ್ಲ. ರಜಾದಲ್ಲಿ ವಿದ್ಯಾರ್ಥಿಗಳು ಮನಸ್ಸಿಗೆ ತುಂಬಾ ವಿಶ್ರಾಂತಿಯನ್ನು ಕೊಡಬೇಕಲ್ಲದೆ, ಸ್ಕೂಲಿನಲ್ಲಿ ಕಲಿತ ವಿದ್ಯೆಯನ್ನು ಸರಿಯಾದ ರೀತಿಯಲ್ಲಿ ಪರಿಪೋಷಿಸಿಕೊಳ್ಳಬೇಕು ಇದಕ್ಕಾಗಿ ಹೃದ್ಯಗಳಾದ ಕಾವ್ಯಗಳನ್ನೋದಬಹುದು; ಮಿತ್ರರೊಡಗೂಡಿ ಸಂಚಾರಹೊರಟು ಪ್ರಾಣಿ, ಗಿಡ ಇವುಗಳಲ್ಲಿ ಮಾದರಿಗಳನ್ನು ಪರೀಕ್ಷಿಸತೊಡಗಬಹುದು; ದೊಡ್ಡ ಪಟ್ಟಣಗಳಲ್ಲಿರುವವರು ಸರ್ವವಸ್ತುಪ್ರದರ್ಶನಶಾಲೆಗಳಲ್ಲಿ ಹಲವು ಬಗೆಯ ಪ್ರಾಣಿಗಳೇ ಮೊದಲಾದ ವಸ್ತುಗಳನ್ನು ಸಾವಧಾನವಾಗಿ ಪರೀಕ್ಷಿಸಿನೋಡಬಹುದು; ದೇಶಾಟನೆಮಾಡಿ ಬಗೆಬಗೆಯ ಜನರ ಸ್ವಭಾವಗಳನ್ನೂ ನಡತೆಗಳನ್ನೂ ಪರಿಶೀಲಿಸಿಕೊಂಡು ಒಂದು ತಮ್ಮ ಲೋಕವ್ಯವಹಾರಜ್ಞಾನವನ್ನು ಹೆಚ್ಚಿಸಿಕೊಳ್ಳಬಹುದು. ಈ ಕಾರ್ಯಗಳೆಲ್ಲ ವಿದ್ಯಾಭ್ಯಾಸಕ್ಕೆ ಅಂಗಗಳೇ. ರಜಾದಿನಗಳಲ್ಲಿ ವ್ಯಾಯಾಮಕ್ಕೆ ವಿಶೇಷಕಾಲವನ್ನು ಕೊಡಬೇಕು. ಅಂಗಸಾಧನೆಯನ್ನು ಮಾಡಿ, ಆರೋಗ್ಯವನ್ನೂ ಬಲವನ್ನೂ ಹೆಚ್ಚಿಸಿಕೊಂಡು, ರಜಾ ಮುಗಿದಮೇಲೆ ಮೊದಲಿನಂತೆ ಹರ್ಷದೊಡನೆ ಚೆನ್ನಾಗಿ ಕೆಲಸಮಾಡಲು ತಕ್ಕ ಪುಷ್ಟಿಯನ್ನು ಸಂಪಾದಿಸಿಕೊಳ್ಳುವುದು.

## 43. ಮಳೆಯ ಉಪಯೋಗಗಳು.

ಮನುಷ್ಯರ ಆರೋಗ್ಯಕ್ಕೂ ಅಭಿವೃದ್ಧಿಗೂ ಒಳ್ಳೆಯ ಆಹಾರವಿರಲೇ-ಬೇಕು. ಹಾಗೆಯೇ ಪ್ರತಿಯೊಂದು ದೇಶದ ಆರೋಗ್ಯಕ್ಕೂ ಏಳಿಗೆಗೂ ಬಿಸಿಲೂ ಮಳೆಯೂ ಆವಶ್ಯಕವು. ವರ್ಷದ ಮೊದಲಿನಿಂದ ಬಿಸಿಲು ಕಾಯದಿರುವ ದೇಶವಾವುದೂ ಇಲ್ಲ. ಈಜಿಪ್ಟ್ ಸೀಮೆ ಹೊರತು ಮಳೆಯಿಲ್ಲದೆ ಏಳಿಗೆಯಲ್ಲಿ-ರುವ ಸೀಮೆಯಾವುದೂ ಇಲ್ಲ. ಈ ವಿಚಿತ್ರದೇಶದಲ್ಲಿ ಮಳೆಬೀಳುವುದಪೂ-ರ್ವವಾದರೂ, ಯೋಚಿಸಿನೋಡಿದರೆ, ಇದರೇಳಿಗೆಗೂ ಮಳೆಯೇ ಕಾರಣ. ಮಧ್ಯ ಆಫ್ರಿಕದಲ್ಲಿ ಬಿದ್ದ ನೀರೆಲ್ಲ ಒಟ್ಟಾಗಿ ನೈಲ್ ನದಿಗೆ ಬಂದು ಸೇರಿ ಈಜಿಪ್ಟ್ ದೇಶವೆಲ್ಲ ಅದರಿಂದ ನೀರಾವರಿಯಾಗಿದೆ. ಮಳೆ ಹೆಚ್ಚಾಗಿ ಬೀಳುವ ಕಡೆ ಬಿಸಿಲು ಅಪೂರ್ವವಾದುದರಿಂದ, ಬಿಸಿಲನ್ನು ಅಲ್ಲಿ ಬಲು ಆದರದಿಂದ ಕಾಣುವರು. ಬಿಸಿಲು ಬಹಳ ಹೊತ್ತು ಬಿಡದೆ ಕಾಯುವೆಡೆ ಮಳೆಯನ್ನು ಕಂಡರೆ ತುಂಬಾ ಪ್ರೀತಿಯಿರುವುದು ಒಬ್ಬ ಪಾರ್ಶಿದೇಶದ ದೊರೆ, ಸೊಗಸಾದ ಒಂದರಮನೆ ಯನ್ನು ಕಟ್ಟಿಸಿ, ಅದರ ಬೆಲೆಯೇನೆಂದು ಒಬ್ಬ ಫಕೀರನನ್ನು ಕೇಳಿದನು. ಅದ-ಕ್ಕವನು "ಒಂದು ದಿನದಲ್ಲಾದ ಮಳೆಯ ಬೆಲೆ'' ಯೆಂದನು. ಫಕೀರನು ಒಂದು ದಿನ ಬಿದ್ದ ಮಳೆ ಬಲುಬೆಲೆಬಾಳುವುದೆಂದು ತಿಳಿದಿದ್ದನು. ಹಿಂದೂದೇಶದಲ್ಲಿ ವರ್ಷದಲ್ಲೆಲ್ಲಾ ಬಿಸಿಲು ಚೆನ್ನಾಗಿ ಕಾಯುವುದು. ಸುಮಾರು ಎಂಟುತಿಂಗಳವರೆಗೂ ಎಡೆಬಿಡದೆ ಕಾಯುವ ಬಿಸಿಲಿಗೆ ತಾಳಲಾರದೆ ನಮ್ಮ ದೇಶದಲ್ಲಿ ಜನರು ಮಳೆಗೆ ಹಂಬಲಿಸುವುದೇನೂ ಆಶ್ಚರ್ಯವಲ್ಲ. ಮುಂಗಾರುಮಳೆ ಬರುವುದು ಸ್ವಲ್ಪ ತಡವಾದರೆ, ಪ್ರಾಣಿಗಳೆಲ್ಲ ಬಿಸಿಲಿನ ಬೇಗೆಯನ್ನು ಸೈರಿಸಲಾರದೆ, ಸೊರಗಿ ಸೊಪ್ಪಾಗುತ್ತವೆ. ಪ್ರಾಣಿಗಳ ಕೆಲಸಮಾಡುವ ಶಕ್ತಿ ಕುಂದುವಷ್ಟು ಸೆಕೆ ಹೆಚ್ಚುವುದು ಸೆಕೆಯಿಂದಲೂ ಜಲಕ್ಷಾಮದಿಂದಲೂ, ಜ್ವರ ಮತ್ತು ವಾಂತಿಭೇದಿ ರೋಗಗಳು ತಲೆದೋರುವುವು. ಕೆರೆಗಳೂ, ಹೊಳೆಗಳೂ, ಬಾವಿಗಳೂ ಬತ್ತಿಹೋಗುವುದರಿಂದ ದನಕರುಗಳು ಕುಡಿವ ನೀರಿಗೆ ಅಭಾವವಾಗುವುದು. ವ್ಯವಸಾಯವು ಸಿಲ್ಲುವುದು. ಧಾನ್ಯಗಳ ಕ್ರಯವು ಬೇಗನೆ ಏರುವುದು. "ಬರಗಾಲ ಬಂದಿತಲ್ಲಾ'' ಎಂದು ಪ್ರತಿಯೊಬ್ಬನೂ ಪೇಚಾಡಲಾರಂಭಿಸುವನು. ಹೀಗಿರುವಾಗ ಕೊನೆಗೆ ಮಳೆಬಿದ್ದರೆ, ಆಗ ಉಂಟಾಗುವ ವ್ಯತ್ಯಾಸಗಳನ್ನು ಹೇಳಬೇಕೆ? ವಾಂತಿಭೇದಿರೋಗದ ಪರಮಾಣುಗಳುಳ್ಳ ಕೊಳೆಯನ್ನು ಒಡ

ನೆಯೇ ಮಳೆ ಕೊಚ್ಚಿಕೊಂಡುಹೋಗಿ ದೂರ ಸಾಗಿಸಿಬಿಡುವುದು. ತಂಗಾಳಿ ಮನುಷ್ಯನಿಗೇ ಅಲ್ಲದೆ, ಮೃಗಗಳಿಗೂ ಹಕ್ಕಿಗಳಿಗೂ, ಭರವಸವನ್ನೂ ಆರೋಗ್ಯವನ್ನೂ ಮನಶ್ಶರೀರಗಳಲ್ಲಿ ಹೊಸದಾಗಿ ಶಕ್ತಿಯನ್ನೂ ಉಂಟು-ಮಾಡುವುದು ದಿಕ್ಕುದಿಕ್ಕಿನಲ್ಲಿಯೂ ಹಸುರು ಹುಲ್ಲು ಮೊಳೆತು, ಒಣಹು-ಲ್ಲಿನಮೇಲೆ ಬೀಳುತ್ತಿದ್ದ ಬಿಸಿಲಿನ ಝಳವನ್ನು ನೋಡಿನೋಡಿ ಬೇಸತ್ತ ಕಣ್ಣು ಗಳಿಗೆಅನಿರ್ವಾಚ್ಯವಾದ ಆನಂದವು ಹುಟ್ಟುವುದು. ರೈತರೆಲ್ಲಾ ಸಂತುಷ್ಟರಾಗಿ ಮಳೆಯಿಲ್ಲದೆ ನಿಂತುಹೋಗಿದ್ದ ಆರಂಬಕ್ಕೆ ಮತ್ತೆ ಕೈಹಾಕುವರು. ಬೇಕಾದಷ್ಟು ಮಳೆಕರೆವುದರಿಂದಅವರಿಗೆಕ್ಷಾಮದಭಯವೇ ಹೋಗುವುದು.

ಮುಂಗಾರುಮಳೆ ಬೀಳುವ ತಿಂಗಳುಗಳಲ್ಲಿ ಮಳೆಯ ಉಪಯೋಗಗಳು ಕಂಡುಬರುವುದಿಲ್ಲ. ಆಕಾಶದಿಂದ ನೆಲದ ಮೇಲೆ ಬಿದ್ದ ಮಳೆಯೆಲ್ಲ ಸಮು-ದ್ರಕ್ಕೆ ಹೋಗಿ ಸೇರದೆ, ಮುಂದೆಬರುವ ಬೇಸಗೆಯಲ್ಲಿಉಪಯೋಗಿಸುವಂತೆ ಈ ನೀರಿನಲ್ಲಿ ಬಹುಭಾಗವು ಅಲ್ಲಲ್ಲಿಕೂಡುತ್ತದೆ. ಮಳೆಬಿದ್ದೊಡನೆಯೇ ಕೆರೆಗಳು ತುಂಬುವುವು. ಈ ನೀರು ಗದ್ದೆ ತೋಟಗಳಿಗೆ ಹಾಯಿಸುವುದಕ್ಕೂ, ಮಳೆಗಾಲ ಮುಗಿದಮೇಲೆ ಬಹುಕಾಲದವರೆಗೆ ಪ್ರಾಣಿಗಳೆಲ್ಲ ಕುಡಿವುದಕ್ಕೂ ಉಪಯುಕ್ತವಾಗುವುದು. ಭೂಮಿಯೊಳಗಿಳಿದ ನೀರು, ಧಾನ್ಯದ ಬೀಜಗ-ಳನ್ನೂ ಮರಗಿಡಗಳ ಬೇರುಗಳನ್ನೂ, ಪೋಷಿಸುವುದಲ್ಲದೆ ಬುಗ್ಗೆಗಳಾಗಿ ಭೂ-ಮಿಯ ಮೇಲಕ್ಕೆ ಬಂದು, ನದಿಗಳಾಗಿ ಮತ್ತೆ ಮಳೆಗಾಲ ಬರುವವರೆಗೂ ಹರಿಯುತ್ತಿರುತ್ತದೆ ಹೊಳೆಗಳ ನೀರನ್ನು ಹತ್ತಿರ ಇರುವ ತೋಟಗಳಿಗೂ ಗದ್ದೆಗಳಿಗೂ ಹಾಯಿಸಿ, ಪಯಿರುಪಚ್ಚೆಗಳು ಬಿಸಿಲಿಂದಬಣಗದಂತೆ ನೋಡಿಕೊಳ್ಳುವರು. ಹೀಗೆ ವರ್ಷದ ಮೊದಲಿಂದ ಕೊನೆವರೆಗೂ ಮಳೆಯಿಂದ ಪ್ರಯೋಜನಗಳುಂಟು.

## 44. ಸಕಾಲದಲ್ಲಿ ಕೆಲಸಮಾಡುವುದು.

ಯಾವಕೆಲಸವನ್ನಾದರೂಕ್ಲುಪ್ತಕಾಲದಲ್ಲಿಯೇಮಾಡುವುದುಶ್ಲಾಘ್ಯವಾದ ಗುಣವು. ಇದು ಯಾರಲ್ಲಿದೆಯೋ ಅವನಿಗೆಯಾವಾಗಲೂ ಸತ್ಯವಾ-ಡುವ ಸ್ವಭಾವವೂ, ಯಾವ ಕಷ್ಟಬಂದರೂ ತನ್ನ ಕರ್ತವ್ಯವನ್ನು ಮಾಡಬೇ-ಕೆಂಬ ಮನೋದಾರ್ಢ್ಯವೂ ಉಂಟೆಂಬುದು ಸಿದ್ಧವು. ಈ ಗುಣವುಳ್ಳವನಿಗೆ ಕೆಲವು ವೇಳೆ ಬಹಳ ಕಷ್ಟವುಂಟು. ಹೇಗೆಂದರೆ, ವ್ಯಸನಾಕ್ರಾಂತನಾಗಿರಲಿ, ದೇಹದಲ್ಲಿ ಆಲಸ್ಯವಿರಲಿ, ಇಂಥವನು ಕೊಟ್ಟಮಾತನ್ನು ನಡೆಸಿ ಕೊಡುವುದ-

ಕ್ಕಾಗಿ ತನ್ನ ಕಷ್ಟಗಳಿಗೆಲ್ಲ ಲಕ್ಷ್ಯಮಾಡದಿರಬೇಕಾಗುವುದು. ಈ ಗುಣವು ಸೋಮಾರಿತನವನ್ನು ಓಡಿಸಿ, ಕೆಲಸಮಾಡಲು ಚಟುವಟಿಕೆಯನ್ನೂ ಆದರ-ವನ್ನೂ ಉಂಟುಮಾಡುತ್ತದೆ.

ಈ ಗುಣವು ಅಷ್ಟು ಉಪಯುಕ್ತವಲ್ಲವೆಂದು ಕೆಲವರು ಅಭಿಪ್ರಾಯ ಪಡುವರು. ಅಲ್ಪವಿಷಯಗಳಲ್ಲಿ ಇದು ಮುಖ್ಯವಾಗಿ ಕಂಡುಬರದೆ ಹೋಗ-ಬಹುದು; ಇದರಿಂದಯಾವಾಗಲೂಅನುಪಯುಕ್ತವೆಂದುಹೇಳುವುದುತಪ್ಪು. ಒಂದು ಕೆಲಸಮಾಡುವುದರಲ್ಲಿ ಕೆಲವುನಿಮಿಷಗಳ ವ್ಯತ್ಯಾಸವಾದರೆ,ರಾಜ್ಯ-ವೆಲ್ಲ ತಲೆಕೆಳಗಾಗುವ ಸಂದರ್ಭಗಳುಂಟು. ಮಾಡಬೇಕಾದುದನ್ನು ತಕ್ಕಕಾಲದಲ್ಲಿ ಮಾಡದೆಹೋದುದರಿಂದ ಕೆಲವು ಯುದ್ಧಗಳ ಫಲಿತಾಂಶಗಳುಮೊ-ದಲು ಯೋಚಿಸಿದುದಕ್ಕೆ ಬೇರೆ ರೀತಿಯಲ್ಲಿ ಪರಿಣಮಿಸಿವೆ. ರೋಗಿಗೆ ತಕ್ಕ ಕಾಲದಲ್ಲಿಚಿಕಿತ್ಸೆನಡೆಯದೆ,ಪ್ರಾಣಹಾನಿಯಾಗಬಹುದು ಗ್ರಾಮಾಂತರಕ್ಕೆ ಹೋಗಿರುವಮಗನಿಂದ ಹೊತ್ತಿಗೆ ಸರಿಯಾಗಿಕಾಗದಬಾರದಿದ್ದರೆ,ಆದನ್ನೇ ನಿರೀಕ್ಷಿಸಿಕೊಂಡಿದ್ದ ಮುದುಕರಾದ ತಾಯ್ತಂದೆಗಳಿಗೆ ದೇಹಸ್ಥಿತಿ ಕೆಡು-ವಷ್ಟುವ್ಯಥೆಯಾಗಬಹುದು. ದಿನವೂಬೆಳಿಗ್ಗೆ ಹತ್ತುಘಂಟೆಗೆಊಟಮಾಡುತ್ತಿ-ರುವವರು ಒಂದೆರಡು ದಿನಗಳು ಮಧ್ಯಾಹ್ನ ಎರಡು ಘಂಟೆಯವರೆಗೂ ಹಸಿ-ದುಕೊಂಡಿದ್ದು ಆ ಮೇಲೆ ಊಟಮಾಡಿದರೆ, ದೇಹದಲ್ಲಿ ಆಲಸ್ಯವಾಗಬಹು-ದು. ಹೀಗೆಇನ್ನೆಷ್ಟೋಕಡೆಹೊತ್ತುಹೊತ್ತಿಗೆಕೆಲಸಮಾಡುವುದರಿಂದಕೇಡು ಅಥವಾ ತೊಂದರೆಯಾಗುವುದು ಸ್ವಲ್ಪಯೋಚಿಸಿದರೆಗೊತ್ತುಹತ್ತುವುದು, "ಗಾಳಿಬಂದಾಗತೂರಿಕೊಳ್ಳಬೇಕು," "ಊರು ಕೊಳ್ಳೆಹೋದಮೇಲೆಕೋಟೆಬಾಗಿಲು ಹಾಕಿದರು" ಎಂಬ ಗಾದೆಗಳೂ ಹೊತ್ತುಮೀರಿ ಕೆಲಸಮಾಡ-ಬಾರದೆಂಬುದನ್ನು ಬೋಧಿಸುವುವು. ತಕ್ಕಕಾಲದಲ್ಲಿಕೆಲಸಮಾಡುವ ಪದ್ಧತಿ-ಯಿಲ್ಲದಿರುವವನು ಯಾವ ಕೆಲಸವನ್ನು ಕೈಕೊಂಡರೂ ಗೆಲ್ಲುವುದಪೂರ್ವ. ಅಂಥವನಲ್ಲಿ ಅಜಾಗರೂಕತೆಯೂ ಸೋಮಾರಿತನವೂ ತುಂಬಿರುವುವು. ಅವನನ್ನು ಕಪಟಿಯೆಂತಲೂ ಸುಳ್ಳುಗಾರನೆಂತಲೂ ಜನರು ತಿಳಿಯಲವಕಾಶ-ವಾಗುವುದು. ಆದುದರಿಂದ ಇಂಥ ಕೆಟ್ಟ ಸ್ವಭಾವವನ್ನು ಎಲ್ಲರೂ ಬಿಟ್ಟು ತಮ್ಮ ಕೆಲಸಗಳನ್ನು ಕ್ಲುಪ್ತಕಾಲಗಳಲ್ಲಿ ಮಾಡಲು ಯತ್ನಿಸಬೇಕು.

ಸಕಾಲದಲ್ಲಿ ಕೆಲಸಮಾಡುವ ಗುಣದಿಂದ ಇನ್ನೆರಡು ಪ್ರಯೋಜನಗ-ಳುಂಟು. ಕೆಲಸಮಾಡಲು ಸಮಯವಿಲ್ಲವೆಂದು ಅನೇಕರು ಆಗಾಗ್ಗೆ ಗೊಣ-

ಗುಟ್ಟುವುದುಂಟಷ್ಟೆ. ಆಯಾವೇಳೆಗಳಲ್ಲಿ ಕೆಲಸಮಾಡುತ್ತಬಂದರೆ, ಎಲ್ಲ ಕೆಲ-ಸಗಳಿಗೂ ಬೇಕಾದಷ್ಟು ಹೊತ್ತುಸಿಕ್ಕುವುದರಲ್ಲಿ ಸಂಶಯವಿಲ್ಲ. ನಾವು ಮಾಡಬೇಕಾದ ಕೆಲಸಗಳನ್ನು ಒಂದುಕಡೆ ಬರೆದಿಟ್ಟುಕೊಂಡು, ಅವನ್ನು ಆಯಾ ಹೊತ್ತಿನಲ್ಲಿಯೇ ಮಾಡುತ್ತಬಂದರೆನಮ್ಮ ಕರ್ತವ್ಯಗಳನ್ನು ಸರಿಯಾಗಿ ನೆರವೇರಿಸುವುದಕ್ಕೂ, ಜ್ಞಾನಸಂಪಾದನೆಗೂ ಬೇಕಾದಷ್ಟುಕಾಲಸಿಕ್ಕುವುದು ಸಕಾಲದಲ್ಲಿಕೆಲಸಮಾಡುವ ಗುಣವು ಇಂಗ್ಲಿಷ್ ಜನರಲ್ಲಿ ತುಂಬಿರುವುದನ್ನು ನಾವು ಕಣ್ಣಾರನೋಡುತ್ತಿದ್ದೇವೆ. ಇದರ ಬಲದಿಂದಲೇ ಅವರು ಅಪರಿಮಿ-ತವಾದ ಕೆಲಸಗಳನ್ನು ಸಾಧಿಸಲು ಸಮರ್ಥರಾಗಿ ಇಷ್ಟು ಏಳಿಗೆಗೆ ಬಂದಿರು-ವರು. ಈ ಗುಣದ ಎರಡನೆಯ ಉಪಯೋಗವೇನೆಂದರೆ:-ಇದರಿಂದ ಮ-ರ್ಯಾದೆಯುಂಟಾಗುವುದು. ಮಾಡಬೇಕೆಂದು ಗೊತ್ತುಮಾಡಿಕೊಂಡಿರುವ ಕೆಲಸವನ್ನು ತಕ್ಕಸಮಯದಲ್ಲಿ ಮಾಡದಿರುವುದುನಮಗೆ ಆ ಕೆಲಸ ಮುಖ್ಯ-ವಲ್ಲವೆಂಬುದನ್ನು ತೋರಿಸುತ್ತದೆ. ಸ್ನೇಹಿತರನ್ನು ನಮಗಾಗಿ ಕಾಯಿಸಿದರೆ, ಅವರನ್ನು ನಾವು ತಿರಸ್ಕರಿಸಿದಂತಾಗುವುದು. ಹೀಗೆ ಕಾಯಿಸುವುದರಿಂದ "ಇತರರು ಕಾದುಬಿದ್ದಿದ್ದರೆ ಇರಲಿ; ನಾವುಅವರಿಗೋಸ್ಕರ ತೊಂದರೆಹಚ್ಚಿ ಕೊಳ್ಳಲೇಕೆ?" ಎಂದು ಹೇಳಿದಂತಾಗುವುದು. ಇದು ಸ್ವಾರ್ಥಪರತೆಯನ್ನೂ ಗರ್ವವನ್ನೂ ತೋರಿಸುತ್ತದೆ ಮಾಡಬೇಕಾದುದನ್ನು ಕ್ಲೃಪ್ತಕಾಲದಲ್ಲಿಮಾ-ಡುವುದರಿಂದ ನಮಗೆ ಏನು ತೊಂದರೆಯಾದರೂ ಚಿಂತೆಯಿಲ್ಲ. ಪರರ ಸೌಖ್ಯ ಅನುಕೂಲ್ಯ ಇವುಗಳನ್ನು ನೋಡುವುದು ನಮ್ಮ ಮೊದಲನೆಯ ಕೆಲಸ. ಹೀಗೆ ನಿಬಂಧನೆಯ ಪ್ರಕಾರ ಹೊತ್ತು ಹೊತ್ತಿಗೆ ಎಲ್ಲರೂ ಕೆಲಸಗಳನ್ನು ಮಾಡುತ್ತಾಬಂದರೆ, ಕಾರ್ಯಸಾಧನೆಯೂ ಪರಸ್ಪರಮರ್ಯಾದೆಯೂ, ಅನುಕೂಲ್ಯವೂ ಉಂಟಾಗುವುವು.

## 45. ಪುಸ್ತಕಗಳು.

ಈ ಕಾಲದಲ್ಲಿಜನರು ಅನುಭವಿಸುತ್ತಿರುವ ಸೌಕರ್ಯಗಳಲ್ಲಿ ಓದುವುದಕ್ಕಿ-ರುವ ಪುಸ್ತಕಸೌಕರ್ಯವು ಬಹಳ ಅದ್ಭುತವಾದುದು. ಪುಸ್ತಕಗಳಿಂದಜನ-ರಿಗಾಗಿರುವ ಉಪಕಾರವನ್ನು ಎಷ್ಟು ವರ್ಣಿಸಿದರೂ ತೀರದು. ಪುಸ್ತಕಗಳು ದೊಡ್ಡ ಉಪಾಧ್ಯಾಯರು. ಪಾಠಶಾಲೆಗಳಲ್ಲಿರುವಉಪಾಧ್ಯಾಯರು ಕ್ಲೃಪ್ತ-ಕಾಲದಲ್ಲಿ ಮಾತ್ರ ಪಾಠಹೇಳುವರು. ಪುಸ್ತಕಗಳೆಂಬ ಉಪಾಧ್ಯಾಯರು

ಯಾವಾಗಲೂ ಬೋಧಿಸಲು ಸಿದ್ಧರಾಗಿರುವರು. ನಾವು ಅವರನ್ನು ಎಲ್ಲಿಗೆ ಕರೆದುಕೊಂಡು ಹೋದರೂ ಜತೆಯಲ್ಲಿಯೇ ಒಂದು ವಿದ್ಯೆಯನ್ನು ಹೇಳಿ-ಕೊಡುವರು ಅವರು ಹೆಚ್ಚು ಸಂಬಳವನ್ನು ಕೇಳರು. ಕೋಪದಿಂದ ಕಠಿನೋಕ್ತಿಗಳನ್ನಾಡದೆಯೇ ವಿದ್ಯಾರ್ಥಿಗಳನ್ನು ದಾರಿಗೆ ತರುವರು. ಜಾಣ್ಮೆಯಿಂದೆಷ್ಟು ಪ್ರಶ್ನೆಗಳನ್ನು ಹಾಕಿದರೂ ಮರೆಮಾಡದೆ ಪ್ರತಿಯೊಂ-ದಕ್ಕೂ ಉತ್ತರವನ್ನು ಕೊಡುವರು. ಇವರಲ್ಲಿಗೆ ಬಂದವರು ಚಿಕ್ಕವರಾಗಲಿ ದೊಡ್ಡವರಾಗಲಿ, ಬಡವರಾಗಲಿ ಭಾಗ್ಯವಂತರಾಗಲಿ, ಎಂಥವರೇ ಆಗಿರಲಿ ಪಕ್ಷಪಾತವಿಲ್ಲದೆ ಪಾಠಹೇಳುವರು ಈ ಉಪಾಧ್ಯಾಯರಿಗೆ ತಿಳಿಯದಿರುವ ಶಾಸ್ತ್ರಗಳೇ ಇಲ್ಲ; ಇವರು ಎಲ್ಲಾ ಶಾಸ್ತ್ರಗಳಲ್ಲಿಯೂ ಪೂರ್ಣಪಾಂಡಿತ್ಯ-ವುಳ್ಳವರಾಗಿ ಪ್ರತಿಯೊಂದನ್ನೂ ಚೆನ್ನಾಗಿ ಬೋಧಿಸುವರು.

ಪುಸ್ತಕಗಳು ಜನರು ಹೊಂದಬಹುದಾದ ನಿಜವಾದ ಗೆಳೆಯರು. ಪುಸ್ತ-ಕಗಳೆಂಬ ಮಿತ್ರರು ಎಲ್ಲಾ ಕಾಲಗಳಲ್ಲಿಯೂ, ಎಲ್ಲಾ ದೇಶಗಳಲ್ಲಿಯೂ ಇರುವ ಜನರ ನಡೆನುಡಿಗಳನ್ನೂ ಜ್ಞಾನವನ್ನೂ ಸಂಪಾದಿಸಿಕೊಂಡಿರುವರು ತಮ್ಮ ಅಪಾರವಾದ ಶಾಸ್ತ್ರಪರಿಚಯಕ್ಕೋಸ್ಕರ ಶ್ರೇಷ್ಠವಾದ ಮರ್ಯಾದೆಯನ್ನು ಎಲ್ಲಾ ಸಭೆಗಳಲ್ಲಿಯೂ ಹೊಂದಿರುವರು, ಮತ್ತು ಸುಲಭರು. ಬೇಕಾದಾಗ-ಲೆಲ್ಲ ಉಪಕಾರಮಾಡಲು ಸಿದ್ಧರಾಗಿರುವರು. ಮನಸ್ಸು ಬಂದಾಗ ಇವರನ್ನು ಜತೆಗೆ ಸೇರಿಸಿಕೊಳ್ಳಬಹುದು; ಬೇಡವಾದೊಡನೆಯೇ ಇವರ ಸಂಗವನ್ನು ಬಿಟ್ಟು ಬಿಡಬಹುದು. ಇದಕ್ಕಾಗಿ ಇವರು ಕೋಪಗೊಳ್ಳದೆ ಯಾವಾಗಲೂ ಒಂದೇ ರೀತಿಯಾಗಿ ಬಲು ಅನುಕೂಲರಾಗಿರುವರು. ಇವರಲ್ಲಿ ಕೆಲವರು ಪೂರ್ವದಲ್ಲಿ ನಡೆದ ಸಂಗತಿಗಳನ್ನೆಲ್ಲಾ ಕಥೆಹೇಳುತ್ತಾರೆ; ಇನ್ನು ಕೆಲವರು ಪ್ರಪಂಚದಲ್ಲಿರುವ ವಸ್ತುಗಳ ಒಳಗುಟ್ಟುಗಳನ್ನೆಲ್ಲ ರಟ್ಟುಮಾಡಿ ವಿಶದಪಡಿ-ಸುತ್ತಾರೆ; ಇವುಗಳೆಲ್ಲ ನಮಗೆ ಬೇಡವಾದರೆ, ಮನಸ್ಸಿಗೆ ಸಂತೋಷವಾಗು-ವಂತೆ ಶ್ಲಾಘ್ಯವಾದ ಕಾವ್ಯಗಳನ್ನೂ ಇನ್ನೂ ಇತರ ಗ್ರಂಥಗಳನ್ನೂ ಬೋಧಿ-ಸುತ್ತಾರೆ. ಪ್ರಪಂಚದಲ್ಲಿ ಹೇಗೆ ಬದುಕಬೇಕೆಂಬುದನ್ನು ಇವರಿಂದ ಕಲಿಯ-ಬಹುದು. ನಮ್ಮ ಮನಸ್ಸಿನಲ್ಲಿ ಚಿಂತೆಯೂ ವ್ಯಸನವೂ ಇದ್ದರೆ ಗಾಳಿಯು ಧೂಳನ್ನು ತೂರಿಬಿಡುವಂತೆ ಇವುಗಳನ್ನು ದೂರಕ್ಕೆ ತಳ್ಳಿಬಿಟ್ಟು ನಮ್ಮನ್ನು ಆನಂದಗೊಳಿಸುವರು. ನಾವು ಹೆದರಿರುವಾಗ ಧೈರ್ಯ ಹೇಳುವರು. ಅರಿ-ಷಡ್ವರ್ಗಗಳನ್ನು ಜಯಿಸಿ ಇಂದ್ರಿಯನಿಗ್ರಹವನ್ನು ಸಾಧಿಸಬೇಕೆಂದುಪದೇಶಿ-

ಸುವರು. ಮುಖ್ಯವಾಗಿ ಪುಸ್ತಕಗಳೆಂಬ ಮಿತ್ರರು ಎಲ್ಲಾ ವಿದ್ಯೆಗಳಿಗೂ ದಾರಿಯನ್ನು ತೋರಿಸಿಕೊಡುವರು; ಇವರು ಹೇಳಿಕೊಟ್ಟುದನ್ನೆಲ್ಲ ಚೆನ್ನಾಗಿ ನಂಬಿ ಅಂಗೀಕರಿಸಬಹುದು. ಇಷ್ಟೆಲ್ಲ ಮಾಡುವುದಕ್ಕಾಗಿ ನಮ್ಮ ಪ್ರತ್ಯುಪಕಾರವೇನು? ನಾವಿರುವಮನೆಯ ಒಂದು ಮೂಲೆಯಲ್ಲಿ ಒಂದಿಷ್ಟು ಜಾಗ. ಇದನ್ನು ಕೊಟ್ಟರೆ ಸಾಕು. ಇಷ್ಟಕ್ಕೇ ಕೃತಜ್ಞರಾಗಿ ನಮ್ಮ ಜತೆಯಲ್ಲಿಯೇ ಯಾವಾಗಲೂ ಇದ್ದುಬಿಡುವರು.

ಪುಸ್ತಕಗಳನ್ನು ಸೇರಿಸಿ ಮನೆಯಲ್ಲಿಟ್ಟುಕೊಳ್ಳುವುದು ಸಕಲ ವಿದ್ಯಾಪ್ರವೀಣರಾದ ವಿದ್ವಾಂಸರ ಸಭೆಯನ್ನು ನಮ್ಮಲ್ಲಿರಿಸಿಕೊಂಡಹಾಗೆ. ಪುಸ್ತಕಗಳಿಲ್ಲದ ಕೊಠಡಿಯು ಆತ್ಮನಿಲ್ಲದ ದೇಹದಹಾಗೆ; ಗಂಡನಿಲ್ಲದ ಹೆಂಗಸಿನ ಹಾಗೆ; ವಿದ್ಯೆಯಿಲ್ಲದ ಮನುಷ್ಯನಂತೆ. ಮಾತನಾಡಿಸಲು ಯಾರೂ ಇಲ್ಲದ ಕಡೆ ಇರಬೇಕಾಗಿಬರಬಹುದು. ಆಗ ಪುಸ್ತಕಗಳಿದ್ದರೆ ಇನ್ನು ಯಾರೂ ಬೇಕಾಗಿಲ್ಲ. ಅವುಗಳನ್ನೋದುತ್ತ ಸುಖವಾಗಿ ಕಾಲಕಳೆವುದಲ್ಲದೆ ಬಹಳ ಪ್ರಯೋಜನವನ್ನು ಹೊಂದಬಹುದು. ಹೇಗೆಂದರೆ, ಪುಸ್ತಕಗಳಲ್ಲಿ ಅತಿಸಮರ್ಥರಾದ ವಿದ್ವಾಂಸರ ಲೋಕೋತ್ತರವಾದ ಅಭಿಪ್ರಾಯಗಳು ಉತ್ತಮವಾದ ಭಾಷೆಯಲ್ಲಿ ವಿವರಿಸಲ್ಪಟ್ಟಿರುತ್ತವೆ. ಪುಸ್ತಕಗಳು ಕೊಡುವ ಮನಸ್ಸಂತೋಷವನ್ನು ಇಷ್ಟೆಂದು ಹೇಳಲಾಗುವುದಿಲ್ಲ. ಕನ್‌ಫೂಸಿಯಸ್ ಎಂಬ ದೊಡ್ಡ ತತ್ವಜ್ಞಾನಿ ಪುಸ್ತಕಗಳನ್ನೋದಿ ಜ್ಞಾನವನ್ನು ಸಂಪಾದಿಸುವ ಸುಖದಲ್ಲಿ ತನ್ನ ದುಃಖಗಳನ್ನೆಲ್ಲಾ ಮರೆತು, ತನಗೆ ಮುಪ್ಪು ಬಂದುದನ್ನೂ ಅರಿಯಲಿಲ್ಲವಂತೆ.

ಅಚ್ಚು ಹಾಕುವುದು ಬಂದಂದಿನಿಂದ ಪ್ರಕಟಿಸಿದ ಪುಸ್ತಕಗಳನ್ನೆಲ್ಲ ಎಣಿಸಲೂ ಆಗುವುದಿಲ್ಲ; ನಮ್ಮ ಜೀವನದಲ್ಲಿ ಓದಿ ಮುಗಿಸಲಾದೀತೆ? ಎಂದಿಗೂ ಇಲ್ಲ. ಎಲ್ಲವನ್ನೂ ಓದಬೇಕಾದುದೂ ಇಲ್ಲ, ಓದುವುದಕ್ಕೆ ಎಲ್ಲವೂ ಅರ್ಹಗಳೂ ಅಲ್ಲ. "ಕೆಲವು ಪುಸ್ತಕಗಳನ್ನು ರುಚಿನೋಡಬೇಕು; ಮತ್ತೆ ಕೆಲವನ್ನು ಚೆನ್ನಾಗಿ ಅಗಿದು ನುಂಗಬೇಕು." ಎಂದು ಒಬ್ಬ ಘನಪಂಡಿತನು ಹೇಳಿರುವನು. ಅಂದರೆ, ಕೆಲವು ಪುಸ್ತಕಗಳನ್ನು ಆಮೂಲಾಗ್ರವಾಗಿ ಓದದೆ ಅಲ್ಲಲ್ಲಿ ಮುಖ್ಯವಾದ ಭಾಗಗಳನ್ನೋದಿ ಮುಗಿಸಬೇಕು; ಮತ್ತೆ ಕೆಲವನ್ನು ಮೊದಲಿಂದ ಕೊನೆವರೆಗೂ ಚೆನ್ನಾಗಿ ಓದಿ, ಓದಿದುದನ್ನು ಮನಸ್ಸಿನಲ್ಲಿ ಪರ್ಯಾಲೋಚಿಸಿ ಎಂದಿಗೂ ಮರೆಯದಂತೆ ಗಟ್ಟಿಮಾಡಿಡಬೇಕು. ಪುಸ್ತಕಗಳಿಂದ ನಿಬಿಡವಾಗಿರುವ ಈ ಕಾಲದಲ್ಲಿ ನಮಗೆ ಬೇಕಾದ ಸರಿಯಾದ ಪುಸ್ತಕಗಳನ್ನು ಆರಿಸಿ-

ಕೊಳ್ಳುವುದು ತುಂಬಾ ಅವಶ್ಯಕ. ಎಚ್ಚರಿಕೆಯಿಂದ ಹೀಗೆ ಆರಿಸಿಕೊಂಡು ಓದಿದಹೊರತು ಪುಸ್ತಕಗಳಿಂದಾಗುವ ಪ್ರಯೋಜನಗಳೆಲ್ಲ ಆಗಲಾರವು.

## 46. ದೇಶಾಟನೆ.

ಸ್ಕೂಲುಗಳಲ್ಲಿಯೂ ಕಾಲೇಜುಗಳಲ್ಲಿಯೂ ಗೊತ್ತು ಮಾಡಿರುವ ಪುಸ್ತಕಗಳ ಅರ್ಥವನ್ನು ಕಲಿತು ಪರೀಕ್ಷೆಗಳಲ್ಲಿ ತೇರ್ಗಡೆಯನ್ನು ಪಡೆವುದೇ ವಿದ್ಯಾಭ್ಯಾಸವೆಂದು ಅನೇಕರು ತಿಳಿದಿರುವರು. ಸ್ವಲ್ಪ ಯೋಚಿಸಿನೋಡಿದರೆ, ಇದು ತಪ್ಪು ತಿಳಿವಳಿಕೆಯೆಂದು ವ್ಯಕ್ತವಾಗುವುದು. ಹೀಗೆ ಸ್ಕೂಲುಗಳಲ್ಲಿ ಓದಿ ಪರೀಕ್ಷೆ ಮಾಡದೆಯೇ ಅನೇಕರು ಘನಪಂಡಿತರಾಗಿರುವರಲ್ಲದೆ ಅನೇಕ ಪರೀಕ್ಷೆಗಳನ್ನು ಕೊಟ್ಟಿರುವರಿಗಿಂತ ಲೌಕಿಕಜ್ಞಾನದಲ್ಲಿಯೂ, ಬುದ್ಧಿಯಲ್ಲಿಯೂ ಉತ್ತಮರಾಗಿದ್ದಾರೆ. ನಾವು ಸ್ಕೂಲುಗಳಲ್ಲಿಯೂ ಕಾಲೇಜುಗಳಲ್ಲಿಯೂ ಕಲಿವುದು ಸ್ವಲ್ಪ. ಇವುಗಳಲ್ಲೋದಿದಮೇಲೆ, ದೇಶಸಂಚಾರ ಮಾಡಿ ನಮ್ಮ ವಿದ್ಯಾಭ್ಯಾಸವನ್ನು ಮುಗಿಸಿಕೊಳ್ಳಬೇಕು. ಯೂರೋಪಿನಲ್ಲಿ ಸ್ಕೂಲು ಕಾಲೇಜುಗಳಲ್ಲಿ ಮಾಡಿದ ವಿದ್ಯಾಭ್ಯಾಸವನ್ನು ದೇಶಸಂಚಾರ ಮಾಡಿದಹೊರತು ಮುಗಿದಂತೆ ಭಾವಿಸುವುದಿಲ್ಲ. ಇಂಗ್ಲೆಂಡಿನಲ್ಲಿ ಪರೀಕ್ಷೆಗಳನ್ನು ಕೊಟ್ಟಮೇಲೆ ಯೂರೋಪಿನಲ್ಲೆಲ್ಲಾ ಸಂಚಾರಮಾಡಿಕೊಂಡು ಬರುವ ವಾಡಿಕೆಯಿದೆ. ನಮ್ಮಲ್ಲಿಯೂ ಪೂರ್ವದಲ್ಲಿ ಬ್ರಹ್ಮಚಾರಿಗಳು ವಿದ್ಯಾಭ್ಯಾಸವಾದಮೇಲೆ ದೇಶಯಾತ್ರೆ ಮಾಡುತ್ತಿದ್ದರೆಂದು ಈಗಿನ ವಿವಾಹಕಾಲದ ಕಾಶೀಯಾತ್ರೆಯ ಕ್ರಮದಿಂದ ಊಹಿಸಬಹುದು. ವಿದ್ಯಾರ್ಥಿಗಳ ತಿಳಿವಳಿಕೆಯು ಹಲವು ಬಗೆಗಳಲ್ಲಿ ಹೆಚ್ಚುವುದಕ್ಕೆ ದೇಶಾಟನೆಯು ಕಾರಣವಾಗಿದೆ

ದೇಶಾಟನೆಯೆಂದು ನಾಯಿಯಂತೆ ಓಡಿಹೋಗಿ ಪರದೇಶಗಳಲ್ಲಿ ಸುಮ್ಮನೆ ಅಲೆದುಕೊಂಡುಬರುವುದರಿಂದ ಜ್ಞಾನವು ಹೆಚ್ಚುವುದಿಲ್ಲ. ಜ್ಞಾನಾಭಿವೃದ್ಧಿಯಾಗಬೇಕಾದರೆ, ಇತರ ದೇಶಗಳಲ್ಲಿದೊಡ್ಡ ಕಟ್ಟಡ, ಅರಮನೆ, ಸರ್ವವಸ್ತು ಪ್ರದರ್ಶನಶಾಲೆ ಪುಸ್ತಕಭಂಡಾರ, ಇವೇಮುಂತಾದ ಪ್ರಸಿದ್ಧವಸ್ತುಗಳನ್ನೆಲ್ಲ ನಮ್ಮ ಕಣ್ಣಾರ ಚೆನ್ನಾಗಿ ಪರೀಕ್ಷಿಸಿ ನೋಡಬೇಕು. ಅಲ್ಲಿಯ ಜನರ ನಡೆನುಡಿಗಳು, ವಿದ್ಯೆ, ಕಲಾಕೌಶಲ, ಮುಂತಾದುವನ್ನು ಪರಿಶೀಲಿಸಿಕೊಳ್ಳಬೇಕು. ಇದರಿಂದ ನಮ್ಮ ಬುದ್ಧಿಯು ವಿಕಾಸವನ್ನು ಹೊಂದುವುದು. ಪ್ರತಿಯೊಂದದೇಶದ ಜನರೂ ಅವರವರದಾರಿಯಲ್ಲಿಯೇ ಹೋಗುತ್ತಾರೆ. ಅವರ ಸುತ್ತ-

ಮುಂತಾದ ಇರುವ ಸಂದರ್ಭಗಳಿಗನುಸಾರವಾಗಿ ನಡೆದುಕೊಳ್ಳುವರು. ಆದುದರಿಂದ ಆಯಾದೇಶಗಳಲ್ಲಿ ಜನರ ನಡತೆಗಳೂ, ಅಭಿಪ್ರಾಯಗಳೂ ಬೇರೆಬೇರೆಯಾಗಿರುವುವು. ಇವುಗಳಲ್ಲಿ ನಾವೂ ಒಪ್ಪಿಮೆಚ್ಚಿ ಅನುಸರಿಸತಕ್ಕವು ಎಷ್ಟೋ ಇರುತ್ತವೆ. ಇತರ ದೇಶದವರಲ್ಲಿ ಕೆಲವು ಸಂಗತಿಗಳು ನಮ್ಮ ಮನಸ್ಸಿಗೆ ಬಾರದೆನಿರಾಕರಿಸತಕ್ಕವುಗಳಾಗಿರಬಹುದು. ಇವುಗಳನ್ನು ತಿಳಿಯುವುದರಿಂದಲೂ ಪ್ರಯೋಜನವುಂಟು; ನಾವೂ ಅದೇ ರೀತಿಯಲ್ಲಿ ಕೆಟ್ಟದಾರಿಗೆ ಬೀಳಬಾರದೆಂದು ಬುದ್ಧಿಬರುತ್ತದೆ. ಮುಖ್ಯವಾಗಿ ವಿಷಯಪರಿಶೀಲನದೊಡನೆ ದೇಶಸಂಚಾರ ಮಾಡುವುದರಿಂದ ಲೌಕಿಕಜ್ಞಾನವೂ ವಿವೇಕವೂ ಅನುಭವವೂ ಉಂಟಾಗುವುವು. ಇದಲ್ಲದೆ ಹವಾಬದಲಾವಣೆಯಿಂದ ನಮ್ಮ ಆರೋಗ್ಯವು ಹೆಚ್ಚುವುದು

ಬಹಳ ಮುಖ್ಯವಾದ ಸಂಗತಿಗಳು ನಡೆದ ಸ್ಥಳಗಳ ವರ್ಣನೆಯನ್ನು ಚರಿತ್ರೆಯಲ್ಲಿ ನಾವು ಓದಬಹುದು. ಓದುವುದೇ ನಮ್ಮ ಮನಸ್ಸಿಗೆ ಅಷ್ಟು ಆಹ್ಲಾದಕರವಲ್ಲ. ಆ ಸ್ಥಲಗಳನ್ನು ಪ್ರತ್ಯಕ್ಷವಾಗಿ ನೋಡಿದಮೇಲೆ ಅವುಗಳ ವರ್ಣನೆಗಳಲ್ಲಿ ನಮಗೆ ಅತ್ಯಾಸಕ್ತಿ ಹುಟ್ಟುತ್ತದೆ. ನಮ್ಮ ಊಹನಾಶಕ್ತಿ ಹೆಚ್ಚಿ ಆಸ್ಥಲಗಳಲ್ಲಿ ನಡೆದಂತೆ ಬರೆದಿರುವ ಸಂಗತಿಗಳು ನಮ್ಮ ಕಣ್ಣ ಮುಂದೆ ಆದಷ್ಟು ಸ್ಪಷ್ಟವಾಗಿ ಕಾಣುತ್ತವೆ. ಕುರುಕ್ಷೇತ್ರಕ್ಕೆ ಹೋಗಿನೋಡಿದರೆ, ಭಾರತಯುದ್ಧವು ನೆನಪಿಗೆ ಬಂದು ಅದರ ಮನೋಹರವಾದ ವರ್ಣನೆಯನ್ನು "ಮಹಾಭಾರತ'ದಲ್ಲಿ ಓದಬೇಕೆನಿಸುವುದು. ಪ್ಲಾಸಿಯನ್ನು ನೋಡಿದರೆ, ಅಲ್ಲಿ ಇಂಗ್ಲಿಷರಿಗೂ ಹಿಂದೂಗಳಿಗೂ ನಡೆದ ದೊಡ್ಡ ಯುದ್ಧವೂ ಅದರ ಅದ್ಭುತ ಫಲಿತಾಂಶಗಳೂ ಮನಸ್ಸಿಗೆ ಹೊಳೆದು ಯಾರು ತಾನೆ ಬೆರಗಾಗುವದಿಲ್ಲ? ರೋಮ್ ಗ್ರೀಸ್ ಎಂಬ ಸ್ಥಲಗಳು ಅವುಗಳನ್ನು ನೋಡಿದ ಕವಿಗಳ ಮನಸ್ಸನ್ನು ಕರಗಿಸಿ ಅವರು ಚರಿತ್ರೆಗಳನ್ನೂ ಕಾವ್ಯಗಳನ್ನೂ ಓರೆವಂತೆ ಮಾಡಿವೆ.

ನದಿ, ಪರ್ವತ, ಜಲಪಾತಮುಂತಾದುವನ್ನು ಭೂಗೋಳಶಾಸ್ತ್ರದಲ್ಲಿ ವರ್ಣಿಸಿರಬಹುದು ಆ ವರ್ಣನೆ ಎಷ್ಟು ಚೆನ್ನಾಗಿರಲಿ, ಅದನ್ನೋದಿದರೆ ನಮಗೆ ಅಷ್ಟು ಆನಂದವಾಗದು. ಹಿಮಾಲಯಪರ್ವತವು ಲೋಕದಲ್ಲೆಲ್ಲ ಅತ್ಯುನ್ನತವಾದುದು. ಅದನ್ನು ಕಣ್ಣಾರ ನೋಡಿದಾಗ, ನಮ್ಮ ಮನಸ್ಸಿನ ಸ್ಥಿತಿಯೇ ಬೇರೆ, ವರ್ಣನೆಯನ್ನೋದಿದಾಗ ಇರುವ ಸ್ಥಿತಿಯೇ ಬೇರೆ. ಒಂದು ಶಿಖರದ ಮೇಲೆ ಮತ್ತೊಂದು ಶಿಖರದಿಂದ ಕಂಗೊಳಿಸುವ ಆಶ್ರೇಣಿಯ ಮಹೌನ್ನ-

ತ್ಯವನ್ನು ನೋಡುವುದರಿಂದ ನಮ್ಮ ಮನಸ್ಸಿನಲ್ಲಿದ್ದ ಅಲ್ಪತ್ವವು ತೊಲಗಿ ಗಾಂಭೀರ್ಯವು ಬರುವುದು. ಗೆರಸೊಪ್ಪಾ ಜಲಪಾತ, ತಾಜಾಮಹಲ್ ಇವುಗಳ ನೋಟದಿಂದುಂಟಾಗುವ ಆನಂದವನ್ನು ನೋಡಿರುವವರೇ ಬಲ್ಲರು.

ಹಿಂದೆ ದೇಶಸಂಚಾರವು ತುಂಬಾ ತೊಂದರೆಯನ್ನು ಕೊಡುತ್ತಿತ್ತು. ಇದಕ್ಕೆ ಹಣವೂ ಕಾಲವೂ ಬಹಳ ಬೇಕಾಗಿದ್ದುವು. ಈಗ ದೇಶಾಟನೆಗೆ ಬಹು ಸೌಕರ್ಯವುಂಟು. ಕೊಂಚವೇಳೆಯಲ್ಲಿಯೇ ಸ್ವಲ್ಪವೆಚ್ಚ ಮಾಡಿದರೂ ಬಲುದೂರ ಪ್ರಯಾಣ ಮಾಡಬಹುದು. ಆದರೆ ರೈಲಿನ ಪ್ರಯಾಣದಿಂದ ದೇಶಗಳನ್ನು ಚೆನ್ನಾಗಿ ಪರೀಕ್ಷಿಸಿ ನೋಡಲಾಗುವುದಿಲ್ಲವೆನ್ನಬಹುದು. ಇದು ಯಾರ ತಪ್ಪು? ರೈಲಿನ ತಪ್ಪೆ? ರೈಲಿನಲ್ಲಿ ಪ್ರಯಾಣಮಾಡಿದರೂ ದೇಶಾಟನೆಯಿಂದಾಗುವ ಮನೋವಿಕಾಸಾದಿ ಪ್ರಯೋಜನಗಳು ಲಭಿಸುವಂತೆಮಾಡಿಕೊಳ್ಳುವುದು ನಮ್ಮ ಕೆಲಸ. ಆದುದರಿಂದ ನಮ್ಮ ಜನ್ಮಭೂಮಿಯಾದ ಹಿಂದೂಸ್ಥಾನದಲ್ಲಿಯಾದರೂ ಎಲ್ಲೆಡೆಗಳಲ್ಲಿಯೂ ಸಂಚಾರಮಾಡಿಕೊಂಡು ಬರುವುದು ನಮ್ಮ ಕರ್ತವ್ಯವಾಗಿದೆ.

## 47. ನದಿಗಳ ಉಪಯೋಗ.

ನದಿಗಳು ಹಲವು ಬಗೆಗಳಲ್ಲಿ ನಮಗೆ ಬೇಕಾಗಿವೆ. ಬೇಸಾಯಕ್ಕೆ ಇವುಗಳಿಂದಾಗುವ ಉಪಯೋಗವನ್ನು ರೈತರೆಲ್ಲ ಬಲ್ಲರು. ಭೂಮಿಯನ್ನು ಹುಲುಸಾಗಿ ಮಾಡುತ್ತವೆ; ಪಯಿರುಪಚ್ಚೆಗಳು ಚೆನ್ನಾಗಿ ಬೆಳೆವಂತೆ ಮಾಡುತ್ತವೆ; ಸಾಗುವಳಿಗೂ ದನಕರುಗಳು ಕುಡಿವುದಕ್ಕೂ ಯಥೇಚ್ಛವಾಗಿ ನೀರನ್ನು ಒದಗಿಸಿಕೊಡುವುವು. ಈಜಿಪ್ಟ್‌ದೇಶಕ್ಕೆಲ್ಲ ಒಂದೇ ದೊಡ್ಡನದಿ ಆಧಾರ. ಅಲ್ಲಿಯ ಜನರು ಪಯಿರನ್ನೇ ನಂಬಿಕೊಂಡಿದ್ದಾರೆ; ಆ ಪಯಿರಿನ ಬೆಳೆಯೆಲ್ಲ ನೈಲ್ ನದಿಯೊಂದರಿಂದಲೇ ನಡೆಯಬೇಕಾಗಿದೆ. ಬೇಸಾಯಕ್ಕೆ ಗಂಗೆ, ಕಾವೇರಿ, ಕೃಷ್ಣೆ, ಕಪಿಲೆ ಮುಂತಾದ ನದಿಗಳು ಮಾಡುತ್ತಿರುವ ಉಪಕಾರವನ್ನು ನಾವೆಲ್ಲ ಎಂದಿಗೂ ಮರೆಯಲಾರೆವು. ಬೇಸಾಯವಲ್ಲದೆ ಬೇರೆ ಕೆಲಸಗಳಿಗೂ ನದಿಗಳನ್ನು ಪಯೋಗಿಸಿಕೊಳ್ಳುವುದುಂಟು; ನದೀಪ್ರವಾಹಶಕ್ತಿಯನ್ನು ಒಂದು ಕಡೆ ಕೂಡಿಸಿಟ್ಟು ಹತ್ತಿಯನ್ನು ನೂಲುವ, ಮರವನ್ನು ಕೊಯ್ಯುವ, ಧಾನ್ಯವನ್ನು ಬೀಸುವ ಯಂತ್ರಗಳನ್ನು ನಡೆಯಿಸಲು ವಿದ್ಯುಚ್ಛಕ್ತಿಯನ್ನುಂಟುಮಾಡುವುದಕ್ಕೂ ಆ ಶಕ್ತಿಯನ್ನು ಬಳಸುವರು. ಮೈಸೂರು ಸರ್ಕಾರದವರು

ಶಿವನಸಮುದ್ರದಲ್ಲಿ ಕಾವೇರಿಯ ಮೂಲಕ ಮಾಡಿರುವ ಅದ್ಭುತವಾದ ಏರ್ಪಾಡೇ ಇದಕ್ಕುದಾಹರಣೆ.

ಮೊದಲು ವ್ಯವಸಾಯಕ್ಕೋಸ್ಕರವೂ, ಮನೆಗೆಲಸಕ್ಕಾಗಿಯೂ, ಜನರು ಮನೆಗಳನ್ನು ನದೀತೀರದಲ್ಲಿ ಕಟ್ಟಿಕೊಳ್ಳುತ್ತಾರೆ. ಹೀಗೆ ಅನೇಕರು ಮಾಡು-ವುದರಿಂದ, ದಡಗಳಲ್ಲಿ ಹಲವು ದೊಡ್ಡ ಪಟ್ಟಣಗಳುಂಟಾಗುವುವು. ಹಡಗು-ಗಳನ್ನೂ ದೋಣಿಗಳನ್ನೂ ನಡೆಸುವಷ್ಟುಆಳವಾಗಿಯೂ ಅಗಲವಾಗಿಯೂ ಇರುವ ದೊಡ್ಡ ನದಿಗಳಿಂದ ವ್ಯಾಪಾರಕ್ಕೆ ಬಲು ಸಹಾಯವುಂಟು. ಹೇಗೆಂ-ದರೆ, ಪದಾರ್ಥಗಳನ್ನು ನದೀತೀರದಲ್ಲಿರುವ ಊರಿಂದೂರಿಗೆ ಸಾಗಿಸಲುಸೌ-ಕರ್ಯವು ಹೆಚ್ಚುವುದು. ಸೌಲಭ್ಯವನ್ನೂ ವೆಚ್ಚವನ್ನೂ ನೋಡಿದರೆ, ಪದಾ-ರ್ಥಗಳನ್ನು ಸಾಗಿಸುವ ವಿಷಯದಲ್ಲಿರಾಜಮಾರ್ಗಕ್ಕಿಂತನದಿಗಳೇಉತ್ತಮ. ಆದರೆ ರೈಲು ಬಂದಮೇಲೆ ನದಿಗಳನ್ನು ವ್ಯಾಪಾರಕ್ಕೆ ಅಷ್ಟುಉಪಯೋಗಿಸಿ ಕೊಳ್ಳುವುದಿಲ್ಲ. ಸರಕುಗಳನ್ನು ನೀರಿನ ಮೇಲೆ ಸಾಗಿಸಲು ಕೊಂಚ ವೆಚ್ಚ ಮಾಡಿದರೂ ಸಾಕಾಗಿರುವುದರಿಂದ, ದೊಡ್ಡನದಿಗಳಿಂದನಾಲೆಗಳನ್ನು ಕಟ್ಟಿ ಅವುಗಳ ಮೇಲೆ ಬೇಕಾದ ಸಾಮಾನನ್ನು ಸಾಗಿಸುವ ಪದ್ಧತಿ ಈಗಲೂ ಎಷ್ಟೋ ಕಡೆಗಳಲ್ಲಿವೆ

ದೇಶವನ್ನು ಶತ್ರುಗಳ ವಶವಾಗದಂತೆ ಉಳಿಸುವಪ್ರಾಕೃತಿಕ ವಸ್ತುಗಳಲ್ಲಿ ನದಿಗಳು ಸಮುದ್ರಕ್ಕೆ ಎರಡನೆಯವು. ಸೇತುಗಳು ನದಿಗಳನ್ನು ಸುಲಭವಾಗಿ ದಾಟಲು ಅನುಕೂಲವಾದ ಸ್ಥಳಗಳು. ಇವುಗಳನ್ನು ಚೆನ್ನಾಗಿ ಕಾಪಾಡಿ-ಕೊಂಡರೆ, ನದಿಗಳನ್ನು ಶತ್ರುಗಳು ದಾಟಿಬರುವದಸಾಧ್ಯ. ಈ ವಿಷಯದಲ್ಲಿ ಪರ್ವತಪಙ್ಕ್ತಿಗಿಂತಲೂ ನದಿಯೇ ಒಳ್ಳೆಯದು. ನದಿಯನ್ನು ಕಾದಿರುವುದು. ಸುಲಭ;ಶತ್ರುಗಳು ಮೇಲೆ ಬೀಳದಂತೆ ನೋಡಿಕೊಳ್ಳಲು,ಸೈನ್ಯವನ್ನು ನದೀ-ತೀರದಲ್ಲಿ ಸ್ಥಲದಿಂದ ಸ್ಥಲಕ್ಕೆ ಬಹಳ ತ್ವರೆಯಿಂದ ನಡೆಸಬಹುದು. ಪರ್ವತ-ಶ್ರೇಣಿಯೂ ನದಿಯೂ ಸುತ್ತಿಕೊಂಡಿರುವ ದೇಶವನ್ನು ಕಾಪಾಡಿಕೊಳ್ಳು-ವುದು ಅತಿಸುಲಭ. ಹೈದರ್ ಮತ್ತು ಟಿಪ್ಪು ಇವರ ಕಾಲದಲ್ಲಿ ಶ್ರೀರಂಗ-ಪಟ್ಟಣವನ್ನು ಕಾಪಾಡುವುದರಲ್ಲಿ ಕಾವೇರೀನದಿಯೂ ಬಲವಾದ ಕೋ-ಟೆಯಂತೆ ಎಷ್ಟು ಅನುಕೂಲವಾಗಿದ್ದಿತು !

ವ್ಯವಸಾಯ, ವ್ಯಾಪಾರ ಮುಂತಾದುವುಗಳಿಗೆ ಸಹಕಾರಿಯಲ್ಲದೆ, ನದಿ ನೋಡುವವರಿಗೆನೇತ್ರಾನಂದವನ್ನೂ ಉಂಟುಮಾಡುವುದು. ವಸಂತಕಾಲ-

ದಲ್ಲಿಯೂ ಬೇಸಿಗೆಯಲ್ಲಿಯೂ ನದಿಯ ನೀರು ತುಂಬಾ ಇಳಿದು ಸ್ವಚ್ಛವಾಗಿ ಹೊಳೆಯುತ್ತಲಿರುವುದು ಆಗ ಅದರ ಸೂಕ್ಷ್ಮವಾದ ಅಲೆಗಳೂ ಮೃದುವಾದ ಧ್ವನಿಯೂ ಆನಂದಗೊಳಿಸುವುವು. ದಡದ ಗಿಡಗಳು ಹೂತಿರುವುವು. ಬಿಸಿ-ಲಿನ ತಾಪವನ್ನು ಸೈರಿಸಲಾರದೆ ನದಿಯ ಒಳಿಗೆ ಬಂದವರ ಮೇಲೆ ತಂಗಾಳಿ ಬೀಸಿ ಸುಖವನ್ನು ಕೊಡುವುದು. ಪ್ರಾತಸ್ಸಾಯಂಕಾಲಗಳಲ್ಲಿ ಸಂಧ್ಯಾರಾಗವು ನೀರಿನಲ್ಲಿ ಪ್ರತಿಬಿಂಬಿಸಿರುವುದನ್ನೂ, ಸುತ್ತಲೂ ನಿಶ್ಯಬ್ದವಾಗಿ, ನದಿ ಮಾತ್ರ ಮೆಲ್ಲಗೆ ಸದ್ದು ಮಾಡುತ್ತ ಹರಿವುದನ್ನೂ, ನದಿಯ ಸುತ್ತಮುತ್ತಲೂ ಇರುವ ಸನ್ನಿವೇಶವನ್ನೂ ಸಾವಧಾನವಾಗಿ ನೋಡಿದವರ ಮನಸ್ಸಿಗೆ ಹರ್ಷವಾಗುವುದಲ್ಲದೆ ನದಿಯ ವಿಷಯದಲ್ಲಿ ಭಕ್ತಿಯುಂಟಾಗುವುದು. ಆದುದರಿಂದಲೇ ಹಿಂದೂದೇಶದಲ್ಲಿ ಗಂಗೆ ಕಾವೇರಿ ಮುಂತಾದ ಎಲ್ಲಾ ನದಿಗಳ ನೀರು ಪರಮ ಪವಿತ್ರವಾದುದೆಂದೂ, ಅದರಲ್ಲಿ ಸ್ನಾನಮಾಡುವುದರಿಂದ ಸದ್ಗತಿಯಾಗುವುದೆಂದೂ ನಂಬಿ, ಜನರು ಭಕ್ತಿಯಿಂದ ನಡೆವುದೇನೂ ಆಶ್ಚರ್ಯವಲ್ಲ.

## 48. ಹಿಂದೂದೇಶದ ಅಂಗಡಿಬೀದಿ.

ನಮ್ಮ ದೇಶದ ದೊಡ್ಡ ಪಟ್ಟಣಗಳಲ್ಲಿರುವ ಅಂಗಡಿಬೀದಿಗಳನ್ನು ಯಾವನಾದರೂ ಅನ್ಯದೇಶದವನು ನೋಡಿದರೆ, ಮೊದಲು ಒಂದೇ ವಿಧವಾದ ಅಂಗಡಿ-ಗಳು ಒಟ್ಟಿಗೆ ಸೇರಿರುವುದರ ಮೇಲೆ ಅವನ ಕಣ್ಣುಗಳು ಬೀಳುತ್ತವೆ. ಒಂದು ಬೀದಿಯಲ್ಲಿ ಬಟ್ಟೆಗಳನ್ನು ಮಾತ್ರ ಮಾರುವ ಅಂಗಡಿಗಳೇ ಹೊರತು ಇನ್ನಾವ ಅಂಗಡಿಗಳೂ ಇರುವುದಿಲ್ಲ. ಇನ್ನೊಂದು ಬೀದಿಯಲ್ಲಿ ಬರೀ ಪಾತ್ರೆಗಳ ಅಂಗಡಿಗಳೂ, ಮತ್ತೊಂದರಲ್ಲಿ ಕೇವಲ ಕಬ್ಬಿಣದ ಅಂಗಡಿಗಳೂ, ಒಂದು ಕಡೆ ಬರೀ ಗಂದಿಗೆ ಅಂಗಡಿಗಳೂ, ಮತ್ತೊಂದೆಡೆ ಬರೀ ಅಕ್ಕಿಯ ಮಳಿಗೆಗಳೂ ಇರುತ್ತವೆ. ಅನುಕೂಲ್ಯದ ವಿಷಯದಲ್ಲಿ ಈ ಕ್ರಮವು ಯೂರೋಪಿನಲ್ಲಿರುವ ಅಂಗಡಿಗಳ ಕ್ರಮಕ್ಕಿಂತ ಕೀಳಾಗಿರುವಂತೆ ತೋರುವುದು. ಯೂರೋಪಿನಲ್ಲಿ ಪಟ್ಟಣಗಳನ್ನು ಕೆಲವು ಭಾಗಗಳಾಗಿ ವಿಂಗಡಿಸಿ, ಪ್ರತಿಭಾಗದಲ್ಲಿಯೂ ಎಲ್ಲಾ ತರದ ಕೆಲಸಗಾರರನ್ನೂ ಇರಿಸಿರುತ್ತಾರೆ. ಇದರಿಂದ ಜನರಿಗೆ ಅನು-ಕೂಲ್ಯವು ಹೆಚ್ಚುವುದಲ್ಲದೆ, ಬಹಳ ಹೊತ್ತು ಮಿಗುವುದು.

ಹಿಂದೂದೇಶದಲ್ಲಿಯೂ ಇದಕ್ಕೆ ಹತ್ತಿರದ ದೇಶಗಳಲ್ಲಿಯೂ ಇರುವ ಅಂಗಡಿಗಳಲ್ಲಿ ಪದಾರ್ಥಗಳಿಗೆ ಬೆಲೆಯೇ ಗೊತ್ತಾಗಿರುವುದಿಲ್ಲ. ಇಂಗ್ಲೆಂಡಿನ-

ಲ್ಲಿಯಾಗಲಿ, ಫ್ರಾನ್ಸಿನಲ್ಲಿಯಾಗಲಿ, ಒಬ್ಬನು ಅಂಗಡಿಗೆ ಬಂದು ಒಂದು ವಸ್ತು-ವನ್ನು ಕೇಳಿದರೆ, ಅಂಗಡಿಯವನು ಅದರ ಬೆಲೆಯನ್ನು ಒಡನೆಯೇ ಗೊತ್ತಾಗಿ ಇಷ್ಟೆಂದು ಹೇಳುತ್ತಾನೆ ಆ ವಸ್ತುವನ್ನು ಮನಸ್ಸು ಬಂದರೆ ತೆಗೆಯಬಹುದು; ಬೆಲೆ ಹೆಚ್ಚೆಂದು ತೋರಿದರೆ ಎರಡನೆಯ ಮಾತೇ ಇಲ್ಲದೆ ಹೊರಟು ಹೋಗ-ಬೇಕು ನಮ್ಮ ದೇಶದಲ್ಲಿ ಅಂಗಡಿಯವನು ಮೊಟ್ಟಮೊದಲು ಹೇಳಿದ ಬೆಲೆ-ಯನ್ನೇ ಕೊಟ್ಟು ಬಿಡುವವನು ಹುಚ್ಚನೆನಿಸಿಕೊಳ್ಳುವನು. ಏಕೆಂದರೆ, ಬಲು-ಹೊತ್ತು ಚೌಕಾಸಿ ಮಾಡಿದರೆ, ಕೊನೆಗೆ ಮೊದಲು ಹೇಳಿದ ಬೆಲೆಯಲ್ಲಿ ಅರ್ಧ ಅಥವಾ ಮೂರರಲ್ಲೊಂದು ಪಾಲಿಗೆ ಇಳಿಸಿಬಿಡುತ್ತಾನೆ ಹೀಗೆ ಚೌಕಾಸಿ ಮಾಡುವುದಕ್ಕೆ ಬಹಳ ಕಾಲವೂ ತುಂಬಾ ತಾಳ್ಮೆಯೂ ಬೇಕು. ಆದರೆ ನಮ್ಮ ದೇಶದವರಿಗೆ ಕಾಲವೆಂದರೆ ಲಕ್ಷ್ಯವಿಲ್ಲ; ಮತ್ತು ನಮ್ಮಂಗಡಿಯವರಿಗೂ ಜನ-ರಿಗೂ ತುಂಬಾ ತಾಳ್ಮೆಯಿರುವಂತೆ ತೋರುತ್ತದೆ. ಹೀಗೆ ಚೌಕಾಸಿ ಮಾಡು-ವುದರಲ್ಲಿ ಹಲವು ವೇಳೆ ಬಲು ಗದ್ದಲವೂ ಆಗುವುದುಂಟು ಕೆಲವು ವೇಳೆ-ವ್ಯಾಪಾರಗಾರರು ತಾವು ಮೊಟ್ಟಮೊದಲು ಹೇಳಿದ ಬೆಲೆಯನ್ನು ಸ್ವಲ್ಪಸ್ವಲ್ಪ-ವಾಗಿ ಕಡಮೆ ಮಾಡುತ್ತಾ, ಕೊಳ್ಳದೆ ಅಂಗಡಿ ಬಿಟ್ಟು ಹೋದವರನ್ನು ಎರಡು ಮೂರು ಸಾರಿ ಹಿಂದಕ್ಕೂ ಮುಂದಕ್ಕೂ ಆಸೆಯಿಂದ ತಿರುಗಾಡಿಸುವುದುಂಟು ಇದು ನೋಡುವವರಿಗೆ ಬಹಳ ವಿನೋದವಾಗಿರುವುದು. ಇದಲ್ಲದೆ ಒಂದೆ-ಅಂಗಡಿಯಲ್ಲಿ ಬಲು ಹೆಚ್ಚು ವ್ಯಾಪಾರ ಮಾಡುವವರನ್ನೂ ಬಲು ಕಡಮೆ ವ್ಯಾ-ಪಾರ ಮಾಡುವವರನ್ನೂ ಒಟ್ಟಿಗೆ ನೋಡಬಹುದು ಅಕ್ಕಿ, ಉಪ್ಪು, ಎಣ್ಣೆ, ತುಪ್ಪ ಮುಂತಾದುವನ್ನು ಮಾರುವ ಚಿಲ್ಲರೆ ಅಂಗಡಿಯಲ್ಲಿ ಕುಳಿತುಕೊಂಡರೆ, ಮೂಟೆಮೂಟೆ ಅಕ್ಕಿ, ಮಣಗಟ್ಲೆ ಎಣ್ಣೆ, ತುಪ್ಪ ಇವುಗಳನ್ನು ತೆಗೆವರನ್ನೂ; ಒಂದು ಪಾವಕ್ಕಿ, ಒಂದೊಂದು ಕಾಸಿಗೆ ಎಣ್ಣೆ ಮತ್ತು ಉಪ್ಪು, ಮೂರು ಕಾಸಿಗೆ ತುಪ್ಪ ಇವುಗಳನ್ನು ಕೇಳುತ್ತಾ ನಿಂತಿರುವವರನ್ನೂ ಒಂದೇ ಸಾರಿ ಕಾಣಬಹುದು. ಹೀಗೆ ಒಂದು ಕಾಸಿನ ವ್ಯಾಪಾರವು ಗಂದಿಗೆಯಂಗಡಿಗಳಲ್ಲಿ ಹೇರಳವಾಗಿ ನಡೆವುದು. ಮತ್ತೊಂದು ವಿಶೇಷವೇನೆಂದರೆ, ಹಿಂದೂದೇಶದ ಅಂಗಡಿಬೀದಿಯಲ್ಲಿ ನಾನಾ ದೇಶದವರು ಬಂದು, ತಮ್ಮ ತಮ್ಮ ದೇಶದ-ಉಡುಪುಗಳನ್ನುಟ್ಟು ತಮ್ಮ ತಮ್ಮ ಭಾಷೆಗಳನ್ನಾಡುತ್ತ ತಿರುಗಾಡುತ್ತಿ-ರುವುದು ಬಲು ಚೆನ್ನಾಗಿ ಕಾಣುತ್ತದೆ

ಹಿಂದೂಗಳು ಮತಾಚಾರಗಳಲ್ಲಿಯೂ, ನಡೆನುಡಿಗಳಲ್ಲಿಯೂ, ಊಟ ಉಪಚಾರಗಳಲ್ಲಿಯೂ ನೂರಾರು ವರ್ಷಗಳ ಹಿಂದೆ ಹೇಗಿದ್ದರೋ ಹಾಗೆಯೇ

ಈಗಲೂ ಇರುವರಷ್ಟೆ. ವ್ಯಾಪಾರಗಾರರ ಜಾತಿ, ಅವರು ಅಂಗಡಿಗಳನ್ನು ಕಟ್ಟುವ ರೀತಿ, ಅವುಗಳಲ್ಲಿ ಸಾಮಾನುಗಳನ್ನಿಡುವ ಕ್ರಮ, ಮಾರುವಾಗ ಬಲು ಚೌಕಾಸಿಮಾಡುವುದು, ಇವೆಲ್ಲವೂ ನೂರಾರು ವರ್ಷಗಳಹಿಂದೆ ಇದ್ದಂತೆಯೇ ಈಗಲೂ ಇವೆ. ಹೀಗೆ ವ್ಯತ್ಯಾಸಗಳನ್ನು ಮಾಡಿಕೊಳ್ಳದಿರುವುದು ಹಿಂದೂಗಳ ಸ್ವಭಾವವು. ವ್ಯಾಪಾರಮಾಡುವಾಗ ಸುಳ್ಳು ಹೇಳಿ ಮೋಸಮಾಡುವುದೂ ಅವರಲ್ಲಿ ಅನೇಕರಿಗೆ ಸಾಮಾನ್ಯವಾಗಿದೆ. ಹಳೆಯ ಸರಕನ್ನು ಹೊಸದೆಂದು ಹೇಳಿ ಕೊಡುವುದು, ಹೆಚ್ಚು ಕ್ರಯವುಳ್ಳದ್ದನ್ನು ಮೊದಲು ತೋರಿಸಿ ಕಡೆಗೆ ಕಡಿಮೆ ಬೆಲೆಯುಳ್ಳದ್ದನ್ನು ಕೊಡುವುದು, ಒಬ್ಬೊಬ್ಬರು ಬಂದರೆ ಒಂದೊಂದು ಬೆಲೆ ಹೇಳುವುದು ಇವು ಮೊದಲಾದ ಹಿಂದೂದೇಶದ ಅಂಗಡಿಯ ಲಕ್ಷಣಗಳು ಜಾಣರಿಗೆ ಥಟ್ಟನೆ ಗೊತ್ತು-ಹತ್ತುವುವು. ಇದರಿಂದ ಹಿಂದೂಗಳನ್ನು ಮೋಸಗಾರರೆಂತಲೂ ಸುಳ್ಳುಗಾರರೆಂತಲೂ ಅನ್ಯದೇಶದವರು ಭಾವಿಸಲು ಅವಕಾಶವಾಗಿದೆ. ಆದರೆ ಈಚೀಚೆಗೆ ಇಂಡಿಯಾದ ದೊಡ್ಡ ಪಟ್ಟಣಗಳಲ್ಲಿ ಕೆಲವು ವರ್ತಕರು, ಅಲ್ಲಿ ಬಂದು ವ್ಯಾ-ಪಾರಮಾಡುತ್ತಿರುವ ಇಂಗ್ಲೀಷರನ್ನನುಸರಿಸಿ, ತಮ್ಮನ್ನು ಸ್ವಲ್ಪಸ್ವಲ್ಪವಾಗಿ ತಿದ್ದಿಕೊಳ್ಳುತ್ತಾ ಬರುತ್ತಿದ್ದಾರೆ. ವ್ಯಾಪಾರಕ್ಕೆ ಪ್ರಾಮಾಣಿಕತೆ ಆವಶ್ಯಕವು. ಒಬ್ಬ ಅಂಗಡಿಯವನು ಪ್ರಾಮಾಣಿಕನೆಂದು ಜನರಿಗೆ ತಿಳಿದರೆ, ಅವರು ಬೇರೆ ಅಂಗಡಿಗಳನ್ನು ಬಿಟ್ಟು ಅವನಂಗಡಿಗೇ ನುಗ್ಗುವರು; ಇದರಿಂದ ಅವ-ನಿಗೆ ವ್ಯಾಪಾರವು ಹೆಚ್ಚಿ, ಲಾಭವು ವಿಶೇಷವಾಗಿ ಬಂದು, ಅವನು ಹಣ-ಗಾರನಾಗುವನು. ಇದನ್ನು ಹಿಂದೂ ವರ್ತಕರೆಲ್ಲಾ ತಿಳಿದ, ವ್ಯಾಪಾ-ರದಲ್ಲಿ ಪ್ರಾಮಾಣಿಕತೆಯನ್ನು ಬಿಡದೆ ಅವಲಂಬಿಸುತ್ತಾ ಬಂದರೆ, ಹಿಂದೂ-ದೇಶದಲ್ಲಿ ಐಶ್ವರ್ಯ ಹೆಚ್ಚಿ ಜನರು ಅತಿಶಯವಾದ ಏಳಿಗೆಗೆ ಬರುವರು.

## 49. ಹವಾದಿಂದ ಮನುಷ್ಯರಿಗಾಗುವ ಬದಲಾವಣೆ.

ಒಂದು ದೇಶದ ಹವಾ ಇನ್ನೊಂದರ ಹವಾದಹಾಗಿರುವುದಿಲ್ಲ. ಹಾಗೆಯೇ ಒಂದು ತರದ ಹವಾದಲ್ಲಿರುವ ಗುಣಗಳಿಗೂ ಮತ್ತೊಂದರಲ್ಲಿರುವ ಜನರ ಗುಣ-ಗಳಿಗೂ ತಾರತಮ್ಯವುಂಟು, ಉಷ್ಣದೇಶದವರಿಗೆ ರಾಗದ್ವೇಷಾದಿಗಳನ್ನು ಬಲು ಸುಲಭವಾಗಿ ಉಂಟುಮಾಡಬಹುದು; ಹೋಗಲಾಡಿಸಲೂಬಹುದು. ಅವರು ಒಂದುಕ್ಷಣದಲ್ಲಿ ಅತಿಪ್ರೀತಿಯನ್ನು ತೋರಿಸುವರು; ಅಲ್ಪಕಾಲದಲ್ಲಿ

ಯೇ ಪರಮದ್ವೇಷಿಗಳಾಗುವರು. ಅವರ ಚಿತ್ತವೃತ್ತಿ ಕ್ಷಣಿಕವು. ಇಪ್ಪತು ವರ್ಷಗಳಿಗೆ ಮುಂಚೆಯೇ ಬಹಳ ಅನುರಾಗವುಳ್ಳವರಾಗುವರು. ಕೋಪಬಂದರೆ ಅವರು ರೇಗುವುದಕ್ಕೆ ಮಿತಿಯೇ ಇಲ್ಲ. ಚಿರಕಾಲದಿಂದಲೂ ಇದ್ದ ಸ್ನೇಹವು ಅಲ್ಪಕಾರಣದಿಂದ ಹಠಾತ್ತಾಗಿ ಹೋಗಿಬಿಡುವುದುಂಟು. ಉಷ್ಣಭೂಮಿ ಸ್ವಲ್ಪ ಶ್ರಮಪಟ್ಟರೂ ಬೆಳೆಯಾಗುವಷ್ಟು ಹಸನಾಗಿರುವುದು. ಆದುದರಿಂದ ಜನರು ವಿಶೇಷವಾಗಿ ಕಷ್ಟಪಡುವುದನಾವಶ್ಯಕ. ಹೀಗೆ ಸುಲಭವಾಗಿ ಹೊಟ್ಟೆ ಪಾಡು ನಡೆವುದರಿಂದ ಜನರು ಸೋಮಾರಿಗಳಾಗುತ್ತಾರೆ. ಕೆಲಸಮಾಡುವ ಸಾಮರ್ಥ್ಯವೂ ಕೊಬ್ಬೂ ಸೆಕೆಯಿಂದ ನಾಶವಾಗಿ ಅವರ ಮೈಯುಡುಗಿ ಜಳ್ಳಾಗುವುದು.

ಶೀತದೇಶಗಳಲ್ಲಿ ಪ್ರಾಣಿವರ್ಗವು ಚಳಿಯಿಂದ ಕೈಕಾಲು ಕಟ್ಟಿಕೊಂಡು, ಸ್ಥಳದಿಂದ ಸ್ಥಳಕ್ಕೆ ಚಲಿಸಲಾರದೆ, ಇದ್ದ ಕಡೆಯೇ ಇದ್ದು ಗಡಗಡನೆ ನಡು-ಗುತ್ತಾ ಯಾವ ಕೆಲಸವನ್ನೂ ಮಾಡಲಾಗದೆ, ಬೆಳೆವಳಿಗೆಯಲ್ಲಿಯೂ ಕಡಮೆ ಯಾಗುತ್ತಾ ಬರುತ್ತದೆ. ಇಂಥದೇಶದ ಜನರಿಗೆ ಎಲ್ಲಾ ಕೆಲಸದಲ್ಲಿಯೂ ಬಲು ಉಪೇಕ್ಷೆ. ಬಲವಾದ ಪ್ರೀತಿ, ಸ್ನೇಹ, ದ್ವೇಷಗಳು ಕಂಡುಬರುವುದೇ ಇಲ್ಲ. ಜನರು ಸ್ವಾರ್ಥಪರರಾಗಿರುವರು. ಬಲು ಚಳಿಯು ಶಕ್ತಿಯನ್ನು ಕುಂದಿ ಸುವುದು. ಅವರಿಗೆ ಯಾವ ಕೆಲಸಮಾಡಲೂ ಉತ್ಸಾಹವೇ ಇರುವುದಿಲ್ಲ. ಪಟ್ಟ ಕಷ್ಟವು ನಿಷ್ಫಲವಾಗುವಷ್ಟು ನೆಲವು ಒರಟಾಗಿರುವುದರಿಂದ ಜನರು ಪ್ರಯತ್ನವನ್ನೇ ಮಾಡುವುದಿಲ್ಲ.

ಸಮಶೀತೋಷ್ಣದೇಶಗಳಲ್ಲಿ ಚಳಿಯೂ ಸೆಕೆಯೂ ಸಮವಾಗಿರುವುವು. ಹಾಗೆಯೇ ಅಲ್ಲಿಯ ಜನರ ಮನೋವೃತ್ತಿಗಳು ಪ್ರಬಲವಾಗಿರುವುದಿಲ್ಲ. ಎಲ್ಲಾ ವಿಷಯಗಳಲ್ಲಿಯೂ ಜನರು ವಿವೇಕಿಗಳಾಗಿರುವರು ಅನುರಾಗ, ಧೈರ್ಯ, ದ್ವೇಷ ಮುಂತಾದುವು ಅವರಲ್ಲಿ ಉಂಟು; ಆದರೆ ಅತ್ಯಧಿಕವಾಗಿರುವುದಿಲ್ಲ. ಸಮಶೀತೋಷ್ಣದೇಶಗಳಲ್ಲಿ ಕಷ್ಟಪಡದೆ ಬೆಳೆಯಾಗುವುದಿಲ್ಲ; ಆದರೆ ಪಟ್ಟ ಕಷ್ಟವೆಲ್ಲಾ ಸಫಲವಾಗುವುದು. ಇದರಿಂದ ಜೀವನಕ್ಕೋಸ್ಕರ ಶ್ರಮಪಡಲು ಕುತೂಹಲ ಹುಟ್ಟಿ ಜನರು ಕಷ್ಟಪಟ್ಟು ಕೆಲಸಮಾಡುವ ಸ್ವಭಾವವುಳ್ಳವರಾ-ಗುವುದಲ್ಲದೆ, ಚಟುವಟಿಕೆಯೂ ಸಾಮರ್ಥ್ಯವೂ ಅವರಲ್ಲಿ ಹೆಚ್ಚುತ್ತವೆ.

ಉಷ್ಣದೇಶಗಳಲ್ಲಿ ಕರಿಯಮೋಡಗಳ ಗುಂಪುಗಳೂ ಮಿಂಚುಗಳ ಹೊ-ಳಪುಗಳೂ ಭಯಂಕರವಾದ ಗುಡುಗುಗಳ ಆರ್ಭಟವೂ ಆಕಾಶದಲ್ಲಿ ತುಂಬಿ-

ರುವುವು;ಎತ್ತರವಾದ ಪರ್ವತಪಙ್ಕ್ತಿಗಳೂ ದೊಡ್ಡದೊಡ್ಡನದಿಗಳೂಎಲ್ಲೆಲ್ಲಿಯೂ ವಿಶೇಷವಾಗಿ ಕಾಣುವುವು. ಇವುಗಳ ದರ್ಶನದಿಂದಜನರಲ್ಲಿ, ಸ್ವಭಾವವನ್ನು ಮೀರಿದ ಅತಿಶಯೋಕ್ತಿ ಉತ್ಪ್ರೇಕ್ಷೆ ಮೊದಲಾದವರ್ಣನೆಗೆಬೇಕಾದ ಊಹನಾಶಕ್ತಿಯುಂಟಾಗುವುದು. ಸಮಶೀತೋಷ್ಣದೇಶಗಳಲ್ಲಿಯಾದರೋ ಪ್ರಪಂಚದವಸ್ತುಗಳು ಶಾಂತಸ್ವಭಾವವುಳ್ಳವುಗಳಾಗಿರುವಂತೆಕಾಣುತ್ತವೆ, ಜನರ ಊಹನಾಶಕ್ತಿಗೆ ಅಷ್ಟು ಅವಕಾಶವಿಲ್ಲ. ಆದುದರಿಂದ ಅವರಿಗೆ ಸ್ವಭಾವವರ್ಣನೆಯ ಕಾವ್ಯಗಳನ್ನು ಬರೆಯಲುಮನಸ್ಸು ಓಡುವುದು. ಯುಕ್ತಾಯುಕ್ತವಿಚಾರಪರತೆ, ನೀತಿಯೊಡಗೂಡಿದ ಆಶಯಗಳುಇವರಲ್ಲಿ ತುಂಬವೆ. ಅತಿಶೀತದೇಶದಲ್ಲಿ ಎಲ್ಲಿ ನೋಡಿದರೂ ಕತ್ತಲೆ ಕವಿದುಕೊಂಡಂತಿರುವುದು. ಇದರಿಂದ ಜನರು ಮಂಕು ಮುಚ್ಚಿಕೊಂಡು ಮೂಢರಾಗಿರುವರು. ಉಷ್ಣದೇಶದ ಅದ್ಭುತವಾದ ಪ್ರಾಕೃತಿಕ ವಸ್ತುಗಳು ಆಸ್ತಿಕತೆಯನ್ನುಂಟುಮಾಡಿ ಜನರಿಗೆ ದೇವರಲ್ಲಿ ಭಕ್ತಿಯನ್ನು ಹೆಚ್ಚಿಸುತ್ತವೆ. ಸಮಶೀತೋಷ್ಣವಲಯದಲ್ಲಿ ಜನರಿಗ ತಮ್ಮಲ್ಲಿ ತಮಗೆ ನಂಬಿಕೆ ಹೆಚ್ಚು; ಅವರು ಸಾಮಾನ್ಯವಾಗಿ ನಾಸ್ತಿಕರು, ಉಷ್ಣದೇಶದಲ್ಲಿ ರಸಭರಿತ ಕಾವ್ಯಕ್ಕೂ, ಸಂಗೀತ ಚಿತ್ರ ಮೊದಲಾದ ಕುಶಲವಿದ್ಯೆಗಳಿಗೂ, ಸಮಶೀತೋಷ್ಣದೇಶದಲ್ಲಿ ಶಾಸ್ತ್ರಗಳಿಗೂ ಪ್ರಾಬಲ್ಯವು. ಶೀತದೇಶದಲ್ಲಿ ಯಾವ ವಿಧವಾದ ವಿದ್ಯೆಯೂ ಇಲ್ಲದೆ ಜನರು ಬುದ್ಧಿಯಲ್ಲಿ ಚತುಷ್ಪಾದಗಳಿಗೆ ಸಮಾನರಾಗಿರುವರು.

ಉಷ್ಣದೇಶಗಳಲ್ಲಿ ಪ್ರಕೃತಿಸಿದ್ಧವಾದ ಆನುಕೂಲ್ಯಗಳಿಂದ ನಾಗರಿಕತೆ, ಮೊದಲೇ ಉಂಟಾಗುವುದು;ಆದರೆಒಂದೆಲ್ಲೆಯವರೆಗೂಹೋಗಿ ಮುಂದಕ್ಕೆ ಸುಳಿಯದೆಅಲ್ಲಿಯೇನಿಂತು ಬಿಡುತ್ತದೆ. ಇಂಥ ದೇಶಗಳು ಸಾಮಾನ್ಯವಾಗಿ ನಿರಂಕುಶ ಪ್ರಭುಗಳಕೈಕೆಳಗಿದ್ದು, ಅವರು ಮಾಡಿದಏರ್ಪಾಡುಗಳನ್ನು ಜನರು ಉಸಿರೆತ್ತದೆ ಅನುಸರಿಸುವರು, ಸಮಶೀತೋಷ್ಣ ದೇಶದಲ್ಲಿ ನಾಗರಿಕತೆ ಈಚೆಗೆ ಹುಟ್ಟಿದರೂ, ಯಾವಾಗಲೂ ಹೆಚ್ಚುತ್ತ, ಸಾಹಿತ್ಯ, ತತ್ವವಿಚಾರ, ಶಾಸ್ತ್ರ ಮೊದಲಾದ ಎಲ್ಲಾ ಭಾಗಗಳಲ್ಲಿಯೂ ಏಳಿಗೆಗೆ ಬರುತ್ತದೆ. ಇಲ್ಲಿಯ ಜನರಿಗೆಯಾವವಿಧವಾದತೊಂದರೆಯನ್ನೂ ಸಹಿಸದೆಸ್ವತಂತ್ರವಾಗಿಜೀವಿಸಬೇಕೆಂಬ ಬುದ್ಧಿಯುಂಟಾಗುವುದು. ಆದುದರಿಂದ ಇಲ್ಲಿಪ್ರಜಾಪ್ರಭುತ್ವವೇ ಹೆಚ್ಚು. ಶೀತವಲಯದಲ್ಲಿ ನಾಗರಿಕತೆಯ ಸೆಲೆಯೇ ಇರುವುದಿಲ್ಲ; ಯಾವ ವಿಧವಾದ ರಾಜ್ಯಭಾರವೂ ಇಲ್ಲ. ಪ್ರತಿಯೊಬ್ಬನೂ ತನಗೆ ತಾನೇ ದೊರೆ.

## 50. ಸೋಮಾರಿತನ.

ಕೆಲಸಮಾಡುತ್ತಿರಬೇಕಾದಕಾಲದಲ್ಲಿ ಕೆಲಸಮಾಡದೆ ಸುಮ್ಮನಿರುವುದಕ್ಕೆ ಸೋಮಾರಿತನವೆಂದು ಹೆಸರು. ಸೋಮಾರಿತನದಿಂದ ಹಲವು ಕೆಡಕುಗಳುಂಟಾಗುವುವೆನ್ನುವುದಕ್ಕೆ ಏನೂ ಸಂದೇಹವಿಲ್ಲ. ವಿದ್ಯಾರ್ಥಿ ಸೋಮಾರಿತನದಿಂದ ವ್ಯರ್ಥವಾಗಿ ಕಾಲಕಳೆವುದನ್ನು ಕಲಿತರೆ ಮುಂದೆದುಃಖಕ್ಕೂ ಕೊರತೆಗೂ ಗುರಿಯಾಗುವನು. ಸರಿಯಾಗಿ ಬಾಳುವುದಕ್ಕೆ ಯೋಗ್ಯತೆಯನ್ನು ಕೊಡುವವಿದ್ಯೆಯನ್ನು ಸೋಮಾರಿತನದಿಂದ ಸಂಪಾದಿಸಿಕೊಳ್ಳಲಾರದೆಕೆಡುವನು. ಬಾಲ್ಯದಲ್ಲಿ ಕಲಿತ ಸೋಮಾರಿತನವು ಅವನಿಗೆಸ್ವಭಾವವಾಗಿ, ಅವನು ದೊಡ್ಡವನಾದಾಗ ಯಾವ ಕಸಬನ್ನವಲಂಬಿಸಿದರೂ ಚೆನ್ನಾಗಿ ಕಷ್ಟಪಟ್ಟು ಕೆಲಸಮಾಡಲಾಗುವುದಿಲ್ಲ. "ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ?'' ಒಬ್ಬಹುಡುಗನು ಬುದ್ಧಿವಂತನಾಗಿರಬಹುದು; ಆದರೆ ಅವನು ಸೋಮಾರಿಯಾಗಿದ್ದರೆ, ಅವನಿಗಿಂತ ಬುದ್ಧಿಯಲ್ಲಿ ಕೀಳಾಗಿದ್ದರೂ ಕಷ್ಟಪಟ್ಟುಆಸಕ್ತಿಯಿಂದ ಕೆಲಸಮಾಡುವವರಿಗೆ ಹಿಂದೆಬೀಳುವನು. ಸೋಮಾರಿಯ ಮುಖ್ಯಾಭಿಪ್ರಾಯವು ಕೆಲಸಮಾಡುವುದನ್ನು ದ್ವೇಷಿಸುವುದು. ಇದರಿಂದ ಅವನ ಕೋರಿಕೆಗೇ ಕುಂದು ಬರುವುದು. ಯಾವನು ಕೆಲಸ ಮಾಡುತ್ತಿರಬೇಕಾದ ವೇಳೆಯಲ್ಲಿ ಕೆಲಸಮಾಡದೆ ಕಾಲಕಳೆವನೋ ಅವನು ಬಹಳ ಕೆಲಸವನ್ನು ಒಟ್ಟಿಗೆ ಮಾಡಬೇಕಾಗಿ ಬರುವುದು. ಪ್ರತಿದಿನವೂ ಸ್ಕೂಲಿನಲ್ಲಿ ಹೇಳಿಕೊಡುವ ಪಾಠವನ್ನು ಒಬ್ಬ ವಿದ್ಯಾರ್ಥಿ ಆಯಾದಿನವೇ ಓದದೆ ಸೋಮಾರಿತನದಿಂದ ಉಪೇಕ್ಷಿಸಿದರೆ, ಕೊನೆಗೆ ಪರೀಕ್ಷೆ ಸಮೀಪಿಸಿದಾಗ ಹಿಂದಲ ಪಾಠಗಳನ್ನೆಲ್ಲಾ ಒಟ್ಟಿಗೆಸ್ವಲ್ಪಕಾಲದಲ್ಲಿಯೇ ಕಲಿಯಬೇಕಾಗಿಬರುವುದು. ಒಬ್ಬಧಿಕಾರಿಯು ಬಂದ ಕಾಗದಗಳಿಗೆ ಆಯಾದಿನವೇ ಯೋಚಿಸಿ ಉತ್ತರಕೊಡುವುದನ್ನು ಉದಾಸೀನಮಾಡಿದರೆ, ಕೊನೆಗೆ ನೂರಾರು ಕಾಗದಗಳಿಗೆ ಒಂದೇಸಲ ಉತ್ತರಕೊಡಬೇಕಾಗಿ ಬಂದು ತೊಂದರೆಯಾಗಬಹುದು.

ಹಣಗಾರರು ಕೆಲಸಮಾಡುವ ಆವಶ್ಯಕತೆಯೇನೂ ಇಲ್ಲವೆಂದು ಕೆಲವರು ಯೋಚಿಸಬಹುದು. ಹಣಗಾರರಿಗೂ ಸೋಮಾರಿತನದಿಂದ ಕೇಡುಗಳಾಗುವುವೇ ಹೊರತು ಯಾವ ಲಾಭವೂ ಇಲ್ಲ. ಇವರು ಇಲ್ಲಿದ್ದ ಹುಲ್ಲುಕಡ್ಡಿಯನ್ನು ಅಲ್ಲಿ ಎತ್ತಿಹಾಕದೆ ಸುಮ್ಮನೆ ಕುಳಿತಿರುವುದಕ್ಕೆ ಯಾರ ಅಡ್ಡಿಯೂ

ಇಲ್ಲ. ಆದರೆ ಹೀಗೆ ತೀರ ಕೆಲಸಮಾಡದಿರುವುದು ಅಸೌಖ್ಯಕ್ಕೆ ಕಾರಣವು. ಒಂದು ಕೆಲಸಮಾಡಿ ಜುಗುಪ್ಸೆಯಾದರೆ ಮತ್ತೊಂದನ್ನು ತೊಡಗುವುದು ಸಾಮಾನ್ಯವಾಗಿ ಎಲ್ಲರ ವಾಡಿಕೆ. ಯಾರು ಯಾವ ಕೆಲಸವನ್ನೂ ಮಾಡದೆ ಬದುಕುವುದಕ್ಕೆ ಹೋಗುವರೋ ಅವರು ಸೋಮಾರಿಯೆಂದು ಹೀಯಾಳಿಸಿಲ್ಪಟ್ಟು ಮರ್ಯಾದೆಯನ್ನು ಕಳೆದುಕೊಳ್ಳುವರು; ಉಂಡನ್ನವು ಅರಗದೆ ಬೊಜ್ಜು ಬೆಳೆದು, ತಮ್ಮ ಮೈಯನ್ನು ತಾವೇ ಎತ್ತುವುದಕ್ಕೆ ಆಗದಷ್ಟು ಸ್ಥೂಲರಾಗಿ ಹಲವುಬಗೆಯ ಬೇನೆಗಳಿಗೆ ಗುರಿಯಾಗುವರು. ಮಾಡುವುದಕ್ಕೆ ಯಾವ ಕೆಲಸವೂ ಇಲ್ಲದೆ ಸುಮ್ಮನೆ ಕುಳಿತಿರುವುದರಿಂದ ಮನಸ್ಸಿಗೆ ಬೇಸರಿಕೆಯಾಗುವುದು ಎಲ್ಲರಿಗೂ ತಿಳಿದೇ ಇದೆ. ಇದಲ್ಲದೆ ಯಾವಕೆಲಸವನ್ನೂ ಮಾಡದೆ ಕುಳಿತಿರುವ ಅನೇಕರ ಮನಸ್ಸು ದುರ್ವ್ಯಾಪಾರಗಳಲ್ಲಿ ಓಡುವುದು. ಇದರಿಂದ ಅವರಿಗೆ ಕಷ್ಟವು ಸಿದ್ಧವು. ‟ಜನರು ಅನುಭವಿಸುವ ಕಷ್ಟಗಳ ಹತ್ತರಲ್ಲಿ ಒಂಬತ್ತುಪಾಲು ಸೋಮಾರಿತನದಿಂದಲೇ ಉಂಟಾಗುವುವು'' ಎಂದು ಒಬ್ಬ ಆಂಗ್ಲೇಯ ಪಂಡಿತನು ಹೇಳಿರುವನು.

ಸೋಮಾರಿತನವು ಮನುಷ್ಯರ ಮೈಯಲ್ಲಿಯೇ ಇರುವ ದೊಡ್ಡ ಶತ್ರುವು; ಕೆಲಸಮಾಡುವುದಕ್ಕೆ ಸಮಾನವಾದ ನಂಟನು ಅವರಿಗೆ ಯಾರೂ ಇಲ್ಲ; ಕೆಲಸಮಾಡಿ ಕೆಟ್ಟವನಿಲ್ಲ; ಕೆಲಸಗಾರನನ್ನು ಸಿರಿಯೊಲಿವುದು. ಸೌಖ್ಯವನ್ನು ಬಯಸುವವರು ಕೆಲಸಮಾಡುವುದಾವಶ್ಯಕ. "ಕೈಕೆಸರಾದರೆ ಬಾಯಿ ಮೊಸರಾಗುವುದು," "ಕೂತುಂಬವನಿಗೆ ಕುಡಿಕೆಹಣ ಸಾಲದು" ಎಂದು ವಾಡಿಕೆಯಾಗಿ ಹೇಳುತ್ತಾರಲ್ಲವೆ? ಊಟದಿಂದ ನಮಗೆ ತೃಪ್ತಿಯಾಗಬೇಕಾದರೆ-ಊಟಕ್ಕೆಮುಂಚೆ ಸ್ವಲ್ಪಹೊತ್ತಿನವರೆಗೂ ಹೇಗೆ ತಿಂಡಿಯಿಲ್ಲದಿರುವುದಾವಶ್ಯಕವೋ ಹಾಗೆಯೇ ವಿಶ್ರಾಂತಿ ವಿನೋದಗಳಿಂದ ನಮಗೆ ಸಂತೋಷವುಂಟಾಗಬೇಕಾದರೆ, ಮೊದಲು ಕಷ್ಟಪಟ್ಟು ಕೆಲಸಮಾಡಿ ದಣಿದಿರಬೇಕು. ಯಾವ ಸೋಮಾರಿಯು ಯಾವಾಗಲೂ ಕೆಲಸವಿಲ್ಲದೆ ಸುಮ್ಮನೆ ಕುಳಿತಿದ್ದರೆ ಬಲು ಸುಖವುಂಟಾದೀತೆಂದು ಯೋಚಿಸುವನೋ ಅವನು, ಬೆಳಗಿನಿಂದ ಸಂಜೆಯವರೆಗೂ ಎಡಬಿಡದೆ ಮಿಠಾಯಿಯನ್ನು ತಿನ್ನುವುದು ಒಳ್ಳೆಯದೆಂದು ಯೋಚಿಸುವ ಹುಡುಗನಂತೆ ಬುದ್ಧಿಹೀನನೆಂಬುದರಲ್ಲಿ ಸಂದೇಹವಿಲ್ಲ.

## 51. ಐಶ್ವರ್ಯ.

ಈ ಪ್ರಪಂಚದಲ್ಲಿ ಐಶ್ವರ್ಯವನ್ನೊಲ್ಲದ ಮನುಷ್ಯರೇ ಅಪೂರ್ವ. "ಹಣವೆಂದರೆ ಹೆಣವೂ ಬಾಯಿಬಿಡುವುದು" ಎಂಬಂತೆ ಎಲ್ಲರೂ ಹಣದಲ್ಲಿ ನಿರತರಾಗಿದ್ದಾರೆ. "ಹಣದಿಂದ ಎಲ್ಲಾ ಸುಖಗಳೂ ದೊರೆವುವು; ಬೇಕಾದುದನ್ನೆಲ್ಲಾ ಕಷ್ಟಪಡದೆ ಹಣದಿಂದ ಸಂಪಾದಿಸಿಕೊಳ್ಳಬಹುದು" ಎಂದೆಣಿಸುವುದೇ ಇದಕ್ಕೆ ಮುಖ್ಯಕಾರಣ. ಚೆನ್ನಾಗಿ ಯೋಚಿಸಿದಲ್ಲಿ, ಐಶ್ವರ್ಯವು ಬಗೆಬಗೆಯ ತೊಂದರೆಗಳಿಗೆ ಕಾರಣವಾಗಿದೆ. ಮೊದಲು ಅದನ್ನು ಸಂಪಾದಿಸುವುದೇ ಎಷ್ಟೋ ಕಷ್ಟ. ಸಂಪಾದಿಸಿದಮೇಲೆ ಅದನ್ನು ಕಳೆಯದೆ ಕಾಪಾಡಿಕೊಳ್ಳುವುದು ಇನ್ನೂ ಕಷ್ಟ. ಮನಸ್ಸಿಗೆ ಬಲು ಚಿಂತೆಯೂ, ಭಯವೂ, ಕಳವಳವೂ ಉಂಟಾಗುವುವು. ಪ್ರಪಂಚದಲ್ಲಿ ಉಂಟಾಗುವ ಎಲ್ಲಾ ವಿಧವಾದ ತೊಂದರೆಗಳಿಗೂ, ಗಲಾಟೆಗಳಿಗೂ ಹಣವೇ ಮೂಲ. ಐಶ್ವರ್ಯವು ಹೆಚ್ಚಿದಹಾಗೆಲ್ಲ ಜನರಲ್ಲಿ ಅಹಂಕಾರವೂ, ಜಂಭವೂ ಹೆಚ್ಚುತ್ತವೆ; ದಂಡೂ, ವಿಷಯಾಸಕ್ತಿಯೂ ಹುಟ್ಟುತ್ತವೆ. ಹೆರರನ್ನು ಜರೆವ ಬಡವರನ್ನು ಹಾಸ್ಯಮಾಡುವ ದುರ್ಗುಣಗಳು ಬಂದೊದಗುವುವು. ಆಗರ್ಭಶ್ರೀಮಂತರಾದವರಿಗೆ ಬಡಬಗ್ಗರ ಕಷ್ಟಸುಖಗಳೇ ತಿಳಿಯದಿರುವುದರಿಂದ, ಯಾರಾದರೂ ಕಷ್ಟದಲ್ಲಿ ನರಳುತ್ತಿದ್ದರೆ ನೋಡಿ ಕನಿಕರಪಡುವುದು ಕೂಡ ಅವರಿಗೆ ಬರುವುದಿಲ್ಲ. ಕುರುಡನಿಗೆ ಕಣ್ಣಮುಂದೆ ಇರುವುದು ಹೇಗೆ ಕಾಣುವುದಿಲ್ಲವೋ ಹಾಗೆಯೇ ಧನಾಢ್ಯನಿಗೆ ಎದುರಾಗಿರುವುದೂ ಕಣ್ಣಿಗೆ ಬೀಳದಷ್ಟು ಮದಾಂಧತೆ ಹುಟ್ಟಿ ತನ್ನ ಮೈಮೇಲೆ ಕೂಡ ಜ್ಞಾನ ತಪ್ಪುವುದು ಸಿರಿ ಹೆಚ್ಚಿದ ಹಾಗೆಲ್ಲ ಹಣದ ಆಸೆಯು ಹೆಚ್ಚುವುದು. ಈ ದುರಾಶೆಯನ್ನು ಪೂರೈಸಿಕೊಳ್ಳಲು, ಕೆಲವುವೇಳೆ ಮನುಷ್ಯನು ದುರ್ಮಾರ್ಗಕ್ಕೆ ಬಿದ್ದು ಹಣವನ್ನು ಸಂಪಾದಿಸುವುದುಂಟು.

ಆದರೆ ಹಣವು ಯಾವಾಗಲೂ ಕೇಡನ್ನೇ ಮಾಡುವುದೆಂದು ಹೇಳಲಾಗದು. ಅದನ್ನು ಪಯೋಗಿಸುವ ರೀತಿ ಕೆಟ್ಟುದಾದರೆ ಫಲವೂ ಕೆಟ್ಟುದಾಗುವುದು ಸರಿಯಾದ ರೀತಿಯಲ್ಲಿ ಬಳಸಿದರೆ, ಹಣದಿಂದ ಲೋಕಕ್ಕೆ ಎಷ್ಟೋ ಉಪಕಾರವುಂಟು. ಹಣವಿರುವವರು ಪುಸ್ತಕಭಂಡಾರ, ಸ್ಕೂಲು, ಆಸ್ಪತ್ರೆ, ಛತ್ರ ಮುಂತಾದುವನ್ನು ಕಟ್ಟಿಸಬಹುದು; ಅನಾಥರಿಗೆ ಸಹಾಯಮಾಡಬಹುದು; ಬಡಹುಡುಗರಿಗೆ ವೇತನಗಳನ್ನೂ ಬಹುಮಾನಗಳನ್ನೂ ಕೊಟ್ಟು

ವಿದ್ಯಾಭಿವೃದ್ಧಿ ಮಾಡಬಹುದು. ಹಣಗಾರರಿಗೆ ಹೊಟ್ಟೆಪಾಡಿನ ಯೋಚನೆಯೇ ಇಲ್ಲದಿರುವುದರಿಂದ ಬೇಕಾದಷ್ಟು ಕಾಲವು ಅವರ ಅಧೀನವಾಗಿರುವುದು. ಅವರು ಪುಸ್ತಕಗಳನ್ನೋದುವುದರಿಂದಲೂ ದೇಶಸಂಚಾರದಿಂದಲೂ ಜ್ಞಾನವನ್ನು ಹೆಚ್ಚಿಸಿಕೊಳ್ಳಬಹುದು. ಬಂಡವಾಳವಿಲ್ಲದವರಿಗೆ ಸಾಲವನ್ನು ಕೊಟ್ಟು ದೇಶದಲ್ಲಿ ವ್ಯಾಪಾರವನ್ನೂ ಕೈಗಾರಿಕೆಯನ್ನೂ ವ್ಯವಸಾಯವನ್ನೂ ಉನ್ನತ ಸ್ಥಿತಿಗೆ ತರಬಹುದು.

ನಮ್ಮ ದೇಶದಲ್ಲಿ ಉದಾರರಾದ ದೊಡ್ಡ ಮನುಷ್ಯರನೇಕರು ಹಲವು ಬಗೆಗಳಲ್ಲಿ ಲೋಕೋಪಕಾರವಾಗುವಂತೆ ತಮ್ಮ ಹಣವನ್ನು ಸತ್ಕಾರ್ಯಗಳಲ್ಲಿ ವೆಚ್ಚಮಾಡಿರುತ್ತಾರೆ. ಕೆಲವರು ವಾಸಕ್ಕೆ ಮನೆಗಳನ್ನು ಕಟ್ಟಿಸಿ ಬಡಬ್ರಾಹ್ಮಣರಿಗೆ ದಾನಮಾಡಿರುವರು; ಇನ್ನು ಕೆಲವರು ಸ್ಕೂಲುಗಳನ್ನೂ, ಕಾಲೇಜುಗಳನ್ನೂ, ಆಸ್ಪತ್ರೆಗಳನ್ನೂ ಕಟ್ಟಿಸಿ ತಮ್ಮ ಆಸ್ತಿಯನ್ನು ಸರ್ಕಾರದವರ ವಶಮಾಡಿ, ಆ ಆಸ್ತಿಯಿಂದ ಬಂದ ಆದಾಯದಿಂದ ಅವುಗಳನ್ನು ನಡೆಸಿಕೊಂಡು ಬರುವಂತೆ ಅವರನ್ನು ಪ್ರಾರ್ಥಿಸಿರುವರು; ಮತ್ತೆ ಕೆಲವರು ಛತ್ರ, ದೇವಾಲಯ, ದನಮುಂತಾದುವು ನೀರುಕುಡಿವಕಲ್ಲುತೊಟ್ಟಿ ಇವುಗಳನ್ನು ಕಟ್ಟಿಸಿರುತ್ತಾರೆ. ಹಿಂದೂದೇಶದಲ್ಲಿ ಇಂತಹ ಛತ್ರಗಳಿಲ್ಲದ ದೊಡ್ಡ ಪಟ್ಟಣಗಳೇ ಅತಿವಿರಳ. ಬೇರೆಕೆಲವರು ಲಕ್ಷಾಂತರ ರೂಪಾಯಿಗಳನ್ನು ಸರ್ಕಾರದಲ್ಲಿಟ್ಟು, ಅದರಿಂದ ಬಂದ ಬಡ್ಡಿಯಿಂದ ವಿದ್ಯಾರ್ಥಿಗಳಿಗೆ ವೇತನಗಳನ್ನು ಕೊಟ್ಟು ವಿದ್ಯೆಗೆ ಪ್ರೋತ್ಸಾಹಕೊಡಬೇಕೆಂದು ಸರ್ಕಾರದವರನ್ನು ಕೇಳಿಕೊಂಡಿದ್ದಾರೆ. ಇಂತಹ ಮಹೋಪಕಾರಿಗಳಲ್ಲಿ ಮೊದಲನೆಯವರಾಗಿಯೂ ಬೊಂಬಾಯಿಪಟ್ಟಣದ ಪಾರ್ಸಿಜನರಿಗೆ ತಿಲಕಪ್ರಾಯರಾಗಿಯೂ ಇದ್ದ ಮ. ರಾ. ತಾತಾ ಸಾಹೇಬರೆಂಬ ಕೋಟೀಶ್ವರರನ್ನು ಎಂದಿಗೂ ಮರೆಯಲಾಗುವುದಿಲ್ಲ

## 52. ಕ್ಷಾಮಗಳು.

ಬೆಳೆಯು ಬಹಳ ಕಡಮೆಯಾಗಿ, ಜನರು ಮುಖ್ಯವಾಗಿ ಉಪಯೋಗಿಸುವ ಆಹಾರಪದಾರ್ಥಗಳು ದುರ್ಲಭವಾಗುವುದಕ್ಕೆ ಕ್ಷಾಮವೆಂದು ಹೆಸರು. ಕ್ಷಾಮಕ್ಕೆ ಅನೇಕ ಕಾರಣಗಳುಂಟು. ಅವುಗಳಲ್ಲಿ ಮೊದಲನೆಯದು ಅನಾವೃಷ್ಟಿ, ಎಂದರೆ ಮಳೆ ಸಕಾಲಕ್ಕೆ ಬಾರದಿರುವುದು. ಅತಿವೃಷ್ಟಿಯಿಂದಲೂ ಬೆಳೆ ಕೆಡುವುದುಂಟು. ಮಿಡಿತೆ, ಇಲಿ, ಪಕ್ಷಿ, ಇಂಥ ಪ್ರಾಣಿಗಳು ಆದ ಧಾನ್ಯದ

ತೆನೆಗಳನ್ನು ಮೇದುಬಿಡುವುವು. ಯುದ್ಧವೂ ಬರಕ್ಕೆ ಕಾರಣವು. ದೇಶದಲ್ಲಿ ಕಾಳಗ ನಡೆವಾಗ ರೈತರು ಆರಂಬ ಮಾಡಲಾಗುವುದಿಲ್ಲ. ಇದರಿಂದ ಬೆಳೆಗೆ ಕುಂದು ಬರುತ್ತದೆ. ಎಲ್ಲಕ್ಕಿಂತ ಮಳೆ ನಿಂತುಹೋಗುವುದರಿಂದ ಕ್ಷಾಮವು ಅಡಿಗಡಿಗೆ ಬರುವುದುಂಟು.

ನದಿಗಳಿಂದ ನೀರಾವರಿಯಾದ ದೇಶಗಳಲ್ಲಿ ಮಳೆ ನಿಂತರೂ ಅಷ್ಟು ತೊಂದರೆಯಾಗುವುದಿಲ್ಲ. ಮಳೆಯನ್ನೇ ನಂಬಿಕೊಂಡಿರುವ ದೇಶಗಳಲ್ಲಿ ಒಂದು ವರ್ಷ ಮಳೆ ಬಾರದೆ ಹೋದರೂ ಕ್ಷಾಮವು ತಲೆದೋರುವುದು. ಮೊದಲು ಧಾನ್ಯಗಳ ಬೆಲೆ ತಲೆಯೆತ್ತಿ ಹೆಚ್ಚುತಹೆಚ್ಚುತ, ಬಡವರು ಪ್ರತಿದಿನದ ಕಾಲಕ್ಷೇಪವನ್ನು ಮಾಡಲಾಗದಷ್ಟು ಏರುವುದು. ಮಳೆಯಿಲ್ಲದಿದ್ದರೆ, ರೈತರ ಆರಂಬಕ್ಕೇ ಅವಕಾಶವಿಲ್ಲ. ವ್ಯವಸಾಯವೊಂದೇ ಜೀವನೋಪಾಯವಾಗಿರುವ ರೈತರು ತಿಂಡಿಯಿಲ್ಲದೆ ಸಾಯಬೇಕಾಗುತ್ತದೆ. ಕ್ಷಾಮಕಾಲದಲ್ಲಿ ನೇಯಿಗೆ, ಮರಗೆಲಸ ಮುಂತಾದ ಕೈಗಾರಿಕೆಯವರನ್ನು ಕೇಳುವವರೇ ಇಲ್ಲದೆ, ಇವರು ಬೀದಿಬೀದಿಗಳಲ್ಲಿ ಅಲೆಯುತ ಹೊಟ್ಟೆಗಿಲ್ಲದೆ ಸಾಯಬೇಕಾಗಿಬರುವುದು. ಕ್ಷಾಮದ ಬಾಧೆ ಐಶ್ವರ್ಯವಂತರನ್ನೂ ಬಿಟ್ಟದ್ದಲ್ಲ. ಪದಾರ್ಥಗಳಿಗೆ ಎಷ್ಟು ಹೆಚ್ಚು ಬೆಲೆಯನ್ನಾದರೂ ಕೊಡಲುಳ್ಳವರಾದುದರಿಂದ ಬಡವರಿಗಾದಷ್ಟು ತೊಂದರೆ ಇವರಿಗಾಗಲಾರದು. ಆದರೆ ಕ್ಷಾಮದ ಜತೆಯಲ್ಲಿ ತಲೆಹಾಕುವ ಸಾಂಕ್ರಾಮಿಕರೋಗಗಳಿಗೆಹಣಗಾರರೂಬಡವರಂತೆತುತ್ತಾಗಬೇಕಾಗುತ್ತದೆ. ರೋಗಗಳು ಬರುವುದೇ ತಡ; ಬಂದಮೇಲೆ ಅವುಗಳ ಹಾವಳಿಯನ್ನು ಅಷ್ಟಿಷ್ಟೆಂದು ಹೇಳಲಾಗದು. ದೊಡ್ಡವರು, ಚಿಕ್ಕವರು, ಹೆಂಗಸರು, ಮಕ್ಕಳು, ಬಡವರು, ಭಾಗ್ಯವಂತರು ಎಂದು ನೋಡದೆ ಎಲ್ಲರನ್ನೂ ಒಂದೇ ರೀತಿಯಾಗಿ ಹೊತ್ತುಕೊಂಡುಹೋಗುವುದು. ಕ್ಷಾಮತಗಲಿದದೇಶದಸ್ಥಿತಿಯನ್ನು ವರ್ಣಿಸಲಳವಲ್ಲ. ಎಲ್ಲಿನೋಡಿದರೂ ಜನರು ಸಾಯುತ್ತಿರುತ್ತಾರೆ. ದೇಶದಮೇಲೆಲ್ಲ ಯಮನು ತನ್ನ ಪಾಶವನ್ನು ಬೀಸಿದಂತೆ ಕಾಣುತ್ತದೆ. ಸತ್ತವರ ಪಾಡು ಮೇಲು. ಬದುಕಿರುವವರ ಸ್ಥಿತಿ ಅತಿ ಶೋಚನೀಯವಾಗಿರುವುದು. ತಿಂಡಿಯಿಲ್ಲದೆಕಡ್ಡಿಯಂತೆ ಸಣ್ಣಗಾಗಿ ಮೂಳೆಗಳು ಬಿಟ್ಟುಕೊಂಡು ಮರಗಳ ಕೆಳಗೂ ರಸ್ತೆಯ ಪಕ್ಕಗಳಲ್ಲಿಯೂ ಗುಂಪುಗುಂಪಾಗಿ ಹಸಿವಿನಿಂದ ಪೀಡಿತರಾಗಿ ಬಿದ್ದು ನರಳುವ ಜನರನ್ನು ನೋಡುವುದು ಅತಿಘೋರವಾದುದಲ್ಲವೆ?

ಕ್ಷಾಮದಿಂದಾಗುವ ಕೆಡಕುಗಳನ್ನು ಕಡಮೆಮಾಡುವದು ಸರ್ಕಾರದವರಿಗೆ ಸೇರಿದುದು. ಕ್ಷಾಮ ಬಂದಾಗ, ಸರ್ಕಾರದವರು ದೊಡ್ಡ ಕೆರೆಗಳು, ರಸ್ತೆಗಳು, ಮುಂತಾದುವನ್ನು ಕಟ್ಟಿಸುವುದಕ್ಕೆ ಪ್ರಾರಂಭಿಸಿ, ಕಾಯಶಕ್ತಿಯುಳ್ಳ ಬಡವರಿಗೆ ಕೂಲಿಯನ್ನು ಕೊಡಬೇಕು. ಮುದುಕರಿಗೂ ನಿರ್ಬಲರಿಗೂ ಕೆಲಸ ಮಾಡಿಸದೆಯೇ ತಿಂಡಿಹಾಕಬೇಕು. ಕ್ಷಾಮವಿಲ್ಲದಿರುವ ದೇಶಗಳಿಂದ ಧಾನ್ಯಗಳನ್ನು ರೈಲಿನಿಂದ ಜಾಗ್ರತೆಯಾಗಿ ತರಿಸಬೇಕು. ಜನರಿಗೆ ಬಗೆಬಗೆಯ ಕೈಗಾರಿಕೆಗಳನ್ನು ಕಲಿಸಬೇಕು. ಇವುಗಳಿಂದ ಅವರಿಗೆ ಪರದೇಶದಿಂದಲೂ ಆದಾಯ ಬರುವುದು. ಕ್ಷಾಮ ಬರುವುದಕ್ಕೆ ಮುಂಚೆಯೇ ಜನರು ಹಣವನ್ನೂ ಧಾನ್ಯಗಳನ್ನೂ ಕೂಡಿಡುವಂತೆ ಮಾಡಬೇಕು. ಸರ್ಕಾರದವರ ಜತೆಗೆ ಪ್ರಜೆಗಳಲ್ಲಿ ಹಣವಂತರಾದವರೂ ಬಡವರಿಗೆ ಸಹಾಯ ಮಾಡಬೇಕು. ಪರೋಪಕಾರಕ್ಕೆ ಕ್ಷಾಮಕಾಲದಂಥ ತಕ್ಕ ಸಮಯವು ದೊರೆಯಲಾರದು.

## 53. ಸ್ತ್ರೀವಿದ್ಯಾಭ್ಯಾಸ.

ಎಲ್ಲಾ ಜನರಲ್ಲಿಯೂ ಸಾಮಾನ್ಯವಾಗಿ, ಮಕ್ಕಳು ಹುಟ್ಟಿದಂದಿನಿಂದ ತಾಯಿ ಇಲ್ಲವೆ ದಾದಿ ಇವರ ಬಳಿಯಲ್ಲಿರುತ್ತಾರೆ. ಈ ಹೆಂಗಸರು ಅಜ್ಞಾನಿಗಳಾಗಿದ್ದರೆ, ಮಕ್ಕಳು ಏಳಿಗೆಗೆ ಬರುವುದು ಹೇಗೆ? ಹಾಗಲ್ಲದೆ ಅವರು ವಿದ್ಯಾವತಿಯರಾಗಿದ್ದರೆ, ತಮ್ಮ ಮಕ್ಕಳನ್ನು ಉತ್ತಮರೀತಿಯಲ್ಲಿ ಶಿಕ್ಷಿಸುವರು. ಮಕ್ಕಳು ಇತರರು ನಡೆವಂತೆ ನಡೆವ ಸ್ವಭಾವವುಳ್ಳವರು. ತಮ್ಮನ್ನು ನೋಡಿಕೊಳ್ಳುವರಂತೆಯೇ ನಡೆವರು. ಸ್ತ್ರೀಯರು ವಿದ್ಯಾವತಿಯರಾಗಿ ಸನ್ಮಾರ್ಗದಲ್ಲಿ ನಡೆದರೆ, ಅವರಂತೆಯೇ ಅವರ ಮಕ್ಕಳೂ ನಡೆದುಕೊಂಡು ಮುಂದಕ್ಕೆ ಬರಲವಕಾಶವುಂಟು. "ಹಿರಿಯಕ್ಕನ ಚಾಳಿ ಮನೆಮಕ್ಕಳಿಗೆಲ್ಲ" ಎಂಬ ಗಾದೆ ಬಲು ಪ್ರಸಿದ್ಧವಷ್ಟೆ. ಮನುಷ್ಯನ ಬುದ್ಧಿಯೂ ಗುಣವೂ ತನ್ನ ತಾಯಿಯ ಗರ್ಭದಲ್ಲಿರುವಾಗಲೇ ಅಂಕುರಿಸುವುವೆಂತಲೂ, ಈ ಗುಣಗಳ ಸ್ವರೂಪವು ಬಹುತರವಾಗಿ ತಾಯಿಯ ಗುಣಗಳನ್ನೇ ಅನುಸರಿಸುತ್ತದೆಯೆಂತಲೂ ಶಾಸ್ತ್ರಜ್ಞರು ನಿಶ್ಚಯಿಸಿರುವರು. ಆದುದರಿಂದ ಹೆಂಗಸರಿಗೆ ವಿದ್ಯೆ ಕಲಿಸಿ ಜ್ಞಾನಾಭಿವೃದ್ಧಿ ಮಾಡಿದರೆ, ಬುದ್ಧಿವಂತರಾದ ಜನರು ಹುಟ್ಟುವುದು ಹೆಚ್ಚುತ್ತದೆ.

ಯೋಗ್ಯರೊಡನೆ ಸಂಭಾಷಣೆಯಿಂದ ಆನಂದವಾಗುವುದು. ಅನೇಕ ವಿಷಯಗಳನ್ನು ಅರಿತಹೊರತು ಸಂಭಾಷಣೆಗೆ ಯೋಗ್ಯತೆ ಬರುವದಿಲ್ಲ. ಅನೇಕ ವಿಷಯ ಜ್ಞಾನವು ವಿದ್ಯೆಯಿಂದಲೇ ಬರುವುದು. ಪ್ರಕೃತಸ್ಥಿತಿಯಲ್ಲಿ ಇಬ್ಬರು

ಹಿಂದೂ ಹೆಂಗಸರು ಸೇರಿದರೆ, ನೆರೆಮನೆಯವರ ದೂರು ಹೊರತು ಪ್ರಯೋ-ಜನಕರವಾದ ಬೇರೆ ವಿಷಯವು ಅವರ ಸಂಭಾಷಣೆಗೆತೋರುವುದಿಲ್ಲ. ಇದಕ್ಕೆ, ವಿದ್ಯೆಯಿಲ್ಲದಿರುವುದೇ ಕಾರಣ. ಪುರುಷರು ವಿದ್ಯೆಯಲ್ಲಿ ಹೆಚ್ಚುತ್ತ,ಹೆಂಗಸರು ಪಶುಗಳಂತೆ ಮೂಢರಾಗಿ ಯಥಾಜಾತರೆನಿಸಿದ್ದರೆ, ಇಬ್ಬರಿಗೂ ಪರಸ್ಪರ ಪ್ರೀತಿ ಹೆಚ್ಚೀತೆ? ಸ್ತ್ರೀಯರನ್ನು ಸಂಭಾಷಣೆಗೆ ಅರ್ಹರೆಂದು ಪುರುಷರುತಿಳಿ-ದಾರೆ? ಸ್ತ್ರೀಯರೊಡನೆ ಸಂಭಾಷಣೆ ಮಾಡುವುದರಿಂದ ಆನಂದವೂ, ಸ್ತ್ರೀ-ಯರು ಹಿತೈಷಿಗಳಾದ ಮಿತ್ರರಂತೆ ಆಚರಿಸಿ ಪುರುಷರು ಮಾಡುವ ಕೆಲಸಗಳಲ್ಲಿ ಸಹಾಯರೂ ಆಗಬೇಕಾದರೆ, ಅವರಿಗೆ ಪುರುಷರಂತೆಯೇ ವಿದ್ಯಾಭ್ಯಾಸ-ದಿಂದುಂಟಾಗುವಜ್ಞಾನವೂ, ಯುಕ್ತಾಯುಕ್ತವಿವೇಕವೂ, ಕಾರ್ಯನಿರ್ವ ಹಣಶಕ್ತಿಯೂ ಇರಬೇಕು.

ದೇವರ ಸೃಷ್ಟಿಯಲ್ಲಿ ಗಂಡಸರೂ ಹೆಂಗಸರೂ ಒಂದೇ. ಗಂಡಸರಿಗೆ ವಿದ್ಯೆ, ಯನ್ನು ಕಲಿಯಲು ಹೇಗೆ ಸ್ವಭಾವಸಿದ್ಧವಾದ ಬಾಧ್ಯತೆ ಇರುವದೋ ಹಾ-ಗೆಯೇ ಹೆಂಗಸರಿಗೂ ಇದೆ. ಆದುದರಿಂದ ಸ್ತ್ರೀಯರಿಗೆ ವಿದ್ಯೆಯನ್ನು ಕಲಿಸದೆ ಮೂಢೆಯರನ್ನಾಗಿ ಮಾಡುವುದು ಅನ್ಯಾಯ. ತಾನು ಸಾಕುವ ಕುದುರೆ, ನಾಯಿ, ಗಿಣಿ ಮುಂತಾದ ಪ್ರಾಣಿಗಳಿಗೂ ಮನುಷ್ಯನು ತಕ್ಕ ವಿದ್ಯೆಗಳನ್ನು ಕಲಿಸುವನು. ಸ್ತ್ರೀಯರಿಗೆ ವಿದ್ಯೆ ಕಲಿಸದಿರುವುದು ಬಹಳ ಆಶ್ಚರ್ಯ. ಆದುದ-ರಿಂದವಿದ್ಯೆಯನ್ನು ಕಲಿವ ಶಕ್ತಿಯುಳ್ಳ ಸ್ತ್ರೀಯರಿಗೆ ಉಚಿತ ವಿದ್ಯೆಯನ್ನು ಕಲಿಸುವುದು ಭಗವನ್ನಿಯಮಿತವಾದ ಕೆಲಸವೆಂದೇ ತಿಳಿಯಬೇಕು.

ಈ ಕಾರಣಗಳಿಂದಲೇ ಅಮೆರಿಕ,ಯೂರೋಪ್ ಖಂಡಗಳಲ್ಲಿ ಗಂಡಸ-ರಂತೆಹೆಂಗಸರಿಗೂ ವಿದ್ಯೆಯನ್ನು ಕಲಿಸುವರು. ವಿದ್ಯಾಬಲದಿಂದ ಅಲ್ಲಿನಹೆಂ ಗಸರೂ ಸರ್ಕಾರದ ಅಧಿಕಾರಗಳನ್ನು ಮಾಡುತ್ತಿರುವರು. ಆದರೆ ಹಿಂದೂ ದೇಶದಲ್ಲಿ ಸ್ತ್ರೀವಿದ್ಯಾಭ್ಯಾಸವುಚಿರಕಾಲದಿಂದಲೂ ಇಲ್ಲದಿದೆ. ಸ್ತ್ರೀವಿದ್ಯಾ-ಭ್ಯಾಸವಿಷಯದಲ್ಲಿ ಆಧುನಿಕರಾದ ನಮ್ಮವರು ಅನೇಕ ಆಕ್ಷೇಪಣೆಗಳನ್ನು ಮಾಡುತ್ತಿದಾರೆ. ಕೆಲವರು "ಸ್ತ್ರೀಯರು ವಿದ್ಯೆಕಲಿವುದರಿಂದ ಅವರಿಗೆ ದುರಹಂಕಾರ ಬರುವುದು" ಎನ್ನುವರು. "ಅಲ್ಪವಿದ್ಯೋ ಮಹಾಗರ್ವೀ" ಎಂಬಂತೆಅಧಿಕವಿದ್ಯೆಯನ್ನು ಕಲಿಸದೆ ಸ್ವಲ್ಪ ವಿದ್ಯೆಯನ್ನು ಕಲಿಸಿದರೆ, ಹೀಗೆ ಆಗುವುದುಸಹಜ. "ತುಂಬಿದಕೊಡ ತುಳುಕುವುದಿಲ್ಲ." ಯಾರಲ್ಲಿಯೂ ಇಲ್ಲದಅತಿಶಯವಾದವಸ್ತು ಒಬ್ಬರಲ್ಲಿದ್ದರೆ, ಅವರಿಗೆ ಹೆಮ್ಮೆ ಬರಬಹುದು.

ಎಲ್ಲಾ ಹೆಂಗಸರಿಗೂ ವಿದ್ಯೆಕಲಿಸಿದರೆಗರ್ವಕ್ಕೆ ಅವಕಾಶವೇ ಇರುವುದಿಲ್ಲ. ಇನ್ನು ಕೆಲವರು"ಹೆಂಗಸರಿಗೆ ವಿದ್ಯೆ ಕಲಿಸುವುದರಿಂದ, ಸಂಸಾರದ ಕೆಲಸಗಳು ಸರಿಯಾಗಿನಡೆಯದೆಸಂಸಾರಕ್ಕೆ ಕುಂದು ಬರುವುದು" ಎಂದು ಹೇಳುವರು; ಇದುಸರಿಯಲ್ಲ.ವಿದ್ಯಾವತಿಯರಿರುವ ರಾಜ್ಯಗಳಲ್ಲಿ ಅವರು ಮಾಡಬೇಕಾದ ಕೆಲಸಗಳಿಗೆ ವಿದ್ಯೆ ಎಂದಿಗೂ ಕುಂದನ್ನು ತಂದಿಲ್ಲ; ಅವುಗಳನ್ನು ಚೆನ್ನಾಗಿ ಮಾಡುವಂತೆ ಬುದ್ಧಿಕುಶಲತೆಯನ್ನುಂಟುಮಾಡಿದೆ. ಮತ್ತೆ ಕೆಲವರು"ಸ್ತ್ರೀ-ಯರಿಗೆ ವಿದ್ಯೆಯನ್ನು ಹೇಳಿಕೊಡುವುದರಿಂದ ಅವರುಪುರುಷರಿಗೆಮರ್ಯಾದೆ ತೋರಿಸದೆ, ಇದಿರುಬಿದ್ದು ಅವರನ್ನು ಲಕ್ಷ್ಯಮಾಡುವದಿಲ್ಲ. ದುರ್ವ್ಯಾಪಾರಗಳಿಗುಪಕ್ರಮಿಸಿ,ತಮ್ಮ ಶೀಲವನ್ನೇ ಹಾಳುಮಾಡಿಕೊಳ್ಳುವರು "ಎಂದು ಆಕ್ಷೇಪಿಸುವುದುಂಟು. ಸದ್ವಿದ್ಯೆಯ ಫಲಗಳು ಸತ್ಯ, ಹಿರಿಯರಲ್ಲಿ ಭಕ್ತಿ, ಪತಿಯಲ್ಲಿ ಪ್ರೀತಿ ಮುಂತಾದ ಸುಗುಣಗಳು ಆದಾವೇಹೊರತು,ದುರ್ವ್ಯಾಪಾರಕ್ಕೆ ಪ್ರವರ್ತಿಸುವ ಬುದ್ಧಿ, ಪತಿಯಲ್ಲಿ ಅಸಹನ, ಅಲಕ್ಷ್ಯತೆ, ಅವಿಧೇಯತೆ ಮೊದಲಾದ ದುರ್ಗುಣಗಳಾಗಲಾರವು. ವಿದ್ಯೆಕಲಿಯಲಿ, ಕಲಿಯದಿರಲಿ ದುಷ್ಕುಲಪ್ರಸೂತೆಯರು ದುರ್ಮಾರ್ಗದಲ್ಲಿ ನಡೆವುದು ಸಹಜ. ಇವರ ದುರ್ಗುಣಕ್ಕೆ ವಿದ್ಯೆಯೇ ಕಾರಣವೆನ್ನುವುದು ಶುದ್ಧಮೌಢ್ಯ. ದುಶ್ಶೀಲವನ್ನು ನೋಡಿವಿದ್ಯಾಭ್ಯಾಸವನ್ನೇನಿರಾಕರಿಸಬಹುದೆ? ಕಳ್ಳರುಓಡಿಹೋಗುವುದಕ್ಕೆ ಆಸ್ಪದವಾಗುತ್ತದೆಯೆಂದು ಹೊಗೆ ಗಾಡಿಯೇ ಇರಕೂಡದೆನ್ನಬಹುದೆ? ಕೆಟ್ಟ ಪುಸ್ತಕಗಳುಅಚ್ಚಾದಾವೆಂದುಮುದ್ರಾಯಂತ್ರವನ್ನೇತಪ್ಪಿಸಬಹುದೆ? ಎಂದಿಗೂ ಇಲ್ಲ. ಸ್ತ್ರೀಯರಿಗೆ ವಿದ್ಯಾಭ್ಯಾಸದಿಂದ ಜ್ಞಾನೋದಯವಾಗದಿದ್ದರೆ, ಅವರಿಗೂ ಪಶುಗಳಿಗೂ ಏನೇನೂ ತಾರತಮ್ಯವಿರುವುದಿಲ್ಲ. ವಿದ್ಯೆಯಿಲ್ಲದ ಹೆಂಗಸರು ತಾಯಿಯರೂ ಹೆಂಡತಿಯರೂ ಆಗಲು ಅರ್ಹರಾದಾರೆ? ಇವರಿಗೆ ವಿದ್ಯೆಕಲಿಸದಿದ್ದರೆ ದೇಶದಲ್ಲಿರುವ ಅರ್ಧಪಾಲು ಪ್ರಜೆಗಳಿಗೆ ವಿದ್ಯೆಕಲಿಸದೆ ಬೇಕೆಂದು ಮೂಢರನ್ನಾಗಿ ಮಾಡಿದಂತಾಗುವುದು. ಪುರುಷನಿಗೆ ಹೆಚ್ಚು ವಿದ್ಯೆ ಇಲ್ಲದಿದ್ದರೂ, ಪ್ರಪಂಚದ ನಡೆವಳಿಯಲ್ಲಿ ತಲೆತಾಗಿ ಬುದ್ಧಿ ಬರಬಹುದು. ಹೆಂಗಸರಿಗೆ ಬಾಲ್ಯದಲ್ಲಿಯೇ ವಿದ್ಯೆಕಲಿಸಿ, ಜ್ಞಾನವನ್ನೂ ಆಲೋಚನಾಶಕ್ತಿ-ಯನ್ನೂ ಉಂಟುಮಾಡದಿದ್ದರೆ. ಅವರಿಗೆ ಮುಂದಕ್ಕೆ ಈಗುಣಗಳುಂಟಾಗುವುದು ಕಷ್ಟ. ನಮ್ಮ ಹೆಂಗಸರಲ್ಲಿ ಅನೇಕರಿಗೆ ಬಹಳ ವಿರಾಮವಿರುತ್ತದೆ. ಮನೆಗೆಲಸವಾದಮೇಲೆ, ಬಿಡುವಾದ ಕಾಲದಲ್ಲಿ ಸದ್ವ್ಯಾಸಂಗವಿಲ್ಲದಿದ್ದರೆ, ಸ್ವಭಾ

ವವಾಗಿ ಮನಸ್ಸಿನಲ್ಲಿ ದುರಾಲೋಚನೆಗಳು ಹುಟ್ಟುವುವು. ವಿದ್ಯಾಭ್ಯಾಸ-ದಿಂದುಂಟಾಗುವ ಸದ್ವ್ಯಾಸಂಗಕ್ಕಿಂತಲೂ ಉತ್ತಮವಾದುದಿನ್ನಾವುದೂ ಇಲ್ಲ. ಈಚೆಗೆ ಹಿಂದೂದೇಶದಲ್ಲಿಯೂ ಸ್ತ್ರೀವಿದ್ಯಾಭ್ಯಾಸವು ಮೊದಲಾಗಿದೆ. ಈಗ ಸರ್ಕಾರದವರು ಹೆಂಗಸರಿಗೋಸ್ಕರ ಸ್ಕೂಲುಗಳನ್ನೂ ಕಾಲೇಜುಗಳ-ನ್ನೂ ನಿರ್ಮಿಸಿ, ಗಂಡಸರಿಗೆ ಹೇಗೋ ಹಾಗೆಯೇ ಅವರಿಗೂ ವಿದ್ಯಾಭ್ಯಾಸವನ್ನು ಮಾಡಿಸುತ್ತಿದ್ದಾರೆ. ಹೀಗೆ ಚಿರಕಾಲ ಸ್ತ್ರೀವಿದ್ಯಾಭ್ಯಾಸವು ಇಲ್ಲಿ ನಿರ್ವಿಘ್ನವಾಗಿ ನಡೆದರೆ, ಪಾಶ್ಚಾತ್ಯರಲ್ಲಿ ಸ್ತ್ರೀವಿದ್ಯಾಭ್ಯಾಸದಿಂದಾಗಿರುವ ಉಪಯೋಗಗಳೇ ನಮ್ಮಲ್ಲಿಯೂ ಆಗುವುವು.

## 54. ಆರೋಗ್ಯ.

ಶರೀರದ ಎಲ್ಲಾ ಅವಯವಗಳೂ ತಂತಮ್ಮ ಕೆಲಸಗಳನ್ನು ಸರಿಯಾಗಿಮಾಡಿಕೊಂಡಿರುವ ಸ್ಥಿತಿಗೆ ಆರೋಗ್ಯವೆಂದು ಹೆಸರು. ಅಂಗಗಳು ತಮ್ಮ ಕೆಲ-ಸಗಳನ್ನು ಕ್ರಮವಾಗಿಮಾಡದೆಹೋದರೆರೋಗಗಳುಂಟಾಗುವುವು. ಆರೋಗ್ಯದಿಂದಾಗುವ ಸುಖವು ಅಪಾರವು. ಮಕ್ಕಳು ಆರೋಗ್ಯದಲ್ಲಿರುವ ವರೆಗೂ ಆನಂದದಿಂದ ನಗುತಲೂ ಆಡುತಲೂ ಕುಣಿಯುತಲೂ ಇರುತ್ತಾರೆ. ಅವರ ದೇಹಸ್ಥಿತಿ ಸ್ವಲ್ಪ ಕೆಟ್ಟರೂ ಸಾಕು. ಯಾವಾಗಲೂ ಅಳುತ, ಆಟದ ಮೇಲೆ ಇಚ್ಛೆಯಿಲ್ಲದೆ, ಅವರಿಗೆಬೇಕಾದುದರಲ್ಲಿ ಎಳ್ಳಷ್ಟು ಹೆಚ್ಚು ಕಡಮೆಯಾದರೂ ಹಾರಾಡುತ ಚಂಡಿಹಿಡಿದು ತಾವೂ ಕ್ಲೇಶಪಡುವುದಲ್ಲದೆ ಎಲ್ಲರಿಗೂಬೇಸರ ಹುಟ್ಟಿಸುವರು. ಆರೋಗ್ಯವಿರುವ ತನಕ ದೊಡ್ಡವರು ಕೂಡ ನಗೆಮೊಗದೊ-ಡನೆಚಟುವಟಿಕೆಯಿಂದಎಲ್ಲಾ ಕೆಲಸಗಳನ್ನೂ ಮಾಡತೊಡಗುವರು; ಮತ್ತು ಕೆಲಸಕೆಟ್ಟರೂಅಂಜದೆಮುಂದುವರಿದು ನುಗ್ಗುವರು, ಆರೋಗ್ಯವು ಕುಂದಿ-ದೊಡನೆಯೇ ಇಂತಹ ಗುಣಗಳೆಲ್ಲಾ ಹಾಳಾಗಿ, ಅಲ್ಪ ಕಾರಣಗಳಿಂದಲೇ ಅವರ ಮನಸ್ಸಿಗೆ ವ್ಯಥೆಯೂ ಕಳವಳವೂ ಉಂಟಾಗುವುವು. ಮನುಷ್ಯನಿಗೆ ಎಷ್ಟು ಸಂಪತ್ತಿದ್ದರೇನು? ಆರೋಗ್ಯವೊಂದಿಲ್ಲದಿದ್ದರೆ, ಸುಖವೆಂಬುದೆಂದಿಗೂ ದೊರೆಯಲಾರದು.

ಬುದ್ಧಿಶಕ್ತಿಯ ಅಭಿವೃದ್ಧಿಗೆ ಆರೋಗ್ಯವು ತುಂಬಾ ಸಹಕಾರಿ. ಬುದ್ಧಿ-ಬಲವು ಚೆನ್ನಾಗಿರಬೇಕಾದರೆದೇಹದಾರ್ಢ್ಯವಿರಬೇಕು. ಅನಾರೋಗ್ಯದಿಂದ ದೇಹವು ನವೆಯುತ್ತಿದ್ದರೆ, ಮಿದುಳಿನ ಶಕ್ತಿಯೂ ಕಡಮೆಯಾಗುತ್ತಬರುವುದು.

ಅದಕ್ಕೆ ಸ್ವತಂತ್ರವಾಗಿ ಆಲೋಚನೆಮಾಡುವ ಶಕ್ತಿ ಕುಂದುವುದು. ಇದರಿಂದ ಮನುಷ್ಯನಿಗೆ ಯುಕ್ತಾಯುಕ್ತವಿವೇಕವು ತಪ್ಪಿ, ಸುತ್ತಮುತ್ತಲಿರುವ ವಸ್ತುಗಳ ನಿಜಸ್ಥಿತಿಯನ್ನು ತಿಳಿಯಲರಿಯದೆ ಹೋಗುವನು; ಮತ್ತು ಮೋಹಪಾಶಕ್ಕೆ ಹೆಚ್ಚು ಒಳಗಾಗುವನು; ಅವನಿಗೆ ಅದನ್ನು ನಿರೋಧಿಸುವಷ್ಟು ಮನೋದಾರ್ಢ್ಯವಿಲ್ಲದೆ ಹೋಗುವುದು. ಹಿಂದೆ ಗ್ರೀಕ್ ಜನರು ದೇಹದಲ್ಲಿ ದೌರ್ಬಲ್ಯವೂ ಅನಾರೋಗ್ಯವೂ ಇದ್ದರೆ ವಿದ್ಯಾಭ್ಯಾಸವಾದಂತೆ ಭಾವಿಸುತ್ತಿರಲಿಲ್ಲ.

ಆರೋಗ್ಯದಿಂದಾಗುವ ಪ್ರಯೋಜನಗಳನ್ನು ಎಲ್ಲರೂ ಬಲ್ಲರು; ಆದರೂ ಅದನ್ನು ಸರಿಯಾಗಿಟ್ಟುಕೊಳ್ಳಲು ಸ್ವಲ್ಪವೂ ಮನಸ್ಸುಮಾಡುವುದಿಲ್ಲ. ತಮ್ಮ ದೇಹಸ್ಥಿತಿಯನ್ನು ಹಾಳುಮಾಡಿಕೊಂಡು ಅಲ್ಪಾಯುಸ್ಸಿನಲ್ಲಿಯೇ ಕೊನೆಗಾಣುವರು; ಅಥವಾ ಮುಪ್ಪಿನವರೆಗೂ ಬದುಕಿದ್ದರೆ, ರೋಗಪೀಡಿತರಾಗಿ ಬಹು ದುಃಖಕ್ಕೆ ಗುರಿಯಾಗುವರು. ಕೆಲವರಿಗೆ ಹುಟ್ಟಿದಂದಿನಿಂದ ದೇಹಸ್ಥಿತಿ ಸ್ವಾಭಾವಿಕವಾಗಿ ಬಹಳ ಕೆಟ್ಟುಹೋಗಿ, ಆರೋಗ್ಯಪಡೆಯಲಶಕ್ಯವಾಗಿರುವುದುಂಟು. ಆದರೆ ದೈವಾನುಗ್ರಹದಿಂದ ಲೋಕದಲ್ಲಿ ಇಂಥವರು ಕಡಮೆ. ಮುಕ್ಕಾಲೂ ಮೂರುವೀಸ ಪಾಲು ಜನರಿಗೆ ಮನಸ್ಸುಬಂದರೆ ಚೆನ್ನಾಗಿರಬಹುದಾದ ಸ್ಥಿತಿಯಿರುತ್ತದೆ ಕಾಯಿಲೆಬೀಳುವುದು ಅವರ ಸ್ವಂತ ತಪ್ಪು. ನಾವುಮಾಡಬಾರದುದನ್ನು ಮಾಡುತ್ತೇವೆ; ಮಾಡಬೇಕಾದುದನ್ನು ಮಾಡುವುದಿಲ್ಲ. ಕೊನೆಗೆ ಇದರಿಂದ ಆರೋಗ್ಯತಪ್ಪುವುದರಲ್ಲಿ ಏನಾಶ್ಚರ್ಯ? ಅನಾರೋಗ್ಯವು ತಮ್ಮ ಕೈಯಾರ ತಾವು ತಂದುಕೊಂಡುದೆಂದು ತಿಳಿಯದೆ ಕೆಲವರು ಅದು ಗ್ರಹಚಾರದಿಂದಾಗುವುದೆಂದು ನಂಬಿ, ಆರೋಗ್ಯಕ್ಕೆ ಬೇಕಾದ ವಿಧಿಗಳನ್ನು ಅನುಸರಿಸುವುದಿಲ್ಲ. ಇಂತಹ ಅಜ್ಞಾನದಿಂದ ಪ್ರಪಂಚದಲ್ಲಿ ಬಹಳ ದುಃಖವು ಪ್ರಾಪ್ತವಾಗಿದೆ. ಆರೋಗ್ಯವಿಷಯದಲ್ಲಿ ಎಚ್ಚರಿಕೆಯಿಂದಿದ್ದರೆ ಲೋಕೋಪಕಾರಿಗಳಾದ ಹಲವರು ದೊಡ್ಡಮನುಷ್ಯರು ಅಲ್ಪಾಯುಸ್ಸಿನಲ್ಲಿಯೇ ತೀರಿಹೋಗದೆ ಇನ್ನೂ ಎಷ್ಟೋ ಕಾಲ ಹೆಚ್ಚಾಗಿ ಬದುಕಬಹುದಾಗಿತ್ತು.

"ಶರೀರದಲ್ಲಿ ಮಿದುಳು, ಹೃದಯ, ಶ್ವಾಸಕೋಶ ಮೊದಲಾದ ಅವಯವಗಳು ಸೇರಿಕೊಂಡಿವೆ. ಇವುಗಳಲ್ಲಿ ಒಂದಕ್ಕಿಂತ ಒಂದು ಸೂಕ್ಷ್ಮವು. ಯಾವುದೊಂದಕ್ಕೆ ಸ್ವಲ್ಪ ತೊಂದರೆಯಾದರೂ ನಮ್ಮ ಆರೋಗ್ಯಕ್ಕೆ ಕುಂದು ಬರಬಹುದು. "ಅಷ್ಟು ಎಚ್ಚರಿಕೆಯಿಂದಿರುವುದು ನಮಗಸದಳವು" ಎಂದು ಹೇಳ-

ಬಹುದು. ಸ್ವಲ್ಪ ಯೋಚಿಸಿದರೆ ಆರೋಗ್ಯವು ಎಲ್ಲರಿಗೂ ಸುಲಭವೆನ್ನುವುದು ಗೊತ್ತಾಗುವುದು. ಆರೋಗ್ಯಶಾಸ್ತ್ರದಲ್ಲಿ ಹೇಳಿರುವಂತೆ, ಆರೋಗ್ಯಕ್ಕೆ ಸಾಧಕಗಳು ಯಾವುವೆಂದರೆ:— ನಿರ್ಮಲವಾದ ಗಾಳಿಯೂ ಬೇಕಾದಷ್ಟು ಬೆಳಕೂ ಇರುವ ಮನೆಯಲ್ಲಿರುವುದು, ಶುದ್ಧವಾದ ನೀರನ್ನು ಕುಡಿವುದು, ಒಳ್ಳೆಯ ಆಹಾರವನ್ನು ಸಕಾಲದಲ್ಲಿ ಮಿತವಾಗಿ ತಿನ್ನುವುದು, ಕೊಳೆಯಿಲ್ಲದ ಒಟ್ಟೆಗಳನ್ನು ಧರಿಸುವುದು, ಅಂಗಸಾಧನೆ ಮತ್ತು ವಿಶ್ರಾಂತಿ. ಊಟ ಮೊದಲಾದುವುಗಳಲ್ಲಿ ಕ್ರಮವನ್ನನುಸರಿಸಬೇಕು; ಮನಬಂದಂತಿರಬಾರದು. ಹಸಿದಲ್ಲದೆ ಉಣಬಾರದು. ಮಿತಿಮೀರಿ ತಿನ್ನಕೂಡದು; ಹಾಗೆ ಮಾಡಿದರೆ ಅಜೀರ್ಣವಾಗಿ ಇತರ ರೋಗಗಳು ಹುಟ್ಟುವುವು. ಮುಖ್ಯವಾಗಿ ಆರೋಗ್ಯಶಾಸ್ತ್ರಾನುಸಾರದಿಂದ ನಡೆವುದನ್ನು ಅಭ್ಯಾಸಮಾಡಿದರೆ ಎಲ್ಲರಿಗೂ ಆರೋಗ್ಯಭಾಗ್ಯವು ಸಿದ್ಧಿಸುವುದರಲ್ಲಿ ಸಂಶಯವಿಲ್ಲ.

## 55. ಸ್ಥಿರಪ್ರಯತ್ನ.

ಯಾವ ಕೆಲಸವನ್ನಾದರೂ ಬಿಡದೆ ಮಾಡಿದರೆ ಆ ಕಾರ್ಯವು ಸಿದ್ಧಿಸುವುದು. "ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ" ಎಂಬ ಭರ್ತೃಹರಿಯ ವಾಕ್ಯಕ್ಕೂ ಇದೇ ತಾತ್ಪರ್ಯವು. ಇದೇ ತಾತ್ಪರ್ಯದ ವಚನಗಳು ಎಲ್ಲಾ ದೇಶಗಳ ಗ್ರಂಥಗಳಲ್ಲಿಯೂ ಉಂಟು. ಎಂತಹ ಕಠಿನವಾದ ಕೆಲಸವೇ ಆಗಲಿ, ಅದನ್ನು ಸಾಧಿಸಬೇಕೆಂಬ ಕುತೂಹಲವುಳ್ಳವರು ತಾಳ್ಮೆಯಿಂದಲೂ ಮನಸ್ಸ್ಥೈರ್ಯದಿಂದಲೂ ತಪ್ಪದೆ ಅದನ್ನು ಮಾಡಬೇಕು.

"ಸ್ಥಿರಪ್ರಯತ್ನ ಮಾಡಿದರೂ ಕೆಲವೆಡೆ ಕಾರ್ಯಸಿದ್ಧಿಯಾಗುವುದಿಲ್ಲವಲ್ಲ," ಎಂದು ಕೆಲವರು ಹೇಳಬಹುದು. ಪ್ರಯತ್ನಕ್ಕೆ ತಕ್ಕ ಫಲಪ್ರಾಪ್ತಿಯಾಗದಿರುವ ಕೆಲವು ಸಂದರ್ಭಗಳೂ ಉಂಟು. ಅಂತಹ ಸಂದರ್ಭಗಳಲ್ಲಿ ಕೆಲಸಮಾಡುವವರ ಸ್ವಭಾವದ ಕೊರತೆಗಳೇ ಕಾರಣ. ತಕ್ಕ ಪ್ರಯತ್ನವನ್ನು ಸ್ಥಿರವಾಗಿ ಮಾಡಿದರೂ ಸರಿಯಾದ ರೀತಿಯಲ್ಲಿ ಮಾಡದಿರಬಹುದು, ಮಾಡಿದ ಸನ್ನಾಹ ಸಾಲದೆಹೋಗಬಹುದು, ಅಥವಾ ವಿವೇಕಲೋಪದಿಂದ ಕೆಲಸ ಕೆಡುವುದುಂಟು. ವರ್ಷಾಂತರ ಪ್ರಯತ್ನದಿಂದ ಕೈಗೂಡಬಹುದಾದ ಕೆಲಸವನ್ನು ಮಾಡತೊಡಗಿ, ಒಂದೆರಡು ವರ್ಷಗಳು ಶ್ರಮಪಟ್ಟು ಸಿದ್ಧಿಸಲಿಲ್ಲವಲ್ಲ ಎನ್ನುವುದು ಸರಿಯೆ? ಇದಲ್ಲದೆ, ಮನುಷ್ಯರೆಲ್ಲರಿಗೂ ಒಂದೇ ಸಮವಾದ ಸಾಮರ್ಥ್ಯ

ವಿರುವುದಿಲ್ಲವಷ್ಟೆ. ಆದುದರಿಂದ ಒಂದು ಕೆಲಸವನ್ನು ನೆರವೇರಿಸಲು ಎಲ್ಲರಿಗೂ ಒಂದೇ ಸಮವಾದ ಕಾಲಪ್ರಮಾಣವು ಬೇಕಾಗುವುದೆಂದು ಹೇಳಲಾಗದು. ಇನ್ನು ಕೆಲವು ಕಡೆ ಸಾಮಾನ್ಯಶಕ್ತಿ ಏನೇನೂ ಕಾರ್ಯಕಾರಿಯಾಗದೆ ಅದ್ಭುತಶಕ್ತಿಯೇ ಬೇಕಾಗಿರುವುದು. ಸಾಮಾನ್ಯನು ಎಷ್ಟೇ ಸ್ಥಿರವಾಗಿ ಬಹಳ ಕಾಲ ಪ್ರಯತ್ನಿಸಲಿ ಕಾಳಿದಾಸನಂತೆ ಗ್ರಂಥಗಳನ್ನು ಬರೆಯಲಾದೀತೆ? ಅಥವಾ ತ್ಯಾಗರಾಜನಷ್ಟು ದೊಡ್ಡ ಸಂಗೀತವಿದ್ವಾಂಸನಾಗಲಾದೀತೆ? ಇಂತಹ ಮಹಾತ್ಮರ ಅದ್ಭುತಶಕ್ತಿಯು ಸ್ವಭಾವಸಿದ್ಧವಾದುದು. ಎಲ್ಲರಿಗೂ, ಅದ್ಭುತಶಕ್ತಿಯಿರುವುದಿಲ್ಲ. ಆದುದರಿಂದ ಇಲ್ಲಿ ಸಾಮಾನ್ಯರನ್ನೂ ಕುರಿತು ಮಾತಾಡಬೇಕು. ಇವರು ಒಂದುದ್ದೇಶವನ್ನು ಗುರಿಯಿಟ್ಟುಕೊಂಡು ಬಹಳ ಶ್ರದ್ಧೆಯಿಂದ ಶ್ರಮಪಟ್ಟು ಕೆಲಸಮಾಡಿದರೆ ತಕ್ಕ ಫಲವಾಗುವುದು.

ಸ್ಥಿರಪ್ರಯತ್ನಕ್ಕೆ ತಕ್ಕ ಫಲವಾಗದೆ ಹೋಗದೆಂಬುದಕ್ಕೆ ಚರಿತ್ರೆಯಲ್ಲಿ ಅನೇಕ ದೃಷ್ಟಾಂತಗಳುಂಟು. ಗ್ರೀಸ್ ದೇಶದ ಚರಿತ್ರೆಯನ್ನು ಓದಿರುವವರೆಲ್ಲರೂ "ಡಿಮಾಸ್ಥನೀಸ್" ಎಂಬುವನ ಹೆಸರನ್ನೆಂದಿಗೂ ಮರೆಯಲಾರರು. ಈತನಿಗೆ ತಾನು ದೊಡ್ಡ ವಾಗ್ಮಿಯಾಗಬೇಕೆಂಬ ಉದ್ದೇಶವಿತ್ತು; ಆದರೆ ಈತನಿಗೆ ಹುಟ್ಟಿದಂದಿನಿಂದ ನತ್ತು ಇತ್ತು. ಮಾತನಾಡುವಾಗಲೆಲ್ಲ ಬಾಯಲ್ಲಿ ಬೆಣಚುಕಲ್ಲನ್ನು ಹಾಕಿಕೊಂಡು ಆಡುವ ಅಭ್ಯಾಸವನ್ನು ಬಹುಕಾಲಮಾಡಿ ಕೊನೆಗೆ ನತ್ತನ್ನು ಹೋಗಲಾಡಿಸಿಕೊಂಡನು. ಹೀಗೆಯೇ ಮತ್ತೊಂದು ಕೊರತೆ ಈತನಲ್ಲಿತ್ತು: ಈತನ ಧ್ವನಿ ಅತಿನಿರ್ಬಲವೂ ಕೀಚಲೂ ಆಗಿತ್ತು. ಅದಕ್ಕಾಗಿ ಸಮುದ್ರತೀರಕ್ಕೆ ಹೋಗಿ ಅಲೆಗಳು ಘೋಷಿಸುತ್ತಿರುವಾಗ ಗಟ್ಟಿಯಾಗಿ ಪ್ರಸಂಗಮಾಡುತ್ತ ತನ್ನ ಧ್ವನಿಯನ್ನು ತಿದ್ದಿಕೊಂಡನು. ಇಂತಹ ಪ್ರಯತ್ನಗಳಿಂದ ಗ್ರೀಸ್ ದೇಶದಲ್ಲೆಲ್ಲ ಅಗ್ರಗಣ್ಯನಾದ ವಾಗ್ಮಿಯಾದನು. ಇಂಗ್ಲೆಂಡ್ ಚರಿತ್ರೆಯನ್ನೋದಿರುವವರಿಗೆ ರಾಬರ್ಟ್ ಬ್ರೂಸೆಂಬ ಸ್ಕಾಟ್ಲೆಂಡ್ ದೇಶದ ದೊರೆಯ ಸಂಗತಿ ತಿಳಿಯದಿರಲಾರದು. ಈ ದೊರೆ ಇಂಗ್ಲಿಷ್ ಸೈನ್ಯದಿಂದ ಹಲವು ಸಾರಿ ಪರಾಜಿತನಾಗಿ ಚಿಂತಸುತ ನಿದ್ರೆಯಿಲ್ಲದೆ ಮಲಗಿರಲು, ಒಂದು ಜಾಡರ ಹುಳವು ತನ್ನ ದಾರವನ್ನು ಸಿಕ್ಕಿಸಲು ಗೋಡೆಯ ಮೇಲೆ ನೆಗೆಯುತ್ತ, ಆರು ಬಾರಿ ಪ್ರಯತ್ನಿಸಿ ಪ್ರತಿಸಲವೂ ಕೆಳಕ್ಕೆ ಬಿದ್ದು ಹೋಯಿತು. ಏಳನೆಯ ಬಾರಿ ಪ್ರಯತ್ನಿಸಿದಾಗ ಅದಕ್ಕೆ ಕೆಲಸ ಕೈಗೂಡಿತು. ಇದನ್ನು ಕಂಡು ಬ್ರೂಸನು ತಾನು ಮತ್ತೆ ಪ್ರಯತ್ನಿಸಲು ಆಗ ಅವನಿಗೆ ಜಯವುಂಟಾಯಿತು.

ಪೂರ್ವಕಾಲದಲ್ಲಿ ನಮ್ಮ ದೇಶದಲ್ಲಿ ಕಾಗದವೂ ಅಚ್ಚು ಹಾಕುವುದೂ ಇರಲಿಲ್ಲ. ಆಗ ನಮ್ಮವರು "ಮಹಾಭಾರತ" ಮೊದಲಾದ ದೊಡ್ಡದೊಡ್ಡ ಗ್ರಂಥಗಳನ್ನೆಲ್ಲ ವರ್ಷಾಂತರಗಳ ವರೆಗೆ ಓಲೆಗರಿಗಳ ಮೇಲೆ ಕಬ್ಬಿಣದ ಸಲಾಕಿಗಳಿಂದ ಬರೆಯುತ್ತಿದ್ದರು. ನಮ್ಮ ಪ್ರಾಚೀನರು ಹೀಗೆ ಸ್ಥಿರಪ್ರಯತ್ನದಿಂದ ಶ್ರಮಪಟ್ಟು ಇಂತಹ ಗ್ರಂಥಗಳನ್ನು ಬರೆದಿಡದಿದ್ದರೆ ಇವುಗಳೆಲ್ಲಾ ಹಾಳಾಗಿ ಹೋಗುತ್ತಿದ್ದುವು. ಈಗ ಆಂಗ್ಲೆಯರು ಎಲ್ಲಾ ವಿಷಯಗಳಲ್ಲಿಯೂ ಪ್ರಮುಖರಾಗಿರುವುದೂ ಅವರ ಅದ್ಭುತವಾದ ಸ್ಥಿರಪ್ರಯತ್ನದಿಂದಲೇ ಅಲ್ಲವೆ?

ತಿರ್ಯಗ್ಜಂತುಗಳಲ್ಲಿಯೂ ಸ್ಥಿರಪ್ರಯತ್ನದಿಂದ ಕಾರ್ಯಸಿದ್ಧಿಯಾಗುತ್ತಿರುವುದು ಎಲ್ಲರಿಗೂ ತಿಳಿದಿರಬಹುದು. ಇದಕ್ಕೆ ಜೇನುಹುಳುಗಳೇ ದೃಷ್ಟಾಂತವು. ಇವು ಬಲುಚಿಕ್ಕಪ್ರಾಣಿಗಳಾದರೂ ಒಂದೊಂದುಸಲ ಒಂದೊಂದು ಹೂವಿಗೆಹೋಗಿ ಮಕರಂದವನ್ನು ತಂದು ಕೂಡಹಾಕಿ ಕೊನೆಗೆ ಎಷ್ಟುದೊಡ್ಡ ಗೂಡನ್ನು ಕಟ್ಟುತ್ತವೆ! ಹೀಗೆ ಯಾವ ಕೆಲಸವನ್ನಾದರೂ ಬಿಡದೆ ತಾಳ್ಮೆಯಿಂದ ಮಾಡಿದರೆ, ಕೊನೆಗೆ ಅದು ಕೈಗೂಡುವುದೇ ಸಿದ್ಧವು.

## 56. ಸ್ವಾಭಿಮಾನ.

"ಸ್ವಾಭಿಮಾನ" ಅಥವಾ "ಅಹಂಕಾರ" ಎಂದರೆ "ಯಾವವಿಷಯದಲ್ಲಿಯೇ ಆಗಲಿ ನನ್ನ ಸಮಾನರು ಯಾರೂ ಇಲ್ಲ; ನಾನು ಬಹಳ ದೊಡ್ಡವನು" ಎಂದು ತಿಳಿದುಕೊಳ್ಳುವುದು. ಪ್ರಪಂಚದಲ್ಲಿ ಈ ದುರಭಿಪ್ರಾಯದಿಂದ ಬಾಧಿಸಲ್ಪಡುವವರನೇಕರುಂಟು. ಇಂಥವರಿಗೆ ತಮ್ಮ ಯೋಗ್ಯತೆಯಿಷ್ಟೆಂದು ತಿಳಿಯದಿದ್ದರೂ, ಇವರ ಸುತ್ತಮುತ್ತಲೂ ಇರುವವರಿಗೆ ಇವರಯೋಗ್ಯತೆಯಿಷ್ಟೆಂಬುದು ಅಲ್ಪಕಾಲದಲ್ಲಿಯೇ ಚೆನ್ನಾಗಿ ತಿಳಿಯಬರುತ್ತದೆ. ಸ್ವಾಭಿಮಾನಿಗಳು ಸಮಯ ಬಂದಾಗಲೆಲ್ಲಾ ತಮ್ಮ ಯೋಗ್ಯತೆಯನ್ನು ಕುರಿತು ಬಡಾಯಿ ಕೊಚ್ಚಿಕೊಂಡು ಇತರರ ತಪ್ಪುಗಳನ್ನು ಪರಿಹಾಸಮಾಡುವರು; ಹೆರರು ಏನಾದರೂ ಬದಲು ಹೇಳಿದರೆ ಅದನ್ನು ಧಿಕ್ಕರಿಸುವರು. ಇವರಿಗೆ ಆತ್ಮಸ್ತುತಿಯಿಂದಲೇ ತೃಪ್ತಿ. ಆತ್ಮಸ್ತುತಿಯನ್ನು ಪ್ರತಿಸಂದರ್ಭದಲ್ಲಿಯೂ ಮಾಡಿಕೊಳ್ಳದಿದ್ದರೆ ಅವರಿಗೆ ಮನಸ್ಸು ನಿಲ್ಲುವುದಿಲ್ಲ. ಆತ್ಮಸ್ತುತಿಯನ್ನು ಕೇಳಿದವರು ಏನೆಂದುಕೊಂಡಾರು ಎಂಬ ಭೀತಿಯೇ ಇವರಿಗಿಲ್ಲ. ಇವರ ಯೋಗ್ಯತೆಯನ್ನು ತಿಳಿದವರು ತಡೆಯಲಾರದೆ ಜುಗುಪ್ಸೆಪಟ್ಟು ಇವರಿಗೆ ವಿರುದ್ಧವಾದ ಒಂದು ಮಾತಾಡಿ-

ದರೆ, ಅವರ ಮೇಲೆರೇಗಿಬಿದ್ದು, ಅವರನ್ನು ಸಿಕ್ಕಿದ ಹಾಗೆ ಎನ್ನುವರು. ತಮ್ಮ ಯೋಗ್ಯತೆಯನ್ನು ಅತಿಶಯೋಕ್ತಿಗಳಿಂದ ಬಾರಿಬಾರಿಗೂ ಕೊಚ್ಚಿಕೊಳ್ಳುವ ದುರಭ್ಯಾಸದಿಂದ ಸ್ವಾಭಿಮಾನಿಗಳಿಗೆ ತಮ್ಮ ಮಾತಿನಲ್ಲಿ ಸ್ವಲ್ಪ ಹುಳುಕೂ ಗೊತ್ತುಹತ್ತುವುದಿಲ್ಲ. ಇವರ ಗೆಳೆಯರು ಆ ಹುಳುಕುಗಳನ್ನು ಸೂಚಿಸಿದರೂ ಸಂಬದೆ ತಾವು ಎಂದಿಗೂ ಸುಳ್ಳಾಡುವವರಲ್ಲವೆಂತಲೂ, ಪ್ರಪಂಚವೇ ತಮ್ಮ ವಿಷಯದಲ್ಲಿ ತಪ್ಪು ತಿಳಿದುಕೊಂಡಿದೆಯೆಂತಲೂ, ತಮ್ಮ ಶ್ರೇಷ್ಠವಾದ ಯೋಗ್ಯತೆಯನ್ನು ಎಲ್ಲರೂ ಉದಾಸೀನಮಾಡಿದ್ದಾರೆಂತಲೂ ಯೋಚಿಸುವರು. ಆದರೆಅಂತಹ ಒಳ್ಳೆಯ ಯೋಗ್ಯತೆಯಿದ್ದರೆ, ಅದು ಎಷ್ಟುದಿನ ಗುಪ್ತವಾಗಿದ್ದೀತು? ಶೀಘ್ರವಾಗಿಯೇ ಎಲ್ಲರಿಗೂ ವ್ಯಕ್ತವಾಗುವುದು. ಮಧ್ಯಾಹ್ನದಲ್ಲಿ ಸೂರ್ಯನು ಪ್ರಜ್ವಲಿಸುತ್ತಿರಲು, ಯಾರಾದರೂ ಅವನು ಆಕಾಶದಲ್ಲಿರುವುದನ್ನು ಪ್ರಕಟಿಸಬೇಕಾಗಿದೆಯೇ? ಒಂದು ವೇಳೆ ನಮ್ಮ ಯೋಗ್ಯತೆಯನ್ನು ಇರುವುದಕ್ಕಿಂತ ಕಡಮೆಯಾಗಿ ಯಾರಾದರೂ ತಿಳಿದುಕೊಂಡರೆ, ಅದು ಹೊಟ್ಟೆಕಿಚ್ಚಿನಿಂದಲೋ ಮನಸ್ತಾಪದಿಂದಲೋ ಆಗಿರಬೇಕು. ಯಾವ ಕಾರಣದಿಂದಲಾಗಿರಲಿ, ನಾವು ದೊಡ್ಡ ಮನುಷ್ಯರೆಂದೂ, ನಮ್ಮನ್ನು ಅವರು ಗೌರವಿಸಬೇಕೆಂದೂ ಅವರಿಗೆಮುಂದಟ್ಟುಮಾಡುವುದು ನಮ್ಮಿಂದಾದೀತೆ? ಗೌರವಕ್ಕೆ ಅರ್ಹತೆಯನ್ನು ಸಂಪಾದಿಸುವುದು ನಮ್ಮ ಧೀನ. "ಗೌರವಕ್ಕೆ ನಾವು ಪಾತ್ರರು, ಎಲ್ಲರೂ ನಮಗೆ ಮರ್ಯಾದೆ ಕೊಡಬೇಕು" ಎಂದು ಬಾಧ್ಯತೆಯನ್ನು ತೋರಿಸಿಕೊಂಡರೆ, ಮರ್ಯಾದಾರ್ಹತೆ ಹೋಗಿಬಿಡುವುದಲ್ಲದೆ, ಇದ್ದ ಮರ್ಯಾದೆಯನ್ನೂ ಹಾಳುಮಾಡಿಕೊಳ್ಳುವೆವು.

ಯಾರಿಗಾದರೂ ಅಹಂಕಾರವುಂಟಾಗಬೇಕಾದರೆ, ಅವರು ಯಾವಾಗಲೂ ತಮಗಿಂತಕೀಳಾದವರೊಡನೆಯೇ ಬಹುಕಾಲ ವಾಸಮಾಡಿರಬೇಕು; ಅಥವಾ ಕೂಪಕೂರ್ಮದಂತೆ ಇದ್ದ ಕಡೆಯೇ ಇದ್ದು ತಮಗಿಂತ ಗಟ್ಟಿಗರಲ್ಲಿಗೆ ಹೋಗದಿರಬೇಕು; ಇಲ್ಲವೆ ಅಹಂಕಾರಿಗಳ ಜತೆಯಲ್ಲಿಯೇ ಚಿಕ್ಕಂದಿನಿಂದ ಇದ್ದಿರಬೇಕು. ಅಹಂಕಾರವು ಕಡಮೆಯಾಗಬೇಕಾದರೆ, ನಾಲ್ಕಾರು ದೊಡ್ಡ ಸ್ಥಳಗಳಲ್ಲಿ ಸಂಚರಿಸಿ ಅಲ್ಲಿನ ದೊಡ್ಡವರೊಡನೆ ಓಡಾಡಬೇಕು. ಆಗಲೇ ನಮ್ಮ ಯೋಗ್ಯತೆಯಿಷ್ಟೆಂದು ಗೊತ್ತಾಗುವುದು. ಇದರಿಂದ ಆತ್ಮಪ್ರತಿಷ್ಠೆ ಬಲುಮಟ್ಟಿಗೆ ಶಾಂತವಾದೀತು.

ಇನಿಸಂ ತಾಂ ತಿಳಿದಂದು ಗರ್ವಭರಮುಂ ತಾಳ್ದಿಲ್ಲಮುಂ ಬಲ್ಲೆನಂ |
ದೆನುತಂ ಬಿನ್ನನೆ ಬೀಗುತಿರ್ದೆ ನಕಟಾ ಮತ್ತದ್ವಿಪಂಬೊಲ್ವಲಂ ||
ಜನಿಸಲ್ಕೆನ್ನೊಳೆ ಮೆಲ್ಲಮೆಲ್ಲನರಿವಾ ವಿದ್ವತ್ಸಹಾವಾಸದಿಂ |
ಮನಕಂಟಿರ್ದ ಮಹಾಮದಂ ಜ್ವರದವೋಲ್ಪೋಯಿತ್ತಗಳೇನೆಂದಪೆಂ ||

ಎಂಬ ನುಡಿ ದಿಟವು.

ಹೀಗೆ ನಮ್ಮ ನಿಜವಾದ ಯೋಗ್ಯತೆಯನ್ನರಿಯಬೇಕಾದರೆ, ಬಹಳ ಕಾಲವೂ ಅನುಭವವೂ ಬೇಕು. ಈ ದುರ್ಗುಣವು ಕಿರಿಯವರಲ್ಲಿಯೂ ಮೂಢರಲ್ಲಿಯೂ ವಿಶೇಷವಾಗಿರುವುದೇ ಹೊರತು, ವೃದ್ಧರಲ್ಲಿಯೂ ವಿವೇಕಿಗಳಲ್ಲಿಯೂ ಪೂರ್ಣವಿದ್ವಾಂಸರಲ್ಲಿಯೂ ಕಂಡುಬರುವುದಿಲ್ಲ. "ತುಂಬಿದ ಕೊಡ ತುಳುಕುವುದಿಲ್ಲ." ಹುಡುಗರು ಓದುವಾಗ ದುರಹಂಕಾರಕ್ಕೆ ಗುರಿಯಾಗುವರು ಈಗಿನ ಕಾಲದಲ್ಲಂತು ಪರೀಕ್ಷೆಗಳಲ್ಲಿ ತೇರ್ಗಡೆಯಾದರೆ, ಕೆಲವು ಹುಡುಗರಿಗೆ ತಲೆಯೇ ನೆಟ್ಟಗೆ ನಿಲ್ಲುವುದಿಲ್ಲ. ಇದು ಅವರ ಜ್ಞಾನಾಭಿವೃದ್ಧಿಗೆ ದೊಡ್ಡ ಕುಂದು. ವಿದ್ಯಾಭ್ಯಾಸ ಮಾಡುವುದು ಜ್ಞಾನಸಂಪಾದನೆಗೋಸ್ಕರವಲ್ಲದೆ ಅಹಂಕಾರದಿಂದ ಮೆರೆವುದಕ್ಕಲ್ಲ. ಜ್ಞಾನವನ್ನು ಪಡೆವುದೂ ಹೊರಗೆ ಎಲ್ಲರಿಗೂ ತೋರಿಸಿಕೊಳ್ಳಲಿಕ್ಕಲ್ಲ. ಹಾಗೆ ತೋರ್ಪಡಿಸಿಕೊಳ್ಳುವುದು ಅವರಲ್ಲಿ ಏನೇನೂ ಹುರುಳಿಲ್ಲವೆಂಬುದನ್ನು ವ್ಯಕ್ತಪಡಿಸುವುದು.

ಸ್ವಾಭಿಮಾನವುಳ್ಳವರಲ್ಲಿ ಇನ್ನೆರಡು ದುರ್ಗುಣಗಳು ಸೇರಿರುವುವು. ಇವರು ಹೇಗಾದರೂ ಮಾಡಿ ತಮ್ಮ ಹೆಸರನ್ನು ಮುಂದಕ್ಕೆ ತಂದುಕೊಳ್ಳುವುದರಲ್ಲಿ ನಿರತರಾಗಿರುತ್ತಾರೆ. ಆದುದರಿಂದ ಹೆರರ ಯೋಗ್ಯತೆಯ ವಿಷಯದಲ್ಲಿ ಯಾವಾಗಲೂ ಹೊಟ್ಟೆಕಿಚ್ಚುಪಡುವರು; ಮತ್ತು ತಮಗಿಂತ ಜ್ಞಾನಿಗಳೂ ಗಟ್ಟಿಗರೂ ಆಗಿರುವವರಲ್ಲಿ ಹುಳುಕುಗಳನ್ನು ಕಂಡುಹಿಡಿಯುವುದರಲ್ಲಿಯೇ ನಿರತರಾಗಿರುವರು. ಇದರಿಂದ ಅಹಂಕಾರಿಗಳಿಗೆ ಹಲವರು ಶತ್ರುಗಳಾಗುವರು.

## 57. ಸುಗ್ಗಿಯ ಕಾಲ.

ಬೆಳೆದ ದವಸಗಳನ್ನು ಮನೆಗೆ ತಂದುಹಾಕಿಕೊಳ್ಳುವ ಕಾಲಕ್ಕೆ ಸುಗ್ಗಿಯ ಕಾಲವೆನ್ನುವರು. ಇದರಷ್ಟು ಆನಂದಕರವಾದ ಕಾಲವು ವರ್ಷದಲ್ಲಿ ಇನ್ನಾವುದೂ ಸಿಕ್ಕದು. ರೈತರಿಗೆ ಇದು ವಿಶೇಷವಾಗಿ ಸಂತೋಷಕರವು; ಏಕೆಂದರೆ, ರೈತರು ಬೆಳೆಗಾಗಿ ಬಂದು ವರ್ಷವೆಲ್ಲ ಎದೆಯೊಡೆದುಕೊಂಡು ದುಡಿದಿರುತ್ತಾರೆ. ಅವರ ಕಷ್ಟಕ್ಕೆ ತಕ್ಕ ಫಲಪ್ರಾಪ್ತಿಯಾದರೆ ಕೇಳಬೇಕೆ? ಅವರ ಸಂತೋಷಕ್ಕೆ

ಪಾರವೇ ಇಲ್ಲ. ಮನೆಯಲ್ಲಿ ರಾಶಿರಾಶಿಯಾಗಿ ಬಿದ್ದಿರುವದವಸವನ್ನು ಕಂಡು, ರೈತನೂ ಅವನ ಹೆಂಡತಿಮಕ್ಕಳೂ ಬಲು ಹಿಗ್ಗುವರು. ರೈತನು ಮನೆಗೆ ಬೇಕಾದಷ್ಟು ಧಾನ್ಯವನ್ನಿಟ್ಟುಕೊಂಡು, ಉಳಿದುದನ್ನು ಮಾರಿಬಿಡುವನು. ಆಗ ಅವನಿಗೆ ಕೈತುಂಬ ಹಣಸಿಕ್ಕುವುದು. ಗೊಬ್ಬರಹೊಡೆದು, ಆರಿನಿಂದ ಚೆನ್ನಾಗಿ ಉತ್ತು, ಒಳ್ಳೆಯ ಬೀಜಗಳನ್ನು ತಕ್ಕ ಕಾಲದಲ್ಲಿ ಬಿತ್ತಿ, ಕಳೆಕಿತ್ತು, ಪೈರನ್ನು ದನಕರುಗಳು ಮೇಯದಂತೆ ಕಾದು, ವರ್ಷವೆಲ್ಲ ಬೆಳೆಗಾಗಿ ಪಟ್ಟ ಕಷ್ಟವು ರೈತನಿಗೆ ಸುಗ್ಗಿಯ ಕಾಲದಲ್ಲಿಮರೆತುಹೋಗುವುದು; ಮತ್ತೆಬೆಳೆಯ ಬೇಕೆಂಬ ಕುತೂಹಲವೂ ಹುಟ್ಟುವುದು. ಹಿಂದಿನ ವರ್ಷಕ್ಕಿಂತ ಲೇಸಾಗಿ ಧಾನ್ಯವನ್ನು ಪಡೆಯಬೇಕೆಂಬ ಮನಸ್ಸುಂಟಾಗುವುದು. ಇದಲ್ಲದೆ ಮನೆಯಲ್ಲಿ ಹೆಚ್ಚು ತಿಂಡಿಗಳನ್ನು ಮಾಡಿಕೊಳ್ಳಲನುಕೂಲಿಸುವುದು. ಕೆಲವೆಡೆಗಳಲ್ಲಿ ಸುಗ್ಗಿಗಾಗಿ ದೊಡ್ಡ ಹಬ್ಬವನ್ನೇ ಮಾಡುವರು; ಆಗ ರೈತರೆಲ್ಲ ಸೇರಿ ಸಂತೋಷ-ದಿಂದಹಿಗ್ಗುತಕುಣಿದಾಡುವರು. ಇದಕ್ಕೆ "ಸುಗ್ಗಿಯಕುಣಿತ" ಎಂದುಹೆಸರು.

ಸುಗ್ಗಿಯು ಅದ್ದೂರಿಯಾಗಿರಬೇಕಾದರೆ, ರೈತರ ಶ್ರಮದೊಡನೆ ದೈವಸ-ಹಾಯವೂ ಬೇಕು: ಬೆಳೆ ಚೆನ್ನಾಗಬೇಕಾದರೆ, ಮಳೆ ಸರಿಯಾಗಿ ಬರಬೇಕು. ಒಂದೊಂದು ಸಲ ಹೊತ್ತಿಗೆ ಮಳೆ ಬಾರದೆ ಪೈರೆಲ್ಲ ಒಣಗಿ ಸೀಕಲುಬಿದ್ದು ಧಾನ್ಯವು ಕೆಟ್ಟುಹೋಗುವುದುಂಟು. ಆಗ ರೈತರಿಗೆ ನಷ್ಟವಾಗುವುದು; ಆದರೂ ಅವರು ಹೆದರುವುದಿಲ್ಲ. ಅವರು ಅಂತಹ ಸಮಯಕ್ಕೊದಗುವಂತೆ ಹಿಂದಿನ ವರ್ಷದ ದವಸವನ್ನು ಕೈಕಾವಲಿಟ್ಟೇ ಇರುವರು. ಅದರಿಂದ ಕಾಲ-ಕ್ಷೇಪಮಾಡಿಕೊಳ್ಳುವರು. ಒಂದು ಸಲ ಮಳೆ ನಿಂತುದಕ್ಕೇ ಮುಳುಗಿ-ಹೋಗಿ ತಿಂಡಿಗಿಲ್ಲದೆ ಸಾಲಗಾರರಾಗುವಷ್ಟು ಮೈಮರೆತಿರುವ ರೈತರು ಬಲುಕಡಮೆ. ಎಲ್ಲರಿಗೂ ಈ ವಿಷಯದಲ್ಲಿ ತಕ್ಕಮಟ್ಟಿಗೆ ಮುಂದಾಲೋಚ-ನೆಯಿದೆ.

ಸುಗ್ಗಿಯಕಾಲದಲ್ಲಿ ಹೊಲಗದ್ದೆಗಳ ಮೇಲೆ ಸಂಚಾರ ಹೊರಟರೆ ಸೊಗ-ಸಾದ ಬಗೆಬಗೆಯ ನೋಟಗಳು ಕಂಗೊಳಿಸುವುವು. ಪೈರು ಸೊಂಪಾಗಿ ಬೆಳೆದು ಕೊಯ್ಲಿಗೆ ಬಂದಿರುವ ಕಡೆಗಳಲ್ಲಿ ರೈತರು ಮನೆಯವರೆಲ್ಲರೊಡನೆ ಕೊಯ್ಯಲಾರಂಭಿಸುವರು. ಆಗ ಹೊಲಗದ್ದೆಗಳಲ್ಲಿಎಲ್ಲಿನೋಡಿದರೂ ಗಂಡ-ಸರೂ ಹೆಂಗಸರೂ ಮಕ್ಕಳೂ ತುಂಬಿರುವರು. ವಿನೋದವಾಗಿ ಮಾತುಗಳ-ನ್ನಾಡುತ್ತಲೂ, ಹಾಡುಗಳನ್ನು ಹೇಳುತ್ತಲೂ, ಕೆಲಸ ಮಾಡುತಿರುವ ಈ

ಜನರೂ, ಇವರ ಹತ್ತಿರ ಅಲ್ಲಲ್ಲಿ ಕೊಯ್ದಿಟ್ಟಿರುವ ಪೈರುಗುಡ್ಡೆಗಳೂ, ನಿರ್ಮಲವಾದ ಆಕಾಶವೂ, ಹಾರಾಡುತಿರುವ ಹಕ್ಕಿಗಳೂ, ಚಿನ್ನದಂತೆ ಹೊಳೆವ ಪೈರುಗಳೂ ಕಣ್ಣುಮನಗಳನ್ನು ಸೆಳೆಯುವುವು. ಕೆಲವೆಡೆ ಕೊಯ್ಲು ಮುಗಿದು ಪೈರನ್ನು ಹೊರೆಗಳಾಗಿ ಕಟ್ಟಿ ಮೆದೆಹಾಕುತಿರುವರು. ಇನ್ನು ಕೆಲವೆಡೆ ಕಣಗಳನ್ನು ಮಾಡುತಿರುವರು, ಅಥವಾ ಮಾಡಿದ ಕಣಗಳಲ್ಲಿಎತ್ತುಗಳಿಂದಲೂ ಕೋಣಗಳಿಂದಲೂ ಪೈರನ್ನು ತುಳಿಸುತಿರುವರು, ಇಲ್ಲವೇ ಜನರೇ ಕಡ್ಡಿಗಳಿಂದ ಬಡಿದು ಧಾನ್ಯವನ್ನು ಒಕ್ಕುತಿರುವರು. ಮತ್ತೆ ಕೆಲವೆಡೆ ಒಕ್ಕಿದ ದವಸವನ್ನು ರಾಶಿಹಾಕಿ ಅಳೆದು ಮನೆಗೆ ಸಾಗಿಸುತಿರುವರು. ಆಗ ಭಿಕ್ಷಕ್ಕಾಗಿ ಬಂದ ಬಡಬಗ್ಗರಿಗೆ ತೋರಿದಷ್ಟು ಧಾನ್ಯವನ್ನು ಧರ್ಮಮಾಡುವರು. ಕೊಯ್ಲಾಗದಿರುವ ಹೊಲಗದ್ದೆಗಳಲ್ಲಿ ತೆನೆಯ ಭಾರದಿಂದ ಪೈರುಗಳು ಗಾಳಿಗೆ ಬಳುಕುತ, ರೈತರು ಪಟ್ಟಿರುವ ಕಷ್ಟಕ್ಕೆ ಮೆಚ್ಚಿ ತಲೆದೂಗುವಂತೆ ಕಾಣುವುವು. ವಿಶಾಲವಾದ ಹೊಲಗದ್ದೆಗಳಲ್ಲಿಸೊಂಪಾಗಿ ಬೆಳೆದ ಪೈರುಗಳ ಗುಂಪು ಒಟ್ಟಿಗೆ ಗಾಳಿಯಿಂದ ಕೆಳಕ್ಕೂ ಮೇಲಕ್ಕೂ ತೂಗಾಡುವುದು ಸಮುದ್ರದ ಅಲೆಗಳನ್ನು ಜ್ಞಾಪಿಸುವುದು.

ಸುಗ್ಗಿಯ ಕಾಲದಲ್ಲಿಯೇ ಸರ್ಕಾರದವರು ಕಂದಾಯದ ವಸೂಲಿಯನ್ನು ಮಾಡುವರು. ಇದರಿಂದ ಅಷ್ಟಿಯಿಲ್ಲದೆ ಕಂದಾಯವು ಸಲ್ಲಲವಕಾಶವುಂಟು. ಆಗ ಎಲ್ಲರಿಗೂ ಮನೆತುಂಬ ದವಸವು ಬಂದು ಬಿದ್ದಿರುತ್ತದೆ. ವರ್ಷದಕೊನೆವರೆಗೂ ಆಗುವಷ್ಟು ಧಾನ್ಯವನ್ನಿಟ್ಟುಕೊಂಡು ಉಳಿದುದನ್ನು ಮಾರಿ ಕಂದಾಯಕೊಡುತ್ತಾರೆ. ಆದುದರಿಂದ ಸುಗ್ಗಿಯ ಕಾಲದಲ್ಲಿ ಸಕಲ ಧಾನ್ಯಗಳೂ ಅಗ್ಗವಾಗಿ ಸಿಕ್ಕುವುವು. ಇದೇ ಸಮಯವೆಂದು ಅನೇಕರು ದವಸಗಳನ್ನು ಕೊಂಡು ಕೂಡಿಹಾಕುವರು.

## 58. ಅಂಗಸಾಧನೆ.

ದೇವರು ನಮಗೆ ಕೊಟ್ಟಿರುವ ಭಾಗ್ಯಗಳಲ್ಲಿ ಆರೋಗ್ಯವೇ ಮುಖ್ಯವು. ಆರೋಗ್ಯವಂತನ ಬಾಳು ಸಂತೋಷಕರ, ಇದಿಲ್ಲದವನ ಬಾಳು ವ್ಯರ್ಥ. ಇದು ಹೊರತು ಮಿಕ್ಕಯಾವ ಸುಖಗಳಿದ್ದರೂ ಪ್ರಯೋಜನವಿಲ್ಲ.ಆರೋಗ್ಯವನ್ನು ಕಾಪಾಡಿಕೊಳ್ಳದಿದ್ದರೆ ಪಾಪ ಮಾಡಿದಂತಾಗುವುದು. “ಶರೀರ ಮಾದ್ಯಂ ಖಲು ಧರ್ಮಸಾಧನಂ.”

ಆಯಾ ಅಂಗಗಳಿಗೆ ಮಾಡಬೇಕಾದ ಕೆಲಸಗಳನ್ನು ಸರಿಯಾಗಿ ಮಾಡುವ ಶಕ್ತಿಯಿದ್ದರೆ, ನಮ್ಮ ದೇಹದಲ್ಲಿ ಆರೋಗ್ಯ ನೆಲೆಸಿರುವುದು. ಅವಯವಗಳಿಗೆ ಈ ಶಕ್ತಿ ಇರಬೇಕಾದರೆ ಅವುಗಳ ಕೈಲಿ ಚೆನ್ನಾಗಿ ಕೆಲಸಮಾಡಿಸಬೇಕು. ಕೆಲಸದಿಂದ ಅವುಗಳು ಗಟ್ಟಿಯಾಗುತ್ತವೆ. ಕೆಲವು ಕಾಡುಜನರಲ್ಲಿ ಒಂದು ಪಂಗಡದವರಿಗೂ ಮತ್ತೊಂದು ಪಂಗಡದವರಿಗೂ ಆಗಾಗ್ಗೆ ಯುದ್ಧವಾಗುತ್ತಲೇ ಇರುವುದು. ಇವರು ಯಾವಾಗಲೂ ಎಚ್ಚರಿಕೆಯಿಂದಲೇ ಇರಬೇಕು. ಮನುಷ್ಯನಾಗಲಿ ಮೃಗವಾಗಲಿ ಬರುತ್ತಿದ್ದರೆ, ಆ ಮನುಷ್ಯನಿಂಥವನೆಂದೂ, ಆ ಮೃಗವಿಂತಹುದೆಂದೂ ದೂರದಲ್ಲಿ ಬರುವಾಗಲೇ ಹೇಳಬಲ್ಲರು. ಒಂದು ವೇಳೆ ಕಣ್ಣಿಂದ ನೋಡದಿದ್ದರೂ ಬರುವಾಗ ಆಗುವ ಸಪ್ಪಳಿಂದಲೇ ಇಂಥಾದ್ದೆಂದು ಹೇಳುವರು. ಇವರಿಗೆ ಈ ಶಕ್ತಿಯಿರುವುದಕ್ಕೂ ನಮಗೆ ಇಲ್ಲದೆ ಹೋಗುವುದಕ್ಕೂ ಕಾರಣವೇನು? ಅವರು ತಮ್ಮ ಕಣ್ಣುಗಳನ್ನೂ ಕಿವಿಗಳನ್ನೂ ಅಡಿಗಡಿಗೆ ಉಪಯೋಗಿಸಲೇಬೇಕು. ನಮಗೆ ಆ ಆವಶ್ಯಕತೆಯಿಲ್ಲ. ಇಷ್ಟೇಕೆ? ಅಕ್ಕಸಾಲೆಗೂ ಕಮ್ಮಾರನಿಗೂ ಇರುವ ತೋಳನ್ನೂ ಒಬ್ಬ ಉಪಾಧ್ಯಾಯನ ತೋಳನ್ನೂ ನೋಡೋಣ. ಮೊದಲನೆಯ ಇಬ್ಬರ ತೋಳು ದೊಣ್ಣೆಯಂತೆ ಗಟ್ಟಿಯಾಗಿಯೂ ದಪ್ಪವಾಗಿಯೂ ಮಾಂಸಪುಷ್ಟಿಯುಳ್ಳುದಾಗಿಯೂ ಇರುತ್ತದೆ. ಉಪಾಧ್ಯಾಯನ ತೋಳು ಸಣ್ಣಗೆ ಪುಷ್ಟಿಯಿಲ್ಲದೆ ನಿರ್ಬಲವಾಗಿರುವುದು. ಇದಕ್ಕೆ ಅವರವರು ಮಾಡತಕ್ಕ ಕೆಲಸವೇ ಕಾರಣವು. ಹೀಗೆಯೇ ಇಂದ್ರಿಯಪಾಟವಕ್ಕೆ ಆಯಾ ಇಂದ್ರಿಯಗಳನ್ನು ಯಾವಯಾವ ಮಾರ್ಗದಲ್ಲಿ ಬಳಸುತ್ತಿರಬೇಕೋ ಹಾಗೆ ಮಾಡುತ್ತಬರಬೇಕು. ಚಾಕು ಕತ್ತರಿಗಳನ್ನು ಉಪಯೋಗಿಸದೆ ಪೆಟ್ಟಿಗೆಯಲ್ಲಿ ಮುಚ್ಚಿಟ್ಟರೆ ತುಕ್ಕು ಹಿಡಿದು ಕೆಲಸಕ್ಕೆ ಬಾರದೆ ಹೋಗುವುವು. ಹಾಗೆಯೇ ನಮ್ಮಂಗಗಳನ್ನು ತಕ್ಕ ರೀತಿಯಲ್ಲಿ ಉಪಯೋಗಿಸದೆ ಬಿಟ್ಟರೆ, ಅವುಗಳ ಶಕ್ತಿ ಕುಂದಿ ಅನಾರೋಗ್ಯವುಂಟಾಗುವುದು.

ಆದುದರಿಂದಲೇ ಬಗೆಬಗೆಯ ಅಂಗಸಾಧನೆಗಳು ಏರ್ಪಟ್ಟಿರುವುವು. ಇವುಗಳಲ್ಲಿ ‘‘ನಡೆವುದು’’ ಅತಿ ಸುಲಭವಾದುದು. ಸಂಚಾರವನ್ನು ಸಾಧ್ಯವಾದರೆ ಯಾವುದಾದರೂ ಒಂದುದ್ದೇಶದೊಡನೆ ಮಿತ್ರರೊಡಗೂಡಿ ಬಲು ವೇಗವಾಗಿ ಮಾಡಬೇಕು; ಇಲ್ಲದಿದ್ದರೆ ಇದು ಅಷ್ಟು ಫಲಕಾರಿಯಾಗದು. ಕುದುರೆಸವಾರಿ, ಈಜುವುದು ಬಹಳ ಒಳ್ಳೆಯ ಸಾಧನೆಗಳು. ಗರಡಿಯ

ಸಾಮು ಎಲ್ಲಾ ಅಂಗಗಳಿಗೂ ಸಾಧನೆಯಾಗುವಂತೆ ಮಾಡುವುದು. ಇದರಲ್ಲಿ "ದಂಡೆ"ಯೆಂಬುದು ಬಲು ಪ್ರಸಿದ್ಧವಾದುದು. ದಂಡೆಯಲ್ಲಿ ಮೈಯ ಭಾರವನ್ನೆಲ್ಲ ಕೈಗಳ ಮೇಲೂ ಅಂಗುಷ್ಠಗಳ ಮೇಲೂ ಬಿಟ್ಟು ದೇಹವನ್ನೆಲ್ಲಾ ಎಡಕ್ಕೂ ಬಲಕ್ಕೂ ಮೇಲಕ್ಕೂ ಕೆಳಕ್ಕೂ ತಿರುಗಿಸಬೇಕು. ಇದರಿಂದ ಅಂಗಗಳಿಗೂ ಮಾಂಸಖಂಡಗಳಿಗೂ ಒಳ್ಳೆಯ ಸಾಧನೆಯಾಗಿ ಬಲ ಬರುವುದು. ಎದೆ ಅಗಲವಾಗಿ ಗಟ್ಟಿಯಾಗುವುದು. ಅಂಗಸಾಧನೆಗಾಗಿ ನಮ್ಮವರು ಪೂರ್ವದಿಂದಲೂ ಬಗೆಬಗೆಯ ಆಟಗಳನ್ನು ಏರ್ಪಡಿಸಿರುವರು. ಓಟ, ಚಂಡಾಟ, ಗುಡುಗು, ಚಿಣ್ಣಿಕೋಲು, ಲಗ್ಗೆ, ನಿಡುಗವಣೆ, ಕಣ್ಣುಮುಚ್ಚಾಲೆ, ಕುಣಿಗಾಲು ಮುಂತಾದುವು ಬಾಲರಿಗುಚಿತವಾದುವು. ಮಲ್ಲಯುದ್ಧ, ಕಟ್ಟಿಗೆ, ಪಟ್ಟಾಕತ್ತಿ, ಗದ್ದೆಗಳ ವರಸೆ ಮೊದಲಾದುದು ಜಟ್ಟಿಗಳಿಗೆಯೋಗ್ಯ. ಈಚೆಗೆ ಕ್ರಿಕೆಟ್, ಫುಟ್‌ಬಾಲ್, ಹಾರಿಸಾಂಟಲ್‌ಬಾರ್, ಪ್ಯಾರಲಲ್ ಬಾರ್, ಲಾನ್‌ಟೆನಿಸ್ ಮೊದಲಾದ ಇಂಗ್ಲಿಷ್ ಆಟಗಳು ಸ್ಕೂಲುಗಳಲ್ಲಿ ಪ್ರಚಾರಕ್ಕೆ ಬಂದಿವೆ. ಇವುಗಳನ್ನೆಲ್ಲಆಡಬೇಕಾದರೆ, ಇತರರಜತೆಯಲ್ಲಿಯೇ ಆಡಬೇಕು. ಆದುದರಿಂದ ಇವು ಅಂಗಗಳಿಗೆ ಸಾಧನೆಯನ್ನು ಕೊಡುವುದಲ್ಲದೆ ಮನಸ್ಸಿಗೆ ಆಹ್ಲಾದಕರಗಳಾಗಿರುವುವು. ಇದಲ್ಲದೆ ಗೆಲ್ಲುವ ಆಶೆಯಿಂದ ಆಡುವವರಲ್ಲಿ ಹುರುಡು ಹುಟ್ಟಿ ಅವರಿಗೆ ಈ ಆಟಗಳಲ್ಲಿಉತ್ಸಾಹವೂ ಅಭಿರುಚಿಯೂ ಉಂಟಾಗುವುವು ಇಂತಹ ಆಟಗಳೇ ಉತ್ತಮವಾದುವು.

ಅಂಗಸಾಧನೆಯಿಂದ ಶರೀರದ ಎಲ್ಲಾ ಅಂಗಗಳೂ ಮಾಡತಕ್ಕ ಕೆಲಸಗಳನ್ನು ಸುಲಭವಾಗಿಯೂ ಶೀಘ್ರವಾಗಿಯೂ ಚೆನ್ನಾಗಿಯೂ ಮಾಡುವುವು. ರಕ್ತವು ಬೇಗಬೇಗ ಹರಿವುದು. ನಿರ್ಮಲವಾದ ವಾಯು ಶ್ವಾಸಕೋಶಗಳಿಗೆ ಹೆಚ್ಚುಹೆಚ್ಚಾಗಿ ಹೋಗುತ್ತಿರುವುದು. ಶಾರೀರ ಕಲ್ಮಷಗಳು ಉಸಿರಲ್ಲೂ ಬೆವರಲ್ಲೂ ಹೆಚ್ಚಾಗಿ ಈಚೆಗೆ ಬರುವುವು. ಶರೀರದಲ್ಲಿ ಶಾಖವು ಹೆಚ್ಚಿ ಮನಸ್ಸಿಗೆ ಹರ್ಷವೇರುವುದು. ಜೀರ್ಣಶಕ್ತಿ ಬಲವಾಗುವುದು. ಚಟವಟಿಕೆ, ಧೈರ್ಯ, ಸಾಮರ್ಥ್ಯ, ಉತ್ಸಾಹ, ಸಹನೆ ಮೊದಲಾದ ಗುಣಗಳು ವೃದ್ಧಿಹೊಂದುವುವು. ಬುದ್ಧಿಯು ವಿಕಾಸವನ್ನು ಹೊಂದುವುದು. ಮೈಯು ಆದ್ಯಂತವಾಗಿ ತುಂಬಿಕೊಂಡು ಹೊಳೆವುದು. ನಮ್ಮ ದೇಹವು ನಾನಾ ವಿಧವಾದ ರೋಗಗಳಿಗೊಳಗಾಗಿ ನವೆಯದೆ ನಾವು ಬಹುಕಾಲ ಸುಖದಿಂದ ಬದುಕಬಹುದು.

## 59. ಪದ್ಧತಿ.

ಯಾವುದಾದರೂ ಒಂದು ಕೆಲಸವನ್ನು ಬಾರಿಬಾರಿಗೆ ಬಹಳ ಕಾಲದ ವರೆಗೂ ಮಾಡಿದರೆ, ಪ್ರಯತ್ನಿಸದೆಯೇ ಆ ಕೆಲಸವನ್ನು ಮಾಡುವ ಸ್ವಭಾವವು ಉಂಟಾಗುವುದು. ಇದಕ್ಕೆ ಪದ್ಧತಿ ಅಥವಾ ವಾಡಿಕೆಯೆನ್ನುವರು. ಮನುಷ್ಯನಿಗೆ ಹುಟ್ಟಿನಿಂದ ಬಂದ ಗುಣಗಳು ಪದ್ಧತಿಯಿಂದ ಮಾರ್ಪಟ್ಟು ಅವನ ಸ್ವಭಾವವೇ ಬೇರೆಯಾಗಿ ಅವನು ಹೊಸಬನಾಗುವನು.

ಯಾವುದಾದರೂ ಪದ್ಧತಿ ಬಿದ್ದರೆ ಅದನ್ನು ಬಿಡಲಾಗುವುದಿಲ್ಲ. ಅನೇಕರಿಗೆ ಬೆಳಗ್ಗೆ ಕಾಫಿ ಕುಡಿವುದು ಪದ್ಧತಿಯಾಗಿದೆ. ಅಂಥವರಿಗೆ ಒಂದು ದಿನ ಕಾಫಿ ನಿಂತರೂ ಯಾವ ಕೆಲಸವನ್ನು ಮಾಡುವುದಕ್ಕೂ ಮನಸ್ಸೋಡದೆ, ಮಂಕುಮುಚ್ಚಿಕೊಂಡು ತಲೆನೋವು ಬರುವುದು. ಕೆಲವರಿಗೆ ಊಟವಾದ ಮೇಲೆ ಏನಾದರೂ ಸ್ವಲ್ಪ ತಿಂಡಿಯನ್ನು ತಿನ್ನುವ ವಾಡಿಕೆಯಿರುವುದುಂಟು. ಅವರಿಗೆ ಆಗ ತಿಂಡಿಯನ್ನು ತಪ್ಪಿಸಿದರೆ ಊಟಮಾಡಿದಂತೆಯೇ ಇರುವುದಿಲ್ಲ. ಹೀಗೆಯೇ ಅಡಕೆಲೆಹಾಕಿಕೊಳ್ಳುವ ಪದ್ಧತಿಯಿರುವವರಿಗೂ ಅದನ್ನು ಊಟವಾದೊಡನೆ ಕೊಡದಿದ್ದರೆ, ತೊಂದರೆಯಾಗುವುದು. ಮಧ್ಯಾಹ್ನ ಮಲಗಿಕೊಳ್ಳುವ ಪದ್ಧತಿಯಿರುವವರಿಗೆ ಆ ಸಮಯಕ್ಕೆ ಸರಿಯಾಗಿ ನಿದ್ದೆ ತಾನಾಗಿಯೇ ಬರುವುದು; ಅದನ್ನು ತಪ್ಪಿಸಲಾಗುವುದಿಲ್ಲ. ಹಾಗೆ ಬಲಾತ್ಕಾರದಿಂದ ಒಂದೆರಡು ದಿನ ಮಾಡುತ್ತಬಂದರೆ ದೇಹಕ್ಕಾಲಸ್ಯವಾಗುವುದು. ಬೆಳಗ್ಗೆ ಏಳು ಗಂಟೆಯಾದಮೇಲೆ ಹಾಸಿಗೆಯಿಂದೇಳುವ ಅಭ್ಯಾಸವಿರುವವರನ್ನು ಮುಂಜಾನೆ ಏಳುವಂತೆಮಾಡುವುದು ದುಸ್ತರ. ನಶ್ಯವನ್ನು ಹಾಕಿಕೊಳ್ಳುವ ದುರಭ್ಯಾಸವಿರುವವರಿಗೆ ಅದನ್ನು ಬಿಡಿಸುವುದಕ್ಕಾಗಿ ನಶ್ಯವನ್ನು ಕೊಡದೆಹೋದರೆ ಹುಚ್ಚು ಹಿಡಿದಂತಾಗುವುದು ಎಲ್ಲರಿಗೂ ತಿಳಿದೇ ಇದೆ. ಹೀಗೆ ಎಷ್ಟೋ ದೃಷ್ಟಾಂತಗಳನ್ನು ಕೊಡಬಹುದು. ಇವುಗಳಲ್ಲಿ ಯಾವದೊಂದೂ ಹುಟ್ಟಿದಮೊದಲು ಯಾರಿಗೂ ಇರುವುದಿಲ್ಲ; ಆಮೇಲೆ ಬಹಳ ದಿನಗಳ ವರೆಗೆ ತಪ್ಪದೆ ಅಭ್ಯಾಸಮಾಡಿದುದರಿಂದ ಉಂಟಾಯಿತು. ಒಳ್ಳೆಯದಾಗಲಿ ಕೆಟ್ಟುದಾಗಲಿ ಪದ್ಧತಿ ಬಿದ್ದಮೇಲೆ ಅದನ್ನು ಬಿಡುವುದು ಕಷ್ಟ.

ಕೆಲವು ಕಾರ್ಯಗಳು ನಮಗೆ ಮೊದಲು ಒಗ್ಗದೆ ಅವಕ್ಕೆ ನಾವು ಮನಸ್ಸನ್ನು ಕೊಡದೆಯೇ ಇರಬಹುದು. ಕೊನೆಗೆ ಅಭ್ಯಾಸದಿಂದ ಅವೇ ನಮಗೆ ಬಲು ಇಂಪಾಗುವುವು. ಆ ಕೃತ್ಯಗಳಲ್ಲಿ ಮೊದಲು ತೋರುತ್ತಿದ್ದ ಕೊರತೆ-

ಗಳೊಂದೂ ಆಗ ಕಾಣಬರುವುದಿಲ್ಲ. ಜೂಜಾಡುವುದು, ಹೊಗೆಬತ್ತಿ ಸೇದು-ವುದು, ಮದ್ಯಪಾನ, ನಸ್ಯಹಾಕುವುದು, ಇವು ಮೊದಲಾದುವು ಮೊದಲು ಅಸಹ್ಯವಾಗಿರುವುವು. ಕೆಟ್ಟ ಜತೆಯಿಂದ ಇವು ಬಳಕೆಯಾದರೆ, ಪ್ರಾಯಶಃ ಅಭಿರುಚಿ ಹುಟ್ಟಿ ಇವುಗಳನ್ನು ಬದುಕಿರುವವರೆಗೂ ಬಿಡಲಾಗುವುದಿಲ್ಲ. ಹೀಗೆಯೇ ಸತ್ಕಾರ್ಯಗಳ ವಿಷಯದಲ್ಲಿ ಪದ್ಧತಿಯಿಂದ ಬಹಳ ಫಲವುಂಟು. ಯಾವುದಾದರೂ ಒಂದು ಶಿಲ್ಪವನ್ನು ಕಲಿವುದರಲ್ಲಿಯೇ ಆಗಲಿ, ಶಾಸ್ತ್ರವ್ಯಾ-ಸಂಗದಲ್ಲಿಯೇ ಆಗಲಿ ಮೊದಲು ಕೆಲವುಕಾಲ ತೊಂದರೆಯೂ ಜುಗುಪ್ಸೆ-ಯೂ ಆಗಬಹುದು. ಆಗ ಮನಸ್ಸನ್ನು ನಿಗ್ರಹಿಸಿಕೊಂಡು, ಹಿಡಿದ ಕೆಲಸ-ವನ್ನು ಬಿಡದೆ ಮುಂದುವರಿದರೆ, ವ್ಯಾಸಂಗದಲ್ಲಿ ಆಸಕ್ತಿಯೂ ಸಂತೋಷವೂ ಹುಟ್ಟಿ ಪಾಂಡಿತ್ಯವುಂಟಾಗುವುದು. ಮೊದಲು ಕಷ್ಟಪಟ್ಟು ಸಾಧಿಸಬೇಕಾ-ಗಿದ್ದುದು ಕೊನೆಗೆ ಅಭ್ಯಾಸದಿಂದ ಮನಸ್ಸಿಗೆ ಆಟವಾಗಿ ಪರಿಣಮಿಸುವುದು.

ಸಕಲ ಕೃತ್ಯಗಳೂ ಪದ್ಧತಿಯಿಂದ ರಮ್ಯವಾಗುವಕಾರಣ, ಎಲ್ಲರೂ ಕೆಟ್ಟುದನ್ನು ಬಿಟ್ಟು ಅತ್ಯುತ್ತಮವಾದುದನ್ನೇ ಅವಲಂಬಿಸಬೇಕು. ನಾಲ್ಕು ಜನರು ಒಪ್ಪತಕ್ಕುದಲ್ಲವೆಂದು ತೋರಿದ ಕೆಲಸವನ್ನು ಒಡನೆಯೇ ತ್ಯಜಿಸಿ ಶ್ಲಾಘ್ಯವಾದುದನ್ನೇ ಮಾಡಹತ್ತಬೇಕು. ಮಾಡಬಾರದುದನ್ನು ಆರಂ-ಭಿಸಿ ಸ್ವಲ್ಪಕಾಲದಲ್ಲಿಯೇ ಬಿಟ್ಟುಬಿಡುವುದು ಸಾಧ್ಯವು. ಅಭ್ಯಾಸವಾದ ಮೇಲೆ ಅದನ್ನು ಯಾರಿಂದಲೂ ಬಿಡಲಾಗುವುದಿಲ್ಲ. ಆದರಿಂದ ಆಗಬಾರ-ದುದು ಆಗಿಯೇ ಆಗುವುದು. ಸತ್ಕಾರ್ಯವನ್ನು ಮಾಡುವುದಕ್ಕೆ ದಾರಿಯು ಪ್ರಾರಂಭದಲ್ಲಿ ಕಲ್ಲುಮುಳ್ಳುಗಳಿಂದ ತುಂಬಿಬಲು ತೊಂದರೆಕೊಡಬಹುದು; ಮುಂದೆಮುಂದೆ ಹೋಗುತ್ತಾ ನಯವೂ ಸುಗಮವೂ ಆಗುವುದು. ಸ್ಥಿರ-ಬುದ್ಧಿಯಿಂದ ಕಷ್ಟಕ್ಕಂಜದೆ ಮುಂದುವರಿದು ನುಗ್ಗುವವನಿಗೆ ಈ ಸಂಗತಿ ತಿಳಿಯಬರುವುದಲ್ಲದೆ ಕೆಲಸವೂ ಕೈಗೂಡುವುದು.

ಪರಲೋಕದಲ್ಲಿ ಸದ್ಗತಿಯಾಗಬೇಕಾದರೆ, ಸದ್ಗುಣಗಳಿಂದೊಡಗೂಡಿದ ವಾಡಿಕೆಗಳನ್ನೇ ಎಲ್ಲರೂ ಅನುಸರಿಸಬೇಕು. ಪಾಪಕೃತ್ಯಗಳ ವಾಡಿಕೆಗೆಬಿದ್ದ-ವರು ಸ್ವರ್ಗವನ್ನೆಂದಿಗೂ ಪಡೆಯಲಾರರೆಂಬುದು ಎಲ್ಲರಮತವೂ ಆಗಿದೆ. ಸ್ವ-ರ್ಗಸುಖಪ್ರಾಪ್ತಿಗೆ ತಕ್ಕ ಜ್ಞಾನವೂ ಯೋಗ್ಯತೆಯೂ ಉಂಟಾಗುವಂತೆ ಸತ್ಯದಲ್ಲಿಯೂ ಧರ್ಮದಲ್ಲಿಯೂ ಎಲ್ಲರೂ ದೃಷ್ಟಿಯಿಟ್ಟು ನಡೆದುಕೊಳ್ಳ-ಬೇಕು. ಕಾಮ, ಕ್ರೋಧ, ಮೋಹ ಮೊದಲಾದ ಶತ್ರುಗಳ ಪಾಶಕ್ಕೆ

ಸಿಕ್ಕಿಬಿದ್ದು ನರಳುವವರಿಗೆ ಸದ್ಗತಿಯನ್ನು ಕೊಡದೆ ಅವರ ದುಷ್ಪದ್ಧತಿ ಅವರಿಗೆ ತಕ್ಕ ಶಿಕ್ಷೆಯನ್ನು ಮಾಡುವುದು.

ಒಬ್ಬೊಬ್ಬ ಮನುಷ್ಯನಲ್ಲಿ ಹೇಗೋ ಹಾಗೆಯೇ ಜನಸಮುದಾಯದಲ್ಲಿ-ಯೂ ಪದ್ಧತಿ ಪರಿಣಮಿಸುತ್ತದೆ. ಒಂದು ದೇಶದ ಜನರು ಒಂದು ಆಚ-ರಣೆಯನ್ನು ಕೆಲವು ವರ್ಷಗಳ ವರೆಗೆ ಮಾಡುತ್ತಿದ್ದರೆ, ಕೊನೆಗೆ ಅದು ಅವ-ರಿಗೆಲ್ಲ ಪದ್ಧತಿಯಾಗುವುದು. ಅದನ್ನೇಕೆ ಮಾಡಬೇಕೆಂದು ವಿಚಾರಮಾ-ಡದೆ, ಆ ಕೆಲಸವನ್ನು ಮಾಡುತ್ತಾ ಬರುವರು. ಪ್ರತಿಯೊಂದು ನಡೆವಳಿ-ಯನ್ನೂ ತತ್ಕಾಲದಲ್ಲಿ ಯಾವುದಾದರೂ ಒಂದುದ್ದೇಶದಿಂದ ರೂಢಿಯಲ್ಲಿ ತರುತ್ತಾರೆ. ಕೆಲವು ಕಾಲ ಕಳೆದಮೇಲೆ, ಆ ಉದ್ದೇಶವನ್ನು ಮರೆತು ಚಿರ-ಕಾಲದಿಂದಲೂ ಅದು ರೂಢಿಯಲ್ಲಿದೆಯಲ್ಲ ಎಂಬೊಂದು ಕಾರಣದಿಂದಲೇ ಅದನ್ನು ಆಚರಿಸುವರು. ಹೀಗೆ ಜನರು ನಿಷ್ಪ್ರಯೋಜನವಾದ ಪದ್ಧತಿಗಳ-ನ್ನು ಅನುಸರಿಸಿರುವುದುಂಟು. ಹಿಂದೂಜನರಷ್ಟು ಪದ್ಧತಿಗೆ ಸಿಕ್ಕಿಬಿದ್ದು ನರ-ಳುವವರು ಲೋಕದಲ್ಲಿ ಮತ್ತಾರೂ ಇಲ್ಲ. ಹಿಂದೂಗಳು ನೂರಾರು ವರ್ಷಗಳ ಕೆಳಗೆ ಇದ್ದ ಪದ್ಧತಿಗಳನ್ನು ಈಗಲೂ ಬಿಡದೆ ಅನುಸರಿಸುತ್ತಿರುವರು. ಅವು-ಗಳ ಪ್ರಥಮೋದ್ದೇಶವೇನೋ ಅದನ್ನು ಸ್ವಲ್ಪವೂ ಅರಿಯದೆ ಅವುಗಳಿಂದ ಈಗ ಎಷ್ಟು ಬಾಧೆಯಿದ್ದರೂ, ಅವರ ಹಿರಿಯರು ಮಾಡುತ್ತಿದ್ದಂತೆ ತಾವೂ ಮಾಡಬೇಕೆಂದು ಹಳೆಯ ಪದ್ಧತಿಗಳನ್ನಿಟ್ಟುಕೊಂಡಿದ್ದಾರೆ. "ಅಪ್ಪ ಹಾಕಿದ ಆಲದಮರವೆಂದು ನೇಣುಹಾಕಿಕೊಳ್ಳಲಾದೀತೆ?" ಮೊಟ್ಟಮೊದಲು ಮಹ-ಮ್ಮದೀಯರ ಕಾಟಕ್ಕಾಗಿ ಬಾಲ್ಯ ವಿವಾಹವನ್ನು ಮಾಡುತ್ತಿದ್ದರು; ಅಂತಹ ಭೀತಿಯು ತೊಲಗಿ ಎಷ್ಟೋ ಕಾಲವಾದರೂ, ಆ ಪದ್ಧತಿಯನ್ನೀಗಲೂ ಬಿಟ್ಟಿಲ್ಲ. ಇಂತಹ ನೂರಾರು ದುಷ್ಪದ್ಧತಿಗಳು ಹಿಂದೂಗಳಲ್ಲಿವೆ. ಇವುಗಳಿಂ-ದಾಗುತ್ತಿರುವ ಬಾಧೆಗಳು ಈಗೀಗ ಗೊತ್ತುಹತ್ತುತ್ತಲಿವೆ. ಆದುದರಿಂದ ನಿಷ್ಪ್ರಯೋಜನವಾಗಿಯೂ ಬಾಧಕವಾಗಿಯೂ ಕಂಡುಬಂದಪದ್ಧತಿಗಳನ್ನು ಎಷ್ಟು ಹಳದಾಗಿದ್ದರೂ ಬಿಟ್ಟುಬಿಟ್ಟರೆ ಶ್ರೇಯೋಭಿವೃದ್ಧಿಯಾಗುವುದು.

## 60. ಸತ್ಯ.

ಸುಗುಣಗಳಲ್ಲಿ ಸತ್ಯವು ರತ್ನಪ್ರಾಯವಾದುದು. ಸತ್ಯವಂತರನ್ನು ಮ-ರ್ಯಾದೆಯಿಂದ ಕಾಣುವಷ್ಟು ಮತ್ತೆಯಾರನ್ನೂ ಕಾಣುವುದಿಲ್ಲ. ಮನಸ್ಸಿನ-ಲ್ಲೆಣಿಸಿದಂತೆ ಮಾತಿನಲ್ಲಿಯೂ ಆಡುವುದು, ಮಾತಿನಲ್ಲಾಡಿದಂತೆ ಕೆಲಸ-

ದಲ್ಲಿಯೂ ನಡೆವುದು, ನೋಡಿದುದನ್ನು ನೋಡಿದಂತೆಯೇ ವರ್ಣಿಸುವುದು, ಕೇಳಿದುದನ್ನು ಕೇಳಿದಂತೆಯೇ ಹೇಳುವುದು, ಮಾಡಿದುದನ್ನು ಮಾಡಿದಂತೆಯೇ ಸ್ವಲ್ಪವೂ ಹೆಚ್ಚು ಕಡಮೆಯಿಲ್ಲದೆ ನುಡಿವುದು ಇವು ಮೊದಲಾದುವು ಸತ್ಯದ ಬಗೆಬಗೆಯ ಸ್ವರೂಪಗಳು. ಬಹಳ ನಷ್ಟ ಪಟ್ಟಿರುವವನನ್ನು ಕಂಡು "ಅಯ್ಯೋ ಪಾಪ" ಎಂದು ಬಾಯಿಯಲ್ಲಿ ಅನುತಾಪಪಡುತ್ತಾ, ಮನಸ್ಸಿನಲ್ಲಿ "ಹಾಗೆಯೇ ಆಗಬೇಕು" ಎಂದು ಯೋಚಿಸುವುದೂ, ಯಾವ ಸಹಾಯ ಬೇಕಾದರೂ ಮಾಡುವುದಾಗಿ ವಾಗ್ದಾನಮಾಡಿ ಸಹಾಯವನ್ನು ಮಾಡಬೇಕಾಗಿ ಬಂದಾಗ ನೆವಗಳನ್ನು ಹೇಳಿ ತಪ್ಪಿಸಿಕೊಳ್ಳುವುದೂ, ಯೋಗ್ಯತೆಯಿಲ್ಲದಿದ್ದರೂ ಮಾತು ಉಡುಪು ಮುಂತಾದುವುಗಳಲ್ಲಿ ಆಡಂಬರ ಮಾಡಿಕೊಂಡು ಬಲುಗಟ್ಟಿಗನಂತೆ ನಟಿಸುವುದೂ ಸತ್ಯಕ್ಕೆ ವಿರುದ್ಧಗಳಾದ ಕಾರ್ಯಗಳು. ಇವುಗಳಿಗೆಲ್ಲ ಮೋಸವೆಂದು ಹೆಸರು. ಮರವಿನಿಂದಾಗಲಿ, ಅಜ್ಞಾನದಿಂದಾಗಲಿ, ಸುಳ್ಳುಹೇಳಿದರೆ ಅದನ್ನು ಕ್ಷಮಿಸಬಹುದು; ಮೋಸಮಾಡುವ ಉದ್ದೇಶದಿಂದ ಆಡಿದ ಸುಳ್ಳು ಪರಮನಿಂದ್ಯವಾದುದು. ಆದುದರಿಂದಲೇ ನ್ಯಾಯಸ್ಥಾನಗಳಲ್ಲಿ ಇಂತಹ ಸುಳ್ಳಿಗೆ ತಕ್ಕ ಶಿಕ್ಷೆಯನ್ನು ವಿಧಿಸುವರು.

"ಸತ್ಯಮೇವ ಜಯತೆ, ನಾನೃತಂ" ಎಂಬ ಉಪನಿಷದ್ವಾಕ್ಯದಂತೆ ಸತ್ಯಕ್ಕೆ ಯಾವಾಗಲೂ ಗೆಲವುಉಂಟಾಗುವುದು; ಸುಳ್ಳಿಗೆ ಎಂದಿಗೂ ಜಯವಾಗಲಾರದು. ಸುಳ್ಳಾಡಿದುದರಿಂದ ಸ್ವಲ್ಪಕಾಲ ಇತರರನ್ನು ಮೋಸಮಾಡಿ ಸ್ವಪ್ರಯೋಜನವನ್ನು ಪಡೆಯಬಹುದು; ಆದರೆ ಕೊನೆಗೆ ಸುಳ್ಳು ಹೊರಪಟ್ಟು ಅದರಿಂದ ತಕ್ಕ ಅವಮಾನವು ಆಗಿಯೇ ಆಗುವುದು. ಹೇಗೆಂದರೆ, ಹೊರಗಿನಆಡಂಬರದಿಂದ ಇಲ್ಲದಿರುವ ಯೋಗ್ಯತೆಯನ್ನು ತೋರಿಸಿಕೊಳ್ಳುವುದಕ್ಕೆ ಮೊದಲುಮಾಡಿದರೆ, ಎಷ್ಟು ದಿನದ ವರೆಗೆ ನಡೆದೀತು? ತಾಮ್ರಕ್ಕೆ ಬೆಳ್ಳಿಯ ಮುಲಾಮು ಮಾಡಿದರೆ, ಬೆಳ್ಳಿಯಂತೆ ಎಲ್ಲಿಯತನಕ ಕಂಡೀತು? ಅಂತಹ ತಾಮ್ರವನ್ನು ಬಳಸಿಕೊಳ್ಳುತ್ತಾ ಬಂದರೆ, ಅದರ ನಿಜವಾದ ಬಣ್ಣವು ಸ್ವಲ್ಪದಲ್ಲಿಯೇ ಗೊತ್ತಾಗುವುದು.

ಸುಳ್ಳಾಡುವುದು ಬಹಳ ಕಷ್ಟ; ಇದ್ದುದನ್ನು ಇದ್ದಹಾಗೆ ಹೇಳುವುದು ಸುಲಭ. ಒಂದು ಸುಳ್ಳಾಡಿದರೆ, ಅದನ್ನು ಸಾಧಿಸಲು ಹಲವು ಸುಳ್ಳುಗಳನ್ನು ಆಡಬೇಕಾಗುವುದು. ಸತ್ಯವಾದಮಾತು ಬಾಯಿಯಲ್ಲಿಧಾರಾಳವಾಗಿ ತಡೆ-

ಯಿಲ್ಲದೆ ಹೊರಟುಹೋಗುವುದು. ಮನಃಪೂರ್ವಕವಾಗಿ ಸುಳ್ಳಾಡುವವನಿಗೆ, ಎಲ್ಲಿ ಸಿಕ್ಕಿಬಿಡಬೇಕಾಗುವುದೋ ಎಂಬ ಭಯದಿಂದ ಎದೆ ಢವಢವನೆ ಬಡಿದುಕೊಳ್ಳುತ್ತಿರುವುದು. ಸುಳ್ಳಿಗೆ ಸತ್ಯದ ಬಣ್ಣವನ್ನು ಕೊಟ್ಟು ಹೇಳಬೇಕಾದರೆ ಬಹಳ ಬಲವಾದ ನೆನಪೂ, ಚಾತುರ್ಯವೂ, ಎಚ್ಚರಿಕೆಯೂ ಬೇಕು. ಸುಳ್ಳುಗಾರನಿಗೆ ಧೈರ್ಯವು ಕಡಮೆ; ಅವನು ಸತ್ಯವಾದಿಯಂತೆ ಧೈರ್ಯವಾಗಿ ಮಾತನಾಡುವುದಕ್ಕಾಗದೆ, ಯಾವಾಗಲೂ ಅವನಂತೆ ಚಿಂತೆಯಿಲ್ಲದೆ ಸಂತೋಷವಾಗಿರುವುದಕ್ಕಾಗುವುದಿಲ್ಲ. ಆದುದರಿಂದ ಸುಳ್ಳಾಡುವುದು ಎಂತಹ ಹುಚ್ಚತನ!

ಸತ್ಯವನ್ನು ಮೀರಿ ನಡೆದುಕೊಳ್ಳಲು ಲಾಭದಮೇಲೆ ಆಸೆ, ಸೋಮಾರಿತನ, ಅಹಂಕಾರ, ಹೇಡಿತನ ಇವು ಆದಿಕಾರಣ. ಲಾಭವನ್ನು ಪಡೆಯಲು ವರ್ತಕರು ಹೆರರಸರಕುಗಳನ್ನು ದೂಷಿಸಿ ತಮ್ಮ ಸಾಮಾನುಗಳಲ್ಲಿ ಇಲ್ಲದಿರುವ ಗುಣಗಳನ್ನಾರೋಪಿಸುವರು. ಕೆಲವು ಲೆಕ್ಕಗಳನ್ನು ಮಾಡಿಕೊಂಡುಬಾರೆಂದು ಒಬ್ಬ ಹುಡುಗನಿಗೆ ಆಜ್ಞಾಪಿಸಿದರೆ ಅವನು ತನ್ನ ಜತೆಯ ಹುಡುಗನು ಮಾಡಿರುವುದನ್ನು ನೋಡಿ ಮಾಡಿಕೊಂಡು ಬರುವುದು ಮೈಬಗ್ಗಿ ಕೆಲಸಮಾಡದಷ್ಟು ಸೋಮಾರಿಯಾದುದರಿಂದ, ತನಗೆ ಸಾಮಾನ್ಯವಾದ ಯೋಗ್ಯತೆಯಿದ್ದರೂ, "ತನ್ನ ಸಮಾನರಿಲ್ಲ, ತಾನೇ ಘನಪಂಡಿತ, ತನಗೆ ತಿಳಿಯದ ವಿಷಯಗಳೇ ಅಪೂರ್ವ" ಎಂದು ಪ್ರತಿಷ್ಠೆ ಹೊಡೆದುಕೊಳ್ಳುವುದು ದೊಡ್ಡ ಸುಳ್ಳು; ಇದು ಅಹಂಕಾರವೆಂಬ ದುರ್ಗುಣದಿಂದ ಆದುದು. ಇಂತಹ ಸುಳ್ಳಿಗೆ ವಿಶೇಷವಾಗಿ ಗುರಿಯಾಗತಕ್ಕವರು ಯಾರೆಂದರೆ, ಮೂಢರು, ಅನುಭವವಿಲ್ಲದ ಚಿಕ್ಕವರು, ಮತ್ತು ಕೂಪಕೂರ್ಮದಂತೆ ಇದ್ದೆಡೆಯಲ್ಲಿಯೇ ಇರುವವರು. ತಪ್ಪುಮಾಡಿದ್ದರೂ ತಪ್ಪುಮಾಡಿಲ್ಲವೆನ್ನುವುದೂ, ಹೇಳಿದ್ದ ಕೆಲಸವನ್ನು ಒಬ್ಬ ಸೇವಕನು ಮಾಡಿಲ್ಲದಿದ್ದರೂ ಮಾಡಿದ್ದೇನೆನ್ನುವುದೂ ಶಿಕ್ಷೆಯ ಭೀತಿಯಿಂದ. ಇವಲ್ಲದೆ ಮನಸ್ಸಿಗೆ ತೋರಿದ ಅಭಿಪ್ರಾಯಗಳನ್ನು ವ್ಯಕ್ತವಾಗಿ ಎಲ್ಲರಿಗೂ ತಿಳಿಯಪಡಿಸುವುದಕ್ಕೆ ಹಿಂದೆಗೆವುದೂ ಹೇಡಿತನದಿಂದ ಆಗುವುದು.

ಸುಳ್ಳನ್ನು ಎಂದಿಗೂ ಆಡಬಾರದು. ದೇವರು ನಮಗೆ ನಾಲಿಗೆಯನ್ನು ಕೊಟ್ಟಿರುವುದು ದಿಟವನ್ನು ಆಡುವುದಕ್ಕೇ ಹೊರತು ಸುಳ್ಳಾಡುವುದಕ್ಕಲ್ಲ. ಆದುದರಿಂದ ಸುಳ್ಳಾಡುವುದು ದೊಡ್ಡ ಪಾಪವು. ಸುಳ್ಳಾಡುವುದರಿಂದ ಮನುಷ್ಯಜಾತಿಗೆ ಅಪರಾಧ ಮಾಡಿದಂತಾಗುವುದು. ಯಾವ ಜನರಲ್ಲಿ ಸುಳ್ಳಿದೆಯೋ ಅವರಲ್ಲಿ ಪರಸ್ಪರ ಸ್ನೇಹದಿಂದ ಕೂಡಿದ ಒಡನಾಟವಿರಲಾರದು. ಐಕಮತ್ಯವು ತಪ್ಪಿ ಅವರಿಗೆ ಬಲು ಕ್ಷೀಣದಶೆ ಬರುವುದು. ಸುಳ್ಳಾಡುವನನಿಗೇ ಅದರಿಂದ ಬಾಧೆಗಳುಂಟು. ಮಾನಭಂಗವಾಗುವುದಲ್ಲದೆ, ಸುಳ್ಳಾಡಲು ಸ್ವಲ್ಪವಾದರೂ ಆವಶ್ಯಕತೆಯಿಲ್ಲದಿದ್ದಾಗಲೂ ಅವನು ಸುಳ್ಳನ್ನು ಬಿಟ್ಟು ದಿಟವನ್ನು ನುಡಿವುದಕ್ಕೆ ಪ್ರಯತ್ನಿಸಿದರೂ ಆಗಲಾರದಷ್ಟು ಅವನ ಮನಸ್ಸು ನೀಚವಾಗುವುದು. ಸುಳ್ಳುಗಾರನು ಒಂದು ವೇಳೆ ದಿಟ ಹೇಳಿದರೂ ಅವನ ಮಾತನ್ನು ಯಾರೂ ನಂಬುವುದಿಲ್ಲ; ಕಡೆಗೆ ತಾನು ಯಾವಾಗ ಸುಳ್ಳಾಡುವನೋ ಅದು ಅವನಿಗೇ ತಿಳಿಯದೆ ಹೋಗುವಷ್ಟು ಅವನಲ್ಲಿ ಸುಳ್ಳಾಡುವ ವಾಡಿಕೆ ನೆಲೆಗೊಳ್ಳುವುದು.

ಹಿಂದೆ ಹಿಂದೂದೇಶದಲ್ಲಿ ಸತ್ಯಸಂಧತೆ ಬಲು ಪ್ರಧಾನವಾಗಿದ್ದಿತು. ದಶರಥರಾಯನು ಸುಳ್ಳುಗಾರನೆಂಬ ಅಪಯಶಸ್ಸು ಬಂದೀತೆಂಬ ಭಯದಿಂದ ಆಡಿದ ಮಾತಿಗೆ ತಪ್ಪದೆ ತನ್ನ ಪ್ರೀತಿಪಾತ್ರನಾದ ಮಗನನ್ನೂ ಕಾಡಿಗೆ ಕಳುಹಿಸಲಿಲ್ಲವೆ? ಹಾಗೆಯೇ ಶಿಬಿಚಕ್ರವರ್ತಿ ತನ್ನ ದೇಹವನ್ನು ಕಪೋತಪಕ್ಷಿಗಾಗಿ ಕೊಯ್ದು ಕೊಡಲಿಲ್ಲವೆ? ಇಂತಹ ಸತ್ಯಸಂಧರು ಎಷ್ಟೋ ಮಂದಿ ಇದ್ದರೆಂದು ಗ್ರಂಥಗಳಿಂದ ಗೊತ್ತಾಗುತ್ತದೆ. ಸತ್ಯವೊಂದಿದ್ದರೆ, ಧೈರ್ಯ, ಶಮ, ದಮ, ಪರೋಪಕಾರಬುದ್ಧಿ ಮುಂತಾದ ಮಿಕ್ಕೆಲ್ಲ ಸುಗುಣಗಳೂ ಜತೆಯಲ್ಲಿಯೇ ಬರುವುವು. ಆದುದರಿಂದ ನಮ್ಮ ಪ್ರಾಚೀನರ ಚರಿತ್ರೆಯನ್ನು ಮೇಲ್ಪಜ್ತಿಯಾಗಿಟ್ಟುಕೊಂಡು ನಾವೆಲ್ಲರೂ "ಸತ್ಯಂವದ ಧರ್ಮಂಚರ" ಎಂಬ ಪ್ರಸಿದ್ಧವಾದ ಉಪನಿಷದ್ವಚನವನ್ನು ಸ್ಮರಿಸಿಕೊಳ್ಳುತ್ತಾ ಪ್ರತಿಯೊಬ್ಬರೂ ಯಾವಾಗಲೂ ಸತ್ಯವನ್ನು ಹೇಳಬೇಕು. "ಸತ್ಯವಿದ್ದರೆ ಎತ್ತಲೂ ಭಯವಿಲ್ಲ."

# ಸಾರಾಂಶಗಳು. Outlines.

ಇನ್ನು ಕೆಲವು ಪ್ರಬಂಧಗಳಿಗೆ ಸಾರಾಂಶಗಳನ್ನು ಈ ಕೆಳಗೆ ಕೊಟ್ಟಿದೆ. ಇವುಗಳ ಸಹಾಯದಿಂದ ವಿದ್ಯಾರ್ಥಿಗಳು ಪ್ರಬಂಧಗಳನ್ನು ಹಿಂದಿನ ಮಾದರಿಗಳಂತೆ ಬರೆಯತಕ್ಕದ್ದು.

## 1. ಕತ್ತೆ.

(1) ಎಲ್ಲಾ ದೇಶಗಳಲ್ಲಿಯೂ ಸಿಕ್ಕುತ್ತದೆ. ಬಣ್ಣ ಬೂದು. ತಲೆ ಉದ್ದ. ಕಿವಿಗಳು ಉದ್ದ, ತಲೆಯಮೇಲೆ ನೆಟ್ಟಗೆ ನಿಲ್ಲದೆ ಪಕ್ಕಗಳಿಗೆ ಬಾಗಿವೆ. ಕಣ್ಣುಗಳು ದೊಡ್ಡವು, ಉರುಟು. ದೊಡ್ಡ ಬಾಯಿ, ಕೆಳಗಣ ದವಡೆಯನ್ನು ಕುದುರೆಯಂತೆ ಅಲ್ಲಾಡಿಸಬಲ್ಲುದು, ಹಲ್ಲುಗಳ ಮಧ್ಯದಲ್ಲಿ ಕಡಿವಾಳಕ್ಕೆ ಸ್ಥಳ ಬಿಟ್ಟಿದೆ. ಮೂಗಿನ ಸೊಳ್ಳೆ ಬಹಳ ಅಗಲ. ಕುತ್ತಿಗೆ ಉದ್ದ, ಬಾಗಿಲ್ಲ ; ಕುತ್ತಿಗೆಯ ಮೇಲೆ ಸ್ವಲ್ಪ ಕೂದಲು. ಬೆನ್ನು ಕುದುರೆಯ ಬೆನ್ನಿನಂತೆ ಬಾಗಿಲ್ಲ. ಬೆನ್ನಿನಲ್ಲಿ ಉದ್ದಕ್ಕೂ ಒಂದು ಕರಿಯ ಪಟ್ಟೆ. ಮೈ ಕುದುರೆಯದಕ್ಕಿಂತ ಬಹಳ ಚಿಕ್ಕದು ; ಚರ್ಮ ದಪ್ಪ, ಅದರ ಮೇಲೆ ಒರಟು ಕೂದಲು. ಬಾಲ ಮೋಟು, ತುದಿಯವರೆಗೆ ಮೋಟು ಕೂದಲು; ತುದಿಯಲ್ಲಿ ಮಾತ್ರ ಸ್ವಲ್ಪ ಉದ್ದವಾದ ಕೂದಲು. ಕಾಲುಗಳು ಬಲವಾಗಿವೆ. ಪಾದಗಳು ಗಟ್ಟಿ, ಬಲ ; ಎರಡಾಗಿ ಬಿರಿಯದೆ ಉಂಡೆಯಾಗಿವೆ.

[2] ಕುದುರೆಯಂತೆಯೇ ಮೆಲುಕು ಹಾಕುವದಿಲ್ಲ, ಮೇಯುವಾಗ ಹುಲ್ಲನ್ನು ಕತ್ತರಿಸುತ್ತದೆ, ಕೀಳುವುದಿಲ್ಲ. ನೆಲದಲ್ಲಿ ಬಿದ್ದುಕೊಂಡು ಹೊರಳುವುದುಂಟು. ಅಸಹ್ಯವಾಗಿ ಅರಿಚುವುದು. ಹಿಂಗಾಲಿನಿಂದ ಒದೆವುದು. ಬಹಳ ಸ್ಥೈರಣೆ, ಸಾಧುಗುಣ. ಮೈಮುರಿದು ಕಷ್ಟಮಾಡುತ್ತದೆ. ನಡೆ ಸ್ವಲ್ಪ ನಿಧಾನ, ಯಾವಾಗಲೂ ಮುಗ್ಗರಿಸುವುದಿಲ್ಲ. ಮಂದಬುದ್ಧಿಯುಳ್ಳ ಪ್ರಾಣಿಯೆಂದು ಹೇಳುವದು ಸರಿಯಲ್ಲ; ಇದಕ್ಕೆ ದೃಷ್ಟಾಂತ. ಪ್ರೀತಿಯಿಂದ ಸಾಕಿದರೆ ಯಜಮಾನನಲ್ಲಿ ಬಹಳ ವಿಶ್ವಾಸವನ್ನು ತೋರಿಸಿ ವಿಧೇಯವಾಗಿರುತ್ತದೆ. ಇದರ ಮರಿ ಚಿಕ್ಕದಾಗಿರುವಾಗ ಬಹಳ ಅಂದ, ಬರುತ್ತಬರುತ್ತ ಅವಲಕ್ಷಣ. ಆಹಾರ—ಹುಲ್ಲು, ಸೊಪ್ಪು, ಧಾನ್ಯ ಇತ್ಯಾದಿ.

[3] ಮೂಟೆ ಹೊರುವುದು, ಗಾಡಿಗೆ ಕಟ್ಟುವುದು, ಹಾಲನ್ನು ಮಕ್ಕಳಿಗೆ ಕುಡಿಸುವುದು, ಔಷಧವಾಗಿಯೂ ಉಪಯೋಗಿಸುವುದು, ಸತ್ತಮೇಲೆ ಮಾಂಸವನ್ನು ತಿನ್ನುವರು, ಚರ್ಮವನ್ನು ಸಯುಮಾಡಿ ತಮಟೆಗಳಿಗೂ ಪುಸ್ತಕಗಳ ಅಟ್ಟೆಗಳಿಗೂ ಬಳಸುವರು.

## 2. ಒಂಟೆ.

1) ಸಾಮಾನ್ಯವರ್ಣನೆ.—ಉದ್ದವಾದ ಕಾಲುಳ್ಳ ಪ್ರಾಣಿ, ೭–10 ಅಡಿ ಎತ್ತರ. ಬೆನ್ನಮೇಲೆ ಒಂದು ದೊಡ್ಡ ಡುಬ್ಬ. ಮೂಟೆ ಹೊರುವ ಪ್ರಾಣಿ. ನೋಡಲು ಬಹಳ ವಿಕಾರ. ವಿಶೇಷ ವರ್ಣನೆ.—ಮೈ ತುಂಬ ಉದ್ದವಾದ ಕಂದು ಬಣ್ಣದ ಕೂದಲು. ಕಾಲುಗಳು ಉದ್ದ, ದಪ್ಪ, ಬಲವುಳ್ಳವು ; ಪಾದಗಳು ಬಹಳ ಅಗಲ, ಮೃದು, ಸೀಳಿವೆ. ಪಾದದ ಎರಡು ಬೆರಳುಗಳಲ್ಲೂ ಒಂದೊಂದು ಉಗುರು. ಕಾಲಿಗೆ ಗೊರಸಿಲ್ಲ. ಬೆರಳುಗಳಲ್ಲಿ ಗಟ್ಟಿಯಾದ

ಚರ್ಮದ ಸಿಂಬಿಗಳು, ಹೆಜ್ಜೆಯಿಡುವಾಗ ಮೈಯ ಭಾರಕ್ಕೆ ಸಿಂಬಿ ಹರಡಿಕೊಳ್ಳುತ್ತದೆ. ಕುತ್ತಿಗೆ ಉದ್ದ, ತಲೆ ಉದ್ದ; ಹಲ್ಲು ದೊಡ್ಡದು, ಗಟ್ಟಿ. ಮೂಗಿನ ಸೊಳ್ಳೆಗಳು ಉದ್ದ, ಬೇಕಾದಾಗ ಮುಚ್ಚಿಕೊಳ್ಳುತ್ತದೆ. ಇದರಿಂದ ಪ್ರಯೋಜನ. ಮೇಲಿನ ತುಟಿ ಎರಡು ಪಾಲಾಗಿ ಒಂದರ ಮೇಲೊಂದಿದೆ. ಬಾಲ ಮೋಟು, ತೆಳು. ಮೈಯ ಕೆಲವು ಭಾಗಗಳಲ್ಲಿ ಮಾಂಸದ ಮುದ್ದೆಗಳಿವೆ. ಒಂಟೆಯಲ್ಲಿ ಎರಡು ಜಾತಿ—ಒಂದು ಡುಬ್ಬವುಳ್ಳ ಅರಾಬಿ ದೇಶದ್ದು, ಎರಡು ಡುಬ್ಬವುಳ್ಳ ಬ್ಯಾಕ್ಟ್ರಿಯಾ ಸೀಮೆಯದು.

(2) ಮರಳುಕಾಡುಳ್ಳ ಉಷ್ಣದೇಶಗಳಲ್ಲೆಲ್ಲಾ ಸಿಕ್ಕುತ್ತದೆ. ಅರಾಬಿ, ಉತ್ತರ ಆಫ್ರಿಕಾ, ತುರ್ಕಿಸ್ಥಾನ; ಇಂಡಿಯಾದಲ್ಲಿ ಕೆಲವು ಭಾಗ.

(3) ಆಹಾರ—ಪೊದೆ, ಎಳೆಯ ಗಿಡಗಳು, ಧಾನ್ಯ, ಹುಲ್ಲು, ಸೊಪ್ಪು, ಯಾವ ಜಂತುವೂ ಮುಟ್ಟದ ಮುಳ್ಳು, ಕಾಡುಕಂಟಿ. ಎರಡು ಹೊಟ್ಟೆಗಳು: ಒಂದರಲ್ಲಿ ಯಥೇಚ್ಛವಾಗಿ ನೀರು ಕುಡಿದು ತುಂಬಿಕೊಂಡು ಮರಳುಕಾಡಿನಲ್ಲಿ ಪ್ರಯಾಣ ಮಾಡುವಾಗ ಆ ನೀರನ್ನು ಉಪಯೋಗಿಸುತ್ತದೆ. ಬೇರೆ ನೀರು ಕುಡಿಯದೆಯೇ 21 ದಿನ ಪ್ರಯಾಣ ಮಾಡಬಲ್ಲುದು. ಬೆನ್ನ ಮೇಲೆ ಇರುವ ಡುಬ್ಬದಲ್ಲಿ ಕೊಬ್ಬು ತುಂಬಿದೆ. ಬಹಳ ಹೊತ್ತು ಆಹಾರವಿಲ್ಲದಿದ್ದರೆ, ಅದಕ್ಕೆ ಪ್ರತಿಯಾಗಿ ಈ ಕೊಬ್ಬು ದೇಹದೊಳಕ್ಕೆ ಹೋಗಿ ಡುಬ್ಬವು ಸಣ್ಣದಾಗುತ್ತದೆ. ಸ್ವಭಾವ—ತಾಳ್ಮೆಯುಳ್ಳ ಸಾಧುವಾದ ಜಂತು; ಕೆಲವು ವೇಳೆ ಹೊಟ್ಟೆಕಿಚ್ಚು ತೀರಿಸಿಕೊಳ್ಳುತ್ತದೆ; ಇದಕ್ಕೆ ಕಥೆ. ಕಷ್ಟಪಟ್ಟು ಕೆಲಸ ಮಾಡುತ್ತದೆ. ಮೂಟೆ ಹೊರಿಸುವಾಗ ಮೊಳಕಾಲೂರುತ್ತದೆ. ಮರಳಕಾಡಿನಲ್ಲಿ ಬಿರುಗಾಳಿ ಬಂದಾಗ, ಮೊಳಕಾಲೂರಿ ನಿಂತು ಮೂಗನ್ನು ಮರಳಿನಲ್ಲಿ ಹೂಳುತ್ತದೆ. ನಡೆ ನಿಧಾನ, ಗಂಟೆಗೆ ಸುಮಾರು 3 ಮೈಲಿ, ಆದರೂ ಒಂದೇ ಉಸಿರಿನಲ್ಲಿ 50-60 ಮೈಲಿ. ಕಣ್ಣು, ಕಿವಿ ಬಹು ಸೂಕ್ಷ್ಮ.

(4) "ಮರಳುಕಾಡಿನ ಹಡಗು." ಹಾಲನ್ನು ಕುಡಿಯುವರು. ಸವಾರಿ. ಸತ್ತಮೇಲೆ ಅದರ ಕೂದಲಿನಿಂದ ಬಟ್ಟೆಗಳನ್ನೂ ಕೂರ್ಚಗಳನ್ನೂ ಮಾಡುವರು, ಮಾಂಸವನ್ನು ತಿನ್ನುವರು. ಚರ್ಮದಿಂದ ತೊಗಲು.

## 3. ಕೋತಿ.

(1) ಮನುಷ್ಯರನ್ನು ಬಲುಮಟ್ಟಿಗೆ ಹೋಲುವ ಜಂತು. ನಾನಾ ವಿಧ—ಕೆಲವಕ್ಕೆ ಬಾಲವಿಲ್ಲ, ಕೆಲವಕ್ಕೆ ಬಾಲ ಮೋಟು, ಇನ್ನು ಕೆಲವಕ್ಕೆ ಬಹಳ ಉದ್ದ. ಮೊದಲನೆಯುವೇ ಮನುಷ್ಯರನ್ನು ಹೋಲುವುದು. "ಗೊರಿಲ್ಲಾ". ಗಾತ್ರದಲ್ಲೂ ಭೇದವುಂಟು. ಸಾಮಾನ್ಯವಾಗಿ ಬೂದುಬಣ್ಣ. ಎಲ್ಲಾ ಉಷ್ಣದೇಶಗಳಲ್ಲೂ ಇವೆ, ಮುಖ್ಯವಾಗಿ ದಟ್ಟವಾದ ಕಾಡುಗಳಲ್ಲಿ ಜೀವಿಸುವುವು.

ತಲೆ ಗುಂಡು, ಮೂತಿ ಸ್ವಲ್ಪ ಮುಂದಕ್ಕೆ ಬಂದಿದೆ. ಕಿವಿ ಚಿಕ್ಕದು. ಕಣ್ಣು ಸಣ್ಣಗೆ ಉರುಟು. ಮನುಷ್ಯರಿಗಿರುವಂತೆ ಹುಬ್ಬು, ಎರಡು ದವಡೆಗಳಲ್ಲೂ ಹಲ್ಲು. ಕೋತಿಯ ಹಲ್ಲು ಮೊನೆ, ಉದ್ದ. ಕೆಳಗಣ ದವಡೆಯಲ್ಲಿ ಎರಡು ಕಡೆಯಲ್ಲೂ ಎರಡು ಚೀಲ. ಕುತ್ತಿಗೆ ಮೋಟು. ಚರ್ಮವು ಬೆಕ್ಕಿನ ಚರ್ಮದಂತೆ ಸಡಿಲ, ಚರ್ಮದ ಮೇಲೆ ಮೃದುವಾದ ಕೂದಲು.

ಮೈಗಿಂತ ಬಾಲ ಉದ್ದ. ಇದು ಏರುವುದಕ್ಕೂ ನೆಗೆಯುವುದಕ್ಕೂ ಬಹಳ ಸಹಾಯ. ಸ್ತನ ಮನುಷ್ಯರಿಗಿರುವ ಕಡೆಯೇ. ಒಂದೊಂದು ಪಾದದಲ್ಲಿಯೂ ಐದೈದು ಬೆರಳು. ನಮಗಿರುವಂತೆ ಇದಕ್ಕೆ ಗಿಣ್ಣು, ಉಗುರು. ಕಪಿಗಳ ಕಾಲುಗಳೂ ಕೈಗಳಂತೆಯೇ ಇವೆ. ಆದುದರಿಂದ "ಚತುರ್ಬಾಹು". ಕೈಗಳಲ್ಲಿರುವಂತೆ ಒಂದೊಂದು ಕಾಲಿನಲ್ಲೂ ಹೆಬ್ಬೆಟ್ಟು ; ಇದರಿಂದ ಹಿಡಿದುಕೊಳ್ಳಲಾಗುವುದು.

(2) ಆಹಾರ—ಹಣ್ಣು, ಬೀಜ, ಧಾನ್ಯ, ಗೆಣಸು. ಕಬ್ಬಿನ ಮೇಲೆ ಬಲು ಪ್ರೀತಿ. ಉದ್ದಬಾಲದ ಸಣ್ಣ ಕಪಿಗಳಿಗೆ ಇರುವೆಯನ್ನು ತಿನ್ನುವುದರಲ್ಲಿ ಆಸೆ. ಇವು ಹಕ್ಕಿಗಳ ತತ್ತಿ, ಕಾಡುಜೇನಿನ ತುಪ್ಪ ಇವನ್ನು ತಿನ್ನುತ್ತವೆ. ಸ್ವಭಾವ—ಬಹಳ ಬುದ್ಧಿಶಾಲಿ, ಮಹಾ ತಂತ್ರ-ವುಳ್ಳದ್ದು. ಬೆಕ್ಕುಗಳ ವ್ಯಾಜ್ಯವನ್ನು ತೀರಿಸಿದ ಕೋತಿಯ ಕಥೆ. ನಾನಾ ವಿಧವಾದ ಆಟಗ-ಳನ್ನು ಕಲಿಸಬಹುದು. ಅಣಕಿಸುವುದು. ಬಹಳ ಹಾವಳಿಮಾಡುತ್ತದೆ. ಬಹಳ ಚಟು-ವಟಿಕೆಯುಳ್ಳದ್ದೂ ವಿನೋದಕರವೂ ಆದ ಪ್ರಾಣಿ. ಗುಂಪಾಗಿರಲು ಇಷ್ಟ. ಬೇಡವಾದಾಗ ಹಣ್ಣು ಮುಂತಾದ್ದನ್ನು ದವಡೆಯ ಚೀಲದಲ್ಲಿಟ್ಟುಕೊಳ್ಳುತ್ತದೆ. ಮರಿಗಳಲ್ಲಿ ಬಹಳ ಪ್ರೀತಿ ; ತಾಯ ಎದೆಯನ್ನು ಮರಿ ಬಿಗಿಯಾಗಿ ತಬ್ಬಿಕೊಂಡಿರುವುದು. "ಕಪಿ ಮುಷ್ಟಿ."

(3) ವಿನೋದಕ್ಕಾಗಿ ಸಾಕುವರು. ಕೋತಿಗೆ ಆಟಗಳನ್ನು ಕಲಿಸಿ, ಅದರಿಂದ ಜೀವನ ಮಾಡುವುದುಂಟು.

## 4. ಕಾಗೆ.

(1) ಸರ್ವಸಾಧಾರಣವಾದ ಪಕ್ಷಿಗಳಲ್ಲಿ ಒಂದು. ಎಲ್ಲಾ ದೇಶಗಳಲ್ಲೂ ದೊರೆಯು-ತ್ತದೆ. ಕಾಡಿನಲ್ಲಿ ವಾಸಿಸುವುದಿಲ್ಲ ; ನಗರಗಳಲ್ಲೂ ಗ್ರಾಮಗಳಲ್ಲೂ ಮನುಷ್ಯರ ಮನೆಗಳ ಹತ್ತಿರ.

(2) ಬಣ್ಣ ಕಪ್ಪು. ಎರಡು ಜಾತಿ: ಒಂದು ಇನ್ನೊಂದಕ್ಕಿಂತ ಬಹಳ ದೊಡ್ಡದು, ಕಪ್ಪು. ಕೆಲವು ಕಾಗೆಗಳಿಗೆ ಕುತ್ತಿಗೆಯ ಸುತ್ತಲೂ ಬೂದುಬಣ್ಣದ ಒಂದು ಪಟ್ಟೆ ಇರುತ್ತದೆ ; ಇದು ಕೆಲವಕ್ಕಿಲ್ಲ.

ತಲೆ ಚಿಕ್ಕದು, ಗುಂಡು. ಕಿವಿಗಳು ಹೊರಗೆ ಕಾಣುವುದಿಲ್ಲ. ಕಣ್ಣು ಚಿಕ್ಕವು, ಬಹಳ ಸೂಕ್ಷ್ಮ. ಕೊಕ್ಕು ಬಲ, ಗಟ್ಟಿ, ಉದ್ದ: ನೆಟ್ಟಗಿದೆ. ಇದರ ತುದಿ ಮೊನೆ. ಮೂಗಿನ ಸೊ-ಳ್ಳೆಗಳು ಕೊಕ್ಕಿನ ಬುಡದಲ್ಲಿ. ಕುತ್ತಿಗೆ ದಪ್ಪ, ತುಂಡು. ಮೈತುಂಬ ಕಪ್ಪು ಗರಿಗಳು; ರೆಕ್ಕೆ ಪುಕ್ಕಗಳಲ್ಲಿ ಉದ್ದವಾದ ಗರಿ ; ಉಳಿದ ಕಡೆ ಸಣ್ಣ ಗರಿ. ರೆಕ್ಕೆಗಳು ಉದ್ದ, ತುದಿಯಲ್ಲಿ ಕೂಚು. ಪುಕ್ಕ ಉದ್ದ, ಬಾಗಿಲ್ಲ ; ಗರಿಗಳು ಒಂದೇ ಅಳತೆ. ಕಾಲು 2 ; ಒಂದೊಂದು ಪಾದದಲ್ಲೂ 4 ಬೆರಳು, 3 ಮುಂಭಾಗದಲ್ಲಿ, 1 ಹಿಂಭಾಗದಲ್ಲಿ. ಮೊನೆಯಾದ ಉಗುರುಗಳು.

(3) ಆಹಾರ—ಮಾಂಸ, ಅನ್ನ, ಧಾನ್ಯ, ಹಣ್ಣು, ಹುಳು. ಕೊಳೆತು ನಾರುವ ಮಾಂ-ಸದ ಮೇಲೆ ಪ್ರೀತಿ ಹೆಚ್ಚು.

ಸ್ವಭಾವ—ಪ್ರಾಯಶಃ ಗುಂಪಾಗಿರುವುದರಲ್ಲಿ ಆಸೆ. ನೆಲದ ಮೇಲೆ ಸಂಚರಿಸುವಾಗ ನೆಗೆದು ನೆಗೆದು ಮುಂದಕ್ಕೆ ಹೋಗುವುದು, ನಡೆಯುವುದಿಲ್ಲ. ತಿಂಡಿ ತಿಂದಮೇಲೆ ಕೊಕ್ಕನ್ನು

ತೀದು ಚೊಕ್ಕಟ ಮಾಡಿಕೊಳ್ಳುತ್ತದೆ. ರಾತ್ರಿ ಮರದ ಕೊಂಬೆಯ ಮೇಲೆ ಕುಳಿತು ನಿದ್ರೆ. ಬಹಳ ತಂತ್ರವುಳ್ಳದ್ದು ; ದೃಷ್ಟಾಂತವಾಗಿ ಕಥೆ. ಆಹಾರ ಸಿಕ್ಕುವುದು ತಿಳಿದೊಡನೆ ಕೂಗಿಕೊಂಡು ಜೊತೆಯ ಕಾಗೆಗಳನ್ನೂ ಕರೆದು ಅವಕ್ಕೂ ಕೊಡುತ್ತದೆ. ಒಂದು ಕಾಗೆ ಸತ್ತರೆ, ಹಲವು ಕಾಗೆಗಳು ಗುಂಪುಕೂಡಿ ಕೂಗುತ್ತವೆ. ಆಯುಸ್ಸು ಸುಮಾರು 100 ವರ್ಷ. ಆದ್ದರಿಂದಲೇ ಇದಕ್ಕೆ "ಚಿರಜೀವಿ" ಎಂಬ ಹೆಸರು. ಮರದ ಮೇಲೆ ಗೂಡುಕಟ್ಟಿ ಮೊಟ್ಟೆ ಇಡುವುವು.

(4) ಕಸಬಳಿಯುವವನ ಕೆಲಸಮಾಡುತ್ತದೆ. ಮನೆಯ ಹತ್ತಿರ ನಾರುತ್ತ ಬಿದ್ದಿರುವ ಸತ್ತ ಇಲಿ, ಹೆಗ್ಗಣ ಮುಂತಾದುದನ್ನು ಎತ್ತಿಕೊಂಡು ಹೋಗುವುದು. ಪಯಿರನ್ನು ಹಾಳುಮಾಡುವ ಹುಳುಗಳನ್ನು ತಿಂದು ವ್ಯವಸಾಯಕ್ಕೆ ಅನುಕೂಲ ಮಾಡುವುದು. ಕಾಗೆಯಿಂದ ನಾವು ತಿಳಿಯಬಹುದಾದ ಎರಡು ನೀತಿ.

## 5. ನಾಗರಹಾವು.

(1) ಇಂಡಿಯಾದೇಶದ ಬಯಲು ಸೀಮೆಗಳಲ್ಲಿ ವಿಶೇಷ; ಚಳಿಯಾದ ಬೆಟ್ಟದ ಸರಹದ್ದುಗಳಲ್ಲಿರುವುದಿಲ್ಲ; ಅತ್ಯುಷ್ಣಪ್ರದೇಶಗಳಲ್ಲಿಯೇ ವಿಶೇಷ.

(2) ಸಾಮಾನ್ಯವಾಗಿ ಗೋಧಿಯ ಬಣ್ಣ ; ಕಪ್ಪುಬಣ್ಣವೂ ಉಂಟು. ತಲೆ ಚಿಕ್ಕದು, ತ್ರಿಭುಜಾಕಾರ. ಕಣ್ಣು ಗುಂಡು, ಮುಟ್ಟಿದರೆ ಗಟ್ಟಿ, ರೆಪ್ಪೆಗಳಿಲ್ಲ. ಕಣ್ಣುಗಳನ್ನು ಪಕ್ಕಗಳಿಗೆ ತಿರುಗಿಸಲಾಗುವುದಿಲ್ಲ, ಕುತ್ತಿಗೆಯನ್ನು ತಿರುಗಿಸಿ ನೋಡಬೇಕು. ಕಿವಿಗಳು ಹೊರಗೆ ಎಲ್ಲಿಲ್ಲಿಯೂ ಕಾಣಿಸುವುದಿಲ್ಲ. ಮೂಗಿನ ಸೊಳ್ಳೆಗಳಿಲ್ಲ. ಬಾಯಿ ದೊಡ್ಡದು, ಎರಡು ದವಡೆಗಳನ್ನೂ ಅಲ್ಲಾಡಿಸಬಲ್ಲುದು. ಬಾಯನ್ನು ಅಗಲವಾಗಿ ತೆರೆದು ತನಗಿಂತ ಗಾತ್ರವಾದ ಪ್ರಾಣಿಗಳನ್ನು ಕೂಡ ನುಂಗಬಲ್ಲುದು. ಹಲ್ಲುಗಳು ಮೊನೆಯಾಗಿ ಹಿಂದಕ್ಕೆ ಬಾಗಿವೆ. ಏಕೆ ? ಇವುಗಳಿಂದ ಅಗಿಯುವುದಕ್ಕಾಗುವುದಿಲ್ಲ. ವಿಷದ ಹಲ್ಲುಗಳು ಎರಡು ಮೇಲಣ ದವಡೆಯಲ್ಲಿವೆ. ಇವುಗಳ ಒಳಗಡೆ ರಂಧ್ರವಿದೆ ; ಬುಡದಲ್ಲಿ ವಿಷ ತುಂಬಿದ ಒಂದು ಸಣ್ಣ ಚೀಲವಿದೆ. ಹಾವು ಕಡಿದಾಗ ಈ ಚೀಲದಿಂದ ವಿಷವು ಹರಿದು ಹಲ್ಲಿನ ರಂಧ್ರಗಳಲ್ಲಿಳಿದು ಗಾಯಕ್ಕೆ ಬಂದು ಬೀಳುತ್ತದೆ. ನಾಲಿಗೆ ಕಪ್ಪು, ಉದ್ದ, ತುದಿಯಲ್ಲಿ ಎರಡು ಸೀಳು. ಬೇಕಾದಾಗ ನೀಡಬಹುದು. ಹಾವಿಗೆ ನಾಲಿಗೆಯೇ ಮುಖ್ಯ ಸ್ಪರ್ಶೇಂದ್ರಿಯ. ಹೆಡೆಯ ಹಿಂಭಾಗದಲ್ಲಿ ಕಣ್ಣಿನಂತೆ ಎರಡು ಕರಿಯ ಚುಕ್ಕೆಗಳು. ಅವುಗಳ ನಡುವೆ ಒಂದು ಕರಿಯ ಗೆರೆ. ಮೈ ಹಗ್ಗದಂತೆ ಉದ್ದ, ತುದಿಯಲ್ಲಿ ಮೊನೆ. ಹಾವಿನ ಕೆಳಭಾಗದಲ್ಲಿ ತುಂಡುತುಂಡಾದ ಹಲವು ಚರ್ಮಗಳಿವೆ. ಇವುಗಳ ಸಹಾಯದಿಂದ ತನ್ನ ದೇಹವನ್ನು ಎಳೆದುಕೊಂಡು ಹೋಗುತ್ತದೆ. ಕಾಲುಗಳಿಲ್ಲ.

(3) ಆಹಾರ—ಕಪ್ಪೆ, ಇಲಿ, ಕೋಳಿಮರಿ, ಹಕ್ಕಿ ಮೊದಲಾದ ಸಣ್ಣ ಪ್ರಾಣಿಗಳು, ಹಕ್ಕಿಯ ಮೊಟ್ಟೆ.

ಸ್ವಭಾವ—ಬಹಳ ರೋಷವುಳ್ಳ ಪ್ರಾಣಿ ; ರೇಗಿದಾಗ ಹೆಡೆಯನ್ನು ಬಿಚ್ಚಿ ಕಚ್ಚುತ್ತದೆ. ಸಾಧಾರಣವಾಗಿ ಹುತ್ತದಲ್ಲಿ, ಹೊದರಿನಲ್ಲಿ ವಾಸ ; ರಾತ್ರಿ ಸಂಚಾರ ಹೆಚ್ಚು. ನವಿಲಿಗೂ ಮುಂಗಸಿಗೂ ಹೆದರಿ ಅವಿತುಕೊಳ್ಳುತ್ತದೆ. ಶಾಂತವಾಗಿರುವಾಗ ಮೈಯನ್ನೆಲ್ಲಾ ಸುರಳಿ

ಸುತ್ತಿಕೊಂಡು ತಲೆಯನ್ನು ಮಧ್ಯೆ ಇಟ್ಟುಕೊಂಡಿರುತ್ತದೆ. ಆಹಾರವನ್ನು ಅಗಿಯದೆ ಒಟ್ಟಿಗೆ ನುಂಗುತ್ತದೆ. ಆಗಾಗ್ಗೆ ಹೆರೆಬಿಡುತ್ತದೆ. ನಾಗಸರ ಮೊದಲಾದ ವಾದ್ಯಧ್ವನಿಯಲ್ಲಿ ಪ್ರೀತಿ. ಮೊಟ್ಟೆಯನ್ನಿಡುತ್ತದೆ. ಇದನ್ನು ಮೊಟ್ಟೆಯಲ್ಲಿಯೇ ಇಟ್ಟುಕೊಂಡು ಮರಿಯಾದ ಮೇಲೆ ಹೊರಗೆ ಬಿಡುತ್ತದೆ.

(4) ಪಯಿರುಗಳನ್ನು ತಿಂದು ಹಾಕುವ ಇಲಿ ಮೊದಲಾದ ಜಂತುಗಳನ್ನು ಕೊಲ್ಲುವುದು. ಹಾವನ್ನು ಆಡಿಸಿ ಹಾವಾಡಿಗರು ಹೊಟ್ಟೆ ಹೊರೆದುಕೊಳ್ಳುವರು. ಪ್ರತಿವರ್ಷವೂ ಸಾವಿರಾರು ಜನರು ಹಾವು ಕಚ್ಚಿ ಸಾಯುವರು.

## 6. ಮಾಂಸಾಹಾರಿ ಪಕ್ಷಿಗಳು.

(1) ಇವು ತಿನ್ನುವ ಆಹಾರವೊಂದೇ. ದೇಹರಚನೆಯಲ್ಲಿ ಸಾಮಾನ್ಯವಾಗಿ ಭೇದಗಳಿದ್ದರೂ, ಕೆಲವು ವಿಷಯಗಳಲ್ಲಿ ಎಲ್ಲಕ್ಕೂ ಸಾಮ್ಯವುಂಟು:—ಸೂಕ್ಷ್ಮದೃಷ್ಟಿ: ಆಕಾಶದಲ್ಲಿ ಬಹಳ ಎತ್ತರ ಹಾರಿಹೋಗಿ ತಮ್ಮ ಆಹಾರದ ಮೇಲೆ ರೊಯ್ಯನೆ ಎರಗುತ್ತವೆ. ಎಲ್ಲಕ್ಕೂ ಮೊನೆ-ಯಾದ ಗಟ್ಟಿಯಾದ ಕೊಕ್ಕು, ಉಗುರು; ಗಟ್ಟಿಯೂ ಅಗಲವೂ ಆದ ರೆಕ್ಕೆ. ಈ ಪ್ರಾಣಿಗಳ ಸ್ವಭಾವಕ್ಕೂ ಅವಯವಗಳ ರಚನೆಗೂ ಇರುವ ಸಂಬಂಧ.

(2) ಮುಖ್ಯ ಮಾಂಸಾಹಾರಿ ಪಕ್ಷಿಗಳು:—

ಗೂಬೆ.—ತಲೆ ದಪ್ಪ; ಅಗಲವಾದ ಚಪ್ಪಟೆ ಮೊಕ; ಕಣ್ಣುಗಳ ಸುತ್ತಲೂ ತುಪ್ಪಳ; ಅಗಲವಾದ ಬಾಯಿ; ಗಂಟಲು ದೊಡ್ಡದು. ಏತಕ್ಕೆ? ಪೃಥ್ವಿಯ ಎಲ್ಲಾ ಭಾಗಗಳಲ್ಲೂ ನಾನಾ ತರದ ಗೂಬೆಗಳುಂಟು. ಗೂಡನ್ನು ಕೊಂಬೆ ಹುಲ್ಲುಗಳಿಂದ ಬಂಡೆ ಗೋಡೆ ಮರಗಳ ಪೊಟ್ಟರೆ-ಗಳಲ್ಲಿ ಕಟ್ಟುವುದು. ಆಹಾರ—ಹುಳು, ಇಲಿ, ಸಣ್ಣ ಹಕ್ಕಿ ಇವುಗಳನ್ನು ಅಗಿಯದೆ ನುಂಗು-ತ್ತದೆ. ಸಾಮಾನ್ಯವಾಗಿ ಹಗಲು ನಿದ್ರೆ, ರಾತ್ರಿ ಆಹಾರಾರ್ಥವಾಗಿ ಸಂಚಾರ. ಧ್ವನಿ ಭಯಂಕರ.

ಹದ್ದು.—ಗೂಬೆಯಂತೆಯೇ ಆಹಾರ, ಅಲ್ಲದೆ ಸಣ್ಣ ಮೊಲ, ಕೋಳಿಮರಿ. ಗಟ್ಟಿಯಾಗಿ ಚೀರುವುದು. ದೇಹರಚನೆ ಗೂಬೆಯಂತೆ ಅಲ್ಲ; ರೆಕ್ಕೆಗಳು, ದೇಹ, ತಲೆ ಇವು ಹೆಚ್ಚು ಉದ್ದ. ಆಕಾಶದಲ್ಲಿ ಬಹಳ ಎತ್ತರ ಹಾರುತ್ತದೆ.

ರಣಹದ್ದು.—ಪರ್ವತಪ್ರದೇಶದಲ್ಲಿ ವಾಸ. ಅದರ ಗೂಡು ಎಲ್ಲಿ? ಇದು ಬಹಳ ಬಲಿಷ್ಠ, ಭಯಂಕರ. ಆಹಾರ—ಮೊಲ, ಮೇಕೆಮರಿ, ಕೋಳಿಮರಿ, ಶವ. ಕೆಲವು ವೇಳೆ ಸಣ್ಣ ಮಕ್ಕ-ಳನ್ನು ಎತ್ತಿಕೊಂಡು ಹೋಗಿರುವುದುಂಟು.

## 7. ಕಿತ್ತಿಳೆಹಣ್ಣು.

(1) ಮನುಷ್ಯನ ಹಿಡಿಯಷ್ಟು ಇರುವ ಗುಂಡಾದಹಣ್ಣು. ಸಿಪ್ಪೆ, ತೊಳೆ (7 ರಿಂದ 12), ತೊಳೆಯ ಹೊಟ್ಟು, ತೊಳೆಯಲ್ಲಿ 5–6 ಬೀಜ ಮತ್ತು ರಸಭರಿತವಾದ ಕುಸುಮೆಗಳು, ತೊಳೆ ಸುಮಾರು ಅರ್ಧಾಂಗುಲ ಉದ್ದ.

(2) ಪೃಥ್ವಿಯ ಎಲ್ಲಾ ಭಾಗಗಳಲ್ಲೂ ಬೆಳೆ:—ಉತ್ತರ ಅಮೆರಿಕಾ, ಇಂಡಿಯಾ, ಸಿರಿಯ, ಈಜಿಪ್ಟ್, ಉತ್ತರ ಆಫ್ರಿಕಾ, ಸ್ಪೇನ್, ಇಟಲಿ.

(3) ಕಿತ್ತಳೆಮರ ಸೇಬಿನ ಮರದಷ್ಟಿದೆ. ಹೂಗಳು ಚಿಕ್ಕವು, ಬಿಳುಪು, ಸುವಾಸನೆ; ಮರದ ಮೇಲೆ ಹೂವು, ಹೀಚು, ಹಣ್ಣು ಮೊದಲಾದುವನ್ನು ಏಕದಾ ನೋಡಬಹುದು. ಮರದ ಬೆಳೆ ದೇಶಭೇದದಿಂದ ಬದಲಾಯಿಸುತ್ತದೆ. ಹಣ್ಣು ಹಸುರಾಗಿರುವಾಗಲೇ ಕೊಯ್ದು ಬುಟ್ಟಿಗಳಿಗೆ ತುಂಬಿ ರಫ್ತು ಮಾಡುವರು.

(4) ಇಂಡಿಯಾದಲ್ಲಿ ಸಾತಘುಡ ಮತ್ತು ಕೊಡಗು ಕಿತ್ತಳೆ. ಇವುಗಳಿಗೆ ಭೇದ. ಇಂಗ್ಲೆಂಡಿನಲ್ಲಿ ವೆಸ್ಟಿಂಡಿಯಾ ದ್ವೀಪಗಳ ಹಣ್ಣು ವಿಶೇಷ.

(5) ತಿನ್ನುವುದಕ್ಕೆ ಹಣ್ಣು ಹೇರಳವಾಗಿ ಉಪಯೋಗ. ಗೊಜ್ಜು ಮಾಡಬಹುದು. ಬಿಸಿಲುಕಾಲದಲ್ಲಿ ಬಹಳ ತಂಪಾದ ತಿಂಡಿ. ನಮ್ಮ ದೇಶದಲ್ಲಿ ಕಿತ್ತಳೆಹಣ್ಣಿನ ವ್ಯಾಪಾರದಿಂದ ಬೇಸಗೆಯಲ್ಲಿ ಕೆಲವು ವರ್ತಕರು ರೂಪಾಯಿ ಲಾಭ ಸಂಪಾದಿಸುವರು. ಕೆಲವು ಕಡೆ ಕಿತ್ತಳೆಮರದ ಹೂವನ್ನು ಮದವಣಗಿತ್ತಿಗಳು ಮುಡಿಯುವರು.

## 8. ಗಡಿಯಾರ.

(1) ಚರಿತ್ರೆ:— ಮೊಟ್ಟಮೊದಲು ನೀಟಾದ ವಸ್ತುಗಳ ನೆರಳಿನಿಂದ ಕಾಲವನ್ನು ಅಳೆಯುತ್ತಿದ್ದರು. ಇದರಿಂದ ಛಾಯಾಯಂತ್ರ ಕಂಡುಹಿಡಿಯಲ್ಪಟ್ಟಿತು. ಆಮೇಲೆ ಜಲಯಂತ್ರ. ನೀರಿಗೆ ಬದಲು ಸಣ್ಣ ಮರಳನ್ನುಪಯೋಗಿಸಿ ಉಸುಬಿನ ಗಡಿಯಾರ ಬಂದಿತು. ಇಂಗ್ಲೆಂಡಿನಲ್ಲಿ ಆಲ್ಫ್ರೆಡ್ ಎಂಬ ದೊರೆ ಮೋಂಬತ್ತಿಯಿಂದ ಕಾಲವನ್ನು ಅಳೆದನು. ಕ್ರಿ. ಶ. 13 ನೆಯ ಶತಮಾನದಲ್ಲಿ ದೊಡ್ಡ ಗಡಿಯಾರಗಳು ಚರ್ಚುಗಳಲ್ಲಿ ಪ್ರಚಾರಕ್ಕೆ ಬಂದುವು. ಇವು ಬಹಳ ಭಾರ. ಕೊನೆಗೆ ಹಲವು ಬದಲಾವಣೆಗಾಗಿ ಈಗಿನಂತೆ ಸ್ಥಳದಿಂದ ಸ್ಥಳಕ್ಕೆ ಒಯ್ಯಬಹುದಾದ ಗಡಿಯಾರ ಉಂಟಾಯಿತು.

(2) ವರ್ಣನೆ.—ಹೊರಗೆ—ಮುಖ, ಅದರಲ್ಲಿ ಸಂಖ್ಯೆಗಳು ಏಕೆ? ಎರಡು ಮುಳ್ಳು. ಇದರ ಕೆಲಸ. ಮುಖದ ಕೆಳಭಾಗದಲ್ಲಿ ಎರಡು ರಂಧ್ರಗಳು ಏತಕ್ಕೆ? ನಿಲ್ಲದೆ ನಡೆಯುತ್ತಿರಲು ಗಡಿಯಾರವನ್ನು ಎಷ್ಟುಸಾರಿ ನೋಡಿಕೊಳ್ಳಬೇಕು? ಒಳಗೆ—ಮುಳ್ಳುಗಳನ್ನು ನಡೆಸುವ ಚಕ್ರಗಳು. ಗಡಿಯಾರ ಹೇಗೆ ಗಂಟೆಯನ್ನು ಹೊಡೆಯುವುದು? ಕ್ಲಪ್ತ ಕಾಲಗಳಲ್ಲಿಯೇ ಅದು ಏಕೆ ಹೊಡೆಯುತ್ತದೆ? ಕೆಲವು ಗೋಪುರಗಳ ಮೇಲಿರುವ ಗಡಿಯಾರಗಳ ಸದ್ದು 20 ಮೈಲಿ ದೂರಕ್ಕೆ ಕೇಳಿಸುವುದು.

(3) ನಿರ್ಮಾಣಸ್ಥಳ:— ಈಗಿನ ನಾಗರಿಕ ದೇಶಗಳಲ್ಲೆಲ್ಲಾ. ಯಾವ ದೇಶಗಳಲ್ಲಿ ವಿಶೇಷ? ಇಂಗ್ಲೆಂಡಿನಲ್ಲಿ ಯಾವ ಪಟ್ಟಣಗಳಲ್ಲಿ?

(4) ಉಪಯೋಗ.—ಪೂರ್ವದ ಛಾಯಾಯಂತ್ರ, ಉಸುಬಿನ ಯಂತ್ರ, ಮೋಂಬತ್ತಿ ಇವುಗಳಿಗಿಂತ ಈಗಿನ ಗಡಿಯಾರ ಹೇಗೆ ಹೆಚ್ಚು ಉಪಯುಕ್ತ? ಜೇಬಿನಲ್ಲಿಟ್ಟುಕೊಳ್ಳುವಷ್ಟು ಸಣ್ಣ ಗಡಿಯಾರಗಳಿಂದ ಮತ್ತಷ್ಟು ಪ್ರಯೋಜನ. ಗಡಿಯಾರ ಎದುರಿಗಿದ್ದರೆ ವೃಥಾ ಕಾಲಹರಣ ಮಾಡಲು ಮನಸ್ಸು ಬಾರದೆ ಕೆಲಸದಲ್ಲಿ ಆಸಕ್ತಿ ಹುಟ್ಟುವುದು. ಸಕಾಲದಲ್ಲಿ ಕೆಲಸಮಾಡುವ ಗುಣವೂ ಬರುವುದು.

## 9. ಕಲ್ಲು.

(1) ನಾನಾ ಭೇದಗಳು, ಅವುಗಳ ವರ್ಣನೆ:–1. ಮರಳುಕಲ್ಲು (Sandstone). ಇದು ಬಹಳ ಗಟ್ಟಿ. ಮರಳಿನ ಪರಮಾಣುಗಳ ಒತ್ತುವಿಕೆಯಿಂದ ಆದುದು. ೨. ಸುಣ್ಣಕಲ್ಲು (Limestone). ಬಿಳುಪು, ಗಟ್ಟಿಯಲ್ಲ. ಇದರಲ್ಲಿ ಉತ್ತಮ ಜಾತಿಯಿಂದ ಇಂಗ್ಲೆಂಡಿನ ಪಾರ್ಲಿಮೆಂಟ್ ಕಟ್ಟಡಗಳು, ಹ್ವೈಟ್‌ಹಾಲ್ ಎಂಬ ಅರಮನೆ ಕಟ್ಟಿರುವುದು. 3. ಕಾಶೀ-ಕಲ್ಲು. ಬಿಳುಪು, ಕಪ್ಪು, ನಾನಾ ವರ್ಣ. ಗಟ್ಟಿ, ಆದರೆ ಗಾಜಿನಂತೆ ಪೆಳಸು. ಮೆರಗು ಬರುವಷ್ಟು ನುಣುಪಾಗಿ ಉಜ್ಜಬಹುದು. 4. ಕಣೋಚ್ಚಯ ಶಿಲೆ (Granite) ಕಲ್ಲು-ಗಳಲ್ಲೆಲ್ಲಾ ಅತ್ಯಂತ ಗಟ್ಟಿಯಾದುದು. ಮೆರಗು ಬರುವಂತೆ ನುಣುಪು ಮಾಡಬಹುದು. ಚಕ್ಕಮುಕ್ಕಿ ಕಲ್ಲು (Flint). ಬೂದು ಬಣ್ಣ. ಇದೂ ಬಹಳ ಗಟ್ಟಿ.

(2) ಪಡೆವ ವಿಧ:–ಗಣಿಯಿಂದ. ಬೇಕಾದ ಕಲ್ಲಿರುವ ಭೂಮಿಯನ್ನು ಅಗೆಯಲು ದೊರೆವ ಕಲ್ಲನ್ನು ಒಡೆದು, ಉಳಿಯಿಂದ ಸರಿಪಡಿಸುವುದು. ಬಹಳ ಗಟ್ಟಿಯಾದ ಶಿಲೆಯನ್ನು ಸುಟ್ಟು ಒಡೆಯುವುದು.

(3) ಉಪಯೋಗ:–1ನೆಯತರದ ಕಲ್ಲಿನಿಂದ ನಾನಾ ವಿಧವಾದ ಕಟ್ಟಡಗಳನ್ನು ಕಟ್ಟು-ವುದು. ಸುಣ್ಣದ ಕಲ್ಲಿನಿಂದ ಸುಣ್ಣ ಮತ್ತು ಚಾಕ್(ಸೀಮೆಸುಣ್ಣ)ದೊರೆಯುವುವು. ಕೆಲವು ಕಡೆ ಇದನ್ನು ಕಟ್ಟಡಕ್ಕೂ ರಸ್ತೆಗೂ ಬಳಸುವರು. 3ನೆಯ ತರದ ಕಲ್ಲಿಂದ ಉತ್ತಮವಾದ ಶಿಲ್ಪ-ಕಾರ್ಯ. ಇಟಲಿಯಲ್ಲಿ ಇದು ಹೇರಳವಾಗಿ ದೊರೆವುದರಿಂದ ಸಾಮಾನ್ಯವಾದ ಮನೆಗಳನ್ನೂ ಇದರಿಂದಲೇ ಕಟ್ಟಿರುವರು 4ನೆಯ ತರದ ಕಲ್ಲಿನಿಂದ ಶಾಶ್ವತವಾಗಿ ನಿಲ್ಲುವ ಸೇತುವೆ, ರಸ್ತೆ ಮೊದಲಾದುದು. 5ನೆಯದರಿಂದ ನೆಲಕ್ಕೆ ಹಾಸುವ ಚಪ್ಪಡಿ, ರಸ್ತೆಗೆ ಜಲ್ಲಿ, ಇತ್ಯಾದಿ. ಕಲ್ಲಿ-ಲ್ಲದಿದ್ದರೆ ವಾಸಕ್ಕೆ ಮನೆ, ಊರಿನಲ್ಲಿ ಚರಂಡಿ, ಭಾವಿಗೆ ಕಲ್ಲುಕಟ್ಟಿಸುವುದು, ನಿತ್ಯವೂ ನಮಗೆ ಉಪಯುಕ್ತವಾದ ಒರಳು, ಗುಂಡು ಮುಂತಾದುವು ಅಸಾಧ್ಯವಾಗುತ್ತಿದ್ದುವು.

## 10. ಹಿಂದೂದೇಶದ ಕಾಡು.

(1) ವೃಕ್ಷಗಳು ಬಹಳ ಉದ್ದ ; ಸುತ್ತಳತೆ ಹೆಚ್ಚು. ಮುಖ್ಯವೃಕ್ಷಗಳು-ತೇಗ, ಆಲ, ಅಶ್ವತ್ಥ, ಬಸರಿ ಇತ್ಯಾದಿ. ಇವುಗಳ ಸೂಕ್ಷ್ಮವರ್ಣನೆ. ಇತರ ವೃಕ್ಷಗಳು.

(2) ಕಾಡುಮೃಗಗಳು–ಹುಲಿ, ಚಿರತೆ, ಆನೆ, ಜಿಂಕೆ, ತೋಳ, ನರಿ. ನವಿಲು ಮೊದ-ಲಾದುವುಗಳ ಇಂಪಾದ ಧ್ವನಿ.

(3) ಅರಣ್ಯಪ್ರವೇಶಕ್ಕೆ ಜನರ ಬೇರೆ ಬೇರೆ ಉದ್ದೇಶ.

(4) ಸಮಾಪ್ತಿ ಅರಣ್ಯದರ್ಶನದಿಂದ ಭಗವಂತನ ಮಹಿಮೆಯು ಗೋಚರವಾಗಿ, ಭಕ್ತಿ ಹುಟ್ಟುವುದು.

## 11. ಹಿಂದೂ ದೇವಾಲಯ.

(1) ಎಲ್ಲಾ ದೊಡ್ಡ ದೇವಾಲಯಗಳನ್ನೂ ಒಂದೇ ಮಾದರಿಯಲ್ಲಿ ಕಟ್ಟಿರುವುದು. ಗರ್ಭ-ಗೃಹ ಮೊದಲಾದ ಮೂರು ಭಾಗ. ಸಾಮಾನ್ಯ ವರ್ಣನೆ.

(2) ನಮ್ಮ ಪೂರ್ವಿಕರ ಅತ್ಯದ್ಭುತವಾದ ಶಿಲ್ಪಕೌಶಲ್ಯವನ್ನು ಪುರಾತನ ದೇವಾಲಯಗಳಲ್ಲಿ ನೋಡಬಹುದು. ತಂಜಾವೂರು, ಬೇಲೂರು ದೇವಾಲಯಗಳು.

(3) ಪೂಜಾಕ್ರಮ.

(4) ಹಿಂದೂದೇವಾಲಯದಲ್ಲಿ ನಡೆವ ದಾನಧರ್ಮಗಳು.

(5) ದೇವಾಲಯದಲ್ಲಿ ನಡೆವ ಮಹೋತ್ಸವಕಾಲಗಳಲ್ಲಿ ಜನಸಂಘ. ಹಿಂದೂಗಳ ದೈವಭಕ್ತಿ.

## 12. ಹಿಂದೂಜನರ ಉಡುಪು.

(1) ಉತ್ತಮ, ಮಧ್ಯಮ, ಅಧಮ ಜಾತಿಯವರ ಉಡುಪುಗಳ ವರ್ಣನೆ. ಬಡವರಿಗೂ ಹಣಗಾರರಿಗೂ ಉಡುಪಿನಲ್ಲಿ ಭೇದ.

(2) ಹೆಂಗಸರ ಉಡುಪು.

(3) ಹುದ್ದೇದಾರರ ಉಡುಪು. ಇದು ಇಂಗ್ಲಿಷ್ ಉಡುಪಿನ ಮಾದರಿಗೆ ಇಳಿಯುತ್ತಿರುವುದು.

(4) ಇಂಗ್ಲಿಷ್ ಉಡುಪಿಗೂ ನಮ್ಮ ಉಡುಪಿಗೂ ತಾರತಮ್ಯ. ನಮ್ಮದೇ ನೋಟಕ್ಕೆ ಚಂದ, ಅನುಕೂಲ, ಸುಲಭ, ಹಾಕಿಕೊಳ್ಳಲು ಕಾಲಹರಣವಾಗುವುದಿಲ್ಲ, ನಮ್ಮ ದೇಶದ ಹವಾಕ್ಕೆ ಸರಿಯಾಗಿದೆ.

## 13. ಹಿಂದೂಜನರಲ್ಲಿ ಉತ್ತರಕ್ರಿಯೆ.

(1) ಮರಣಕ್ಕೆ ಮೊದಲು ಮಾಡಲ್ಪಡುವ ಕರ್ಮ.

(2) ಶವವನ್ನು ಶ್ಮಶಾನಕ್ಕೆ ಸಾಗಿಸುವ ಕ್ರಮ. ಬೇರೆ ಬೇರೆ ಜಾತಿಯವರಲ್ಲಿ.

(3) ದಹನಕ್ಕೆ ಪೂರ್ವಭಾವಿಯಾದ ಕ್ರಿಯೆಗಳು. ದಹನ.

(4) ಬ್ರಾಹ್ಮಣರು ಮಾಡುವ ಹನ್ನೆರಡು ದಿನಗಳ ಕರ್ಮ. ಇದರಿಂದ ಕರ್ತೃವಿಗೆ ಆಗುವ ಕಷ್ಟ.

(5) ಸೂತಕ. ಸಮಾಪ್ತಿ.

## 14. ಹಿಂದೂ ಸಂಸಾರ.

(1) ಹಿಂದೂಸಂಸಾರ ಕ್ರಮ. ಎಲ್ಲರೂ ಒಟ್ಟಿಗೆ ವಾಸಮಾಡುವುದು. ಪರಸ್ಪರ ಮಮತೆ ಹೆಚ್ಚು. ಈ ವಿಷಯದಲ್ಲಿ ಇದಕ್ಕೂ ಪಾಶ್ಚಿಮಾತ್ಯ ಸಂಸಾರಕ್ಕೂ ಇರುವ ಭೇದ.

(2) ಹಿಂದೂಗಳಲ್ಲಿ ಬಾಲ್ಯವಿವಾಹ ನಡೆವುದರಿಂದ ಗಂಡ ಹೆಂಡರಿಗೆ ಪ್ರೀತಿಯಿರುವುದು ಅಪೂರ್ವವೆಂಬ ಆಕ್ಷೇಪಣೆಗೆ ಸಮಾಧಾನ.

(3) ಹಿಂದೂಪತ್ನಿಯ ಗುಣ. ಆಕೆಯು ಬೆಳಗಿನಿಂದ ಸಂಜೆಯ ವರೆಗೂ ಮನೆಯಲ್ಲಿ ದುಡಿವುದು. ಪತಿಯಲ್ಲಿ ಪ್ರೀತಿ. ದೇವರಲ್ಲಿ ಭಕ್ತಿ. ಮತಾಚಾರದಲ್ಲಿ ಆಸಕ್ತಿ.

(4) ಈಗಿನ ಕಾಲದ ವಿದ್ಯಾಭ್ಯಾಸದಿಂದ ಹಿಂದೂ ಸಂಸಾರಕ್ಕೆ ಆಗಿರುವ ಕೆಡಕು. ಸರಿಯಾದ ಹಿಂದೂ ಸಂಸಾರದಲ್ಲಿರುವ ಸುಖ ಎಲ್ಲಿಯೂ ಇಲ್ಲ.

## 15. ಈಗಿನ ಕಾಲದ ಪ್ರಯಾಣಕ್ಕೂ ಪೂರ್ವಕಾಲದ ಪ್ರಯಾಣಕ್ಕೂ ಹೋಲಿಕೆ.

(1) ನಮ್ಮ ಪೂರ್ವಿಕರು ಈಗಿನ ರೈಲುಗಾಡಿ, ಮೋಟಾರ್‌ಗಾಡಿ, ಹೊಗೆಜಹಜುಗಳನ್ನು ನೋಡಿದ್ದರೆ, ಏನು ಹೇಳುತ್ತಿದ್ದರು ? ಊಹಿಸಿ.

(2) ಆಗಿನ ಪ್ರಯಾಣಕ್ರಮಗಳು— (a) ಒಡ್ಡರಬಂಡಿ, ಎತ್ತಿನಗಾಡಿ. ಇವುಗಳ ತೊಂದರೆಗಳು. (b) ಕುದುರೆಸವಾರಿ. (c) ದೋಣಿ.

(3) ಈಗಿನ ಕ್ರಮಗಳು:— (a) ರೈಲುಗಾಡಿ, ಇದರ ಅನುಕೂಲ್ಯ. (b) ಬೈಸಿಕಲ್ ಮತ್ತು ಮೋಟಾರ್ ಗಾಡಿ. (c) ಹೊಗೆಜಹಜು.

(4) ಇವುಗಳಿಂದಾಗುವ ಫಲಗಳು:—ಬಹಳ ದೂರ ಪ್ರಯಾಣ ಮಾಡಬಹುದು. ಖರ್ಚು ಕಡಿಮೆ. ಕಾಲ ಮಿಗುತ್ತದೆ. ಎಲ್ಲರಿಗೂ ದೂರದೇಶ ಪ್ರಯಾಣ ಮಾಡಲು ಸಾಧ್ಯ.

(5) ಸಮಾಪ್ತಿ. ಜನಾಂಗಗಳಿಗೆ ಪರಸ್ಪರ ಸ್ನೇಹವುಂಟಾಗಿ ನಾಗರಿಕತೆ ಹೆಚ್ಚುವುದಲ್ಲದೆ ಜ್ಞಾನಾಭಿವೃದ್ಧಿಗೆ ಅವಕಾಶವಾಗಿದೆ.

## 16. ಸಂಭಾಷಣೆ.

1. ಸಾಮಾನ್ಯವಾಗಿ ಸಂಭಾಷಣೆ ಮಾಡುವಾಗ ಜನರು ಕೆಲಸಕ್ಕೆ ಬಾರದ ಮಾತುಗಳನ್ನಾಡುವರು.

2. ಸಂಭಾಷಣೆಯ ಕಾಲದಲ್ಲಿ ತ್ಯಜಿಸತಕ್ಕದ್ದು:—

(i) ಸ್ವವಿಷಯವನ್ನು ಕುರಿತು ಬಹಳಹೊತ್ತು ಮಾತಾಡುವುದು. (ii) ತನ್ನ ಅಭಿಪ್ರಾಯವನ್ನೇ ಸಾಧಿಸಲು ಚರ್ಚೆ. ಇದರಿಂದ ಮನಸ್ತಾಪ ಬರಬಹುದು. (iii) ಕಠಿನೋಕ್ತಿಗಳು. (iv) ಕೋಪ.

3. ಸಂಭಾಷಣೆಯಲ್ಲಿ ಜ್ಞಾಪಕವಿಡಬೇಕಾದದ್ದು:—

(i) ಇಬ್ಬರು ಮಾತಾಡುತ್ತಿರುವಾಗ ನುಗ್ಗಿ ಅಸ್ಪಷ್ಟವಾಗಿ ಮಾತಾಡಬಾರದು. (ii) ಜನರಿಗೆ ತಕ್ಕಂತೆ ಮಾತಿನಲ್ಲಿ ಬದಲಾವಣೆ. (iii) ಜಂಭ ಕೊಚ್ಚಿಕೊಳ್ಳಕೂಡದು.

4. ಸಂಭಾಷಣೆಯ ಪ್ರಯೋಜನಗಳು:—ನಮ್ಮ ತಪ್ಪುಗಳನ್ನು ತಿದ್ದಿಕೊಳ್ಳಬಹುದು. ಹೊಸ ವಿಷಯಗಳನ್ನು ಅರಿಯಬಹುದು. ಇತ್ಯಾದಿ.

## 17. ಕೋಪ.

1. ಕೋಪವೆಂದರೇನು ? ಇದರಿಂದ ಮನುಷ್ಯನ ಆಕಾರದಲ್ಲಿ ಬದಲಾವಣೆ.

2. ಕೋಪದಿಂದಾಗುವ ಫಲಗಳು. ಉದಾಹರಣೆ.

3. ಇದನ್ನು ನಿಗ್ರಹಿಸುವುದಕ್ಕೆ ದಾರಿಗಳು.

4. ಕೋಪಿಷ್ಠನಿಗೂ ಶಾಂತಚಿತ್ತನಿಗೂ ಇರುವ ತಾರತಮ್ಯ.

5. ಎಲ್ಲರೂ ತ್ಯಜಿಸತಕ್ಕ ಗುಣ.

## 18. ನಾಣ್ಯಗಳು.

1. ನಾಣ್ಯಗಳೆಂದರೇನು? ಇವು ಏತಕ್ಕೆ? ನಾಣ್ಯಗಳು ಬಳಕೆಗೆ ಬರುವುದಕ್ಕೆ ಮೊದಲು ಜನರು ಏನು ಮಾಡುತ್ತಿದ್ದರು? ಇವುಗಳನ್ನು ಉಪಯೋಗಿಸದಿರುವ ಜನಗಳು ಈಗ ಯಾರಾದರೂ ಉಂಟೋ? ನಾಣ್ಯಗಳನ್ನು ಲೋಹದಿಂದಲೇ ಮಾಡಬೇಕೇ?

2. ನಾನಾಬಗೆಯ ನಾಣ್ಯಗಳು: ಚಿನ್ನ, ಬೆಳ್ಳಿ, ಕಂಚು. ಎಲ್ಲಾ ನಾಣ್ಯಗಳನ್ನೂ ಏತಕ್ಕೆ ಒಂದೇ ಲೋಹದಿಂದ ಮಾಡಕೂಡದು? ಕೆಲವು ನಾಣ್ಯಗಳ ಹೆಸರುಗಳನ್ನು ಸೂಚಿಸಿ.

3. ಆಕಾರ. ಮೇಲುಮುಖದಲ್ಲಿ ಆಳುತ್ತಿರುವ ದೊರೆಯ ಪ್ರತಿಮೆ. ಇದರ ಉದ್ದೇಶವೇನು? ಇಲ್ಲಿ ಏನು ಬರೆದಿರುವುದು? ಕೆಳಮುಖದಲ್ಲಿ ನಾಣ್ಯದ ಬೆಲೆಗೆ ಅನುಸಾರವಾಗಿ ಒಂದು ಮುದ್ರೆ. ಇದು ಅರ್ಥಗರ್ಭಿತವಾದುದು. ರೂಪಾಯಿನ ಮೇಲೆ ಇರುವ ಈ ಮುದ್ರೆಗೆ ಏನು ಅರ್ಥ?

ಕೆಲವು ನಾಣ್ಯಗಳ ಅಂಚಿನ ಸುತ್ತಲೂ ಗೀರು ಮಾಡಿದೆ. ನಮ್ಮ ಸೀಮೆಯ ಯಾವ ನಾಣ್ಯಗಳಿಗೆ ಇದು ಇಲ್ಲ?

4. ನಾಣ್ಯಗಳನ್ನು ಮಾಡುವುದು:—ಇವುಗಳನ್ನು ಯಾರು ಮಾಡತಕ್ಕವರು? ಟಂಕಸಾಲೆಯೆಂದರೇನು? ಚಿನ್ನ, ಬೆಳ್ಳಿ ಮೊದಲಾದ ಲೋಹಗಳ ಗಟ್ಟಿಗಳನ್ನು ಲಟ್ಟಿಸಿ, ಚಕ್ರಾಕಾರವಾದ ಚೂರುಗಳನ್ನು ಮಾಡಿ, ಇವುಗಳಿಗೆ ಅಂಚಿನಲ್ಲಿ ಗೀರೆಳೆದು, ಮುದ್ರೆ ಒತ್ತಿ, ತೂಕಮಾಡಿ, ಪರೀಕ್ಷಿಸಿ ಚಲಾವಣೆಗೆ ಕೊಡುವರು.

5. ಹಳೇ ನಾಣ್ಯಗಳನ್ನು ಮ್ಯೂಜಿಯಂಗಳಲ್ಲಿಡುವರು. ಇವುಗಳಿಂದ ಪ್ರಯೋಜನ. ಇವು ಪೂರ್ವಕಾಲಕ್ಕೂ ಈಗಿನಕಾಲಕ್ಕೂ ಮಾಪಾರ್ಟದಲ್ಲಿ ಏನಾದರೂ ತಾರತಮ್ಯವನ್ನು ತೋರಿಸುತ್ತವೋ?

## 19. ಬೇಸಗೆಯ ಕಾಲ.

1. ಇಂಡಿಯಾ ದೇಶದಂಥ ಸೀಮೆಗಳಲ್ಲಿ ಸೆಕೆ ಬಹಳ ಹೆಚ್ಚು. ಮಧ್ಯಾಹ್ನದಲ್ಲಿ ಜನರ ಆಯಾಸ, ಸುಸ್ತು, ಸಂಕಟ. ಯಾವ ಕೆಲಸ ಮಾಡಲೂ ಮನಸ್ಸು ಬರುವುದಿಲ್ಲ.

2. ಸಾಯಂಕಾಲದ ತಂಗಾಳಿಯಿಂದ ಆಗುವ ಉಪಶಾಂತಿ.

3. ರಾತ್ರಿಯನ್ನು ಹೇಗೆ ಕಳೆಯುವರು ? ಆಗ ಹೇಗೆ ನಿದ್ದೆಹೋಗುವರು?

4. ಒಳ್ಳೆಯ ಫಲಗಳಿಗೂ ಪುಷ್ಪಗಳಿಗೂ ತಕ್ಕ ಕಾಲ.

5. ಅರವಟ್ಟಿಗೆಗಳು ಮೊದಲಾದ ಧರ್ಮಕಾರ್ಯಗಳು.

## 20. ನಾಟಕಶಾಲೆ.

1. ಸೂಕ್ಷ್ಮವರ್ಣನೆ.

2. ಮುಖ್ಯವಾಗಿ ನೇತ್ರಾನಂದವೂ ವಿನೋದವೂ ದೊರೆಯುವ ಸ್ಥಳ.

3. ಪೂರ್ವದಲ್ಲಿ ಗ್ರೀಸ್, ಇಟಲಿ ದೇಶಗಳಲ್ಲಿ ಪ್ರಜೆಗಳಿಗೆ ನಾಟಕಗಳ ಮೂಲಕ ನೀತಿಬೋಧೆಯನ್ನು ಮಾಡುತ್ತಿದ್ದರು. ಇಂಡಿಯಾದಲ್ಲಿಯೂ ಹಾಗೆಯೇ.

4. ಒಂದು ವಿಷಯವನ್ನು ಕಿವಿಯಲ್ಲಿ ಕೇಳುವುದಕ್ಕಿಂತ ಕಣ್ಣಿನಿಂದ ನೋಡುವುದರಿಂದ

ಅದು ಮನಸ್ಸಿಗೆ ಚೆನ್ನಾಗಿ ಹತ್ತುವುದು. ಆದುದರಿಂದ ನಾಟಕಗಳು ದುರ್ಗುಣಗಳನ್ನು ತೊಲಗಿಸಿ ಸುಗುಣಗಳನ್ನು ಜನರಲ್ಲಿ ಉಂಟುಮಾಡಬಹುದು.

5. ಈಗಿನ ಕಾಲದ ನಾಟಕಗಳು ಈ ಕೆಲಸವನ್ನು ಮಾಡುತ್ತಿಲ್ಲ.

6. ನಾಟಕ ಆಡುವುದು ಈಗ ಒಂದು ಜೀವನೋಪಾಯ. ಇದರಲ್ಲಿ ಸೇರಿರುವವರ ಚಾಲು ಬಹಳ ಕೆಟ್ಟದ್ದು. ಇದರಿಂದ ನಾಟಕಕ್ಕೆ ಕೆಟ್ಟ ಹೆಸರು ಬಂದಿದೆ.

## 21. ಮಾತಾಪಿತೃಗಳಲ್ಲಿ ವಿಧೇಯತೆ.

1. ಇದು ಚಿಕ್ಕವರು ಕಲಿಯಬೇಕಾದ ಪ್ರಥಮ ಗುಣ. ಇದನ್ನು ಮೊಟ್ಟಮೊದಲಿಂದಲೂ ಮಕ್ಕಳಲ್ಲಿ ಏಕೆ ಉಂಟುಮಾಡಬೇಕು? ಎಲ್ಲಾ ಮತಗಳೂ ಈ ಗುಣಕೆ ಪ್ರಾಮುಖ್ಯವನ್ನು ಏಕೆ ಕೊಟ್ಟಿವೆ ?

2. ಬಲಾತ್ಕಾರಕ್ಕೆ ಹೇಳಿದಂತೆ ಕೇಳುವುದು ನಿಜವಾದ ವಿಧೇಯತೆಯಲ್ಲ. ತಾಯ್ತಂದೆಗಳಿಗೆ ಮಕ್ಕಳ ಮೇಲಿರುವ ಅಧಿಕಾರ. ಮಕ್ಕಳನ್ನು ಶಿಕ್ಷೆಯಲ್ಲಿಟ್ಟಿರುವುದರ ಪ್ರಯೋಜನ. ವಿಧೇಯತೆಯನ್ನು ಕಲಿತ ಹೊರತು ಆಜ್ಞೆಮಾಡಲು ಅರ್ಹತೆ ಯಾರಿಗೂ ಬಾರದು.

3. ವಿವೇಕವಿಲ್ಲದ ವಿಧೇಯತೆ ಸರಿಯಾದುದೇ? ಮಕ್ಕಳು ಯಾವಾಗಲಾದರೂ ತಾಯ್ತಂದೆಗಳ ಮಾತಿಗೆ ಮೀರಿ ನಡೆವುದು ಯುಕ್ತವೆ ?

4. ಹಿಂದೂ ಬಾಲಕರಿಗೆ ತಮ್ಮ ತಾಯ್ತಂದೆಗಳಲ್ಲಿರುವ ಭಕ್ತಿ.

5. ಸಮಾಪ್ತಿ.

## 22. ಮಿತವ್ಯಯ.

1. ಅರ್ಥ. ತನ್ನಲ್ಲಿರುವ ಪದಾರ್ಥಗಳನ್ನು ಕಾಲದೇಶಗಳನ್ನರಿತು ಜಾಗರೂಕತೆಯಿಂದ ಉಪಯೋಗಿಸುವುದು.

ಕಾಲದಂತಹ ಇತರ ವಿಷಯಗಳಲ್ಲಿ ಮಿತವ್ಯಯವನ್ನು ಅನುಸರಿಸಬಹುದೋ?

2. ಇದಕ್ಕೆ ಸಹಕಾರಿಗಳು:—ಮಾಡಿದ ಖರ್ಚಿಗೆಲ್ಲಾ ಲೆಕ್ಕವನ್ನು ಇಡುವುದು. ಏನನ್ನೂ ವ್ಯರ್ಥವಾಗಿ ಹಾಳು ಮಾಡಬಾರದು. ಎಷ್ಟೇ ಸುಲಭ ಕ್ರಯದ್ದಾಗಲಿ, ಒಂದು ಪದಾರ್ಥವು ನಮಗೆ ಅತ್ಯಾವಶ್ಯಕವಾಗಿದ್ದ ಹೊರತು, ಅದನ್ನು ಕೊಳ್ಳಬಾರದು. ಆದಾಯಕ್ಕೆ ಮೀರಿ ಎಂದಿಗೂ ಖರ್ಚುಮಾಡಬಾರದು. ಆದಾಯದಲ್ಲಿ ಸ್ವಲ್ಪವನ್ನು ಉಳಿಸುತ್ತಾ ಬರಬೇಕು. ಅನ್ನವಸ್ತ್ರಗಳಲ್ಲಿ ಮಿತಿ. ಆದರೆ ಮಿತವ್ಯಯವು ಕಾರ್ಪಣ್ಯದಲ್ಲಿ ಪರಿಣಮಿಸಕೂಡದು.

3. ಇದರ ಆವಶ್ಯಕತೆ.—ಒಂದಾನೊಂದು ಕಾಲದಲ್ಲಿ ಜೀವನೋಪಾಯಕ್ಕೆ ಭಂಗಬರಬಹುದು, ಆರೋಗ್ಯ ಕೆಡಬಹುದು. ಯಾವ ವಿಧದಲ್ಲಾದರೂ ಕಷ್ಟಪ್ರಾಪ್ತಿಯಾದಾಗ ಉಪಯೋಗಿಸುವಂತೆ ಸ್ವಲ್ಪ ಹಣ ಕೋಶಲು ಇದ್ದೇ ಇರಬೇಕು. ಕೈಮೇಲೆ ಹಣವಿರುವುದು ಎಷ್ಟು ಒಳ್ಳೆಯದು? ಧೈರ್ಯಕ್ಕೂ, ಸ್ವಾತಂತ್ರ್ಯಕ್ಕೂ, ಸುಖಕ್ಕೂ ಆಸ್ಪದ.

4. ಉಳಿಸಿದ ಹಣದಿಂದ ಆದಾಯವನ್ನು ಪಡೆವುದು:—ಬ್ಯಾಂಕಿನಲ್ಲಿ ಹಾಕುವುದು; ಲೈಫ್ ಇನ್ಷ್ಯೂರೆನ್ಸ್; ಜಮೀನು ಮೊದಲಾದುವನ್ನು ಕೊಳ್ಳುವುದು. ಇತರ ಲಾಭಕರವಾದ ಕಾರ್ಯಗಳಲ್ಲಿ ಹಣಹಾಕುವುದು.

## 23. ವಸ್ತು ಪ್ರದರ್ಶನಗಳು.

1. ಈಚೆಗೆ ಎಲ್ಲಾ ನಾಗರಿಕದೇಶಗಳಲ್ಲೂ ಹೆಚ್ಚುತ್ತವೆ. ಇವುಗಳಲ್ಲಿ ಮಾಡುವುದೇನು ?

2. ಉದ್ದೇಶಗಳು.—ಜನರಲ್ಲಿ ಪರಸ್ಪರ ಸ್ನೇಹಾಭಿವೃದ್ಧಿ. ಕೈಗಾರಿಕೆಗಳಿಗೆ ಪ್ರೋತ್ಸಾಹ. ಬಹುಮಾನಕ್ಕಾಗಿ ಕೈಗಾರಿಕೆಯವರಲ್ಲಿ ಸ್ಪರ್ಧೆ. ಕೈಗಾರಿಕೆಯನ್ನು ಗುಟ್ಟಾಗಿ ಮುಚ್ಚಿಡದೆ ಬಹಿರಂಗಮಾಡುವ ಬುದ್ಧಿ. ನೋಟಕರಿಗೆ ಪದಾರ್ಥಜ್ಞಾನ ಹೆಚ್ಚುವುದು. ವಿದ್ಯಾಭ್ಯಾಸಕ್ಕೆ ಇದೊಂದು ದಾರಿ.

3. ನೀವು ನೋಡಿರುವ ಒಂದು ದೊಡ್ಡ ವಸ್ತುಪ್ರದರ್ಶನದ ವರ್ಣನೆ. ನಿಮ್ಮ ಮನಸ್ಸಿನಲ್ಲಿ ಅದರಿಂದ ಹೊಳೆದ ಅಭಿಪ್ರಾಯಗಳು.

## 24. ಜೀವವಿಮೆ. (ಲೈಫ್ ಇನ್‌ಷ್ಯೂರೆನ್ಸ್.)

1. ಪ್ರಾಣಗಳು ಅಸ್ಥಿರ. ಅನೇಕ ವಿಧಗಳಲ್ಲಿ ಹಠಾತ್ತಾಗಿ ಮರಣ ಸಂಭವಿಸಬಹುದು.

2. ಪೂರ್ವಕಾಲದಲ್ಲಿ ಒಬ್ಬನಿಗೆ ಅಕಾಲಮರಣ ಪ್ರಾಪ್ತವಾದರೆ, ಅವನ ಹೆಂಡತಿಮಕ್ಕಳಿಗೆ ದಿಕ್ಕಿಲ್ಲದೆ ಅವನ ಜೀವನವೇ ದುಸ್ತರವಾಗಿದ್ದಿತು.

3. ಈಗ ಜೀವವಿಮೆಯಿಂದ ಇದು ತಪ್ಪಿದೆ.

4. ಪ್ರತಿಮಾಸವೋ, ಆರು ತಿಂಗಳಿಗೋ, ವರ್ಷಕ್ಕೋ, ಸ್ವಲ್ಪಸ್ವಲ್ಪ ಹಣವನ್ನು ಕೊಟ್ಟು, ಒಟ್ಟಿಗೆ ಸಾವಿರಾರು ರೂಪಾಯಿಗಳನ್ನು ಕೊನೆಯಲ್ಲಿ ಪಡೆಯಬಹುದು.

ಇದರಿಂದ ಇನ್‌ಷ್ಯೂರೆನ್ಸ್ ಕಂಪೆನಿಯವರಿಗೆ ನಷ್ಟವಾಗುವುದಿಲ್ಲವೇ? ಎಂಬ ವಿಚಾರ.

5. ಜೀವವಿಮೆ ನಮಗೆ ಚಿಂತೆಯನ್ನು ಹೋಗಲಾಡಿಸಿ, ತನ್ಮೂಲಕ ಆಯುಸ್ಸನ್ನು ಹೆಚ್ಚಿಸುವುದು.

6. ಮಿತವ್ಯಯವನ್ನು ನಮ್ಮಲ್ಲಿ ಹುಟ್ಟಿಸುತ್ತದೆ.

7. ನೌಕರರೆಲ್ಲಾ ಜೀವವಿಮೆಯನ್ನು ಮಾಡಬೇಕೆಂಬ ಸರಕಾರದ ನಿರ್ಬಂಧ.

## 25. ಬಡತನ.

1. ಕಾರಣಗಳು.—ಬಡತನವು ದೌರ್ಭಾಗ್ಯದಿಂದ ಬರುವುದುಂಟೇ? ಉದಾಹರಣೆಗಳು: ದುಂದುಗಾರಿಕೆ, ಉಪೇಕ್ಷೆ, ಸೋಮಾರಿತನ, ದುರಾಚಾರ ಇವುಗಳಿಂದ ಎಷ್ಟುಮಟ್ಟಿಗೆ ಬರಬಹುದು ? ಈ ಎರಡು ತರದ ಬಡತನಗಳಿಗೆ ಭೇದ ? ಎರಡಕ್ಕೂ ಸಹಾಯಮಾಡಬಹುದೋ?

2. ಉಪಯೋಗಗಳು:—(1) ಸುಖಕಾಲದಲ್ಲಿಲ್ಲದ ಕೆಲವು ಸುಗುಣಗಳು ಬಡತನದಲ್ಲಿ ಜನರಿಗೆ ಉಂಟಾಗುವುವು. ಉದಾಹರಣೆ. (2) ದಾರಿದ್ರ್ಯವು ಸ್ನೇಹದ ಒರೆಗಲ್ಲು. (3) ದರಿದ್ರಾವಸ್ಥೆಯಲ್ಲಿ ಸಂಕಟಪಡುತ್ತಿರುವವರನ್ನು ನೋಡಿ, ಜನರಲ್ಲಿ ಪರೋಪಕಾರ ಬುದ್ಧಿ ಹುಟ್ಟುವುದು.

3. ಪರಿಹಾರ.—ತಕ್ಕಮಟ್ಟಿಗೆ ವಿದ್ಯಾಭ್ಯಾಸದಿಂದ ಬಡವರು ವಾಸಿಸುವ ಸನ್ನಿವೇಶದಿಂದ ಬಲುಮಟ್ಟಿಗೆ ಸಹಾಯವುಂಟು. ಸರ್ಕಾರದಿಂದ ಎಷ್ಟುಮಟ್ಟಿಗೆ ಪ್ರಯೋಜನವಾಗಬಹುದು?

4. ಇಂಡಿಯಾದೇಶದಲಿ ಬಡತನ ಹೆಚು. ಇದಕೆ ಕಾರಣಗಳು.

## 26. ಚರಿತ್ರೆಯ ಪ್ರಯೋಜನ.

1. ಮಕ್ಕಳಿಗೆ ಆರಂಭದಿಂದಲೂ ಕಟ್ಟುಕಥೆಗಳಲ್ಲಿ ಆಸಕ್ತಿ. ಇದು ಕ್ರಮೇಣ ಜೀವನ-ಚರಿತ್ರೆಯಲ್ಲಿಯೂ ರಾಜ್ಯದ ಚರಿತ್ರೆಯಲ್ಲಿಯೂ ಪರಿಣಮಿಸುತ್ತದೆ.

2. ಸ್ಕೂಲುಗಳಲ್ಲಿ ಚರಿತ್ರೆಯನ್ನು ಏಕೆ ಇಟ್ಟಿರುವರು? (1) ಚರಿತ್ರೆಯ ಮುಖ್ಯ ಸಂಗತಿ-ಗಳನ್ನು ತಿಳಿಯುವುದು ವಿದ್ಯಾಭ್ಯಾಸದ ಅಂಗ. ವಿಷಯಗಳನ್ನು ನಿಷ್ಪಕ್ಷಪಾತವಾಗಿ ಚರ್ಚಿಸಿ ತಿಳಿಯುವ ಶಕ್ತಿ ನಮಗೆ ಬರುವುದು. (2) ಜ್ಞಾಪಕಶಕ್ತಿ ಬಲಪಡುವುದು. ಸುಮ್ಮನೆ ಇಸವಿಗಳ ಪಟ್ಟಿಗಳನ್ನು ಗಟ್ಟಿಮಾಡಿಸುವುದು ಸರಿಯೆ? (3) ಊಹನಾಶಕ್ತಿ ಹೆಚ್ಚುವುದು. ಹೇಗೆ?

3. ಪ್ರಸಿದ್ಧಪುರುಷರ ಜೀವನಚರಿತ್ರೆಗಳಿಂದ ಎಂಥಾ ಕಾರಣಗಳಿಂದ ಎಂಥಾ ಕಾರ್ಯಗಳು ಫಲಿಸುವುವು ಎಂಬುದು ಗೊತ್ತಾಗುತ್ತದೆ. ಆದುದರಿಂದ ಚರಿತ್ರೆಯ ವ್ಯಾಸಂಗದಿಂದ ನಡೆ-ವಳಿಕೆಯನ್ನು ತಿದ್ದಿಕೊಳ್ಳಬಹುದು.

4. ರಾಜರಿಗೂ ಮಂತ್ರಿಗಳಿಗೂ ಚರಿತ್ರೆಯು ರಾಜ್ಯಭಾರಕ್ರಮದಲ್ಲಿ ಪಾಠ ಹೇಳಿಕೊಡುತ್ತದೆ.

## 27. ನಾನಾವಿಧವಾದ ಬೆಳಕು.

1. ಸ್ವಾಭಾವಿಕವಾದುದು:—ಚಂದ್ರ, ನಕ್ಷತ್ರ, ಸೂರ್ಯ ಇವುಗಳ ಬೆಳಕು. ಸೂರ್ಯನ ಬೆಳಕು ಸರ್ವೋತ್ತಮ. ಇವುಗಳಲ್ಲಿ ಯಾವುದೂ ಸರ್ವದಾ ಲಭಿಸುವುದಿಲ್ಲ. ಆದುದರಿಂದ ಬೇರೆ ಬೆಳಕನ್ನು ಕಲ್ಪಿಸಿಕೊಳ್ಳಬೇಕು.

2. ಕಲ್ಪಿತವಾದ ಬೆಳಕು.—(1) ಹುಲ್ಲು, ಚೆಂಡು, ಗೊರವಿಕಡ್ಡಿ, ಚಿಂದಿಬಟ್ಟೆ ಮೊದ-ಲಾದುವುಗಳ ಪಂಜು. (2) ಮೋಂಬತ್ತಿ. (3) ಎಣ್ಣೆಗಳ ದೀಪ. (4) ಸೀಮೆಯೆಣ್ಣೆಯ ಲ್ಯಾಂಪು. (5) ಕಲ್ಲಿದ್ದಲಿನ ಗ್ಯಾಸ್. (6) ವಿದ್ಯುಚ್ಛಕ್ತಿಯ ಬೆಳಕು.

3. ಬೆಳಕಿನ ವಿಚಾರದಲ್ಲಿ ಈಗಿನ ಸೌಕರ್ಯ.

## 28. ಅನ್ಯದೇಶ ಭಾಷಾಭ್ಯಾಸ.

1. ಈಗಿನ ಕಾಲದಲ್ಲಿ ಇದಕ್ಕೆ ಬಹಳ ಗಮನ ಕೊಡುತ್ತಿರುವರು. ಪೂರ್ವಕಾಲದಲ್ಲಿ ಅನ್ಯದೇಶ ಭಾಷೆಗಳಲ್ಲಿ ಉಪೇಕ್ಷೆ.

2. ಪ್ರಯೋಜನ.—(a) ಅನ್ಯದೇಶಗಳೊಡನೆ ವ್ಯಾಪಾರ ನಡೆಸುವುದಕ್ಕೆ ಆವಶ್ಯಕ. (b) ದೇಶಗಳಿಗೆ ಪರಸ್ಪರ ತಿಳಿವಳಿಕೆ ಹೆಚ್ಚುವುದು. ಒಂದು ದೇಶದ ನಡೆನುಡಿಗಳೂ, ಪದ್ಧತಿಗಳೂ ಇನ್ನೊಂದಕ್ಕೆ ತಿಳಿಯಬಂದು ಮನಸ್ತಾಪಗಳಿಗೂ ಕಲಹಗಳಿಗೂ ಅವಕಾಶ ತಪ್ಪಿ ಮೈತ್ರಿಯುಂಟಾಗುವುದು. (c) ಇದೊಂದು ವಿಧವಾದ ಮನಶ್ಶಿಕ್ಷೆ. ಈ ವಿಷಯದಲ್ಲಿ ಈಗಿನ ಕಾಲದ ಭಾಷೆಗಳು ಸಂಸ್ಕೃತ ಮೊದಲಾದ ಪ್ರಾಚೀನ ಭಾಷೆಗಳಿಗಿಂತ ಹೀನವೇ? (d) ದೂರದೇಶ ಪ್ರಯಾಣಮಾಡುವವರಿಗೆ.

3. ಯಾವ ಅನ್ಯಭಾಷೆಗಳನ್ನು ಕಲಿಯಬೇಕು? ಅನ್ಯಭಾಷೆಗಳನ್ನೇ ಓದಬೇಕೆ? ಪರಿವರ್ತ-ನಗಳಿಲ್ಲವೆ?

## 29. ಬಾಲ್ಯವಿವಾಹ.

1. ಬಾಲ್ಯವಿವಾಹವು ಇಂಡಿಯಾದಲ್ಲಿ ಪೂರ್ವಕಾಲದಿಂದಲೂ ರೂಢಿಯಲ್ಲಿರಲು ಕಾರಣ.

2. ಈಗಲೂ ಇದಕ್ಕೆ ಆವಶ್ಯಕತೆಯುಂಟೆ ?

3. ಇದರಿಂದಾಗುವ ಕೆಡಕುಗಳು.

4. ಹಿಂದೂಗಳ ದೌರ್ಬಲ್ಯಕ್ಕೆ ಬಾಲ್ಯವಿವಾಹವೇ ಮುಖ್ಯಕಾರಣ. ದೇಹಶಕ್ತಿಕುಂದಿದರೆ, ಬುದ್ಧಿಶಕ್ತಿಯೂ ಕ್ರಮೇಣ ಕುಂದಿ, ಎಲ್ಲಾ ಭಾಗಗಳಲ್ಲೂ ಜನರ ಕ್ಷೀಣದಶೆಗೆ ಕಾರಣ. ಈ ದುರಾಚಾರವನ್ನು ಎಷ್ಟುಬೇಗ ತೊರೆದರೆ ಅಷ್ಟು ಒಳ್ಳೆಯದು.

## 30. ಯಾವಾಗಲಾದರೂ ಸುಳ್ಳಾಡಬಹುದೆ ?

1. ಬಗೆಬಗೆಯ ಸುಳ್ಳುಗಳು:—(1) "ಬಿಳಿಯ ಸುಳ್ಳು." ತಪ್ಪುಗಳನ್ನು ಮರೆಮಾಚುವ ಅಥವಾ ಹೆರರಿಗೆ ಕೆಡಕು ಮಾಡುವ ಉದ್ದೇಶವಿಲ್ಲದೆ ನುಡಿದ ಅನೃತ. ಉದಾ.—ಮನೆಗೆ ಬಂದಿರುವವನಿಗೆ ಭೇಟಿಕೊಡಲು ಇಷ್ಟವಿಲ್ಲದೆ ಒಬ್ಬ ಗೃಹಸ್ಥನು ತಾನು ಮನೆಯಲ್ಲಿದ್ದರೂ ಇಲ್ಲವೆಂದು ಹೇಳಿಕಳುಹುವುದು. (2) ಮೋಸದ ಸುಳ್ಳು. ಉದಾ. -ದುಷ್ಕಾರ್ಯವನ್ನು ಮಾಡಿದ್ದರೂ, ಶಿಕ್ಷಾಭಯದಿಂದ ಅದನ್ನು ಮಾಡಿಲ್ಲವೆಂದು ಹೇಳುವುದು. (3) ಉಪಯುಕ್ತವಾದ ಸುಳ್ಳು. ಉದಾ.—ಒಬ್ಬನ ಪ್ರಾಣವನ್ನು ಉಳಿಸುವುದಕ್ಕಾಗಿ ಸುಳ್ಳನ್ನು ಹೇಳುವುದು. ರೋಗಿಗೆ ರೋಗದ ನಿಜಸ್ಥಿತಿಯನ್ನು ತಿಳಿಸದೆ ವೈದ್ಯನು ಮರೆಮಾಚಿ ಧೈರ್ಯ ಹೇಳುವುದು.

2. ಸುಳ್ಳಾಡಲು ಕಾರಣ.—(1) ತೊಂದರೆ ತಪ್ಪಿಸಿಕೊಳ್ಳುವುದು ಅಥವಾ ಒಬ್ಬನನ್ನು ಗೇಲಿಮಾಡುವುದು 1ನೆಯ ಸುಳ್ಳಿಗೆ ಕಾರಣ. (2) ಸ್ವೋಪಯೋಗ 2 ನೆಯದಕ್ಕೆ (3)ಪರೋಪಕಾರಬುದ್ಧಿ 3ನೆಯದಕ್ಕೆ.

3. ಸುಳ್ಳಿನ ಫಲಗಳು.—ನಕಲಿಮಾಡಲು ಆಡಿದ ಬಿಳಿಯ ಸುಳ್ಳು ಇತರರನ್ನು ರೇಗಿಸಬಹುದು. ಯಾವ ತರದ ಸುಳ್ಳನ್ನೇ ಆಗಲಿ ಆಡುವವನ ಮನಸ್ಸು ಬಹಳ ನೀಚವಾಗುತ್ತದೆ. ಸುಳ್ಳುಗಾರನನ್ನು ಯಾರೂ ನಂಬರು. ಕೊನೆಗೆ ಸುಳ್ಳಿಗೂ ಸತ್ಯಕ್ಕೂ ಭೇದ ತಿಳಿಯದೆ ಸುಳ್ಳುಗಾರನು ತನಗೆ ತಾನೇ ಮೋಸಮಾಡಿಕೊಳ್ಳುವನು. ಅಪರಾಧಿಯು ಸುಳ್ಳಾಡಿ ಒಂದು ಸಾರಿ ಶಿಕ್ಷೆಯನ್ನು ತಪ್ಪಿಸಿಕೊಂಡರೆ, ಮುಂದೆ ನಿರ್ಭಯವಾಗಿ ದುಷ್ಕೃತ್ಯಗಳನ್ನು ಮಾಡುತ್ತಾ ಹೋಗುವನು.

4. ಯಾವ ಸುಳ್ಳನ್ನೂ ಆಡದೆ ಇರಲು ಸಾಧ್ಯವಲ್ಲವೆ ? ಎಲ್ಲಿ ಸುಳ್ಳು ಹೇಳಿದ್ದರಿಂದ ಕಾರ್ಯಸಾಧನವಾಗಬಹುದೋ ಅಲ್ಲಿ ನಿಜವನ್ನಾಡಿದರೆ ಕೆಲಸ ಕೈಗೂಡಲಾರದೋ?

# ಕಾಗದಗಳ ಬರವಣಿಗೆ.

1. ಕ್ಷೇಮಸಮಾಚಾರವೇ ಮೊದಲಾದ ವಿಷಯಗಳನ್ನು ಗ್ರಾಮಾಂತರದಲ್ಲಿರುವ ಬಂಧುಮಿತ್ರರಿಗೆ ತಿಳಿಯಪಡಿಸುವುದಕ್ಕೆ ನಾಗರಿಕ ದೇಶದ ಜನರು ಕಾಗದಗಳನ್ನು ಬರೆಯುವರು. ಕಾಗದಗಳನ್ನು ಬರೆಯುವುದು ಎಲ್ಲರಿಗೂ ಬರಬೇಕು. ವಾಕ್ಯರಚನೆಯ ವಿಷಯದಲ್ಲಿ ಹಿಂದೆ ವಿವರಿಸಿರುವ ವಿಧಿಗಳನ್ನೇ ಕಾಗದ ಬರೆವಾಗಲೂ ಅನುಸರಿಸಬೇಕು. ಆದರೆ ಕಾಗದವನ್ನು ಬರೆಯತಕ್ಕ ಕ್ರಮ ಒಂದೊಂದು ಭಾಷೆಯಲ್ಲಿ ಒಂದೊಂದು ಬಗೆಯಾಗಿದೆ ಕನ್ನಡದಲ್ಲಿ ಬಹುಕಾಲದಿಂದಲೂ ವಾಡಿಕೆಯಲ್ಲಿರುವ ಕ್ರಮವನ್ನು ಇಲ್ಲಿ ಸಂಕ್ಷೇಪವಾಗಿ ವಿವರಿಸಿದೆ.

2. ಪ್ರಬಂಧದಲ್ಲಿ ಹೇಗೋ ಹಾಗೆ ಕಾಗದದಲ್ಲೂ ಆದಿ, ಮಧ್ಯ, ಅಂತ ಎಂಬಮೂರು ಮುಖ್ಯ ಭಾಗಗಳುಂಟು. ಆದ್ಯಂತಗಳು ಕಾಗದದ ಕಠಿನಭಾಗಗಳು. ಇವುಗಳಲ್ಲಿ ಕಾಗದವನ್ನು ಯಾರಿಗೆ ಬರೆಯಬೇಕೋ ಅವರಿಗೂ ಅದನ್ನು ಬರೆಯುವವರಿಗೂ ಇರುವ ಬಂಧುತ್ವ, ಸ್ನೇಹ, ಬಳಕೆ ಮೊದಲಾದುವುಗಳಿಗೆ ತಕ್ಕಂತೆಮರ್ಯಾದೆಯನ್ನು ತೋರಿಸುವ ಕೆಲವು ಮಾತುಗಳನ್ನು (ಒಕ್ಕಣೆ) ಬರೆಯುವರು. ಕಾಗದದ ಪ್ರಾರಂಭದಲ್ಲ ಈ ಒಕ್ಕಣೆ ಅತಿದೀರ್ಘವಾಗಿ ಬರೆಯುವುದು ಪೂರ್ವಪದ್ಧತಿಯಾಗಿದ್ದಿತು. ಈಚೆಗೆ ಇಂಗ್ಲಿಷ್ ಭಾಷೆಯ ಸಂಪ್ರದಾಯವನ್ನನುಸರಿಸಿ ಈ ಒಕ್ಕಣೆ ಬಲುಮಟ್ಟಿಗೆ ಸಂಕುಚಿತವಾಗಿದೆ. ಈ ಆದಿಭಾಗವು ಕಾಗದವನ್ನು ಯಾರಿಗೆ ಬರೆದಿದೆಯೋ ಅವರ ಮತ್ತು ಬರೆಯುವವರ ಹೆಸರುಗಳು, ಬರೆಯುವ ಸ್ಥಳ ದಿನ ಇವುಗಳನ್ನು ಒಳಗೊಂಡಿರುತ್ತದೆ. ಬರೆಯುವ ಸ್ಥಳ, ದಿನಗಳನ್ನು ಕಾಗದದ ಕೊನೆಯಲ್ಲಿ ಎಡಗಡೆ ಸೂಚಿಸುವುದೂ ಉಂಟು.

3. ಬಂಧುಗಳಲ್ಲಿ:-ಹಿರಿಯವರಿಗೆ ಗಂಡಸರಾಗಿದ್ದರೆ, "ತೀರ್ಥರೂಪ"ರೆಂತಲೂ, ಹೆಂಗಸರಾಗಿದ್ದರೆ "ಮಾತೃಶ್ರೀ" ಎಂತಲೂ, ಕಿರಿಯವರಿಗೆಲ್ಲಾ "ಚಿರಾಯು" ಅಥವಾ "ಚಿರಂಜೀವಿ" ಎಂದೂ ಹೆಸರುಗಳ ಹಿಂದೆ ಬರೆಯಬೇಕು. ಕೆಲವರು "ತೀರ್ಥರೂಪ ತಂದೆಯವರಿಗೆ" ಎಂದು ಬರೆಯುತ್ತಾರೆ. ಅದು ತಪ್ಪು. ಸುಮ್ಮನೆ "ತೀರ್ಥರೂಪರವರಿಗೆ" ಎಂದರೆ ಸಾಕು.

ದೊಡ್ಡವರಿಗೆಲ್ಲಾ "ಸನ್ನಿಧಾನಕ್ಕೆ" ಅಥವಾ "ಸಮಕ್ಷಮಕ್ಕೆ" ಎಂಬು-

ದರ ಮುಂದೆ "ವಿಜ್ಞಾಪನೆ," "ನಮಸ್ಕಾರ" ಇಲ್ಲವೆ "ಪ್ರಣಾಮಗಳು" ಎಂತಲೂ, ಚಿಕ್ಕವರಿಗೆ "ಆಶೀರ್ವಾದ" ಅಥವಾ "ಮಂಗಳಾಶಾಸನ" ಎಂತಲೂ ಬರೆಯಬೇಕು.

ಹೆಂಗಸರಲ್ಲಿ ಚಿಕ್ಕವರಾದ ಬಂಧುಗಳಿಗೆ, ಸುಮಂಗಲಿಗಳಾದರೆ, "ಸೌಭಾಗ್ಯವತಿ" ಎಂಬುದನ್ನೂ, ವಿಧವೆಯರಾಗಿದ್ದರೆ 'ಭಾಗೀರಥೀಸಮಾನರಾದ' ಎಂಬುದನ್ನೂ ಹೆಸರಿನ ಹಿಂದೆ ಬರೆಯುವ ವಾಡಿಕೆ. ವಿಧವೆಯರ ಹೆಸರಿನೊಡನೆ ಏನನ್ನೂ ಬರೆಯದಿರುವುದೂ ಉಂಟು. ಆದರೆ ದೊಡ್ಡವರಾದ ವಿಧವೆಯರಿಗೆ "ಮಾತೃಶ್ರೀ" ಪದವನ್ನು ಉಪಯೋಗಿಸಬಹುದು.

4. ಮಿತ್ರರಿಗೆಲ್ಲಾ "ಸಮಕ್ಷಮಕ್ಕೆ ವಿಜ್ಞಾಪನೆ" ಎಂದು ಬರೆಯುವರು.

5 ಇತರರಿಗೆ:—ಗಂಡಸರಲ್ಲಿ ಲೌಕಿಕರಿಗೆ "ಮಹಾರಾಜಶ್ರೀ" ಎಂತಲೂ, ವೈದಿಕರಿಗೆ ಶ್ರೀವೈಷ್ಣವರಲ್ಲಿ "ಶ್ರೀಮದ್ವೇದಮಾರ್ಗೇತ್ಯಾದಿಗಳಾದ" ಅಥವಾ ಶ್ರೀ|| ಉ|| ಎಂತಲೂ, ಸ್ಮಾರ್ತಮಾಧ್ವರಲ್ಲಿ "ಬ್ರಹ್ಮಶ್ರೀ" ಅಥವಾ "ವೇದಮೂರ್ತಿಗಳಾದ" ಎಂತಲೂ ಹೆಸರಿನ ಹಿಂದೆ ಬರೆವ ಸಂಪ್ರದಾಯವಿದೆ.

6. ಹೀಗೆ ಕಾಗದದ ಆದಿಭಾಗದ ಒಕ್ಕಣೆಯನ್ನು ಬರೆದು ವಿಷಯವನ್ನು ಕಾಗದದ ಮಧ್ಯಭಾಗದಲ್ಲಿ ಬರೆಯತಕ್ಕದ್ದು. ವಿಷಯಾರಂಭಕ್ಕೆ ಹಿಂದೆ "ಉಭಯಕುಶಲೋಪರಿ ಸಾಂಪ್ರತ" ಎಂಬ ಮಾತುಗಳನ್ನು ಬರೆಯಬೇಕು.

7. ಕಾಗದದ ಪ್ರಾರಂಭದಲ್ಲಿ ಬರೆದಿರುವ ಮರ್ಯಾದೆಯ ಮಾತುಗಳನ್ನೇ ಕೊನೆಯಲ್ಲಿಯೂ ಬರೆಯಬೇಕು. ಹೇಗೆಂದರೆ-"ಇಂತೀ ವಿಜ್ಞಾಪನೆ," "ಇಂತೀ ನಮಸ್ಕಾರ," "ಇಂತೀ ಆಶೀರ್ವಾದ," 'ಇಂತೀ ಪ್ರಣಾಮಗಳು." ಆದರೆ ಮೊದಲು "ವಿಜ್ಞಾಪನೆ" ಎಂದು ಬರೆದು ಕೊನೆಯಲ್ಲಿ "ಇಂತೀ ನಮಸ್ಕಾರ" ಎಂದಾಗಲಿ, "ಆಶೀರ್ವಾದ" ಎಂದು ಆರಂಭಿಸಿ ಕೊನೆಗೆ "ಇಂತೀ ವಿಜ್ಞಾಪನೆ" ಇಲ್ಲವೆ "ಇಂತೀ ನಮಸ್ಕಾರ" ಎಂದಾಗಲಿ ಬರೆಯುವುದು **ತಪ್ಪು**.

8. **ಮೇಲಿನ ವಿಳಾಸ:**—ಮರಣ ಸಮಾಚಾರದ ಕಾಗದಗಳಿಗೆ ಹೊರತು ಮಿಕ್ಕ ಎಲ್ಲಾ ಕ್ಷೇಮಸಮಾಚಾರ ಕಾಗದಗಳಿಗೂ ಲಕ್ಕೋಟೆಯ ಮೇಲೆ ಎಡಗಡೆಯ ಮೂಲೆಯಲ್ಲಿ ಕ್ಷೇಮ" ಅಥವಾ "ಕುಶಲ" ಎಂಬ ಮಾತನ್ನು ಬರೆಯತಕ್ಕದ್ದು. ಆ ಮೇಲೆ ಕಾಗದ ಓದಿಕೊಳ್ಳುವವರ ಹೆಸರು, ಅವರು ವಾಸಿಸುವ ಬೀದಿ, ಇವುಗಳನ್ನು ಬಂದೊಂದು ಪಙ್ಕ್ತಿಯಲ್ಲಿ ನಮೂದಿಸಿ, ಅವರ ಊರಿನ ಹೆಸರನ್ನು ಕೊನೆಯ ಪಙ್ಕ್ತಿಯಲ್ಲಿ ಬರೆಯಬೇಕು.

9. ಕಾಗದಗಳನ್ನು ಬರೆಯಲು ಕೆಟ್ಟಕಾಗದ, ಕೆಟ್ಟಮಸಿಗಳನ್ನು ಉಪ-ಯೋಗಿಸಬಾರದು; ಅವುಗಳನ್ನು ಸೊಟ್ಟಸೊಟ್ಟಾಗಿ ಮಡಿಸಲೂ ಕೂಡದು. ಹೀಗೆ ಮಾಡುವುದು ಕಾಗದವನ್ನು ಓದಿಕೊಳ್ಳುವವರಿಗೆ ಬಹಳ ಅವಮಾನ-ಕರ. ಕಾಗದಗಳನ್ನು ಮೋಡಿ ಅಕ್ಷರಗಳಲ್ಲಿ ಬರೆಯಲಾಗದು; ಎಷ್ಟು ಸ್ಫುಟವಾಗಿ ಬರೆದರೆ ಅಷ್ಟು ಒಳ್ಳೆಯದು. ಲಲಿತವಾದ ಶೈಲಿಯಲ್ಲಿ ಸುಲ-ಭವಾಗಿ ಅರ್ಥವಾಗುವಂತೆ ಮಾತನಾಡುವ ರೀತಿಯಲ್ಲಿ ಬರೆಯತಕ್ಕದ್ದು.

10. ಕಾಗದಗಳ ಕೆಲವು ಮಾದರಿಗಳನ್ನು ಬಾಲಕರ ತಿಳಿವಳಿಕೆಯ ಬಗ್ಗೆ ಈ ಕೆಳಗೆ ಕೊಟ್ಟಿದೆ.

## 1. ತಮ್ಮನಿಗೆ ಅಣ್ಣನ ಬುದ್ಧಿವಾದ.

ಚಿ|| ರಾಮಕೃಷ್ಣನಿಗೆ.

ಶಾಮಣ್ಣನು ಮಾಡುವ ಆಶೀರ್ವಾದ. ಈ ವರೆಗೆ ಉಭಯ ಕುಶಲೋಪರಿ ಸಾಂಪ್ರತ. ಬಹಳ ದಿನಕ್ಕೆ ತೀ||ರವರಿಂದ ನಿನ್ನ ಒಂದು ಕಾಗದ ಬಂದಿತು. ಅದನ್ನು ಓದಿಕೊಂಡಾಗಿ-ನಿಂದ ನನಗೆ ಬಲು ವ್ಯಸನವಾಗಿದೆ. ನಿನ್ನನ್ನು ನಾನು ಬಿಟ್ಟುಬಂದು ಆರು ತಿಂಗಳು ತೀರ ಆಗ-ಲಿಲ್ಲ; ಅಷ್ಟರಲ್ಲಿಯೇ ನೀನು ತಂದೆತಾಯಿಗಳಿಗೆ ಬಹಳ ಅವಿಧೇಯನಾಗಿ ನಡೆದುಕೊಳ್ಳುವುದ-ಲ್ಲದೆ ಓದುವುದರಲ್ಲಿ ಆಸಕ್ತಿ ತಪ್ಪಿ ಪಾಠಶಾಲೆಗೆ ಹೋಗದೆ ಅಲೆದಾಡುತ್ತಿರುವಷ್ಟು ಬದಲಾಯಿ-ಸಿದ್ದಿಯಂತೆ. ನಿನ್ನ ಚಾಳಿ ಹೀಗೆ ಕೆಡುವುದೆಂದು ನಾನು ಎಂದಿಗೂ ಎಣಿಸಿರಲಿಲ್ಲ. ನೀನು ಇಷ್ಟು ಕೆಟ್ಟುಹೋಗಲು ಪ್ರಾಯಶಃ ಸಹವಾಸದೋಷವೇ ಕಾರಣವೆಂದು ತೋರುತ್ತದೆ. ಸಕ್ಕರೆಯು ಸ್ವಭಾವದಿಂದ ಸವಿಯಾಗಿದ್ದರೂ ಬೇವಿನ ಕಾಯೊಡನೆ ಬೆರೆತರೆ, ಅದರಂತೆ ಕಹಿಯಾ-ಗುವುದಷ್ಟೆ. ಆದುದರಿಂದ ನಿನ್ನ ಶ್ರೇಯಸ್ಸಿಗೇ ಕುಂದನ್ನು ತರುವ ದುಷ್ಟ ಸಹವಾಸವನ್ನು ಕೂಡಲೆ ಬಿಡಬೇಕು. ಆ ಸಹವಾಸದಿಂದ ನಿನ್ನನ್ನು ಬಿಡುಗಡೆ ಮಾಡುವ ಬಗ್ಗೆ, ತೀ|| ರವರಿಗೂ ನಿನ್ನ ಉಪಾಧ್ಯಾಯರಿಗೂ ಅರಿಕೆಮಾಡಿಕೊಂಡಿದ್ದೇನೆ.

ತಾಯಿತಂದೆಗಳು ನಮ್ಮ ಭಾಗಕ್ಕೆ ದೇವರು. ಅವರನ್ನು ಧಿಕ್ಕರಿಸಿದರೆ ಪಾಪಮಾಡಿದಂತಾ-ಗುವುದು. ಅವರು ನಮ್ಮನ್ನು ಹೆತ್ತು ಚಿಕ್ಕವರನ್ನು ದೊಡ್ಡವರನ್ನು ಮಾಡಿ, ನಮ್ಮ ಏಳಿಗೆಗಾಗಿ ಪಡುವ ಕಷ್ಟವನ್ನು ಸ್ಮರಿಸಿಕೊಂಡರೆ, ನಾವು ಅವರಿಗೆ ಎಷ್ಟು ಕೃತಜ್ಞರಾಗಿದ್ದರೂ ತೀರದು. ಇಂಥವರ ಮಾತನ್ನು ನೀನು ಮೀರಿ ನಡೆವುದು ನಿನಗೆ ಧರ್ಮವೇ? ನಿನ್ನನ್ನು ಮುಂದಕ್ಕೆ ತರ-ಬೇಕೆಂಬ ಉದ್ದೇಶದಿಂದಲೇ ಅಲ್ಲವೆ ಅವರು ನಿನಗೆ ಚಿಕ್ಕಂದಿನಲ್ಲೇ ಓದುವಂತೆ ಹೇಳುತ್ತಾರೆ. ನೀನು ಪಾಠಶಾಲೆಗೆ ಹೋಗದೆ ಪೋಲಿಯಾಗಿ ಅಲೆದುಕೊಂಡಿದ್ದರೆ, ಬಾಲ್ಯವು ವ್ಯರ್ಥವಾಗಿ ಕಳೆದುಹೋಗುವುದು? ದೊಡ್ಡವನಾದ ಮೇಲೆ ವಿದ್ಯೆಹತ್ತುವುದಿಲ್ಲ. "ಗಿಡವಾಗಿ ಬಗ್ಗದಿರುವುದು ಮರವಾಗಿ ಬಗ್ಗೀತೆ?"

ಈ ಕಾರಣಗಳಿಂದ ನೀನು ಇನ್ನು ಮೇಲಾದರೂ ಕೆಟ್ಟ ಜತೆಯನ್ನು ಬಿಟ್ಟು, ಮಾತಾಪಿತೃಗಳಿಗೆ ವಿಧೇಯನಾಗಿ ನಡೆದುಕೊಂಡು, ಪಾಠಗಳನ್ನು ಮನಸ್ಸಿಟ್ಟು ಓದುತ್ತಾ ಬುದ್ಧಿವಂತನಾಗಿ ನಮ್ಮ ವಂಶಕ್ಕೆ ಕೀರ್ತಿಯನ್ನು ತರಬೇಕೆಂಬುದೇ ನನ್ನ ಕೋರಿಕೆ.

ಇಂತೀ ಆಶೀರ್ವಾದ.

ಹಾಸನ,<br>
ಆಗಸ್ಟು 20, 1912.

## 2. ಮೇಲಿನ ಕಾಗದಕ್ಕೆ ಉತ್ತರ.

ಶ್ರೀ|| ಅಣ್ಣನವರ ಸನ್ನಿಧಾನಕ್ಕೆ.

ಬಾಲಕ ರಾಮಕೃಷ್ಣನು ಮಾಡುವ ನಮಸ್ಕಾರ. ಉಭಯ ಕುಶಲೋಪರಿ ಸಾಂಪ್ರತ.

ತಮ್ಮ ಬುದ್ಧಿಪತ್ರಿಕೆಯನ್ನು ಶಿರಸಾವಹಿಸಿದೆನು. ಇದರಿಂದ ನನಗೆ ಜ್ಞಾನೋದಯವಾಗಿದೆ. ಶ್ರೀ|| ರವರು ಬಹಳ ಮುದುಕರು ; ಅವರಿಗೆ ಈಗಿನ ಕಾಲದ ಹುಡುಗರ ಸಮಾಚಾರ ಚೆನ್ನಾಗಿ ತಿಳಿಯದು. ನನಗೆ ಸರಿಯಾಗಿ ಬುದ್ಧಿಹೇಳಿ ನನ್ನನ್ನು ಒಳ್ಳೆಯ ದಾರಿಗೆ ತರಲು ಮೊದಲೇ ಯಾರಾದರೂ ಯತ್ನಿಸಿದ್ದರೆ, ನಾನು ಇಷ್ಟುದೂರ ಕೆಟ್ಟು ತಮಗೆ ವ್ಯಥೆಯನ್ನು ಉಂಟುಮಾಡುತ್ತಿರಲಿಲ್ಲ. ಚಿಂತೆಯಿಲ್ಲ. ತಮ್ಮ ಬುದ್ಧಿವಾದವು ಸಕಾಲಕ್ಕೇ ಬಂದಿದೆಯೆಂದು ಹೇಳಬೇಕು. ಅದು ನನ್ನ ಮನಸ್ಸಿಗೆ ಚೆನ್ನಾಗಿ ನಾಟಿತು. ಇನ್ನು ಮೇಲೆ ಕೆಟ್ಟ ಜತೆ ಸೇರುವುದಿಲ್ಲ; ಸ್ಕೂಲಿಗೆ ಸರಿಯಾಗಿ ಹೋಗಿ ನನ್ನ ಪಾಠಗಳನ್ನು ಚೆನ್ನಾಗಿ ಕಲಿಯುವೆನು; ಶ್ರೀ||ರವರ ಮಾತನ್ನು ಮೀರಿ ನಡೆಯುವುದಿಲ್ಲ. ತಮಗೆ ಕೆಟ್ಟ ಹೆಸರು ಬರುವಂತೆ ನಾನು ಮುಂದೆ ಯಾವ ವಿಧದಲ್ಲೂ ನಡೆದುಕೊಳ್ಳುವುದಿಲ್ಲವೆಂದು ತಾವು ದೃಢವಾಗಿ ನಂಬಬಹುದು. ಕೆಲವು ದಿನಗಳಾದ ಮೇಲೆ ತಾವು ನಮ್ಮ ಉಪಾಧ್ಯಾಯರಿಗೆ ಬರೆದು ತಿಳಿದುಕೊಳ್ಳಬಹುದು. ನನ್ನ ಅಪರಾಧವನ್ನು ಈ ಸಾರಿಗೆ ಮನ್ನಿಸಬೇಕೆಂದು ಬಹಳವಾಗಿ ಬೇಡುತ್ತೇನೆ.

ಇಂತೀ ನಮಸ್ಕಾರ.

ಮೇಲ್ಕೋಟೆ,<br>
8-9-1912.

## 3. ಸಾಲಕೇಳಿದುದಕ್ಕೆ ಉತ್ತರ.

ಮ. ರಾ. ಕೃಷ್ಣಮಾಚಾರ್ಯರವರ ಸ|| ಕ್ಕೆ.

ರಾಮಸೆಟ್ಟಿಯ ವಿಜ್ಞಾಪನೆ. ಉಭಯ ಕುಶಲೋಪರಿ ಸಾಂಪ್ರತ.

ತಮ್ಮ ಕಾಗದ ತಲುಪಿ ಎಲ್ಲವೂ ಅಭಿಪ್ರಾಯವಾಯಿತು. ಸದ್ಯಃ ನನ್ನಲ್ಲಿ ಒಂದು ರೂಪಾಯಿ ಕೂಡ ಇಲ್ಲ. ಇನ್ನು ಕೆಲವು ಕಾಲ ಯಾರಿಂದಲೂ ಬರುವ ಹಾಗೂ ಕಾಣಲಿಲ್ಲ. ನನ್ನ

ದುರದೃಷ್ಟ. ನಾನೇನು ಮಾಡಲಿ? ತಮ್ಮಂಥವರ ಸಮಯಕ್ಕೆ ಆಗುವ ಪುಣ್ಯವು ನನಗಿಲ್ಲದೆ ಹೋಯಿತಲ್ಲಾ ಎಂದು ಸಂಕಟಪಡುತ್ತೇನೆ. ನನ್ನ ಅಪರಾಧವನ್ನು ಕ್ಷಮಿಸಬೇಕು. ತಿಳಿದವರಿಗೆ ವಿಶೇಷ ಬರೆಯಲು ಶಕ್ತನಲ್ಲ.

ಇಂತೀ ವಿಜ್ಞಾಪನೆ.

ಮೈಸೂರು
15-6-1912.

ಶ್ರೀರಸ್ತು.

## 4. ಉಪನಯನ ಲಗ್ನಪತ್ರಿಕಾ.

ಮ|| ರಾ|| ವಾಸುದೇವಯ್ಯನವರ ಸಮುಕ್ಷಮುಕ್ಕೆ.

ಬೆಂಗಳೂರು ಜನರಲ್ ಆಂಡ್ ರೆವೆನ್ಯೂ ಸೆಕ್ರೆಟರಿಯವರ ಆಫೀಸು ಟ್ರಾನ್ಸ್ಲೇಟರು ಎಮ್. ಲಕ್ಷ್ಮೀನಾರಣಪ್ಪನ ವಿಜ್ಞಾಪನೆಗಳು.—ಇದುವರೆಗೆ ಉಭಯ ಕುಶಲೋಪರಿ ಸಾಂ||.

ಪರೀಧಾವಿ ಸಂವತ್ಸರದ ಚೈತ್ರ ಶುದ್ಧ ೭ ಸೋಮವಾರ (25-3-1912) ಪ್ರಾತಃಕಾಲ $8\frac{1}{2}$ ಘಂಟೆಗೆ ಸರಿಯಾಗಿ ಸಲ್ಲುವ ವೃಷಭಲಗ್ನದಲ್ಲಿ, ನನ್ನ ತಮ್ಮ ರಾ|| ಕೆ. ಸೂರಯ್ಯನ ಕುಮಾರ ಚಿ|| ಸುಬ್ಬಯ್ಯನಿಗೆ ಉಪನಯನ ಮುಹೂರ್ತ ನಡೆಯಬೇಕೆಂದು ಹಿರಿಯರು ನಿಶ್ಚಯಿಸಿರುವುದರಿಂದ ತಾವು ಈ ಶುಭಮುಹೂರ್ತಕ್ಕೆ ಎರಡು ದಿನ ಮುಂಚಿತವಾಗಿಯೇ ಸಕುಟುಂಬ ಸಪರಿವಾರರಾಗಿ ದಯಮಾಡಿಸಿ ವಟುವಿಗೆ ಆಶೀರ್ವದಿಸಿ ಮನಸ್ಸಂತೋಷಪಡಿಸಬೇಕಾಗಿ ಕೋರುತ್ತೇನೆ.

ಬೆಂಗಳೂರು,
19-3-1912

ಎಮ್. ಲಕ್ಷ್ಮೀನಾರಣಪ್ಪ.

**ಯಾವ ವಿಷಯವನ್ನು ಕುರಿತು ಬೇಕಾದರೂ ಪ್ರಬಂಧವನ್ನು ಬರೆಯಬಹುದು; ಆದರೆ ಪ್ರಬಂಧಕ್ಕೆ ತಕ್ಕ ಇನ್ನು ಕೆಲವು ಮುಖ್ಯ ವಿಷಯಗಳನ್ನು ಇಲ್ಲಿ ಸೂಚಿಸಿದೆ:—**

1 ರೈಲಿನ ಮೇಲೆ ಮಾಡಿದ ಒಂದು ಪ್ರಯಾಣ.

2 ತಿರುಪತಿಯಾತ್ರೆ, ಕಾಶೀಯಾತ್ರೆ.

3 ಯುಗಾದಿ ಹಬ್ಬ.

4 ಶ್ರೀರಾಮನವಮಿ.

5 ಗೋಕುಲಾಷ್ಟಮಿ.

6 ಶ್ರಾವಣಿ.

7 ಮೊಹರಂ.

8 ಶ್ರೀಮನ್ಮಹಾರಾಜರವರ ಪಟ್ಟಾಭಿಷೇಕ ಮಹೋತ್ಸವ.

9 ಶಂಕರಾಚಾರ್ಯರು, ರಾಮಾನುಜಾಚಾರ್ಯರು, ಮಧ್ವಾಚಾರ್ಯರು.

10 ಶ್ರೀರಾಮ, ಶ್ರೀಕೃಷ್ಣ.

11 ಓದಿರುವ ಯಾವುದಾದರೂ ಒಂದು ಕಥೆಯ ಸಾರಾಂಶ:
ಉದಾ:—ಕಾದಂಬರಿ.

12 ಜೇನುಹುಳುಗಳು.

13 ಅದೃಷ್ಟ.

14 ಎತ್ತು.

15 ಕುರಿ.

16 ಹುಲಿ.

17 ಪರ್ವತಗಳು.

18 ಅಶ್ವತ್ಥ.

19 ಜೇಡಿಮಣ್ಣು.

20 ಹಿಮಾಲಯ ಪರ್ವತ.

21 ನಿಮ್ಮ ಸ್ಕೂಲಿರುವ ಊರು.

22 ಕಾವೇರೀ ನದಿ.

23 ನೀವು ನೋಡಿರುವ ಒಂದು ಪೂರ್ವಕಾಲದ ಕಟ್ಟಡ.

24 ಹಿಂದೂ ಪುರಾಣಗಳು.

25 ಇಂಗ್ಲಿಷ್ ಭಾಷೆಯನ್ನು ಕಲಿವುದರ ಪ್ರಯೋಜನ.

26 ಜಾತಿವಿಭಾಗ.

27 ಹಿಂದೂ ಹಬ್ಬಗಳು.

28 ಗ್ರಹಣ.

29 ಪಕ್ಷಿಗಳು.

30 ವಸ್ತುಪಾಠಗಳಿಂದ ಪ್ರಯೋಜನ

31 ಕಷ್ಟಕಾಲದ ಪ್ರಯೋಜನ.

32 ನಿಮಗೆ ಬಲು ಇಷ್ಟವಾದ ಪುಸ್ತಕ.

33 ಸೂರ್ಯೋದಯ

34 ಒಂದು ಹಳ್ಳಿಯಲ್ಲಿ ಸಂಜೆಯ ವೇಳೆ.

35 ಹಿಂದೂಗಳ ದಿನಚರ್ಯೆ.

36 ಸಂಸ್ಕೃತಜ್ಞಾನವು ಕನ್ನಡಕ್ಕೆ ಎಷ್ಟು ಮಟ್ಟಿಗೆ ಉಪಯುಕ್ತವು?

37 ಬಿರುಗಾಳಿ

38 ಯಾವುದಾದರೂ ಒಂದು ಋತು.

39 ಹಳ್ಳಿಗಾಡಿನಲ್ಲಿ ವಾಸಮಾಡುವುದರ ಪ್ರಯೋಜನ.

40 ಸಂತೆಗಳು

41 ಹೊಟ್ಟೆಕಿಚ್ಚು.

42 ಕೃತಜ್ಞತೆ.

43 ಕ್ಷಮೆ.

44 ಇಂದ್ರಿಯನಿಗ್ರಹ.

45 ಐಕಮತ್ಯ.

46 ವಿದ್ಯಾಭ್ಯಾಸ.

47 ವಿದ್ಯಾವಂತರಾದ ಹಿಂದೂಗಳು ಇಂಡಿಯಾದೇಶಕ್ಕೆ ಮಾಡ- [ಬೇಕಾದುದು.

48 ಜ್ಞಾನದ ಉಪಯೋಗ ಮತ್ತು ಕೆಡಕು.
49 ಮುಂಜಾನೆ ಏಳುವುದು.
50 ಧೈರ್ಯ.
51 ಕಿಂಡರ್‌ಗಾರ್ಟನ್ ಪಾಠಕ್ರಮ.
52 ಹಿಂದೂಮತ.
53 ಕನ್ನಡಭಾಷೆ.
54 ಸುಖ.
55 ದೂರದಲ್ಲಿರುವವರಿಗೆ ಸಮಾಚಾರವನ್ನು ಕಳುಹಲು ಈಗಿನ ಕಾಲದ ಸೌಕರ್ಯಗಳು.
56 ಮಠಾಧಿಪತಿಗಳಿಂದ ನಮ್ಮ ಮತಕ್ಕೆ ಆಗಬೇಕಾದುದು.
57 ಮ್ಯುನಿಸಿಪಾಲಿಟಿಯ ಪ್ರಯೋಜನ.
58 ಭೂಗೋಳಶಾಸ್ತ್ರ ವ್ಯಾಸಂಗದ ಪ್ರಯೋಜನ.
59 ಹಿರಿಯರ ಜೀವನಚರಿತೆಯ ಫಲ.
60 ಪ್ಲೇಗು ತಗಲಿರುವ ಊರಿನ ಸ್ಥಿತಿ.
61 ಜೂಜು
62 ದುಂದುಗಾರಿಕೆ.
63 ಸಂಸಾರತಾಪತ್ರಯ.
64 ಅತ್ಯಾಸೆ.
65 ಸಾಲ
66 ಜಿಪುಣತನ
67 ಮಕ್ಕಳ ವಿದ್ಯಾಭ್ಯಾಸ.
68 ವಿವಾಹ.
69 ತೋಟಗಳು.
70 ಸತ್ಯಹವಾಸ.

# GLOSSARY OF TERMS.

## ಶಬ್ದಾನುಕ್ರಮಣಿಕೆ.

ಅರ್ಧವಿರಾಮವು = The Semicolon.
ಅನುಕರಣಚಿಹ್ನೆ = The Quotation marks.
ಅಲ್ಪವಿರಾಮವು = The Comma.
ಏಕೀಭಾವ = Unity.
ಕಟ್ಟುಕಥೆ = Fable.
ಕಾರಣಸೂಚಕ = Illative Conjunction.
ಗೀಟು = The Dash.
ಗ್ರಾಮ್ಯಶಬ್ದ = Vulgarism.
ಜೀವನಚರಿತೆ = Biography.
ನಿತ್ಯಸಂಬಂಧಸೂಚಕ = Correlative Conjunction.
ಪಕ್ಷಾಂತರಸೂಚಕ = Conditional Conjunction.
ಪುನರುಕ್ತಿ = Pleonasm.
ಪೂರ್ಣವಿರಾಮವು = The Full Stop.
ಪ್ರಕ್ರಮವು = Symmetry of Expression.
ಪ್ರಬಂಧ = Essay.
ಪ್ರಶ್ನಚಿಹ್ನೆ = The Point of Interrogation.
ಭಾವಚಿಹ್ನೆ = The Point of Exclamation.
ಮಿಶ್ರವಾಕ್ಯ = Complex Sentence.
ಲಾಲಿತ್ಯ = Simplicity.
ಲೇಖನಚಿಹ್ನೆಗಳು = Punctuation.
ವಸ್ತುವರ್ಣನ = Descriptive Composition.
ವಾಕ್ಯ = Sentence.

ವಾಕ್ಯಬೃಂದ = Paragraph.
ವಾಕ್ಯರಚನೆ = Composition.
ವಿಮರ್ಶನ = Reflective Composition.
ವಿರೋಧಸೂಚಕ = Adversative Conjunction.
ವಿವರಣಚಿಹ್ನೆ = The Colon.
ವೃತ್ತಾಂತಕಥನ = Narrative Composition.
ಶಬ್ದಕ್ರಮ = The Order of Words.
ಶಬ್ದಾಧಿಕ್ಯ = Verbosity.
ಶಬ್ದಸೌಷ್ಠವ = Purity in the Use of Words.
ಶೈಲಿ = Style.
ಸಂಕ್ಷೇಪಕಥನ = Brevity.
ಸಂಬಂಧಕಶಬ್ದ = Connective Word.
ಸಂಯೋಜಿತವಾಕ್ಯ = Compound Sentence.
ಸಮತೆ = The Balanced Structure.
ಸಮುಚ್ಚಯಸೂಚಕ = Cumulative Conjunction.
ಸರಣಿ = Style.
ಸಾಮಾನ್ಯವಾಕ್ಯ = Simple Sentence.
ಸಾರಾಂಶಗಳ ಪಟ್ಟಿ = Outline.

# ಸೂಚೀಪತ್ರ. INDEX.

$ ಈ ಗುರುತಿರುವವುಗಳಿಗೆ ಸಾರಾಂಶಗಳ ಪಟ್ಟಿಗಳನ್ನು ಮಾತ್ರ ಕೊಟ್ಟಿದೆಯೆಂದರಿಯಬೇಕು.


| | ಪುಟ. |
|---|---|
| $ ಅಕ್ಬರಿನ ಆಳಿಕೆ | ೩೩ |
| ಅಂಗಸಾಧನೆ | ೧೬೨ |
| ಅಚ್ಚು ಹಾಕುವುದು | ೧೨೪ |
| ಅಡಕೆಯ ಮರ | ೫೭ |
| $ ಅತಿಥಿಸತ್ಕಾರ | ೩೮ |
| $ ಅನ್ಯದೇಶಭಾಷಾಭ್ಯಾಸ | ೧೮೩ |
| ಆರೋಗ್ಯ | ೧೫೪ |
| $ ಆನೆ | ೨೩ |
| ಆಲದ ಮರ | ೬೫ |
| ಇರುವೆ | ೫೩ |
| $ ಈಗಿನ ಕಾಲದ ಪ್ರಯಾಣಕ್ಕೂ ಪೂರ್ವಕಾಲದ ಪ್ರಯಾಣಕ್ಕೂ ಹೋಲಿಕೆ | ೧೭೯ |
| ಉಪ್ಪು | ೭೩ |
| $ ಒಂಟೆ | ೧೭೧ |
| ಒಳ್ಳೆಯ ನಡತೆ | ೧೧೨ |
| ಐಶ್ವರ್ಯ | ೧೪೮ |
| $ ಕತ್ತೆ | ೧೭೧ |
| ಕಬ್ಬಿಣ | ೬೮ |
| ಕಲ್ಲಿದ್ದಲು | ೭೫ |
| $ ಕಲ್ಲು | ೧೭೭ |
| ಕಸಬುಗಳಲ್ಲಿ ಆವುದನ್ನು ಆಶ್ರಯಿಸಬೇಕು? | ೧೦೦ |
| $ ಕಾಗದ | ೨೭ |
| $ ಕಾಗೆ | ೧೭೩ |

| | ಪುಟ. |
|---|---|
| $ ಕಾಬ್ಬಂಗಡಿನ ಪಂತ | ೩೧ |
| ಕಾಲೋಪಯೋಗ | ೯೮ |
| $ ಕಾಳಗ | ೩೨ |
| ಕ್ಷಾಮಗಳು | ೧೪೯ |
| $ ಕಿತ್ತಳೆಹಣ್ಣು | ೧೭೫ |
| ಕುದುರೆ | ೪೬ |
| $ ಕೋತಿ | ೧೭೨ |
| $ ಕೋಪ | ೧೭೯ |
| $ ಗಡಿಯಾರ | ೧೭೬ |
| ಗಿಡಗಳು | ೭೮ |
| $ ಚರಿತ್ರೆಯ ಪ್ರಯೋಜನ | ೧೮೩ |
| $ ಚಿನ್ನ | ೨೫ |
| $ ಜೀವವಿಮೆ | ೧೮೨ |
| ತೃಪ್ತಿ | ೧೧೯ |
| ತೆಂಗಿನಮರ | ೫೫ |
| ತಾಮ್ರ | ೭೦ |
| ದಯೆ | ೮೨ |
| ದಾನ | ೯೪ |
| ದೇಶಾಟನೆ | ೧೩೭ |
| ದೊಡ್ಡ ಪಟ್ಟಣಗಳಲ್ಲಿ ವಾಸಮಾಡುವುದರ ಪ್ರಯೋಜನ | ೯೦ |
| ನದಿಗಳ ಉಪಯೋಗ | ೧೩೯ |
| $ ನಾಗರಹಾವು | ೧೭೪ |
| $ ನಾಟಕಶಾಲೆ | ೧೮೦ |
| $ ನಾಣ್ಯಗಳು | ೧೮೦ |

| | ಪುಟ. |
|---|---|
| $ ನಾನಾ ವಿಧವಾದ ಬೆಳಕು | ೧೮೩ |
| ನಾಯಿ | ೪೯ |
| $ ನೈರ್ಮಲ್ಯ | ೩೮ |
| ಪದ್ಧತಿ | ೧೬೫ |
| ಪರೀಕ್ಷೆಗಳು | ೧೨೬ |
| $ ಪ್ರಸಿದ್ಧಪುರುಷನ ಜೀವನಚರಿತೆ | ೩೩ |
| ಪ್ರಾಣಿಹಿಂಸೆ | ೯೧ |
| ಪುಸ್ತಕಗಳು | ೧೩೪ |
| ಪುಸ್ತಕಭಂಡಾರಗಳು | ೮೮ |
| ಪೋಸ್ಟಾಫೀಸುಗಳು | ೧೦೭ |
| $ ಬಡತನ | ೧೨೨ |
| $ ಬಾಲ್ಯವಿವಾಹ | ೧೮೪ |
| ಬಾಳೆಯ ಗಿಡ | ೬೧ |
| ಬೆಕ್ಕು | ೫೧ |
| ಬೆಳ್ಳಿ | ೬೬ |
| $ ಬೇಸಗೆಯ ಕಾಲ | ೧೮೦ |
| $ ಬೇಸಗೆಯ ಪ್ರಾತಃಕಾಲ | ೩೮ |
| $ ಬೈಸಿಕಲ್ | ೩೯ |
| ಮಳೆಯ ಉಪಯೋಗಗಳು | ೧೩೧ |
| ಮಳೆಗಾಲದ ದಿನ | ೮೧ |
| $ ಮಾತಾಪಿತೃಗಳಲ್ಲಿ ವಿಧೇಯತೆ | ೧೮೧ |
| ಮಾವಿನ ಮರ | ೫೯ |
| $ ಮಾಂಸಾಹಾರಿ ಪಕ್ಷಿಗಳು | ೧೭೫ |
| $ ಮಿತವ್ಯಯ | ೧೮೧ |
| $ ಯಾವಾಗಲಾದರೂ ಸುಳ್ಳಾಡಬಹುದೆ ? | ೧೮೪ |
| ಯುದ್ಧ | ೧೨೧ |
| ರಜಾದಿನಗಳು | ೧೨೮ |
| ರೈತ | ೭೭ |
| ರೈಲು | ೧೦೫ |
| $ ವಸ್ತುಪ್ರದರ್ಶನಗಳು | ೧೮೨ |
| ವ್ಯಾಪಾರ | ೧೧೪ |
| ವೃತ್ತಾಂತಪತ್ರಿಕೆಗಳು | ೧೦೨ |
| ಸಕಾಲದಲ್ಲಿ ಕೆಲಸ ಮಾಡುವುದು | ೧೩೨ |
| ಸತ್ಯ | ೧೬೭ |
| $ ಸಮುದ್ರಯಾನ | ೩೯ |
| $ ಸಂಭಾಷಣೆ | ೧೭೯ |
| ಸ್ವದೇಶಾಭಿಮಾನ | ೮೪ |
| ಸ್ವಾಭಿಮಾನ | ೧೫೮ |
| ಸ್ವಾರ್ಥಪರತ್ವ | ೧೧೭ |
| ಸ್ಥಿರಪ್ರಯತ್ನ | ೧೫೬ |
| ಸ್ತ್ರೀವಿದ್ಯಾಭ್ಯಾಸ | ೧೫೧ |
| ಸುಗ್ಗಿಯ ಕಾಲ | ೧೬೦ |
| ಸ್ನೇಹ | ೯೬ |
| ಸೋಮಾರಿತನ | ೧೪೬ |
| $ ಹತ್ತಿಯ ಗಿಡ | ೨೪ |
| ಹವಾದಿಂದ ಮನುಷ್ಯರಿಗಾಗುವ ಬದಲಾವಣೆ | ೧೪೩ |
| ಹಸು | ೪೩ |
| ಹಿತ್ತಾಳೆ | ೭೨ |
| ಹಿಂದೂದೇಶದ ಅಂಗಡಿಬೀದಿ | ೧೪೧ |
| ಹಿಂದೂದೇಶದಲ್ಲಿ ಇಂಗ್ಲಿಷರ ಆಳಿಕೆ | ೧೧೦ |
| $ ಹಿಂದೂ ದೇಶದ ಕಾಡು | ೧೭೭ |
| $ ಹಿಂದೂ ದೇವಾಲಯ | ೧೭೭ |
| $ ಹಿಂದೂ ಜನರ ಉಡುಪು | ೧೭೮ |
| $ ಹಿಂದೂ ಜನರಲ್ಲಿ ಉತ್ತರಕ್ರಿಯೆ | ೧೭೮ |
| $ ಹಿಂದೂ ಸಂಸಾರ | ೧೭೭ |
| ಹುಣಸೆಮರ | ೬೩ |
| ಹೂಗಳು | ೮೬ |